ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


ಜೂನ್ 12, 2013 ಪುಟ 20 ರೂ. 14/-



ಜೈಲು ಸೇರಿದ
ಕಲಾವಿದ ಹಾದಿಮನಿ




ಬೆಟ್ಟಿಂಗ್ ಜಾಲದಲ್ಲಿ ಕನ್ನಡ ನಟಿಯರು?



ಮಂಡ್ಯ
ವಕೀಲ
ಪಾರ್ಥಸಾರಥಿ



ಸಿದ್ದು ಪಕ್ಕ ಅಕ್ಕಿ ಕಳ್ಳ
ನಾಗರಾಜ್



ಚಿತ್ರದುರ್ಗ
ಸೇವಾಲಾಲ್
ಸ್ವಾಮಿಯ
ಲವ್ವು-ಡವ್ವು



ಅಂಚಿನಿಂದ

ಐಪಿಎಲ್‌ನಿಂದ ಯಾರಿಗೆ ಲಾಭ? ಯಾರಿಗೆ ನಷ್ಟ

ಐಪಿಎಲ್ ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಬೆಟ್ಟಿಂಗ್ ನಡೆದದ್ದು ಹೊರಬೀಳುತ್ತಿದ್ದಂತೆಯೇ ಒಂದು ಎಸ್ಸೆಮ್ಮೆಸ್ ಸಂದೇಶ ಹರಿದಾಡಿತು. 'ಮೂರ್ಖರಂತೆ ಇದುವರೆಗೂ ಕ್ರಿಕೆಟ್ ನೋಡುತ್ತಿದ್ದ ನೀವು ಕನಿಷ್ಠ 6 ತಿಂಗಳಾದರೂ ನಿಮ್ಮ ಕ್ರಿಕೆಟ್ ಪ್ರೇಮವನ್ನು ಅಮಾನತ್ತಿನಲ್ಲಿಡಿ. ನಿಮ್ಮ ಕ್ರೀಡಾ ಪ್ರೀತಿಯನ್ನು ತಮ್ಮ ದಂಧೆಗೆ ಬಳಸುತ್ತಿರುವ ದುಷ್ಟರಿಗೆ ಬುದ್ಧಿ ಬರುತ್ತದೆ.'

ಈ ವರ್ಷವಷ್ಟೇ ಶಾಲೆಗೆ ಸೇರಿದ ಮಂಗಳೂರಿನ ಎಳೆಯ ಹುಡುಗನೊಬ್ಬ ಬೆಂಗಳೂರಿನ ನೆಂಟರ ಮನೆಗೆ ಬಂದಾಗ ಅವನ ಮನದಲ್ಲಿ ಮೂಡುತ್ತಿದ್ದ ಭಾವನೆಗಳನ್ನು ಎಳೆಯ ನುಡಿಗಳ ಮೂಲಕ ಬಿಚ್ಚಿಡುತ್ತಿದ್ದ. ಆತ ಬೆಂಗಳೂರನ್ನು ಗುರುತಿಸುತ್ತಿದ್ದದ್ದೇ 'ರಾಯಲ್ ಚಾಲೆಂಜರ್ಸ್ ಬ್ಯಾಂಗ್ಲೂರ್' ಮೂಲಕ. ಅವನ ಅಪ್ಪ ಮತ್ತು ಗೆಳೆಯರು ನೋಡುವ, ಮಾತಾಡಿಕೊಳ್ಳುವ ಐಪಿಎಲ್ ಕ್ರಿಕೆಟ್‌ನಲ್ಲಿ ಕರ್ನಾಟಕದ ತಂಡ ಅವನ ಮನಸೆಳೆದಿತ್ತು. ಅದು ತನ್ನ ತಾಯ್ನಾಡಿನ ತಂಡವೆಂದೆಲ್ಲಾ ಯೋಚಿಸುವಷ್ಟು ಹಿರಿದಾಗಿ ಅವನ ವಯಸ್ಸು ಬೆಳೆದಿಲ್ಲ. ಬೆಂಗಳೂರಿನ ತಂಡವೆಂದು ಕರೆದರೂ, ಮಲ್ಯನೆಂಬ ಮದ್ಯದ ದೊರೆ ಜಗತ್ತಿನ ಹಲವು ದೇಶಗಳ ಆಟಗಾರರನ್ನು ಹರಾಜಿನಲ್ಲಿ ಕೊಂಡುಕೊಂಡು ನಡೆಸುತ್ತಿರುವ ಕ್ರಿಕೆಟ್ ದಂಧೆಯ ಕೂಟವೆಂಬುದು ಆ ಮಗುವಿಗೆ ಗೊತ್ತಿರುವ ಸಾಧ್ಯತೆಯೇ ಇಲ್ಲ.

ಈಚೆಗೆ ಒಂದು ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕನ್ನಡದ ಪ್ರಸಿದ್ಧ ಕತೆಗಾರ ಕುಂ.ವೀರಭದ್ರಪ್ಪನವರು ತಮ್ಮ ಕೈ ಮೂಳೆ ಮುರಿತದ ಕಥೆ ಹೇಳಿದರು. ಯಾವುದೋ ಕಾರ್ಯನಿಮಿತ್ತ ಹೊರಗೆ ಹೋಗಿದ್ದ ಅವರು ಐಪಿಎಲ್ ಕ್ರಿಕೆಟ್ ನೋಡಲೆಂದು ಬೇಗನೆ ಮನೆಗೆ ಹೋಗಬೇಕೆಂದು ಅವಸರದಲ್ಲಿ ಹೊರಟಾಗ ಅಪಘಾತವಾಗಿ ಕೈ ಮೂಳೆ ಮುರೀತು ಎಂದರು. ಇದೇ ರೀತಿ ಅದೆಷ್ಟೋ ಜನ ಪ್ರಜ್ಞಾವಂತರೆಂದುಕೊಂಡಿರುವವರೂ ಸೇರಿದಂತೆ ಐಪಿಎಲ್ ಕ್ರಿಕೆಟ್‌ಅನ್ನು ಬಹಳ ರೋಮಾಂಚನಕಾರಿ ಕ್ರೀಡೆಯೆಂಬಂತೆ ನೋಡುತ್ತಾರೆ; ಚರ್ಚಿಸುತ್ತಾರೆ; ಸಂಭ್ರಮಿಸುತ್ತಾರೆ. ಆದರೆ ಸದರಿ ಕ್ರಿಕೆಟ್ ಮ್ಯಾಚನ್ನು ನೋಡಿದ ಯಾರಿಗೇ ಆದರೂ, ಇದು ಕೇವಲ ಕ್ರೀಡೆಯೇ ಎಂಬ ಪ್ರಶ್ನೆ ಬಾರದೇ ಇರದು.

ಇನ್ನೂ ಒಂದು ವಾದವಿದೆ. ನೀವು ಐಪಿಎಲ್‌ಅನ್ನು ಕ್ರಿಕೆಟ್ ಎಂಬಂತೆ ಏಕೆ ನೋಡುತ್ತೀರಿ? ಅದನ್ನು ಸಿನೆಮಾ ಎಂಬಂತೆ ನೋಡಿ, ಎಂಜಾಯ್ ಮಾಡಿ, ಮರೆತುಬಿಡಿ ಎಂದು. ಏಕೆಂದರೆ, ಮುಂಚೆಯೇ ಬರೆದ ಚಿತ್ರಕಥೆಗೆ ತಕ್ಕಂತೆ ಕ್ಯಾಮೆರಾಗಳ ಕೋನಕ್ಕೆ ಹೊಂದಿಕೊಂಡು ನಡೆಯುವ ದೃಶ್ಯಾವಳಿ ಇದು ಎಂಬುದು ಈ ವಾದದ ಹಿಂದಿನ ತಿಳಿವಳಿಕೆ. ಇಂತಹವರೇ ಮುಂದುವರೆದು ಮತ್ತೊಂದು ಮಾತನ್ನೂ ಹೇಳುತ್ತಾರೆ. ಬೆಟ್ಟಿಂಗ್ ಹೇಗೂ ನಡೆಯುತ್ತದೆ. ಅದನ್ನು ಕಾನೂನುಬದ್ಧಗೊಳಿಸುವುದೇ ಒಳಿತು. ಅದರಿಂದ ಸರ್ಕಾರಕ್ಕೆ ತೆರಿಗೆಯೂ ಬರುತ್ತದೆ. ಆಗಲೂ ಬೆಟ್ಟಿಂಗ್‌ನವರ ಹಿತಾಸಕ್ತಿಗೆ ತಕ್ಕಂತೆ ಮೋಸದಾಟ ನಡೆಯಬಹುದಲ್ಲವಾ? ಹೌದು, ನಡೆಯಬಹುದು. ಕುದುರೆ ರೇಸ್‌ನಲ್ಲಿ ಅದರ ಮಾಲೀಕರು, ತರಬೇತುದಾರರು, ಜಾಕಿಗಳು, ಬೆಟ್ಟಿಂಗ್ ಮಾಡುವವರು ಎಲ್ಲರೂ ಸೇರಿ ನಡೆಸುತ್ತಾರೆಂದು ಹೇಳಲಾಗುವ ಮೋಸದಾಟವೂ ಹಾಗೆಯೇ ತಾನೇ?

ಕ್ರಿಕೆಟ್ ಎಂಬುದು ಹೆಚ್ಚೆಚ್ಚು ಜನರನ್ನು ಆಕರ್ಷಿಸಿದಂತೆಲ್ಲಾ, ಟಿವಿಯ ಮುಂದೆ ಅದನ್ನು ನೋಡುವವರ ಸಂಖ್ಯೆಯು ಹೆಚ್ಚಿದಂತೆಲ್ಲಾ, ಟಿಆರ್‌ಪಿ (ಎಷ್ಟು ಜನರು ಯಾವ ಚಾನೆಲ್‌ನ ಯಾವ ಕಾರ್ಯಕ್ರಮವನ್ನು ನೋಡುತ್ತಾರೆಂಬ ಅಂದಾಜು)ಗೂ, ಜಾಹೀರಾತಿನ ಹಣಕ್ಕೂ ಸಂಬಂಧ ಬೆಳೆದಂತೆಲ್ಲಾ ಅದರಲ್ಲಿ ಕ್ರೀಡೆಯ ಅಂಶ ಕಿರಿದಾಗುತ್ತಾ ಹೋಯಿತು. ವ್ಯಾಪಾರದ ಅಂಶ ಹೆಚ್ಚುತ್ತಾ ಹೋಯಿತು. ಆದರೆ ಕಾಲಕ್ಕೆ ತಕ್ಕಂತೆ ವೇಗಗೊಂಡ ಮತ್ತು ಹೆಚ್ಚು ಮನರಂಜನೆ ಹಾಗೂ ಥ್ರಿಲ್‌ಅನ್ನು ಒದಗಿಸುವ ಕ್ರೀಡೆಯನ್ನಾಗಿ ಅದನ್ನು ಬೆಳೆಸಿದವರ ಕೌಶಲ್ಯವನ್ನು ಮೆಚ್ಚಿಕೊಳ್ಳುವವರೂ ನಮ್ಮ ಸುತ್ತ ಇದ್ದಾರೆ. ಅದನ್ನೂ ಜೂಜೆಂಬಂತೆ ನೋಡುವವರು, ಜೂಜಿನ ರೋಮಾಂಚನವೂ ಮನುಷ್ಯ ಬದುಕಿನ ಭಾಗವೆಂದು ಹೇಳುವವರು ತಮಗಿಷ್ಟ ಬಂದ ಜೂಜಿನಲ್ಲಿ ಪಾಲ್ಗೊಳ್ಳಲಿ. ಆದರೆ ಇದು ಲಕ್ಷ ಕೋಟಿಗಳ ಉದ್ದಿಮೆಯಾಗಿ ಬೆಳೆದು, ಕನಿಷ್ಠ ಸಾವಿರ ಕೋಟಿಗಳ ಕುಬೇರರು ಆಟಗಾರರನ್ನೇ ಕೊಂಡುಕೊಂಡು ನಡೆಸುವ ಆಟವನ್ನು ಕ್ರೀಡೆಯೆಂದು ಕರೆಯಲಾಗುತ್ತದೆಯೇ? ಕ್ರೀಡೆಯಲ್ಲಿ ಹಣ ಮತ್ತು ವ್ಯಾಪಾರ ಬೆರೆತಂತೆ ಕ್ರೀಡಾ ಚೈತನ್ಯದ ಅಂಶ ಮತ್ತು ಮನೋಲ್ಲಾಸ ಹೋಗಿಬಿಡುತ್ತದೆ.

ಇದು ಮಾರುಕಟ್ಟೆ ಆರ್ಥಿಕತೆಯ ಒಂದು ಉತ್ಪನ್ನವೇ ಹೊರತು, ಕ್ರೀಡೆಯ ಸಹಜ ಬೆಳವಣಿಗೆಯ ತಾರ್ಕಿಕ ಮುಂದುವರಿಕೆ ಅಲ್ಲ. ಹೆಚ್ಚೆಂದರೆ ಲಾಟರಿ, ಕುದುರೆ ಜೂಜಿನ ಮುಂದುವರಿಕೆ ಎನ್ನಬಹುದು. ಇದು ಶುರುವಾಗಿದ್ದು ಐಪಿಎಲ್‌ನಿಂದ ಮಾತ್ರವೇ ಎಂದು ಕೆಲವರು ಭಾವಿಸುತ್ತಾರೆ... ಅದು ಹಾಗಲ್ಲ; ಅದು ಹಿಂದಿನ 20-20ಯಲ್ಲೇ ಇದರ ಸೂಚನೆಗಳಿರಲಿಲ್ಲವಾ? ಅದಕ್ಕೂ ಹಿಂದೆ ಟೆಸ್ಟ್ ಕ್ರಿಕೆಟ್‌ನ ರಂಗು ಸಾಲದು ಎಂದು ಒಂದು ದಿನದ ಪಂದ್ಯಗಳಲ್ಲೇ ಬೆಟ್ಟಿಂಗ್, ಮೋಸದಾಟ, ಮ್ಯಾಚ್ ಫಿಕ್ಸಿಂಗ್ ಇವೆಲ್ಲಾ ಇರಲಿಲ್ಲವಾ? ಇನ್ನೂ ಕೆಲವರು ಹೇಳುತ್ತಾರೆ, ಇಂತಹದ್ದೆಲ್ಲಾ



ಕ್ರಿಕೆಟ್‌ನಲ್ಲಿ ಮಾತ್ರ ನಡೆಯುತ್ತದೆಂದು. ಆದರೆ ಐಪಿಎಲ್ ರೀತಿಯ ಪಂದ್ಯಾವಳಿಗಳು ಮೊದಲು ಶುರುವಾಗಿದ್ದು ಫುಟ್‌ಬಾಲ್‌ನಲ್ಲಿ ಎನ್ನುವುದನ್ನು ನಾವು ಮರೆಯಬಾರದು.

ಅಂದರೆ ಇದು ನಿರ್ದಿಷ್ಟ ಕ್ರೀಡೆಯೊಂದರ ಸಮಸ್ಯೆಯಲ್ಲ; ಕ್ರೀಡೆಯನ್ನೂ, ಸಿನೆಮಾವನ್ನೂ, ಕಲೆಯನ್ನೂ ಸೇರಿದಂತೆ ಎಲ್ಲವನ್ನೂ ನಿಯಂತ್ರಿಸಿ ಎಲ್ಲದರಿಂದಲೂ ಹಣ ಮಾಡುವ ಕಾರ್ಪೋರೇಟ್ (ಬಂಡವಾಳಶಾಹಿ) ವ್ಯವಸ್ಥೆಯ ಮೂಲಗುಣದ ಭಾಗವಾಗಿ ಈ ಎಲ್ಲಾ ಬೆಳವಣಿಗೆಗಳು ನಡೆಯುತ್ತವೆ. ಹೆಚ್ಚೆಚ್ಚು ಕಾರ್ಪೋರೇಟ್ ಬೆಳವಣಿಗೆಯಾದಂತೆ, ಹೆಚ್ಚೆಚ್ಚು ಆಕ್ರಮಣ ಇಂತಹ ಕ್ಷೇತ್ರಗಳ ಮೇಲೂ ನಡೆಯುತ್ತದೆ. ಹಾಗಾಗಿ ಇದು ನಮಗೆ ಇಂದು ಢಾಳಾಗಿ ಕಾಣುತ್ತಿದೆ. ಐಪಿಎಲ್ ತೋರಿಸಿ ಲಾಭ ಮಾಡಿಕೊಳ್ಳುತ್ತಿದ್ದ ಚಾನೆಲ್‌ಗಳು ಈಗ ಐಪಿಎಲ್ ಅವ್ಯವಹಾರವನ್ನು ತೋರಿಸಿ ಲಾಭ ಮಾಡಿಕೊಳ್ಳುತ್ತಿವೆ.

ಸೌರವ್ ಗಂಗೂಲಿ ನೇತೃತ್ವದಲ್ಲಿ ಭಾರತ ಕ್ರಿಕೆಟ್ ತಂಡವು ವಿಶ್ವಕಪ್‌ನ ಸೆಮಿಫೈನಲ್‌ಅನ್ನು ತಲುಪದಾದಾಗ, ಟಿವಿ ಚಾನೆಲ್‌ಗಳು ಅಪಾರವಾದ ನಷ್ಟವನ್ನು ಅನುಭವಿಸಿದ್ದವು. ಚಾನೆಲ್‌ಗಳಿಗಾದ ನಷ್ಟವೆಂದರೆ ಅದು ಆಯಾ ಚಾನೆಲ್‌ಗಳ ಮಾಲೀಕರಿಗೆ ಮಾತ್ರ ಆದ ನಷ್ಟವೆಂದು ಹೇಳುವಂತಿಲ್ಲ. ಜಾಹೀರಾತು ಉದ್ದಿಮೆ, ಬಿಸಿಸಿಐ ಇನ್ನಿತ್ಯಾದಿ ಭಯಾನಕ ಕೂಟದ ಸಾವಿರಾರು ಕೋಟಿಗಳ ಜಾಲಕ್ಕೆ ಆದ ನಷ್ಟವಾಗಿತ್ತು. ಅದಾದ ಮೇಲೆ ಭಾರತದಂತಹ ದೊಡ್ಡ ದೇಶದಲ್ಲಿ ಕ್ರಿಕೆಟ್‌ನ ಗೀಳನ್ನು ಚಾಲ್ತಿಯಲ್ಲಿಡುವ ವಿವಿಧ ಸಾಧ್ಯತೆಗಳ ಆವಿಷ್ಕಾರವಾಯಿತು. ಅದಕ್ಕೆ ಒನ್‌ಡೇಗಳ 50 ಓವರ್‌ಗೆ ಬದಲಾಗಿ ತಲಾ 20 ಓವರ್‌ಗಳ ಟ್ವೆಂಟಿ-20ಯನ್ನು ಬಳಸಿಕೊಳ್ಳಲಾಯಿತು. ಇದೇ ಅವಧಿಯಲ್ಲಿ ಬಿಸಿಸಿಐನಲ್ಲಿ ಸ್ಥಾನ ಸಿಗದಿದ್ದ ಭಾರತದ ಮಾಜಿ ನಾಯಕ ಕಪಿಲ್ ದೇವ್ ಐಸಿಎಲ್ (ಇಂಡಿಯನ್ ಕ್ರಿಕೆಟ್ ಲೀಗ್)ಅನ್ನು ಜೀ ಟಿವಿಯ ಜೊತೆ ಸೇರಿ ಆರಂಭಿಸಲು ಹೊರಟರು. ತನ್ನ ಏಕಸ್ವಾಮ್ಯಕ್ಕೆ ಧಕ್ಕೆ ತರುವ ಸಾಧ್ಯತೆಯಿದ್ದುದರಿಂದ ಬಿಸಿಸಿಐ, ಐಸಿಎಲ್‌ನಲ್ಲಿ ಆಡುವ ಆಟಗಾರರಿಗೆ ನಿಷೇಧ ಹಾಕಿತು. ಬಿಸಿಸಿಐ ಎಂಬುದು ಸರ್ಕಾರೀ ಸಂಸ್ಥೆಯಲ್ಲ, ಅದು ಒಂದು ಖಾಸಗಿ ಸಂಸ್ಥೆ ಎಂದು ಗೊತ್ತಾಗಿದ್ದೇ ಆಗ.

ಅದರ ಜೊತೆಗೆ ಲಲಿತ್ ಮೋದಿಯ ನೇತೃತ್ವದಲ್ಲಿ ತಾನೇ ಐಪಿಎಲ್‌ಅನ್ನು ಹುಟ್ಟುಹಾಕಿತು. ಬಿಸಿಸಿಐನಲ್ಲಿ ಶರದ್ ಪವಾರ್‌ನ ನೇತೃತ್ವದ ಮುಂಬೈ (ಅಥವಾ ಮರಾಠಾ?) ಲಾಬಿ, ದಕ್ಷಿಣ ಭಾರತದ ಲಾಬಿ ಇತ್ಯಾದಿಗಳಿವೆ. ತಮ್ಮ ಹಿತಾಸಕ್ತಿಗೆ ತಕ್ಕಂತೆ ಹಲವು ಅನೈತಿಕ ಒಪ್ಪಂದಗಳು ಈ ಲಾಬಿಗಳ ನಡುವೆ ನಡೆಯುತ್ತಿರುತ್ತದೆ. ಅಂತಿಮವಾಗಿ ಹಣ ಮತ್ತು ಅಧಿಕಾರ ಮತ್ತು ಕೆಲವು ಸಾರಿ ಕುಬೇರರ ಖಯಾಲಿ ಹಾಗೂ ಅಹಂಕಾರಗಳು ಎಲ್ಲವನ್ನೂ ನಿರ್ಧರಿಸುತ್ತವೆ. ಇಂತಹ ಕುಬೇರರ ಒಡೆತನದಲ್ಲಿ ಫ್ರಾಂಚೈಸಿಗಳೆಂದು ಕರೆಯಲಾಗುವ ತಂಡಗಳಿವೆ. ಅವುಗಳ ನಡುವೆ ಪ್ರತೀ ವರ್ಷ ಎರಡು ತಿಂಗಳು ನಡೆಯುವ ಕ್ರಿಕೆಟ್ ಇಂದು ಆ ಜಗತ್ತಿನ ಅತ್ಯಂತ ಜನಪ್ರಿಯ ಟೂರ್ನಮೆಂಟ್ ಆಗಿದೆ.

ಅದು ಆಟಗಾರರು, ಫ್ರಾಂಚೈಸಿ ಮಾಲೀಕರು, ಬಿಸಿಸಿ... ವಾಣಿಜ್ಯ ಹಿತಾಸಕ್ತಿ, ಹಾಗೆಯೇ ಟಿವಿ ಚಾನೆಲ್‌ಗಳ... ಸಹ. ಏಕೆಂದರೆ ಐಪಿಎಲ್ ಎನ್ನುವುದು ಮನರಂ... ಜನರ ಕಣ್ಕೋಟವನ್ನು ಕಿತ್ತುಕೊಳ್ಳುವ ಗ್ಲಾಮರ್‌ನ ... ತಳಕು ಹಾಕಿಕೊಂಡಿದೆ. ಮೊದಮೊದಲು ಚೌ... ಸಿಕ್ಸ್‌ಗಳನ್ನು ಬಾರಿಸಿದಾಗ ಅರೆಬೆತ್ತಲೆ ನೃತ್ಯಗಾತಿಯರ ಕು... ಸೀಮಿತವಾಗಿದ್ದ ಗ್ಲಾಮರ್ ಈಗ ಹಾಲಿವುಡ್... ಘಟಾನುಘಟಿಗಳನ್ನೊಳಗೊಂಡು ಆಗಾಧವಾಗಿ ವಿಸ್ತ...

ಕಾರ್ಪೋರೇಟ್ ಹಣವಂತರಲ್ಲಿ ಕೆಲವರು ಹೆಸರಾ... ಸಿನೆಮಾ ನಟಿಯರನ್ನು ಪತ್ನಿಯರನ್ನಾಗಿ ಹೊಂದಿದ... ಹೊಸ ಕಾಲದ ರಾಜ-ರಾಣಿಯರ ರೀತಿ ಅವರು ಹರಾ... ಪಂದ್ಯಗಳಲ್ಲಿ ಪಾಲ್ಗೊಳ್ಳುತ್ತಾರೆ. ಹಾಗೆಂದು ಇದ... ಮೋಜಿಗಾಗಿ ನಡೆಸುವ ಆಟವೆನ್ನಲಾಗದು. ಕನಿಷ್ಠ ... ಕೋಟಿ ಹೂಡಬಲ್ಲ ಕಂಪೆನಿ ಮಾಲೀಕರು, ಅ... ಮೂರ್ನಾಲ್ಕು ಪಟ್ಟು ಲಾಭವನ್ನು ಮಾಡಲೂ ... ರೂಪಿಸುತ್ತಾರೆ. ದೇಶದ ಆರ್ಥಿಕತೆಯ ಮೇಲೂ ಒ... ಮಟ್ಟಗಿನ ಪರಿಣಾಮ ಬೀರುವ ಇದು, ಬಿಸಿಸಿಐ ಹಾ... ಐಪಿಎಲ್‌ನ ಜೂಜುಕೋರರಲ್ಲಿ ದೊಡ್ಡ ಅಹಂಕಾರವ... ಮೂಡಿಸಿದೆ. ಇದಕ್ಕೊಂದು ಉದಾಹರಣೆಯೆಂ... ಐಪಿಎಲ್‌ನ ಎರಡನೇ ಹರಾಜಿನ ನಂತರ ಅದರ ಮು... ಲಲಿತ್ ಮೋದಿ 'ಐಪಿಎಲ್ ಎನ್ನುವುದು ಆ... ಕುಸಿತದಿಂದ ರಕ್ಷಿಸಲ್ಪಟ್ಟಿದೆ. ಈ ವರ್ಷ ಐಪಿಎಲ್ ... ವರ್ಷಕ್ಕಿಂತ ಎರಡು ಪಟ್ಟು ದೊಡ್ಡದಾಗಿರುತ್ತದೆ; ... ವ್ಯಯಿಸಲ್ಪಟ್ಟ 10 ಮಿಲಿಯನ್ ಡಾಲರ್‌ಗಳು ಭಾ... ಆರ್ಥಿಕತೆಯ ಶಕ್ತಿಯನ್ನು ತೋರಿಸುತ್ತದೆ' ಎಂದು ಹೇ...

ಮೊದಲ ವರ್ಷ ಆಟವನ್ನು ಮಾತ್ರ ನೇರ ಪ್ರ... ಮಾಡಲಾಯಿತು. ಎರಡನೆಯ ವರ್ಷ ಆಟಗಾ... ಹರಾಜನ್ನೂ ನೇರ ಪ್ರಸಾರ ಮಾಡಲಾಯಿತು. ಮೊದಲ... ಹರಾಜು ವಾಂಖೆಡೆ ಸ್ಟೇಡಿಯಂನ ಒಳಾಂಗಣದಲ್ಲಿ ನಡ... ಎರಡನೆಯದನ್ನು ಗೋವಾದ ಫೋರ್ಟ್ ಅಗ್ವಾಡಾ ... ಬೀಚ್ ರೆಸಾರ್ಟ್‌ನಲ್ಲಿ ನಡೆಸಲಾಯಿತು. 1ರಿಂದ ... ಕೋಟಿಗಳವರೆಗೆ ಮಾರಾಟವಾಗುವ ಕ್ರಿಕೆಟ್ ಆಟಗಾ... ಯಾರೊಬ್ಬರೂ ಈ ಆಫರ್‌ಅನ್ನು ತಿರಸ್ಕರಿ... ಉದಾಹರಣೆಗಳಿಲ್ಲ. ಮನುಷ್ಯರಾಗಿ ತಮ್ಮ ... ಸ್ವಾಭಿಮಾನವನ್ನೂ ಕಳೆದುಕೊಂಡಿರುವ ಆಟಗಾ... ಐಪಿಎಲ್‌ಗಾಗಿ ಕಾಯುತ್ತಿರುತ್ತಾರೆ. ಮೂರು ದಿನಗಳ ... ಭಾರತದ ತಂಡದ ನಾಯಕ ಧೋನಿಯ ಪತ್ರಿಕಾಗೋಷ್ಠಿ... ಅದರ ಅಸಹ್ಯ ಪ್ರದರ್ಶನವಾಯಿತು. ಪತ್ರಕರ್ತ... ಧೋನಿಯನ್ನು ಐಪಿಎಲ್ ಅಧ್ವಾನದ ಪ್ರಶ್ನೆ ಕೇಳಿ... ಧೋನಿ ಉತ್ತರಿಸಲು ಬಾಯಿ ತೆರೆಯುತ್ತಿದ್ದಂತೆ, ಬಿಸಿ... ಮೀಡಿಯಾ ಮ್ಯಾನೇಜರ್ 'ನೆಕ್ಸ್ಟ್ ಕ್ವೆಶ್ಚನ್' ಎನ್ನು... ಧೋನಿ ಮುಂಗುಳ್ನಗೆ ಬೀರಿ ಬಾ... ಮುಚ್ಚಿಕೊಂಡುಬಿಡುತ್ತಿದ್ದ.

ಹೊಸ ಕಾಲಕ್ಕೆ ತಕ್ಕಂತೆ ಹೊಸ ಜೂಜು ಎಂ... ಇದನ್ನು ನಾವು ಅರ್ಥೈಸಿದರೆ ಮೋಸ ಹೋಗು... ನಮ್ಮ ಕ್ರೀಡೆ, ಕಲೆ, ಸಿನೆಮಾ ಎಲ್ಲವನ್ನೂ ವಿಕೃತಗೊ... ಅದನ್ನೇ ವೈಭವೀಕರಿಸಲಾಗುತ್ತದೆ. ಮಾಧ್ಯಮ... ಜೂಜುಕೋರರು, ವ್ಯಾಪಾರಿಗಳು ಸೇರಿಕೊ... ಹೊಸದೊಂದು ಬಗೆಯ ಅಭಿರುಚಿಯನ್ನು ಬಿತ್ತು... ಅದು ಬೆಳೆದಂತೆ ಅವರ ತಿಜೋರಿ ತುಂಬುತ್ತಾ ಹೋಗು... ಆದ್ದರಿಂದಲೇ ಇದನ್ನು ಬರೀ ಜೂಜು ಎಂದು ಮಾ... ಕರೆಯಲಾಗದು.

ಈ ಬೆಟ್ಟಿಂಗ್ ಬಗ್ಗೆ ಈಗ್ಯಾಕೆ ಇಷ್ಟೊಂದು ಹೊಯ್ಕೊತಾ ಅವ್ರೆ?

ಇವೆಲ್ಲಾ ಹೊಸದಾಗಿ ನಡೆಯುತ್ತಿರುವುದಲ್ಲ; ಐಪಿಎಲ್‌ನ ಬಾಸ್‌ಗಳಿಗಾಗಲೀ, ಸರ್ಕಾರಗಳಿಗಾಗಲೀ ಗೊತ್ತಿಲ್ಲದ್ದೇನಲ್ಲ. ಆದರೂ ಇಷ್ಟೊಂದು ಸುದ್ದಿ ಈಗ ಮಾತ್ರ ಏಕಾಗುತ್ತಿದೆ? ಪೊಲೀಸರೂ ಏಕೆ ಇದರ ಹಿಂದೆ ಬಿದ್ದಿದ್ದಾರೆ? ಇದಕ್ಕೆ 2 ಕಾರಣಗಳನ್ನು ಹೇಳಲಾಗುತ್ತಿದೆ. ಒಂದು, ಲಲಿತ್ ಮೋದಿ, ಪವಾರ್, ಶ್ರೀನಿವಾಸನ್ ಈ ಮೂವರೂ ಭಾರತೀಯ ಕ್ರಿಕೆಟ್‌ನಲ್ಲಿ ಪ್ರಬಲವಾಗಿರುವ ಲಾಬಿಗಳ ಪ್ರತಿನಿಧಿಗಳು. ಹಿಂದೆ ಪರಸ್ಪರ ಒಬ್ಬರನ್ನೊಬ್ಬರು ಬೆಂಬಲಿಸುತ್ತಾ ಲಾಭ ಮಾಡಿಕೊಳ್ಳುತ್ತಿದ್ದವರು ಈಗ ದೂರ ಸರಿದಿದ್ದಾರೆ. ಕಳೆದ 30 ವರ್ಷಗಳಿಂದಲೂ ತಾನು ಕನಸಿದ್ದ ಬಿಸಿಸಿಐನ ಕುರ್ಚಿಯ ಮೇಲೆ ಕುಂತಿರುವ ಶ್ರೀನಿವಾಸನ್ ಐಪಿಎಲ್‌ನ ಮುಖ್ಯಸ್ಥನ ಸ್ಥಾನದಿಂದ ಲಲಿತ್ ಮೋದಿಯನ್ನು ಕಿತ್ತು ಹಾಕಿಸುವಲ್ಲಿ ಯಶಸ್ವಿಯಾಗಿದ್ದಾನೆ. ಈ ಮಧ್ಯೆ ಭಾರತೀಯ ಜನತಾ ಪಕ್ಷದ ಯುವ ಮೋರ್ಚಾದ ಪದಾಧಿಕಾರಿಯೊಬ್ಬ ಇದರಲ್ಲಿ ಮುಖ್ಯ ಸ್ಥಾನ ಪಡೆಯಲು ಹಂಬಲಿಸುತ್ತಿದ್ದಾನೆ. ಹಿಂದೆ ಭಾರತೀಯ ಜನತಾ ಪಕ್ಷಕ್ಕೆ ಹಡಬೇ ದುಡ್ಡು ಸಿಗುವಂತೆ ನೋಡಿಕೊಳ್ಳುತ್ತಿದ್ದ ಪ್ರಮೋದ್ ಮಹಾಜನ್‌ನ ಸ್ಥಾನ ಖಾಲಿಯಾಗಿದೆ. ಆ ಸ್ಥಾನದಲ್ಲಿ ಅರುಣ್ ಜೇಟ್ಲಿಯನ್ನೇ ತಂದು ಕೂರಿಸುವ ಕೆಲಸವೂ ನಡೆಯುತ್ತಿದೆ. ಈ ಎಲ್ಲಾ ರಾಜಕಾರಣದ ಭಾಗವಾಗಿ ಶ್ರೀನಿವಾಸನ್ ಸೇರಿದಂತೆ ಕೆಲವು ದೊಡ್ಡವರನ್ನೂ ಹಿಂದಕ್ಕೆಳೆಯಲೆಂದೇ ಈ ಬೆಟ್ಟಿಂಗ್ ಅವ್ಯವಹಾರವನ್ನು ಹೊರಕ್ಕೆ ತಂದ ಹಾಗೆ ... ಅದರಲ್ಲಿ ಯಾರ್ಯಾರನ್ನು ಗುರಿ ಮಾಡಬೇಕೆಂದು ಬಯಸಿದ್ದಾರೋ, ಅವರೆಲ್ಲರನ್ನು ಇಳಿ... ಸಲುವಾಗಿ ಇವೆಲ್ಲಾ ನಡೆದಿದೆಯೆಂದು ಹೇಳಲಾಗುತ್ತಿದೆ.

ಎರಡನೆಯದ್ದು: ಮೇಲೆ ಹೇಳಿದ್ದೆಲ್ಲವೂ ನಿಜ. ಅದರ ಜೊತೆಗೆ ಇನ್ನೊ... ಮುಖ್ಯ ಅಂಶವಿದೆ. ಈ ಬೆಟ್ಟಿಂಗ್ ಮತ್ತು ಮೋಸದಾಟದ ಮೇಲೆ ಪೊಲಿ... ಹಾಗೂ ಮಾಧ್ಯಮಗಳು ಬಿದ್ದ ಮೇಲೆ ತಮಗಾಗದವರನ್ನು ಹಣಿಯಲು ಕೆಲ... ಸಂದರ್ಭವನ್ನು ಬಳಸುತ್ತಿದ್ದಾರೆಂಬುದೇನೋ ನಿಜ. ಆದರೆ ಇದು ಹೊರಗೆ ಬಂ... ಹಾಗಲ್ಲ. ಬೆಟ್ಟಿಂಗ್ ದಂಧೆಯಲ್ಲಿರುವ ಕೆಲವರು, ದಾವೂದ್ ಇಬ್ರಾಹಿಂ ಕ... ಇಟ್ಟುಕೊಂಡಿದ್ದಾರೆ; ದಾವೂದ್ ಸಂಪರ್ಕಗಳ ಮೇಲೆ ಕಣ್ಣಿಟ್ಟಿದ್ದ (ಕಿವಿಯಿ... ಪೊಲೀಸರಿಗೆ ಇದು ಗೊತ್ತಾಗಿದ್ದರಿಂದ ಅವರು ಇದನ್ನು ಹೊರಗೆಳೆದರು. ... ಅದು ಬೆಳೆಯುತ್ತಾ ಹೋಯಿತು.

ಇವೆರಡೂ ನಿಜವಿರಬಹುದು; ಇಲ್ಲದಿರಬಹುದು. ಆದರೆ ಐಪಿಎಲ್ ಎನ್ನು... ಸ್ವಲ್ಪ ಕ್ರೀಡೆ, ತುಂಬಾ ಗ್ಲಾಮರ್ ಹಾಗೂ ಮನರಂಜನೆ, ತುಂಬಾ ತುಂಬಾ ... ಹಾಗೂ ಕ್ರಿಮಿನಲ್ ಚಟುವಟಿಕೆ ಎಂಬುದರಲ್ಲಿ ಸಂದೇಹವಿಲ್ಲ.

ಗಂಡನ ವಿರುದ್ಧ ಸೇಡು ತೀರಿಸಿಕೊಂಡ ಸಾವಿತ್ರಿ

ಆಕೆಯ ಅಪ್ರತಿಮ ಸೌಂದರ್ಯವನ್ನು ಸುತ್ತಮುತ್ತಲಿನ ...ಊರು ಜಿಲ್ಲೆಗಳ ಪ್ರಮುಖ ಪುರುಷರು ಕೊಂಡಾಡುತ್ತಿದ್ದರು. ...ಜೊತೆಗೆ ಶಾಸ್ತ್ರೀಯ ಕಲೆ, ಸಂಗೀತ, ನೃತ್ಯಗಳ ಬಗೆಗಿನ ...ಕೆಯ ಜ್ಞಾನವನ್ನು ಮೆಚ್ಚುತ್ತಿದ್ದರು. ಅದೆಲ್ಲಕ್ಕಿಂತ ಮುಖ್ಯವಾಗಿ ...ಕೆಯೊಂದಿಗೆ ಒಂದು ರಾತ್ರಿ ಕಳೆದರೆ ತಮ್ಮ ಬದುಕು ...ರ್ಥಕವಾದಂತೆ, ಯಾಕೆಂದರೆ ಆಕೆ ನೀಡುವ ದೈಹಿಕ ...ಖಕ್ಕೆ ಈ ಜಗತ್ತಿನಲ್ಲಿ ಸಾಟಿಯೇ ಇಲ್ಲ ಎನ್ನುತ್ತಿದ್ದರು.

ಅಷ್ಟು ಖ್ಯಾತಿ ಪಡೆದಿದ್ದ ಆ ವೇಶ್ಯೆಯ ಹೆಸರು, ...ಊರು, ಹಿನ್ನೆಲೆ ಇತ್ಯಾದಿಗಳ ಬಗ್ಗೆ ಮಾತ್ರ ಯಾರಿಗೂ ...ಗೊತ್ತಿರಲಿಲ್ಲ. ಅಷ್ಟೇ ಅಲ್ಲ ಆಕೆಯನ್ನು ಯಾರು ಬೇಕಾದರೂ ...ಸಂಪರ್ಕಿಸುವಂತಿರಲಿಲ್ಲ, ಬದಲಾಗಿ ಆಕೆಯೇ ತನಗೆ ಬೇಕಾದ ...ರುಷನನ್ನು ಕರೆಸಿಕೊಂಡು ಆತನ ಅಗತ್ಯಗಳನ್ನೆಲ್ಲ ...ಪೂರೈಸುತ್ತಿದ್ದಳು. ಆಕೆಯಿಂದ ಕರೆ ಬಂದರೆ ಪುರುಷರು ...ತಮ್ಮ ಬದುಕಿನ ಭಾಗ್ಯದ ಬಾಗಿಲು ತೆರೆಯಿತು ಎಂಬಂತೆ ...ಕೆ ಇದ್ದಲ್ಲಿಗೆ ದೌಡಾಯಿಸುತ್ತಿದ್ದರು.

ಆಕೆಯ ಖ್ಯಾತಿ ಹಬ್ಬುತ್ತ ಕೊನೆಗೊಂದು ದಿನ ರಾಮನ್ ...ಎಂಬ ಮುದಿ ಶ್ರೀಮಂತ ಚಪಲಿಗ ಭೂಮಾಲೀಕನ ...ಕಿವಿಗೂ ಬಿತ್ತು. ಆತ ಹೇಗಾದರು ಮಾಡಿ ಆಕೆಯೊಂದಿಗೆ ...ಒಂದು ರಾತ್ರಿ ಕಳೆಯಬೇಕೆಂದು ಹಪಹಪಿಸಲಾ...ರಂಭಿಸಿದ. ರಾಮನ್ ತನ್ನನ್ನು ಸೇರಲು ಆಶಿಸುತ್ತಿರುವ ...ವಿಚಾರ ಆಕೆಗೆ ಗೊತ್ತಾಯಿತು. ಮುದುಕನ ಚಪಲವನ್ನು ...ಪೂರೈಸಲು ನಿರ್ಧರಿಸಿದ ಆಕೆ ಆತನನ್ನು ತಾನಿದ್ದಲ್ಲಿಗೆ ...ಕರೆಸಿಕೊಂಡಳು. ಆದರೆ ಒಂದು ಷರತ್ತನ್ನು ವಿಧಿಸಿದಳು. ...ಅದೇನೆಂದರೆ ಆಕೆ ತನ್ನ ಮುಖಕ್ಕೆ ಹಾಕಿಕೊಂಡಿದ್ದ ...ಮುಸುಕನ್ನು ಕಳಚುವುದಿಲ್ಲ ಎಂಬ ಷರತ್ತು.

ಕಾಮುಕ ಮುದುಕನಿಗೆ ಆಕೆಯ ಮುಖ ನೋಡು...ವುದು ಮುಖ್ಯವಾಗಿರಲಿಲ್ಲವಾದ್ದರಿಂದ ಆಕೆಯ ಷರತ್ತಿಗೆ ...ಒಪ್ಪಿಕೊಂಡ. ಅವತ್ತಿನ ರಾತ್ರಿ ಆಕೆ ರಾಮನ್‌ನ ದೈಹಿಕ ...ಬಯಕೆಗಳನ್ನು ಅದೆಷ್ಟು ಚಂದವಾಗಿ ತಣಿಸಿದಳೆಂದರೆ ...ರಾಮನ್ ಆಕೆಗೆ ಸಂಪೂರ್ಣವಾಗಿ ಮಾರುಹೋದ. ...ಆತನಿಗಾಗಲೇ ಮದುವೆಯಾಗಿದ್ದರೂ, ಮನೆಯಲ್ಲಿ ...ಮಗಳ ವಯಸ್ಸಿನ ಹೆಂಡತಿ ಇದ್ದರೂ ಆತ "ನನ್ನ ...ಉಳಿದ ಜೀವನವನ್ನು ನಿನ್ನೊಂದಿಗೆ ಕಳೆಯಬೇಕು ಎಂದು ...ಆಸೆ ಆಗುತ್ತಿದೆ. ನಿನಗೆ ಏನೇನು ಬೇಕೋ ಅದೆಲ್ಲವನ್ನು ...ನೀಡುವಷ್ಟು ಆಸ್ತಿ ನನ್ನಲ್ಲಿದೆ. ಬಾ, ನನ್ನೊಂದಿಗಿರು" ...ಎಂದು ಆ ವೇಶ್ಯೆಯನ್ನು ಬೇಡಿಕೊಂಡ.

ಆಗ ಆಕೆ ತನ್ನ ಮುಖಕ್ಕೆ ಹಾಕಿಕೊಂಡಿದ್ದ ಮುಸುಕನ್ನು ...ತೆಗೆದಳು. ಅವಳ ಮುಖ ನೋಡಿ ರಾಮನ್ ದಂಗಾಗಿ ...ಹೋದ. ಕೂಡಲೇ ಅಲ್ಲಿಂದ ರಸ್ತೆಗೆ ಓಡಿ ಹೋದ ಆತ ...ಅಯ್ಯೋ, ಇವಳು ನನ್ನ ಹೆಂಡತಿ. ವೇಶ್ಯೆಯಾಗಿ ನನಗೆ ...ಮೋಸ ಮಾಡಿದ್ದಾಳೆ. ನನಗೆ ನ್ಯಾಯ ಬೇಕು. ಈಕೆಗೆ ಶಿಕ್ಷೆ ...ಆಗಬೇಕು" ಎಂದೆಲ್ಲ ಚೀರಾಡಲಾರಂಭಿಸಿದ.

ಇದು ಕತೆಯಲ್ಲ, ಬದಲಾಗಿ ಪಕ್ಕದ ಕೇರಳದಲ್ಲಿ ...08 ವರ್ಷಗಳ ಹಿಂದೆ ನಡೆದ ನೈಜ ಘಟನೆ. ಈ ...ಘಟನೆಯ ಹಿಂದೆ ಜಾತಿವ್ಯವಸ್ಥೆಯ ಕ್ರೌರ್ಯ, ಮಹಿಳೆಯರ ...ಶೋಷಣೆ, ಅಕ್ರಮ ಲೈಂಗಿಕ ಸಂಬಂಧ, ಸಾರ್ವಜನಿಕ ...ವಿಚಾರಣೆ, ದ್ವೇಷ, ಸೇಡು, ಅಸಹಾಯಕತೆ, ಸಾಮಾಜಿಕ ...ಬಹಿಷ್ಕಾರ ಎಲ್ಲವೂ ಇರುವುದರಿಂದ ಇವತ್ತಿಗೂ ಕುತೂಹಲ ...ಕಾರಿಯಾಗಿದೆ.

ಕೇರಳದ ನಂಬೂದರಿ ಬ್ರಾಹ್ಮಣ ಪುರುಷರು ...ಶತಮಾನಗಳಿಂದ ಸಾಮಾಜಿಕವಾಗಿ ಪಾಲಿಸಿಕೊಂಡು ಬಂದಿದ್ದ ...ಸಾರ್ವಜನಿಕಾ ನೀತಿ ಮತ್ತು ಖಾಸಗಿ ಬದುಕಿನಲ್ಲಿ ಮಹಿಳೆಯರಿಗೆ ...ಮಾಡುತ್ತಿದ್ದ ಅನ್ಯಾಯ-ಅವಮಾನವೇ ಸಾವಿತ್ರಿ ಎಂಬ ...ನಂಬೂದರಿ ಮಹಿಳೆ ವೇಶ್ಯೆ ಆಗಿದ್ದಕ್ಕೆ ಮೂಲಕಾರಣವಾಗಿತ್ತು. ...ಆಕೆಯ ಪ್ರಕರಣದ ನಂತರ ಕೇರಳದ 64 ಪ್ರಮುಖ ...ಸಾಹಿತಿದರು, ಪಂಡಿತರು, ನೃತ್ಯಗಾರರು ಮತ್ತು ಇತರೆ ...ಗಣ್ಯನಾಮರು ಸಾಮಾಜಿಕ ಬಹಿಷ್ಕಾರಕ್ಕೆ ಗುರಿಯಾದರಲ್ಲದೆ ...ನಂಬೂದರಿ ಸಮುದಾಯದಲ್ಲೇ ಮುಖ್ಯ ಬದಲಾವಣೆ...ಗಳಿಗೂ ಪ್ರೇರಣೆ ನೀಡಿತು.

ಬ್ರಾಹ್ಮಣರಲ್ಲೇ ತಾವು ಶ್ರೇಷ್ಠ ಬ್ರಾಹ್ಮಣರು ಎಂದು ...ನಂಬೂದರಿಗಳು ಅಚಲವಾಗಿ ನಂಬಿದ್ದ ಕಾಲವೊಂದಿತ್ತು. ...ತಾವು ಶುದ್ಧ ಆರ್ಯನ್ನರು; ಸುಮಾರು ಆರು ಸಾವಿರ ...ವರ್ಷಗಳ ಹಿಂದೆ ತಮ್ಮನ್ನು ಇಂಡಸ್ ನದಿ ತೀರದಿಂದ ...ದಕ್ಷಿಣ ಭಾರತಕ್ಕೆ ಕರೆದುಕೊಂಡು ಬಂದಿದ್ದು ಸ್ವತಃ ಪರಶುರಾಮ; ತಮಗಾಗಿ ಪರಶುರಾಮ ಸಮುದ್ರಕ್ಕೆ ಕೊಡಲಿಯನ್ನು ಜೋರಾಗಿ ಬೀಸಿ ಕೇರಳ ರಾಜ್ಯವನ್ನು ಸೃಷ್ಟಿಸಿದ; ಜೊತೆಗೆ ಅಲ್ಲಿನ ಎಲ್ಲಾ ಭೂಮಿಯ ಮೇಲೆ ತಮಗೆ ಮಾತ್ರ ಹಕ್ಕು ಕೊಟ್ಟ; ತಮಗೆ ವೇದಗಳು ಗೊತ್ತಿರುವುದರಿಂದ ತಾವು ಎಲ್ಲರಿಗಿಂತ ಶ್ರೇಷ್ಠರು; ರಾಜರೂ ಸೇರಿದಂತೆ ಇತರರೆಲ್ಲ ತಮಗೆ ಅಧೀನರು; ಇತರ ಸಮುದಾಯದವರೆಲ್ಲರೂ ಅಸ್ಪೃಶ್ಯರು... ಎಂದೆಲ್ಲ ಕಾಗಕ್ಕ ಗುಬ್ಬಕ್ಕನ ಕತೆ ಕಟ್ಟಿದ ನಂಬೂದರಿಗಳು ಅಲ್ಲಿನ ಸಮಾಜದ ಮೇಲೆ ಹಿಡಿತ ಸಾಧಿಸಿದರು. ಅಲ್ಲಿಯತನಕ ದೇವರು ದಿಂಡರು ಎಂಬುದೆಲ್ಲ ಗೊತ್ತಿರದಿದ್ದ, ಪ್ರಕೃತಿಯನ್ನೇ ಆರಾಧಿಸುತ್ತಿದ್ದ ಸ್ಥಳೀಯ ಅಮಾಯಕರು ನಂಬೂದರಿಗಳು ಹೇಳಿದ್ದನ್ನೆಲ್ಲ ನಂಬಿದರು. ಆ ಮೂಲಕ ಸಾವಿರಾರು ವರ್ಷಗಳ ಕಾಲ ಸ್ಥಳೀಯರು ಶೋಷಣೆಗೆ ತುತ್ತಾದರು.

ಬಂಡಾಯವೆದ್ದ ಮಹಿಳೆಯ ಕಥೆ 1



ಹೀಗೆ ಭೂಮಿಯ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಿದ ನಂಬೂದರಿಗಳು ಆನಂತರ ಅದನ್ನು ತಮ್ಮ ಹಿಡಿತದಲ್ಲೇ ಇಟ್ಟುಕೊಳ್ಳಲು ತಮ್ಮೊಳಗೇ ಇನ್ನೊಂದು ರೀತಿಯ ವ್ಯವಸ್ಥೆಯನ್ನು ಜಾರಿಗೆ ತಂದರು. ಅದು ವಿವಾಹಕ್ಕೆ ಸಂಬಂಧಪಟ್ಟ ವ್ಯವಸ್ಥೆ. ನಂಬೂದರಿಗಳ ಕುಟುಂಬದಲ್ಲಿ ಜನಿಸಿದ ಮೊದಲ ಮಗನಿಗೆ ಮಾತ್ರ ಮದುವೆಯಾಗುವ ಮತ್ತು ಮನೆಯ ಆಸ್ತಿಯ ಒಡೆಯನಾಗುವ ಅವಕಾಶವಿತ್ತು. ಹಾಗಾದರೆ ಉಳಿದ ಗಂಡು ಮಕ್ಕಳು ತಮ್ಮ ಪ್ರಕೃತಿ ಸಹಜ ದೈಹಿಕ ಆಶೆಗಳನ್ನು ಈಡೇರಿಸಿಕೊಳ್ಳಲು ಏನು ಮಾಡಬೇಕು ಎಂಬ ಪ್ರಶ್ನೆ ಉದ್ಭವಿಸಿತು. ಆಗ ನಂಬೂದರಿಗಳ ಕಣ್ಣಿಗೆ ಬಿದ್ದದ್ದು ತಮ್ಮ ಭೂಮಿಗಳಲ್ಲಿ ಕೂಲಿ ಕಾಯಕ ಮಾಡುತ್ತಿದ್ದ ನಾಯರ್ ಸಮುದಾಯದ ಮೇಲೆ.

ತಮ್ಮ ಜಾತಿಯಲ್ಲಿ ಮೊದಲನೆಯವನ ನಂತರ ಹುಟ್ಟಿದ ಗಂಡು ಮಕ್ಕಳು ನಾಯರ್ ಸಮುದಾಯದ ಸ್ತ್ರೀಗಳೊಂದಿಗೆ 'ಕೂಡಿಕೆ' ಮಾಡಿಕೊಳ್ಳಬಹುದು ಎಂದರು. ಆದರೆ ಅಂತಹ 'ಕೂಡಿಕೆ'ಯಿಂದ ಹುಟ್ಟುವ ಮಕ್ಕಳಿಗೆ ಆಸ್ತಿಯಲ್ಲಿ ಯಾವ ಪಾಲೂ ಇರುವುದಿಲ್ಲ ಎಂದು ಘೋಷಿಸಿದರು. 'ಕೂಡಿಕೆ' ಸಂಬಂಧಗಳಿಂದ ಹುಟ್ಟಿದವರನ್ನು ತಮ್ಮ ಜೀತದಾಳುಗಳಂತೆ ಇಟ್ಟುಕೊಳ್ಳುತ್ತಿದ್ದರು. ಕಾಲಕ್ರಮೇಣ ಈ ಆಳುಗಳಿಗೆ ಕಳರಿಪಯಟ್ ತರಹದ ಯುದ್ಧ ಕಲೆಗಳನ್ನು ಕಲಿಸಿಕೊಟ್ಟು ಅವರನ್ನೆಲ್ಲ ತಮ್ಮ ರಕ್ಷಣೆಗೆ ಉಪಯೋಗಿಸಿಕೊಳ್ಳಲು ಆರಂಭಿಸಿದರು.

ನಂಬೂದರಿಗಳು ಎಂತಹ ಹೀನ ವ್ಯವಸ್ಥೆಗಳನ್ನು ಹುಟ್ಟುಹಾಕಿದರೆಂದರೆ ಬೇರೆ ಜಾತಿಯ ಪುರುಷರು ಮತ್ತು ಮಹಿಳೆಯರು ಸೊಂಟದಿಂದ ಮಂಡಿಯತನಕ ಮಾತ್ರ ಬಟ್ಟೆಯನ್ನು ತೊಡಬೇಕಿತ್ತು. ಹಾಗೊಮ್ಮೆ ಯಾರಾದರು ಮಹಿಳೆ ತನ್ನ ಎದೆಯನ್ನು ಬಟ್ಟೆಯಿಂದ ಮುಚ್ಚಿಕೊಂಡರೆ ಆಕೆಯ ಸ್ತನಗಳನ್ನೇ ಕತ್ತರಿಸಿಹಾಕುವಂತಹ ಶಿಕ್ಷೆಯನ್ನು ವಿಧಿಸುತ್ತಿದ್ದರು. ಕೇರಳ ರಾಜ್ಯದಲ್ಲಿ ವರ್ಷದಲ್ಲಿ ಏಳು ತಿಂಗಳೂ ಮಳೆ ಬಿದ್ದರೂ ಯಾರೂ ಕೊಡೆಗಳನ್ನು ಬಳಸುವಂತಿರಲಿಲ್ಲ, ಇನ್ನು ಚಪ್ಪಲಿ ತೊಡುವ ಯೋಚನೆಯನ್ನೇ ಮಾಡುವಂತಿರಲಿಲ್ಲ, ನಂಬೂದರಿಗಳ ಮುಂದೆ ಯಾರೂ ನಾನು, ತಾನು ಎಂದು ಮಾತನಾಡುವಂತಿರಲಿಲ್ಲ, ಬದಲಾಗಿ ನಡುಬಗ್ಗಿಸಿ 'ನಿಮ್ಮ ಅಡಿಯಾಳು' ಎಂದು ತಮ್ಮನ್ನು ಕರೆದುಕೊಳ್ಳಬೇಕಿತ್ತು.

ನಾಯರ್ ಮಹಿಳೆಯರೊಂದಿಗಿನ 'ಕೂಡಿಕೆ'ಗಳ ಮೂಲಕ ನಂಬೂದರಿ ಪುರುಷರ 'ಸಮಸ್ಯೆ'ಯನ್ನು ಬಗೆಹರಿಸಿಕೊಂಡರು. ಆದರೆ ಅವರ ಜಾತಿಯಲ್ಲಿ ಪುರುಷರಷ್ಟೇ ಸಂಖ್ಯೆಯಲ್ಲಿದ್ದ ಯುವತಿಯರು ಏನು ಮಾಡಬೇಕು? ಅದರಲ್ಲೂ ಮೊದಲನೆ ಮಗ ಮಾತ್ರ ಮದುವೆ ಆಗುವುದರಿಂದ ಅಪಾರ ಸಂಖ್ಯೆಯ ನಂಬೂದರಿ ಮಹಿಳೆಯರಿಗೆ ಸಹಜವಾಗಿಯೇ ವಿವಾಹ ಭಾಗ್ಯವೇ ಇಲ್ಲದಂತಾಯಿತು. ಆಗ ಅದಕ್ಕೂ ನಂಬೂದರಿ ಪುರುಷರು ಒಂದು ತಂತ್ರವನ್ನು ಹುಡುಕಿಕೊಂಡರು.

ಅದೇನೆಂದರೆ ಮಹಿಳೆಯರನ್ನು ತಮ್ಮ ಮನೆಯಲ್ಲಿಯೇ ಅಕ್ಷರಶಃ ಬಂಧಿಗಳನ್ನಾಗಿಸುವುದು. ಹಾಗೆ ಬಂಧಿಯಾದ ಮಹಿಳೆಯರಿಗೆ 'ಅಂತರಜನಮ್' ಎಂದು ಹೆಸರಿಟ್ಟರು.

ನಂಬೂದರಿ ಕುಟುಂಬಗಳಲ್ಲಿ ಜನಿಸಿದ ಹೆಣ್ಣು ಮಕ್ಕಳಿಗೆ ಐದಾರು ವರ್ಷಗಳು ತುಂಬುತ್ತಿದ್ದಂತೆ ಅವರ ಬಾಲ್ಯಕ್ಕೆ ಅಂತ್ಯ ಹಾಡಲಾಗುತ್ತಿತ್ತು. ಆಕೆ ತನ್ನ ಬದುಕಿನ ಉಳಿದ ಭಾಗವನ್ನು ಮನೆಯ ನಾಲ್ಕು ಗೋಡೆಗಳೊಳಗೆ ಸಾಗಿಸುವಂತೆ ನಿಯಮಗಳನ್ನು ಜಾರಿಗೆ ತರಲಾಯಿತು. ಮಹಿಳೆಯರಿಗೆ ಶಿಕ್ಷಣ ಸಿಕ್ಕರೆ ಅವರು ಬಂಡೇಳಬಹುದು ಎಂದು ಅವರಿಗೆ ಓದುಬರಹವನ್ನು ನಿರಾಕರಿಸಿದರು. ವಿಧವೆಯರಂತೆ ಸದಾ ಬಿಳಿ ಬಟ್ಟೆಯನ್ನು ತೊಡುವುದು, ಚಿನ್ನಾಭರಣ ಧರಿಸದಿರುವುದು, ಹೆತ್ತ ತಂದೆಗೆ ಮತ್ತು ಆನಂತರ ಕೈಹಿಡಿದ ಗಂಡನಿಗಲ್ಲದೆ ಮತ್ತಿನ್ಯಾವ ಪುರುಷನ ಕಣ್ಣಿಗೂ ಬೀಳದಿರುವುದು... ನಂಬೂದರಿ ಮಹಿಳೆಯರಿಗೆ ಇಂತಹ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತಂದ ಪುರುಷರು ಅವರನ್ನೆಲ್ಲ ತಮ್ಮ ಹದ್ದುಬಸ್ತಿನಲ್ಲೇ ಇಟ್ಟುಕೊಂಡಿದ್ದರು.

ಇದಕ್ಕೆಲ್ಲ ಅನುಕೂಲವಾಗುವಂತೆ ಭೂಮಾಲೀಕರಾಗಿದ್ದ ನಂಬೂದರಿ ಮನೆಗಳಲ್ಲಿ ಮಹಿಳೆಯರಿಗೆಂದೇ ಪ್ರತ್ಯೇಕ ಭಾಗವನ್ನು ಮೀಸಲಿಡಲಾಗುತ್ತಿತ್ತು, ಅಲ್ಲಿ ಮಹಿಳೆಯರಿಗೆಂದೇ ಪ್ರತ್ಯೇಕ ಬಾವಿಯೂ ಇರುತ್ತಿತ್ತು. ಮದುವೆ ಆಗಿರುವವರು, ಆಗದಿರುವವರು, ವಿಧವೆಯರು, ಯುವತಿಯರು, ಮುದುಕಿಯರು... ಒಟ್ಟು ಕುಟುಂಬದ ಎಲ್ಲಾ ಮಹಿಳೆಯರು ಹೀಗೆ ಹೊರ ಜಗತ್ತಿನೊಂದಿಗೆ ಯಾವ ಸಂಪರ್ಕವೂ ಇಲ್ಲದೆ ತಮಗಾಗಿ ಮೀಸಲಿಟ್ಟಿದ್ದ ಭಾಗದಲ್ಲಿ ಅಡುಗೆ, ಪೂಜೆ, ವ್ರತಗಳಲ್ಲಿ ಕಾಲ ಕಳೆಯಬೇಕಿತ್ತು.

ನಂಬೂದರಿ ಮಹಿಳೆಯರು ಹೆಚ್ಚೆಂದರೆ ದೇವಸ್ಥಾನಕ್ಕೆ ಮತ್ತು ಮಹಿಳಾ ಸಂಬಂಧಿಗಳನ್ನು ಭೇಟಿ ಮಾಡಲು ಅವರ ಮನೆಗಳಿಗೆ ಹೋಗಬಹುದಿತ್ತು. ಆದರೆ ಹಾಗೆ ಹೋಗುವಾಗ ಮುಡಿಯಿಂದ ಅಡಿಯವರೆಗೂ ಬಟ್ಟೆ ಹೊದ್ದಿರಬೇಕಿತ್ತು, ಯಾರಿಗೂ ತಮ್ಮ ಮುಖ ಕಾಣದಂತೆ ದೊಡ್ಡ ಛತ್ರಿಗಳನ್ನು ಹಿಡಿದಿರಬೇಕಿತ್ತು. ಅವರ ಸುತ್ತಲೂ ಬೆಡ್‌ಶೀಟಿನಂತಹ ಹೊದಿಕೆಗಳನ್ನು ಹಿಡಿಯಲಾಗುತ್ತಿತ್ತು. ಅಷ್ಟೇ ಅಲ್ಲ ಮಹಿಳೆಯರು ತಮ್ಮೊಂದಿಗೆ ತಮ್ಮ ನಾಯರ್ ಸಮುದಾಯದ ದಾಸಿಯರನ್ನು ಕರೆದುಕೊಂಡು ಹೋಗಬೇಕಿತ್ತು. ಆ ದಾಸಿಯರು ದಾರಿಯಲ್ಲಿ ನಂಬೂದರಿ ಮಹಿಳೆಯರ ಮುಂದೆ ನಡೆಯುತ್ತಾ ರಸ್ತೆಯಲ್ಲಿರುವ ಜನ ದೂರ ಸರಿಯುವಂತೆ ಕೂಗು ಹಾಕುತ್ತಿದ್ದರು.

ಇಂತಹ ವ್ಯವಸ್ಥೆಯಲ್ಲಿ ಜನಿಸಿದ, ವೇಶ್ಯೆ ಆಗುವ ಮೂಲಕ ಪುರುಷರ ವಿರುದ್ಧ ತಿರುಗಿ ಬಿದ್ದ, ನಂಬೂದರಿ ಸಮುದಾಯವನ್ನಲ್ಲದೆ ಇಡೀ ಕೇರಳ ರಾಜ್ಯದಲ್ಲೇ ಅಲ್ಲೋಲಕಲ್ಲೋಲವೆಬ್ಬಿಸಿದ ಮಹಿಳೆಯೇ ಸಾವಿತ್ರಿ!

ಪಾಲಕ್ಕಾಡು ಜಿಲ್ಲೆಯ ಅರಂಗೋಡೆ ಎಂಬ ಕುಗ್ರಾಮದ ನಂಬೂದರಿ ಕುಟುಂಬದಲ್ಲಿ ಸಾವಿತ್ರಿ ಜನಿಸಿದಳು. ಗುಡ್ಡಬೆಟ್ಟಗಳಿಂದ ಸುತ್ತುವರೆದಿರುವ, ಎತ್ತ ನೋಡಿದರೂ ಹಸಿರು ಬಣ್ಣದ ಭತ್ತದ ಗದ್ದೆಗಳು ಆವರಿಸಿರುವ ಸುಂದರ ಗ್ರಾಮವದು. ಆ ಹಳ್ಳಿಯಲ್ಲಿ ಪ್ರಮುಖವಾದದ್ದು ನಾಲ್ಕು ದೇವಸ್ಥಾನಗಳಷ್ಟೇ. ಸಾವಿತ್ರಿಯ ತಂದೆಯೂ ಇತರೆ ನಂಬೂದರಿಗಳಂತೆ ಭೂಮಾಲೀಕರಾಗಿದ್ದು ಅವರ ಮನೆ ನಾಲ್ಕೈದು ಎಕರೆಯಷ್ಟು ವಿಸ್ತಾರವಾಗಿದ್ದ 'ಇಲ್ಲಂ'ನಲ್ಲಿತ್ತು.

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಬಾಲಕಿ ಸಾವಿತ್ರಿಗೆ ಓದಲು ಆಸಕ್ತಿ ಇತ್ತು, ಆದರೆ ಆಗಿನ ಕಾಲದಲ್ಲಿ ಮಹಿಳೆಯರಿಗೆ ವಿದ್ಯೆಯನ್ನು ನಿರಾಕರಿಸಲಾಗುತ್ತಿದ್ದರಿಂದ ಆಕೆ ವಿಧಿ ಇಲ್ಲದೆ ತನ್ನ ಸಹೋದರರಿಂದ ಸಾಧ್ಯವಾದಷ್ಟನ್ನು ಕಲಿತಿದ್ದಳು. ಶಾಸ್ತ್ರೀಯ ಸಂಗೀತ ಮತ್ತು ನೃತ್ಯಗಳ ಬಗ್ಗೆ ಆಸಕ್ತಿ ಇದ್ದಿದ್ದರಿಂದ ಅವುಗಳ ಬಗ್ಗೆಯೂ ಅಧ್ಯಯನ ಮಾಡಿದ್ದಳು. ನಂಬೂದರಿಗಳಲ್ಲಿ ಮೊದಲನೆ ಮಗ ಮಾತ್ರ ಮದುವೆ ಆಗುತ್ತಿದ್ದರಿಂದ ಆ ಸಮುದಾಯದ ಯುವತಿಯರನ್ನು ಮದುವೆ ಮಾಡಿ ಗಂಡನ ಮನೆಗೆ ಸಾಗಹಾಕುವುದೇ ಹೆಣ್ಣುಮಕ್ಕಳನ್ನು ಹೆತ್ತವರಿಗೆ ದೊಡ್ಡ ಹೊರೆಯಾಗಿತ್ತು. ಆದ್ದರಿಂದ ಹುಡುಗಿಯ ತಂದೆಯರು ತಮ್ಮ ಮಗಳನ್ನು ಮದುವೆ ಆಗುತ್ತಿರುವವನು ಹೇಗಿದ್ದಾನೆ, ಆತನ ವಯಸ್ಸೆಷ್ಟು, ಅವನಿಗೆ ಈಗಾಗಲೇ ಮದುವೆ ಆಗಿದೆಯೋ ಇಲ್ಲವೋ ಎಂದೆಲ್ಲ ಯೋಚಿಸುತ್ತಿರಲಿಲ್ಲ. ಸಾವಿತ್ರಿ ವಿಷಯದಲ್ಲೂ ಆದದ್ದು ಅದೇ. ಆಕೆಗೆ ಹನ್ನೆರಡೋ ಹದಿಮೂರೋ ವರ್ಷವಾಗಿದ್ದಾಗ ರಾಮನ್ ನಂಬೂದರಿ ಎಂಬ 60 ವರ್ಷ ವಯಸ್ಸಿನ ಮುದುಕನಿಗೆ ಮದುವೆ ಮಾಡಿಕೊಡಲಾಯಿತು.

ಇದೇ ಸಾವಿತ್ರಿ ತನ್ನ 24-25 ವರ್ಷ ವಯಸ್ಸಿನಲ್ಲಿ ಕೇರಳವನ್ನೇ ಬೆಚ್ಚಿಬೀಳಿಸಿದಳು. ತನ್ನನ್ನು ನಿರ್ಲಕ್ಷಿಸಿದ್ದ ಗಂಡನ ವಿರುದ್ಧ ಸೇಡು ತೀರಿಸಿಕೊಳ್ಳಲು ಆಕೆ ವೇಶ್ಯೆಯಾದಳೆ? ಕೈಹಿಡಿದಿದ್ದ ಮುದುಕನಿಂದ ಸಾಧ್ಯವಾಗದಿದ್ದನ್ನು ಇತರರಿಂದ ಪಡೆಯಲು ಪ್ರಯತ್ನಿಸಿ ಸಿಕ್ಕಿಬಿದ್ದಳೆ? ಮಹಿಳೆಯರನ್ನು ಭೋಗದ ವಸ್ತುಗಳಂತೆ ಮಾತ್ರ ಕಾಣುತ್ತಿದ್ದ ನಂಬೂದರಿ ಪುರುಷರಿಗೆ ಪಾಠ ಕಲಿಸಲು ಹೀಗೆಲ್ಲ ಮಾಡಿದಳೆ? ಇಂತಹ ಯಾವ ಪ್ರಶ್ನೆಗಳಿಗೂ ಉತ್ತರವಿಲ್ಲ. ಆದರೆ ಸಾವಿತ್ರಿ ದಿಟ್ಟ ಮಹಿಳೆಯಾಗಿದ್ದಳು ಎಂಬುದು ಮಾತ್ರ ಸ್ಪಷ್ಟವಾಗಿದೆ.


ಮುದಿ ಗಂಡ ರಾಮನ್ ನಂಬೂದರಿ "ಅಯ್ಯಯ್ಯೋ! ಅನ್ಯಾಯ! ಅನ್ಯಾಯ! ನನ್ನ ಹೆಂಡತಿ ವೇಶ್ಯೆ ಆಗಿದ್ದಾಳೆ. ನನಗೆ ನ್ಯಾಯ ಬೇಕು. ಆಕೆಗೆ ಶಿಕ್ಷೆ ಆಗಬೇಕು" ಎಂದು ರಸ್ತೆಯಲ್ಲಿ ಜೋರಾಗಿ ಚೀರಾಡಿದಾಗಲೇ ಸಾವಿತ್ರಿಯ ಗುಟ್ಟು ಬಯಲಾಯಿತು.

ಆಗಿನ ಕಾಲದಲ್ಲಿ ಅನೈತಿಕ ಸಂಬಂಧವನ್ನು ಹೊಂದಿದ್ದ ಆರೋಪವನ್ನು ಎದುರಿಸುತ್ತಿದ್ದ ನಂಬೂದರಿ ಮಹಿಳೆಯರನ್ನು 'ಸಮರ್ಥ ವಿಚಾರಣೆ'ಗೆ ಒಳಪಡಿಸಲಾಗುತ್ತಿತ್ತು. ಆ ವಿಚಾರಣೆಯ ಸಂದರ್ಭದಲ್ಲಿ ಆರೋಪಿತ ಮಹಿಳೆಯನ್ನು ಓರ್ವ ವ್ಯಕ್ತಿ ಎಂದೂ ನೋಡದೆ ಅವರನ್ನು 'ವಸ್ತು' ಎಂದೇ ಕರೆಯಲಾಗುತ್ತಿತ್ತು. ವಿಚಾರಣೆಯಲ್ಲಿ ಅವರ ಮೇಲಿದ್ದ ಆರೋಪ ಸಾಬೀತಾದರೆ ಅವರಿಗೆ 'ಜಾರಿಣಿ' ಎಂಬ ಹಣೆಪಟ್ಟಿ ಕಟ್ಟಿ, ಬದುಕಿದ್ದಾಗಲೇ ಅಂತ್ಯಸಂಸ್ಕಾರಗಳನ್ನು ಮಾಡಿ ಸಮಾಜದಿಂದ ಅವರನ್ನು ಬಹಿಷ್ಕರಿಸಲಾಗುತ್ತಿತ್ತು. ಅಂತಹ ಶಿಕ್ಷೆಗೆ ಗುರಿಯಾದ ಮಹಿಳೆಯರು ತಮ್ಮ ಕೊನೆದಿನದ ತನಕ ಕೆಳಜಾತಿಯವರಿಂದ ಭಿಕ್ಷೆ ಬೇಡುತ್ತಾ ಮನೆ-ನೆಲೆ ಇಲ್ಲದೆ ಜೀವಿಸಬೇಕಿತ್ತು.

ಸಾವಿತ್ರಿಯನ್ನೂ ಅಂತಹದ್ದೇ 'ಸಮರ್ಥ ವಿಚಾರಣೆ'ಗೆ ಗುರಿಪಡಿಸಲು ನಿರ್ಧರಿಸಲಾಯಿತು. ಅದಕ್ಕೆಂದು ಆಗಿನ ಪದ್ಧತಿಯಂತೆ ಕೊಚ್ಚಿ ರಾಜನ ಅನುಮತಿಯನ್ನೂ ಪಡೆಯಲಾಯಿತು. ಆಗ ಸಾವಿತ್ರಿ ರಾಜನ ಮುಂದೆ ಒಂದು ಬೇಡಿಕೆಯನ್ನಿಟ್ಟಳು. ಅದು ತಾನು ನಿರಪರಾಧಿ, ತನಗೆ ಶಿಕ್ಷೆ ನೀಡಬಾರದೆಂಬ ಬೇಡಿಕೆ ಅಲ್ಲ, ಬದಲಾಗಿ ದಾರಿ ತಪ್ಪಿದ ತನಗೆ ಮಾತ್ರ ಶಿಕ್ಷೆ ನೀಡದೆ ತನ್ನೊಂದಿಗೆ ಅಕ್ರಮ ಲೈಂಗಿಕ ಸಂಬಂಧ ಹೊಂದಿದ್ದ ಪುರುಷರಿಗೂ ತನಗೆ ನೀಡುವ ಶಿಕ್ಷೆಯನ್ನೇ ವಿಧಿಸಬೇಕೆಂಬ ಬೇಡಿಕೆ! ಇದು ಸರಿಯಾದ ಬೇಡಿಕೆ ಎನಿಸಿದ್ದರಿಂದ ಕೊಚ್ಚಿ ರಾಜ ಅದಕ್ಕೆ ಒಪ್ಪಿಗೆಯನ್ನು ನೀಡಿದ. ಆಗ ಸಾವಿತ್ರಿಯ ಬಾಯಿಯಿಂದ ಹೊರಬೀಳಲಾರಂಭಿಸಿತು ಕೇರಳ ರಾಜ್ಯದ ಅನೇಕ ಖ್ಯಾತ ಪ್ರಮುಖರ ಹೆಸರುಗಳು...

(ಮುಂದುವರೆಯುವುದು)

ಜೈಲಿನ ಹಾದಿಯಲ್ಲಿ ಕಲಾವಿದ ಹಾದಿಮನಿ!



ಇವನೊಬ್ಬ ವಿಕೃತ ಕಾಮಿ ಎಂಬ ಸಂಗತಿ ಕೆಲವರಿಗೆ ಮಾತ್ರ ಗೊತ್ತಿತ್ತು!

ಆದರೆ ಇವನ ವಿಕೃತ ಮನಸ್ಥಿತಿಯ ಆಳ-ಅಗಲಗಳೆಲ್ಲಾ ಈಗ ಎಲ್ಲರಿಗೂ ಗೊತ್ತಾಗುವ ಸಂದರ್ಭ ಬಂದಿದೆ.

ಕಾರ್ಟೂನಿಸ್ಟ್ ಹಾದಿಮನಿಯ ವಿಚಾರ ಇದು.

ಕರ್ನಾಟಕದ ಅತ್ಯಂತ ಪ್ರತಿಭಾವಂತ ಚಿತ್ರ ಕಲಾವಿದ ಹಾಗೂ ವ್ಯಂಗ್ಯ ಚಿತ್ರಕಾರ ಎನಿಸಿಕೊಂಡಿದ್ದ ಟಿ.ಎಫ್. ಹಾದಿಮನಿ ಪರಪ್ಪನ ಅಗ್ರಹಾರ ಜೈಲು ಸೇರಿದ್ದಾನೆ!

ಅಸಂಖ್ಯಾತ ಮಹಿಳೆಯರಿಗೆ ನಿತ್ಯ ರಾತ್ರಿ ಫೋನ್ ಮಾಡಿ ಅತೀ ಕೆಟ್ಟ ಕೊಳಕು ಪೋಲಿ ಮಾತುಗಳನ್ನಾಡುತ್ತಾ ಲೈಂಗಿಕ ಕಿರುಕುಳ ನೀಡುತ್ತಿದ್ದ ಆರೋಪದ ಮೇಲೆ ಹಾದಿಮನಿಯನ್ನು ಮೇ 25ರ ಶನಿವಾರ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಶೀಲಾ ಅರೆಸ್ಟ್ ಮಾಡಿ ಪರಪ್ಪನ ಅಗ್ರಹಾರ ಜೈಲಿಗೆ ತರುಬಿದ್ದಾರೆ.

ಬೆಂಗಳೂರು ದೂರದರ್ಶನ ಕೇಂದ್ರದಲ್ಲಿ ಉನ್ನತ ಅಧಿಕಾರಿಯಾಗಿರುವ ನಿರ್ಮಲ ಎಲಿಗಾರ್ ಎಂಬುವರು ನೀಡಿದ್ದ ದೂರಿನ ಮೇಲೆ ಈ ಬಂಧನ ನಡೆದಿದೆ.

ಹಾಗೆ ನೋಡಿದರೆ ತನ್ನ ವಿಕೃತ ಲೈಂಗಿಕ ವರ್ತನೆಗಳ ಕಾರಣಕ್ಕೆ ಹಾದಿಮನಿ ಬಹಳ ಹಿಂದೆಯೇ ಅರೆಸ್ಟ್ ಆಗಬೇಕಿತ್ತು, ಹಾದಿಮನಿ ಇತ್ತೀಚೆಗೆ ಪ್ರಜಾವಾಣಿ ಸೇರುವ ಮುನ್ನ ಮಲೆಯಾಳ ಮನೋರಮಾ ಗ್ರೂಪ್‌ನ 'ದಿ ವೀಕ್' ಇಂಗ್ಲಿಷ್ ವಾರಪತ್ರಿಕೆಯಲ್ಲಿ ಕಾರ್ಟೂನಿಸ್ಟ್ ಆಗಿ ಕೆಲ ವರ್ಷ ಕೇರಳದಲ್ಲಿದ್ದರು. ಅಲ್ಲಿ ಅನೇಕ ಬಾರಿ ಲೇಡಿಸ್ ಹಾಸ್ಟೆಲ್ ಕಾಂಪೌಂಡ್ ಒಳಗೆ ನುಗ್ಗಿ ಪ್ಯಾಂಟ್ ಬಿಚ್ಚಿ ನಿಂತು ಅದೆಲ್ಲಾ ದೊಡ್ಡ ರಾಮಾಯಣವಾಗಿತ್ತು, ತೀರಾ ಇತ್ತೀಚೆಗೆ ವಿಜಯನಗರ ಪೊಲೀಸ್ ಸ್ಟೇಷನ್ನಿನಲ್ಲೂ ಹಾದಿಮನಿ ವಿರುದ್ಧ ಇದೇ ತರಹದ ಲೈಂಗಿಕ ಕಿರುಕುಳದ ದೂರೊಂದು ದಾಖಲಾಗಿತ್ತು, ಆದರೂ ಹಾದಿಮನಿ ಕೆಲ ಪತ್ರಕರ್ತ ಗೆಳೆಯರ ಪ್ರಭಾವ ಬಳಸಿಕೊಂಡು ಪಾರಾಗಿದ್ದ.

ಆದರೆ ಈಗ ಈತನ ಪಾಪದ ಕೊಡ ತುಂಬಿತ್ತು, ಹಳೆಯ ಘಟನೆಗಳಿಂದ ಯಾವ ಪಾಠವನ್ನೂ ಕಲಿಯದ ಹಾದಿಮನಿ ತನ್ನ ವಿಕೃತ ಬುದ್ಧಿ ಬಿಡದೆ ಈಗ ಅರೆಸ್ಟಾಗಿದ್ದಾನೆ.

ಲೇಖಕಿ ನಿರ್ಮಲಾಗೆ ಕಿರುಕುಳ

ಬೆಂಗಳೂರು ದೂರದರ್ಶನ ಕೇಂದ್ರದಲ್ಲಿ ಉನ್ನತ ಸ್ಥಾನದಲ್ಲಿರುವ ಲೇಖಕಿ ನಿರ್ಮಲ ಎಲಿಗಾರ್ ಎಂಬುವರು ನಲವತ್ತು ಮಹಿಳಾ ಸಾಧಕಿಯರ ಬಗ್ಗೆ ಪುಸ್ತಕವೊಂದನ್ನು ಬರೆದಿದ್ದು ಆ ಪುಸ್ತಕಕ್ಕೊಂದು ಮುಖಪುಟ ರಚಿಸಿ ಕೊಡುವಂತೆ ಕಲಾವಿದ ಹಾದಿಮನಿಯನ್ನು ಕೇಳಿದ್ದರು. ನಿರ್ಮಲಾರ ಪರಿಚಯಸ್ಥರು ಹಾದಿಮನಿಯ ಹೆಸರನ್ನು ರೆಕಮೆಂಡ್ ಮಾಡಿದ್ದರಾಗಿ ಅವರು ಕವರ್ ಪೇಜ್ ಮಾಡಲು ಹಾದಿಮನಿಗೆ ಫೋನ್ ಮಾಡಿದ್ದರು.



ಅವತ್ತು ಅತ್ಯಂತ ಸಂಭಾವಿತನಂತೆ, ವಿನಯದಿಂದ 'ಆಗಲಿ ಮೇಡಂ, ಕವರ್ ಪೇಜ್ ಮಾಡಿಕೊಡ್ತೀನಿ' ಅಂದ ಹಾದಿಮನಿ ಒಂದೆರಡೇ ದಿನದಲ್ಲಿ ತನ್ನ ವಿಕೃತ ಚೇಷ್ಟೆ ಶುರು ಮಾಡಿಯೇ ಬಿಟ್ಟ.

ಮೇ 23ರ ನಡುರಾತ್ರಿ ಒಂದು ಗಂಟೆಗೆ ಹಾದಿಮನಿ ಫೋನ್ ಮಾಡಿ ಅತ್ಯಂತ ಕೊಳಕು ಮಾತು ಆಡತೊಡಗಿದ. ಹೊಟ್ಟೆ ತುಂಬಾ ಕುಡಿದಿದ್ದನೇನೊ, ಅವನ ಹಲ್ಕಾ ಮಾತುಗಳಿಗೆ ಲಂಗುಲಗಾಮೇ ಇರಲಿಲ್ಲ, ಇದರಿಂದ ಶಾಕ್ ಆದ ನಿರ್ಮಲಾ ದಂಪತಿ ಮಾರನೇ ದಿನವೇ ಕಬ್ಬನ್ ಪಾರ್ಕ್ ಸ್ಟೇಷನ್ನಿಗೆ ಹೋಗಿ ಹಾದಿಮನಿ ವಿರುದ್ಧ ಕಂಪ್ಲೇಂಟ್ ನೀಡಿದರು. ಈ ದೂರಿನ ನಿಜಾಂಶ ಏನೆಂದು ಚೆಕ್ ಮಾಡಲು ಪೊಲೀಸ್ ಆಫೀಸರ್ ಶೀಲಾರವರು ನಿರ್ಧರಿಸಿ ಹಾದಿಮನಿಗೆ ಫೋನ್ ಮಾಡುವಂತೆ ನಿರ್ಮಲಾರಿಗೆ ಸೂಚಿಸಿ ತಾವೂ ಕಿವಿಗೊಟ್ಟರೆ ಮತ್ತದೆ ಅಸಹ್ಯ ತರಿಸುವ ಮಾತುಗಳು.

ಕೊನೆಗೆ ಇನ್ಸ್‌ಪೆಕ್ಟರ್ ಶೀಲಾ ಸ್ವತಃ ಫೋನ್ ಕೈಗೆ ತೆಗೆದುಕೊಂಡರು. ಅತ್ತ ಇನ್ನೊಂದು ತುದಿಯಲ್ಲಿದ್ದ ಹಾದಿಮನಿಗೆ ಇದು ಗೊತ್ತಾಗದೆ ತನ್ನ ಕೊಳಕು ಮಾತು ಮುಂದುವರೆಸಿದ್ದ.

ಹಾದಿಮನಿ ಬಗ್ಗೆ ಇನ್ನಷ್ಟು ವಿವರಗಳನ್ನು ಕೆದಕಿದಾಗ ಬ್ರಹ್ಮಾಂಡ ವಿಕೃತಿಯೇ ಕಾಣಿಸಿದ್ದರಿಂದಾಗಿ ಪೊಲೀಸರಿಗೆ ಇಷ್ಟೇ ಸಾಕಾಗಿ ನೇರ ಹೊರಟು ಹಾದಿಮನಿಯನ್ನು ಠಾಣೆಗೆ ಎಳೆತಂದರು. ಸ್ಟೇಷನ್ನಿನಲ್ಲಿ ಕೂರಿಸಿಕೊಂಡು "ಏನ್ರೀ ನಿಮ್ಮ ಮಾತು, ವರ್ತನೆ ಹೀಗಿದೆಯಲ್ಲಾ...?" ಅಂತ ಪೊಲೀಸರು ಕೇಳಿದಾಗ ಈ ಹಾದಿಮನಿ "ಏನೋ ತಪ್ಪಾಯಿತು, ಸಾರಿ. ನನ್ನ ಬಿಟ್ಟು ಬಿಡಿ" ಅಂದಿದ್ದಾನೆ.

ಆದರೆ ಹಾದಿಮನಿಯ ತಪ್ಪುಗಳು ಅಷ್ಟು ಸಿಂಪಲ್ ಆಗಿರಲಿಲ್ಲ, ಜೊತೆಗೆ ಈತ ಲೈಂಗಿಕ ಕಿರುಕುಳ ನೀಡಿದ್ದು ಒಬ್ಬಿಬ್ಬರಿಗೆ ಮಾತ್ರ ಅಲ್ಲ ಎಂಬುದು ಅಷ್ಟರಲ್ಲಾಗಲೇ ಪೊಲೀಸರ ತನಿಖೆಯಿಂದ ಗೊತ್ತಾಗಿ ಹೋಗಿತ್ತು,

ಬ್ಯೂಟಿ ಪಾರ್ಲರ್ ಹುಡುಗಿಯರಿಗೆ ಕಿರುಕುಳ

ಬೆಂಗಳೂರಿನ ಯಾವುದೇ ವ್ಯಕ್ತಿ, ಆಫೀಸು, ಕಂಪನಿಗಳ ಫೋನ್ ನಂಬರ್ ಬೇಕೆಂದರೆ 26666666 ಎಂಬ ನಂಬರಿಗೆ ಫೋನ್ ಮಾಡಿ ಕೇಳಿದರೆ ಅವರು ಎರಡೇ ಕ್ಷಣದಲ್ಲಿ ಫೋನ್ ನಂಬರ್, ಅಡ್ರೆಸ್ ಕೊಡುತ್ತಾರೆ. **Just dial** ಎಂದು ಫೇಮಸ್ ಆಗಿರುವ ಇವರಿಗೆ ಕಲಾವಿದ ಹಾದಿಮನಿ ಪದೇ ಪದೇ ಫೋನ್ ಮಾಡುತ್ತಿದ್ದ!

ಯಾಕೆ ಗೊತ್ತಾ?

ಬ್ಯೂಟಿ ಪಾರ್ಲರ್‌ಗಳು ಹಾಗೂ ನರ್ಸಿಂಗ್ ಹೋಂಗಳ ಫೋನ್ ನಂಬರಿಗಾಗಿ! ಇಂತ ಕಡೆ ಮಹಿಳೆಯರೇ ಹೆಚ್ಚು ಕೆಲಸ ಮಾಡುತ್ತಿರುತ್ತಾರಾದ್ದರಿಂದ ಆ ನಂಬರ್ ಪಡೆದು ಹಾದಿಮನಿ ತನ್ನ ವಿಕೃತ ಚೇಷ್ಟೆ ಪ್ರಾರಂಭಿಸುತ್ತಿದ್ದ.

ಬ್ಯೂಟಿ ಪಾರ್ಲರ್ ಒಂದರ ನಂಬರ್ ಪಡೆದು ಅಶ್ಲೀಲವಾಗಿ ಮಾತಾಡಿ ಫೋನ್ ಇಟ್ಟುಬಿಡುವುದು. ನಂತರ ಯಾವುದೋ ನರ್ಸಿಂಗ್ ಹೋಂಗೆ ಫೋನ್ ಮಾಡಿ ರಿಸೆಪ್ಷನಿಸ್ಟ್ ಹುಡುಗಿಯರಿಗೆ ಕಿರುಕುಳದ ಮಾತಾಡಿ ಹಿಂಸಿಸುವುದೆಲ್ಲ ಕಳೆದ ಅನೇಕ ತಿಂಗಳಿಂದ ನಡೆಯುತ್ತಿದ್ದುದು ಈಗ ಪೊಲೀಸರಿಗೆ ಗೊತ್ತಾಗಿದೆ.

ಹಾದಿಮನಿಯ ಈ ಕಿರುಕುಳ ಸಹಿಸಲಾಗದೆ ಬಾಲ್ಡ್‌ವಿನ್ ಸ್ಕೂಲ್ ಹತ್ತಿರವಿರುವ ಸೀತಾ ಬತೇಜಾ ನರ್ಸಿಂಗ್ ಹೋಂ, ಸಾಗರ್ ಆಸ್ಪತ್ರೆ, ಬನಶಂಕರಿಯ ಬೆಂಗಳೂರು ನೇತ್ರಾಲಯದಲ್ಲಿ ಕೆಲಸ ಮಾಡುತ್ತಿದ್ದ ಕೆಲವು ಮಹಿಳೆಯರು ತಮ್ಮ ಕೆಲಸವನ್ನೇ ಬಿಟ್ಟು ಹೋಗಿರುವುದನ್ನು ಪೊಲೀಸರು ಪತ್ತೆಹಚ್ಚಿ ಅವರಿಂದ ಹೇಳಿಕೆಗಳನ್ನು ಪಡೆದುಕೊಂಡಿದ್ದಾರೆ.

ಹೊರನೋಟಕ್ಕೆ ಸೌಮ್ಯ ಸ್ವಭಾವದವನಂತೆ ಕಾಣುವ ಹಾದಿಮನಿ ಅದೆಂತಾ ನೀಚ ಮನಸ್ಥಿತಿ ಬೆಳೆಸಿಕೊಂಡಿದ್ದನೆನ್ನಲು ಇಂತಾ ಡಜನ್‌ಗಟ್ಟಲೆ ಸಾಕ್ಷಿಗಳಿವೆ.

ವಿಜಯನಗರ ಸ್ಟೇಷನ್ನಿನಲ್ಲಿ...

ಈಗ್ಗೆ ಮೂರು ತಿಂಗಳ ಹಿಂದೆ ನಡೆದಿರುವ ಘಟನೆ ಇದು. ಹಿರಿಯ ಪತ್ರಕರ್ತ ಸತ್ಯಮೂರ್ತಿ ಆನಂದೂರರ ಪರಿಚಯಸ್ಥ ಮಹಿಳೆಯೊಬ್ಬರು ತಮ್ಮ ಪುಸ್ತಕಕ್ಕೊಂದು ಕವರ್ ಪೇಜ್ ಮಾಡಿಸಲು ಹಾದಿಮನಿ ಬಳಿ ಹೋಗಿದ್ದಾರೆ. ಅವರೊಂದಿಗೂ ಒಂದು ದಿನವೂ ತಡಮಾಡದೆ ತಕ್ಷಣ ತನ್ನ ವಿಕೃತ ಫೋನ್ ಸಂಭಾಷಣೆಯ ಚಾಳಿಯನ್ನು ಹಾದಿಮನಿ ಶುರು ಮಾಡಿದ್ದ. ಸಿಟ್ಟಿಗೆದ್ದ ಆಕೆ ನೇರ ವಿಜಯನಗರ ಸ್ಟೇಷನ್ನಿಗೆ ಹೋಗಿ ಕಂಪ್ಲೇಂಟ್ ಕೊಟ್ಟರು. ಆದರೆ ಈ ಹಾದಿಮನಿಯ ಅಯೋಗ್ಯತೆ ಬಗ್ಗೆ ಪೂರ್ಣ ಗೊತ್ತಿರದಿದ್ದ ಕೆಲ ಪತ್ರಕರ್ತ ಮಿತ್ರರೆ ಪೊಲೀಸರೊಂದಿಗೆ ಸಂಧಾನ ನಡೆಸಿ ಹಾದಿಮನಿ ಜೈಲು ಪಾಲಾಗದಂತೆ ನೋಡಿಕೊಂಡಿದ್ದರು. ತನ್ನ ತಪ್ಪು ತಿದ್ದಿಕೊಳ್ಳಲು ಹಾದಿಮನಿಗಿದ್ದ ಕೊನೆಯ ಅವಕಾಶ ಅದಾಗಿತ್ತು, ಆದರೆ ಈ ವಿಕೃತ ಮನುಷ್ಯ ಕೊನೆಗೂ ಬುದ್ಧಿ ಕಲಿಯದೆ ಈಗ ಜೈಲು ಪಾಲಾಗಿದ್ದಾನೆ. ಅಷ್ಟೇ ಅಲ್ಲ, ಪೋಲಿ ಮಾತುಗಳಲ್ಲೇ ಸುಖ ಕಾಣುತ್ತಿದ್ದ ಹಾದಿಮನಿ ಈ ಗದ್ದಲದಲ್ಲಿ ತಾನೊಬ್ಬ ಕಲಾವಿದ ಎಂಬುದನ್ನೇ ಮರೆತು ಬಿಟ್ಟಿದ್ದ ಕೆಲಸ ಕದಿಯುವ, ಸದಾ ಕುಡಿದು ಓಲಾಡುವ ಚಾಳಿಯನ್ನು ಬೆಳೆಸಿಕೊಂಡಿದ್ದ.

ಪ್ರಜಾವಾಣಿಯಲ್ಲಿ...

ಬೆಳಗಾಂ ಜಿಲ್ಲೆಯ ಹೊಸಕೋಟೆಯವನಾದ ಫಕೀರಪ್ಪ ಹಾದಿಮನಿ ಧಾರವಾಡದ ಆರ್ಟ್ಸ್ ಸ್ಕೂಲಿನಲ್ಲಿ ಚಿತ್ರಕಲೆ ಕಲಿತು 2ನೇ ರ್‍ಯಾಂಕ್ ಪಡೆದಿದ್ದ. ಕೆಲಕಾಲ 1989ರಲ್ಲಿ ಸುದ್ದಿ ಸಂಗಾತಿ ವಾರ ಪತ್ರಿಕೆಯಲ್ಲಿದ್ದು ನಂತರ ಕೆಲವರ್ಷ ಲಂಕೇಶ್ ಪತ್ರಿಕೆಯಲ್ಲೂ ಕಲಾವಿದನಾಗಿದ್ದ. 2001ರ ಸುಮಾರಿಗೆ **The Week** ಇಂಗ್ಲಿಷ್ ವಾರಪತ್ರಿಕೆಗೆ ಕಾರ್ಟೂನಿಸ್ಟ್ ಆಗಿ ಕೇರಳಕ್ಕೆ ಹೋದ ಹಾದಿಮನಿಗೆ ಪ್ರತಿಭೆ ಇತ್ತಾದ್ದರಿಂದ ಮಲೆಯಾಳ ಮನೋರಮಾ ಗ್ರೂಪ್ ಇವನನ್ನು ಚೆನ್ನಾಗಿಯೇ ನೋಡಿಕೊಳ್ಳುತ್ತಿತ್ತು, ಕೈತುಂಬಾ ಸಂಬಳ, ಇನ್ನಿತರ ಸೌಕರ್ಯಗಳನ್ನು ಒದಗಿಸಿತ್ತು, ಹಾದಿಮನಿ ಆಗ ಬರೆದಿದ್ದ ಸೋನಿಯಾ ಗಾಂಧಿ, ಲಾಲೂ, ಮದರ್ ತೆರೇಸಾ, ರಾಹುಲ್ ಗಾಂಧಿ, ಪ್ರಣಬ್ ಮುಖರ್ಜಿ, ಸಲ್ಮಾನ್ ರಶ್ದಿ ಮುಂತಾದವರ ಕಾರ್ಟೂನ್‌ಗಳು ಹಾದಿಮನಿಗೆ ಕೀರ್ತಿ ತಂದವು. ಮುಂಬೈ ದಾಳಿಕೋರ ಅಜ್ಮಲ್ ಕಸಬ್ ಕೋರ್ಟ್ ವಿಚಾರಣೆ ನಡೆಯುತ್ತಿದ್ದಾಗ ದಿ ವೀಕ್ ಪತ್ರಿಕೆಯವರು ಹಾದಿಮನಿಯನ್ನು ಮುಂಬೈಗೆ ಕಳಿಸಿದ್ದರು. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಬರೆಸಿದ್ದ ಕಸಬ್‌ನ ನಾನಾ ಮೂಡ್‌ಗಳ ವ್ಯಂಗ್ಯಚಿತ್ರ ಹಾಗೂ ವ್ಯಕ್ತಿಚಿತ್ರಗಳ ವಿಭಿನ್ನ ಪ್ರಯೋಗವೂ ಪತ್ರಿಕೆಗೆ ಹಾಗೂ ಹಾದಿಮನಿಗೆ ಓದುಗರಿಂದ ಮೆಚ್ಚುಗೆ ದೊರಕಿಸಿಕೊಟ್ಟಿದ್ದವು. ಆದರೆ ಇದು ಹೆಚ್ಚು ಕಾಲ ಬಾಳಿಕೆ ಬರಲಿಲ್ಲ,

ಏಕೆಂದರೆ ಅಲ್ಲೂ ಹಾದಿಮನಿ ಕೇರಳ ಹೆಂಗಸರಿಗೆ ಕಾಟ ಕೊಡಲು ಶುರು ಮಾಡಿದ್ದ. ಒಮ್ಮೆ ವೀಕ್ ಆಫೀಸಿನ ಹತ್ತಿರದ ಲೇಡಿಸ್ ಹಾಸ್ಟೆಲ್‌ನ ಕಾಂಪೌಂಡ್ ಒಳಗೆ ನುಗ್ಗಿ ಪ್ಯಾಂಟ್ ಬಿಚ್ಚಿ ನಿಂತು ಬಿಟ್ಟಿದ್ದ. ಇದು ಮತ್ತೆ ಮತ್ತೆ ನಡೆದಾಗ ವೀಕ್ ಮಾಲೀಕರು ಸ್ಟ್ರಾಂಗಾದ ಆಕ್ಷನ್ ತಗೊಂಡು ಹಾದಿಮನಿಯನ್ನು ಒದ್ದು ಹೊರಹಾಕಿದರು.

ಅಲ್ಲಿಂದ ಬೆಂಗಳೂರಿಗೆ ಹಾದಿಮನಿ ಬಂದಾಗ ಅದೇ ತಾನೆ ಪ್ರಜಾವಾಣಿಯಲ್ಲಿದ್ದ ಖ್ಯಾತ ಕಾರ್ಟೂನಿಸ್ಟ್ ಮಹಮದ್ ಕೆಲಸ ಬಿಟ್ಟಿದ್ದರು. ಹಾದಿಮನಿ ಯಾರ್‍ಯಾರಿಂದಲೋ ಶಿಫಾರಸ್ಸು ಮಾಡಿಸಿ ಪ್ರಜಾವಾಣಿ ಸೇರಿಕೊಂಡ. ಐವತ್ತೈದು ಸಾವಿರ ರೂಪಾಯಿ ಸಂಬಳ, ಜೊತೆಗೆ ಇನ್ನಿತರ ಸೌಕರ್ಯಗಳಿದ್ದ ತಂಪಾದ ಕೆಲಸ ಅದಾಗಿತ್ತು, ಆದರೆ ಹಾದಿಮನಿ ತನಗೆ ಅನ್ನ ಕೊಡುತ್ತಿ[...] ಪತ್ರಿಕೆಗೆ ನಿಷ್ಠೆಯಿಂದ ಕೆಲಸ ಮಾಡುವುದನ್ನು ಬಿಟ್ಟು ಹೆಂಗಸರ ಫೋನ್ ನಂಬರ್‌ಗಳ ತಲಾಶಿಗೆ ಇಳಿದ. ಇತ್ತೀಚೆ[...] ಒಬ್ಬಾಕೆ ಪದೇ ಪದೇ ಹಾದಿಮನಿಯನ್ನು ಹುಡುಕಿಕೊಂಡು ಪ್ರಜಾವಾಣಿ ಆಫೀಸಿಗೆ ಬರುತ್ತಿದ್ದಳು. ಆಕೆಯೊಂದಿ[...] ಆಫೀಸಿನ ಹಿಂಭಾಗದಲ್ಲಿರುವ **Coconut Grov[e]** ಎಂಬ ರೆಸ್ಟೋರೆಂಟ್ ಹೊಕ್ಕು ಕುಡಿಯಲು ಕುಳಿತ[...] ಹಾದಿಮನಿಗೆ ತನಗೊಂದು ಕೆಲಸ, ಆಫೀಸು, ಮನೆ, ಹೆಂಡ[...] ಮಕ್ಕಳಿದ್ದಾರೆಂಬುದೇ ಮರೆತುಹೋಗುತ್ತಿತ್ತು, ಈ[...] ಪ್ರಜಾವಾಣಿ ಸೇರಿದ ಮೇಲೆ ಒಂದು ದಿನವೂ ಸರಿಯಾ[...] ಕುಳಿತು ಕೆಲಸ ಮಾಡಿರಲಿಲ್ಲ,

ಮೊನ್ನೆ ಹಾದಿಮನಿಯನ್ನು ಅರೆಸ್ಟ್ ಮಾಡಿದಾ[...] ಪೊಲೀಸರು ಪ್ರಜಾವಾಣಿ ಮುಖ್ಯಸ್ಥರಿಗೆ ಫೋನ್ ಮಾಡಿ "ಹೀಗೀಗೆ ಆಗಿದೆ" ಎಂದರಂತೆ. ಅದಕ್ಕೆ ಇವರು "ಕಾನೂನಿ[...] ಪ್ರಕಾರ ನೀವು ಕ್ರಮ ವಹಿಸಿ" ಎಂದಷ್ಟೇ ಹೇಳಿ ಸುಮ್ಮನಾಗಿದ್ದಾರೆ.

ಇದು ಸರಿಯಾದ ನಿಲುವು. ಆದರೆ ಹಾದಿಮನಿ ಅರೆಸ್ಟಾದ ನಂತರ ಕೆಲವು ತಿಕ್ಕಲರು "ಕಲಾವಿದ ಹಾದಿಮನಿಯನ್ನು ಉಳಿಸಿ" ಎನ್ನುವಂತೆ ಓಡಾಡುತ್ತಿದ್ದಾರೆ. ಹೊಸ ತಲೆಮಾರಿನ ಸೆಕ್ಸ್ ಬರಹಗಾರ ವಿ.ಎಂ. ಮಂಜುನಾಥ್ ಎಂಬಾತನೇ ಇವರ ಮುಂದಾಳು. ಅರೆಬೆಂದ ಮಡಿಕೆಯಂತಿರುವ ಮಂಜುನಾಥ್ "ಇದರಲ್ಲಿ ಹಾದಿಮನಿಯ ತಪ್ಪಿಲ್ಲ" ಎನ್ನುತ್ತಾ ಓಡಾಡುತ್ತಿದ್ದಾನೆ.

ಒಳ್ಳೆಯ ಬರಹಗಾರನಾಗುವ ಎಲ್ಲಾ ಸಾಧ್ಯತೆಗಳಿ[...] ಕವಿ ಕಲಾವಿದ ಮಂಜುನಾಥ್ ಮುಂದಿನ ದಿನಗಳ[...] ಕನ್ನಡ ಸಾಂಸ್ಕೃತಿಕ ರಂಗದ ಕಾಯಿಲೆಯಾಗುವ ಸಾಧ್ಯತೆಗಳಿ[...] ಸದ್ಯಕ್ಕಂತೂ ಈ ಕಾಯಿಲೆ ಬರಹಗಾರನ ಮಾತನ್ನು ಯಾರೂ ಒಪ್ಪುತ್ತಿಲ್ಲ.

ಇನ್ನಷ್ಟು ಎತ್ತರಕ್ಕೆ ಬೆಳೆದು ಕೀರ್ತಿ ಪಡೆಯುವ ವ್ಯಂಗ್ಯಚಿತ್ರಕಲೆಯನ್ನು ಬೆಳೆಸಬಲ್ಲ ಅವಕಾಶ ಹೊಂದಿ[...] ಹಾದಿಮನಿ ತನ್ನದೇ ತಪ್ಪಿನಿಂದ ಜೈಲಿನ ಹಾದಿ ಹಿಡಿದಿದ್ದಾ[...]

ಜೈಲಿನಲ್ಲಿ ಫೋನ್ ಇರುವುದಿಲ್ಲ.


ಆದರೆ ಕೇಳಿದರೆ ಪೆನ್ನು, ಪೇಪರ್ ಸಿಗುತ್ತದೆ.

ಕನಿಷ್ಠ ಈಗಲಾದರೂ ಹಾದಿಮನಿಗೆ ತನ್ನ ಆದ್ಯ[...] ಏನಾಗಿರಬೇಕೆಂಬ ಜ್ಞಾನೋದಯವಾಗಲಿ.

ಕಲಾವಿದ ಹಾದಿಮನಿಯವರ ಪ್ರತಿಭೆಯನ್ನು ಬಿಂಬಿಸುವ ವ್ಯಂಗ್ಯ ಚಿತ್ರಗಳು....



ಬಿಬಿಎಂಪಿ ಕಟ್ಟಡಕ್ಕೆ ಅನಂತ್‌ಕುಮಾರನ ಗ್ರಹಣ



ಬಿಜೆಪಿ ದುರಾಡಳಿತದ ಆ ಐದು ವರ್ಷ ಕರ್ನಾಟಕದ ...ಾಲಿಗೆ ಕೆಟ್ಟ ಕಸ ತಿಂದಂತಹ ಕಹಿ ನೆನಪು ...ಿದುಹೋದರೂ ಒಂದಷ್ಟು ದಿನ ವಾಕರಿಕೆಯ ತೇಗು ...ಾಯಿಯಲ್ಲಿ ಕಾಣಿಸಿಕೊಳ್ಳುತ್ತಲೇ ಇರುತ್ತದೆ. ...ನುಭವಿಸಲೇಬೇಕು, ವಿಧಿ ಇಲ್ಲ! ಅವುಗಳಲ್ಲಿ ಸಂಸದ ...ನಂತ್‌ಕುಮಾರ್ ಮತ್ತು ಆತನ ಪತ್ನಿ ತೇಜಸ್ವಿನಿಯ ...ಬಿಎಂಪಿ ಲೀಸ್ ಪ್ರಕರಣವೂ ಒಂದು.

ತಿಪ್ಪರಲಾಗ ಹಾಕಿದರೂ ತಾವು ಮುಂದಿನ ...ನಾವಣೆಯಲ್ಲಿ ಅಧಿಕಾರಕ್ಕೇರುವುದಿಲ್ಲ ಎನ್ನುವ ...ಾರುವಾಕ್ಕು ಭವಿಷ್ಯ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ...ದಿಯಾಗಿ ಬೂತ್ ಮಟ್ಟದ ಪ್ರತಿ ಬಿಜೆಪಿ ...ರ್ಯಕರ್ತನಿಗೂ ತಿಳಿದುಹೋಗಿತ್ತು. ಹಾಗಾಗಿ ಅಧಿಕಾರ ...ಜಾರುವ ಮುನ್ನ ರಾತ್ರೋರಾತ್ರಿ ಸಂಪುಟ ಸಭೆ ಸೇರಿ ...ಸ್ರಾರು ಫೈಲುಗಳಿಗೆ ಸಹಿ ಹಾಕಿದ ಕುಖ್ಯಾತಿ ಆ ...ರ್ಕಾರದ್ದು. ಅಂತದ್ದರಲ್ಲಿ ಬಿಜೆಪಿಯ 'ನಾಯಕ' ...ನಂತ್‌ಕುಮಾರ ಸುಮ್ಮನಿರುತ್ತಾನಾ? ತನ್ನ ಹೆಂಡತಿ ತೇಜಸ್ವಿನಿ ...ಡೆಸುತ್ತಿರುವ ಅದಮ್ಯ ಚೇತನ ಹೆಸರಿನ ಟ್ರಸ್ಟ್‌ಗೆ ...ಸವನಗುಡಿಯ ಬಿಬಿಎಂಪಿ ಒಡೆತನದ ಸಮುದಾಯ ...ವನವನ್ನು ಆನಾಮತ್ತು ಮೂವತ್ತು ವರ್ಷಗಳ ಅವಧಿಗೆ ಭೋಗ್ಯಕ್ಕೆ ಹಾಕಿಸಿಕೊಂಡಿದ್ದಾನೆ.

20,000 ಚದರ ವಿಸ್ತೀರ್ಣದ ಈ ಕಟ್ಟಡಕ್ಕೆ ಏನಿಲ್ಲವೆಂದರೂ ಮಾರುಕಟ್ಟೆಯಲ್ಲಿ 20 ಕೋಟಿ ರೂಪಾಯಿಯ ಮೌಲ್ಯವಿದೆ. ಅಂತಹದ್ದು ಮುಂದಿನ 30 ವರ್ಷಗಳವರೆಗೆ ತೇಜಸ್ವಿನಿ ಅನಂತ್‌ಕುಮಾರ್ ಪಾಲಾಗಲಿದೆ. ಅದೂ ತಿಂಗಳಿಗೆ ಒಂದು ಸಾವಿರ ರೂಪಾಯಿಯ ಜುಜುಬಿ ಬೆಲೆಗೆ! ಮೊದಲು ಈ ಮಾರಾಯ್ತಿ ಸರ್ಕಾರಿ ಕಟ್ಟಡವನ್ನು 99 ವರ್ಷಗಳ ಕಾಲ ತನ್ನ ಸುಪರ್ದಿಗೆ ಬಿಟ್ಟುಬಿಡಿ ಎಂದು ಕೇಳಿಕೊಂಡಿದ್ದಳಂತೆ. ಆಕೆಯ ದುರಾಶೆ ಅದಿನ್ನೆಂತದ್ದಿರಬೇಡ. ಸದ್ಯ ಬಿಜೆಪಿಗಳು ಅದಕ್ಕೂ 'ಜೈ' ಎನ್ನದಿರುವುದೇ ದೊಡ್ಡ ಪುಣ್ಯ...

ಇನ್ನೇನು ಚುನಾವಣಾ ಆಯೋಗ ಎಲೆಕ್ಷನ್ ದಿನಾಂಕವನ್ನು ಪ್ರಕಟಿಸಿ ನೀತಿ ಸಂಹಿತೆಯನ್ನು ಜಾರಿಗೊಳಿಸಿಬಿಡುತ್ತೆ ಎನ್ನುವುದಕ್ಕೆ ಕೆಲವೇ ದಿನ ಮೊದಲು ಈ ಒಪ್ಪಂದಕ್ಕೆ ಬಿಬಿಎಂಪಿ ಮುದ್ರೆ ಒತ್ತಿರೋದು, ಸಿಎಂ ಕಚೇರಿಯಿಂದ ಮೇಯರ್ ಅಂಗಳದವರೆಗೆ ತೇಜಸ್ವಿನಿಯ ಫೈಲು ತರಾತುರಿಯಲ್ಲಿ ಓಡಾಡಿರೋದು, ಹಳೆಯ ಲೀಸ್ ಅವಧಿ ಮುಗಿಯುವುದಕ್ಕೂ ಒಂದು ವರ್ಷ ಮುಂಚೆಯೇ ಮೂವತ್ತು ವರ್ಷಗಳಷ್ಟು ಸುದೀರ್ಘ ನವೀಕರಣಕ್ಕೆ ಸಹಿ ಹಾಕಿರೋದು, ಅದಕ್ಕೆ ಖುದ್ದು ಮುಖ್ಯಮಂತ್ರಿ ಶೆಟ್ಟರೆ ಶಿಫಾರಸ್ಸು ಮಾಡಿರೋದು, ಇವೆಲ್ಲವೂ ಅನಂತನ ಅಕ್ರಮ ಹಸ್ತಕ್ಷೇಪವನ್ನು ಇಂಚಿಂಚೂ ಸಾರುತ್ತವೆ.

2004ರಲ್ಲಿ ಮೊದಲ ಬಾರಿಗೆ ಬಸವನಗುಡಿಯ ಈ ಕಟ್ಟಡವನ್ನು ತೇಜಸ್ವಿನಿ ಅನಂತ್‌ಕುಮಾರ್ ನಡೆಸುತ್ತಿರುವ ಅದಮ್ಯ ಚೇತನ ಟ್ರಸ್ಟ್‌ಗೆ ಪುಕ್ಕಟೆಯಾಗಿ ಐದು ವರ್ಷದ ಅವಧಿಗೆ ನೀಡಲಾಗಿತ್ತು. ಸುಮಾರು 320 ಶಾಲೆಯ ಮಕ್ಕಳಿಗೆ ಉಚಿತವಾಗಿ ಅನ್ನ ಬೇಯಿಸಿ ಹಾಕುತ್ತಿದ್ದೇವೆ, ಹೆಣ್ಣುಮಕ್ಕಳಿಗೆ ಉಚಿತವಾಗಿ ವೃತ್ತಿಶಿಕ್ಷಣ ನೀಡುತ್ತಿದ್ದೇವೆ ಎಂಬಿತ್ಯಾದಿ ಕಾರಣ ನೀಡಿ ತೇಜಸ್ವಿನಿ ಕಟ್ಟಡವನ್ನು ದಕ್ಕಿಸಿಕೊಂಡಿದ್ದರು. 2009ರಲ್ಲಿ ಯಡ್ಡಿ ಮುಖ್ಯಮಂತ್ರಿಯಾಗಿದ್ದಾಗ ಈ ಲೀಸ್‌ನ ಅವಧಿಯನ್ನು ಮತ್ತೆ ಐದು ವರ್ಷಗಳಿಗೆ ನವೀಕರಿಸಿದ್ದರಲ್ಲದೆ, ತಿಂಗಳಿಗೆ ಒಂದು ಸಾವಿರ ರೂಪಾಯಿಯಂತೆ ಲೆಕ್ಕ ಹಾಕಿ ಭೋಗ್ಯದ



ಮೊತ್ತವನ್ನು ನಿಗದಿಮಾಡಿದ್ದರು. ಕೋಟಿಗಟ್ಟಲೆ ಬೆಲೆಬಾಳುವ, ಬೆಂಗಳೂರಿನಂತಹ ರಿಯಲ್ ಎಸ್ಟೇಟ್ ಸಿಟಿಯ ಮಧ್ಯಭಾಗದಲ್ಲಿರುವ ಜಾಗಕ್ಕೆ ಒಂದು ಸಾವಿರ ಯಾವ ಲೆಕ್ಕವೂ ಅಲ್ಲ.


ಯಡ್ಡಿಯಿಂದ ನವೀಕರಿಸಿಕೊಂಡ ಲೀಸ್‌ನ ಅವಧಿ 2014ಕ್ಕೆ ಮುಕ್ತಾಯವಾಗುತ್ತಿತ್ತು. ಆಗ ಬೇಕಾದರೆ ನವೀಕರಣಕ್ಕೆ ತೇಜಸ್ವಿನಿ ಅರ್ಜಿ ಗುಜರಾಯಿಸಿ ಕೊಳ್ಳಬಹುದಿತ್ತು. ಆದರೆ ಅಷ್ಟರಲ್ಲಿ ಬಿಜೆಪಿ ಅಧಿಕಾರದಲ್ಲಿರುವುದಿಲ್ಲ, ನವೀಕರಣಕ್ಕಾಗಿ ಮತ್ತೊಬ್ಬರ ಮನೆ ಬಾಗಿಲು ಅಲೆದಾಡಬೇಕಾಗುತ್ತದೆ ಎಂದು ಮಾಸ್ಟರ್ ಪ್ಲಾನ್ ಹಾಕಿದ ಅನಂತ್‌ಕುಮಾರ್ ಮತ್ತು ತೇಜಸ್ವಿನಿ ಲೀಸ್ ಮುಗಿಯುವುದಕ್ಕೆ ಇನ್ನೂ ಒಂದು ವರ್ಷ ಇರುವಾಗಲೆ ಅಧಿಕಾರ ದುರುಪಯೋಗಪಡಿಸಿಕೊಂಡು ಮುಂದಿನ ಮೂವತ್ತು ವರ್ಷಗಳವರೆಗೆ ಮತ್ತ್ಯಾರು ತನ್ನ ತಂಟೆಗೆ ಬರದಂತೆ ವ್ಯವಸ್ಥೆ ಮಾಡಿಕೊಂಡಿದ್ದಾರೆ.

ಅಕ್ಟೋಬರ್ 10, 2012ರಂದು ಮುಖ್ಯಮಂತ್ರಿ ಜಗದೀಶ್ ಶೆಟ್ಟರ್‌ಗೆ ಪತ್ರ ಬರೆದಿದ್ದ ತೇಜಸ್ವಿನಿ ಅನಂತ್‌ಕುಮಾರ್ ತಮ್ಮ ಅದಮ್ಯ ಚೇತನ ಟ್ರಸ್ಟ್‌ಗೆ ನೀಡಿರುವ ಕಟ್ಟಡದ ಬೋಗ್ಯವನ್ನು 99 ವರ್ಷಗಳಿಗೆ ವಿಸ್ತರಿಸುವಂತೆ ಕೋರಿದ್ದರು. ಮುಳುಗುವ ನೌಕೆಯ ದುರಂತ ನಾಯಕನಂತೆ ಕೂತಿದ್ದ ಶೆಟ್ಟರ್ 'ಸೂಕ್ತ ಕ್ರಮಕೈಗೊಳ್ಳಿ' ಎನ್ನುವ ಷರಾ ಬರೆದು ನಗರಾಭಿವೃದ್ಧಿ ಇಲಾಖೆಗೆ ಪತ್ರವನ್ನು ಸಾಗಹಾಕಿದ್ದರು. ಆದರೆ ಇಲಾಖೆಯಿಂದ ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ.

ಸರ್ಕಾರದ ಸಾವಿನ ದಿನಗಳು ಸಮೀಪಿಸುತ್ತಿದ್ದಂತೆ 99 ವರ್ಷದ ದುರಾಸೆ ಬದಿಗೊತ್ತಿದ ತೇಜಸ್ವಿನಿ ಜನವರಿ 4, 2013ರಂದು ಬಿಬಿಎಂಪಿ ಆಯುಕ್ತರಿಗೆ ಮತ್ತೊಂದು ಪತ್ರ ಬರೆದು ತುರ್ತಾಗಿ ಮೂವತ್ತು ವರ್ಷಗಳಿಗೆ ಲೀಸ್ ಅವಧಿಯನ್ನು ವಿಸ್ತರಿಸುವಂತೆ ಬೇಡಿಕೆ ಇಟ್ಟಿದ್ದರು. ಸಾಮಾನ್ಯರ ಫೈಲುಗಳು ಸರ್ಕಾರಿ ಕಚೇರಿಗಳಲ್ಲಿ ಕದಲುವ ಮುನ್ನ ತಿಂಗಳಾನುಗಟ್ಟಲೆ ಧೂಳು ತಿನ್ನಬೇಕಾಗುತ್ತದೆ. ಆದರೆ ತೇಜಸ್ವಿನಿ ಅನಂತ್‌ಕುಮಾರ್ ಪತ್ರದ ವಿಚಾರದಲ್ಲಿ ನಡೆದದ್ದು ಮಾತ್ರ 'ಫಕ್ಕಿಂಗ್ ಸ್ಪೀಡ್'. ಬಿಬಿಎಂಪಿ ಆಯುಕ್ತ ಸಿದ್ದಯ್ಯ ಫೆಬ್ರುವರಿ 5 ರಂದು ನಗರ ಯೋಜನಾ ಸಮಿತಿಯ ಅವಗಾಹನೆಗೆ ಕೋರಿಕೆಯ ಪತ್ರವನ್ನು ಕಳಿಸುತ್ತಾರೆ. ಅದಾದ ಹದಿನಾಲ್ಕೇ ದಿನಕ್ಕೆ ಯೋಜನಾ ಸಮಿತಿ ಅನುಮೋದನೆ ನೀಡುತ್ತದೆ. ಅಲ್ಲಿಂದ ಮೂರೇ ದಿನದಲ್ಲಿ ಅಂದರೆ ಫೆಬ್ರುವರಿ 22 ರಂದು ತೆರಿಗೆ ಮತ್ತು ಹಣಕಾಸು ಸ್ಥಾಯಿ ಸಮಿತಿ ಸಹ ಪ್ರಸ್ತಾವಕ್ಕೆ ಸಹಿ ಹಾಕುತ್ತದೆ. ಇಷ್ಟೆಲ್ಲಾ ಆದಮೇಲೆ ಚಡ್ಡಿ ಮೇಯರ್ ಡಿ.ವೆಂಕಟೇಶ್‌ಮೂರ್ತಿ ನೇತೃತ್ವದ ಸಮಿತಿ ಈ ಕುರಿತು ಒಂದೇ ಒಂದು ಚರ್ಚೆಯನ್ನೂ ನಡೆಸದೆ ಫೆಬ್ರುವರಿ 26 ರಂದು ಮೂವತ್ತು ವರ್ಷದ ಲೀಸ್‌ಗೆ ಅಧಿಕೃತ ಮುದ್ರೆಯನ್ನೊತ್ತಿಬಿಡುತ್ತದೆ. ಅಲ್ಲಿಗೆ ಸರ್ಕಾರಿ ಕಟ್ಟಡವೊಂದು ತೇಜಸ್ವಿನಿ ಮತ್ತು ಅನಂತ್‌ಕುಮಾರನ ತೆಕ್ಕೆಯಲ್ಲಿ ಸೇಫಾಗಿಬಿಡುತ್ತದೆ!

ಇಲ್ಲಿ ಮತ್ತೊಂದು ಸ್ವಾರಸ್ಯಕರ ವಿಷಯವನ್ನು ಗಮನಿಸಬೇಕು. ಇದೇ ಲೀಸಿನ ನವೀಕರಣಕ್ಕೆ ಸಂಬಂಧಿಸಿದಂತೆ ಮೂವತ್ತು ವರ್ಷಗಳವರೆಗೆ ಮುಂದುವರೆಸಿ ಕೊಡಬೇಕೆಂಬ ಅರ್ಜಿ ಕಳೆದ ವರ್ಷದ ಆಗಸ್ಟ್‌ನಲ್ಲೇ ನಗರಾಭಿವೃದ್ಧಿ ಇಲಾಖೆಗೆ ಬಂದಿತ್ತು. ಆಗದನ್ನು ಅಧೀನ ಕಾರ್ಯದರ್ಶಿ ಗೋಪಾಲಯ್ಯ ತಿರಸ್ಕರಿಸಿದ್ದರು. ಸೆಪ್ಟೆಂಬರ್‌ನಲ್ಲಿ ಬಿಬಿಎಂಪಿ ಆಯುಕ್ತರಿಗೆ ಪತ್ರ ಬರೆದಿದ್ದ ಅವರು ಲೀಸ್‌ನ ಅವಧಿ 2014ಕ್ಕೆ ಕೊನೆಗೊಳ್ಳುವುದರಿಂದ ಈಗಲೇ ಅದನ್ನು ನವೀಕರಿಸಲು ಕಾನೂನುಬದ್ಧವಾಗಿ ಸಾಧ್ಯವಿಲ್ಲ ಎಂದು ಉಲ್ಲೇಖಿಸಿದ್ದರು. ಆದರೆ ಇದೆಲ್ಲವನ್ನೂ ಗಾಳಿಗೆ ತೂರಿದ ಬಿಜೆಪಿ ಸರ್ಕಾರ ಅಕ್ರಮವಾಗಿ ಅದಮ್ಯ ಚೇತನ ಟ್ರಸ್ಟ್‌ಗೆ ಅವಧಿ ಮುಗಿಯುವ ಮುನ್ನವೇ ಮತ್ತೊಮ್ಮೆ ನವೀಕರಿಸಿಕೊಟ್ಟಿದೆ.

ಭ್ರಷ್ಟಾಚಾರಕ್ಕೆ ನಿಂತವರು ಭಂಡತನಕ್ಕೂ ಬೀಳಲೇಬೇಕು. ಆ ಕರ್ಮ ತೇಜಸ್ವಿನಿಗೂ ತಪ್ಪಿಲ್ಲ. ಅಕ್ರಮವಾಗಿ ಕಟ್ಟಡ ಪಡೆದಿದ್ದಲ್ಲದೆ 'ದಕ್ಷಿಣ ಭಾರತದಲ್ಲೆ ಪ್ರಥಮ ಬೊಂಬೆಗಳ ಪ್ರದರ್ಶನ ನಡೆಸಲು ತೀರ್ಮಾನಿಸಿದ್ದೆವು. ಇದಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಧನಸಹಾಯ ಮಾಡಲೂ ಒಪ್ಪಿದೆ. ಆದರೆ ಅದಕ್ಕಾಗಿ ನಿಮ್ಮದೇ ಆದ ಜಾಗ ಇದ್ದರೆ ಅಥವಾ 20 ವರ್ಷಕ್ಕಿಂತ ಹೆಚ್ಚು ಅವಧಿಗೆ ಸರ್ಕಾರಿ ಜಾಗವನ್ನು




ಬೋಗ್ಯಕ್ಕೆ ಪಡೆದಿದ್ದರೆ ಮಾತ್ರ ಹಣ ನೀಡುವುದಾಗಿ ಇಲಾಖೆ ಹೇಳಿತು. ಹಾಗಾಗಿ ಬಿಬಿಎಂಪಿಯಿಂದ ಈ ಕಟ್ಟಡವನ್ನು ಮೂವತ್ತು ವರ್ಷಕ್ಕೆ ಲೀಸ್ ಪಡೆದಿದ್ದೇವೆ. ಚುನಾವಣಾ ನೀತಿಸಂಹಿತೆ ಜಾರಿಗೆ ಬಂದರೆ ಲೀಸ್ ಪಡೆಯಲು ಸಾಧ್ಯವಾಗೊಲ್ಲ ಅಂತ ಸ್ವಲ್ಪ ಅರ್ಜೆಂಟಾಗಿ ಮೊದಲೆ ಪಡೆದಿದ್ದೇವೆ ಅಷ್ಟೆ. ಪ್ಲೀಸ್ ಇದಕ್ಕೆ ಪೊಲಿಟಿಕ್ಸ್ ಲಿಂಕ್ ಮಾಡಬೇಡಿ' ಅಂತ ಮುಗ್ಧರಂತೆ ಮುಲುಕಾಡುತ್ತಿದ್ದಾರೆ. ಆದರೆ ನೀತಿಸಂಹಿತೆ ಹೆಚ್ಚೆಂದರೆ 2 ತಿಂಗಳು ಜಾರಿಯಿರಬಹುದೆ ಹೊರತು 2014ರವರೆಗೂ ಇರಲಿಕ್ಕಿಲ್ಲವೆನ್ನುವ ಸತ್ಯ ತೇಜಸ್ವಿನಿಗಾಗಲಿ, ಪತಿರಾಯ ಅನಂತ್‌ಕುಮಾರನಿಗಾಗಲಿ ತಿಳಿದಿರಲಿಲ್ಲವೆಂದು ನಾವು-ನೀವು ನಂಬಬಹುದೆ?

ಚುನಾವಣೆಯ ನಂತರ ಆರಾಮವಾಗಿ ಲೀಸ್ ವಿಸ್ತರಿಸಿಕೊಳ್ಳಬಹುದಿತ್ತಲ್ಲ? ಹೋಗಲಿ, ಚುನಾವಣೆಗೂ ಮುನ್ನವೇ ಅವರು ಅಂದುಕೊಂಡ 'ಬೊಂಬೆ'(?)ಗಳ ಪ್ರದರ್ಶನವೇನಾದರು ನಡೆಯಲಿದ್ದು ಅದಕ್ಕಾಗಿಯೇ ತರಾತುರಿಯಲ್ಲಿ ಮಂಜೂರು ಮಾಡಿಸಿಕೊಂಡಿರಬಹುದು ಎಂದು ಅಂದುಕೊಂಡರೂ, ಅಲ್ಲಿ ಅಂತದ್ಯಾವ ಬೊಂಬೆಯಾಟವೂ ನಡೆದಿಲ್ಲ, ನಡೆದಿರೋದೆಲ್ಲ ಬಿಜೆಪಿಗಳ ಅಧಿಕಾರ ದುರುಪಯೋಗದ ಹೈಡ್ರಾಮಾ!

ಮೊನ್ನೆ ಪತ್ರಿಕೆ ಜೊತೆ ಮಾತಿಗಿಳಿದ ನೂತನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಿಜೆಪಿಯವರು ತಮ್ಮ ಕಡೇ ದಿನಗಳಲ್ಲಿ ಸರ್ಕಾರಿ ಕಟ್ಟಡ, ಜಾಗಗಳನ್ನು ಬೇಕಾಬಿಟ್ಟಿಯಾಗಿ ಸ್ವಂತಕ್ಕೆ ಪರಭಾರೆ ಮಾಡಿಕೊಂಡ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದರು. ಸಿದ್ದರಾಮಯ್ಯನವರಿಗೆ ಹುದುಕಿ-ಕೆದಕುವ ತಾಪತ್ರಯವೇ ಬರದಿರಲೆಂದು ಪತ್ರಿಕೆಯೇ ತೇಜಸ್ವಿನಿ ಮತ್ತು ಅನಂತನ ಅವಾಂತರವನ್ನು ಎಳೆಎಳೆಯಾಗಿ ಇಲ್ಲಿ ತೆರೆದಿಟ್ಟಿದೆ. ಈಗಲಾದರೂ ಹೊಸ ಮುಖ್ಯಮಂತ್ರಿಗಳು ಅನಂತ್ ಕುಮಾರನ ಬಿಬಿಎಂಪಿ ಕಟ್ಟಡದ ಬುಡಕ್ಕೆ ಬಿಸಿ ಮುಟ್ಟಿಸುವರೆ?

● ಗಿರೀಶ್ ತಾಳಿಕಟ್ಟೆ



ಅದಮ್ಯ ಚೇತನ

ದಿನಾಂಕ : 04.10.2012

ಶ್ರೀ ಜಗದೀಶ್ ಶೆಟ್ಟರ್‌ರವರು, ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ : ಕಟ್ಟಡದ ಲೀಸ್ ಅವಧಿಯನ್ನು ಮುಂದಿನ 99 ವರ್ಷಕ್ಕೆ [illegible] ಬಗ್ಗೆ.

ಅದಮ್ಯ ಚೇತನ ಸಂಸ್ಥೆ, ಕಳೆದ ಹಲವಾರು ವರ್ಷಗಳಿಂದ ಅನ್ನ – ಅಕ್ಷರ – ಆರೋಗ್ಯ ಕ್ಷೇತ್ರಗಳಲ್ಲಿ ವಿವಿಧ [illegible] ಜೂನ್ 28, 2009 ರಿಂದ

99 ವರ್ಷದವರೆಗೆ ಲೀಸ್ ವಿಸ್ತರಿಸುವಂತೆ ಶೆಟ್ಟರ್‌ಗೆ ಬರೆದ ಪತ್ರ

ಬಿಜೆಪಿಗಳ ಕೊನೇ ಕ್ಷಣದ ಆತುರ

ಬಿಜೆಪಿಗಳ ಅಕ್ರಮ ದಾಹ ಅದೆಂತದಿತ್ತೆಂದರೆ, ಚುನಾವಣೆ ನೀತಿಸಂಹಿತೆ ಜಾರಿಯಾಗಿಬಿಟ್ಟರೆ ಮತ್ತೆ ಮುಕ್ಕಲು ...ವಕಾಶ ಸಿಕ್ಕುವುದೇ ಇಲ್ಲ ಎಂದರಿತು ಆತುರಾತುರದಲ್ಲಿ ಹತ್ತಾರು ಯೋಜನೆಗಳಿಗೆ ಅಂಕಿತ ಹಾಕಿಕೊಂಡಿದ್ದರು. ...ವೆಲ್ಲವೂ ಸ್ವಹಿತಾಸಕ್ತಿಯ 'ಪ್ರೊಜೆಕ್ಟ್'ಗಳೆಂದು ಮತ್ತೊಮ್ಮೆ ಹೇಳಬೇಕಿಲ್ಲ. ನೀತಿಸಂಹಿತೆಗೆ ಇನ್ನೇನು ಕೆಲವೇ ದಿನ ...ಕಿ ಇದೆ ಎನ್ನುವಾಗ ಬಿಜೆಪಿಗಳು ಮುದ್ರೆಯೊತ್ತಿದ ಈ ಐದು ಯೋಜನೆಗಳು ಸಾಕು ಅವರ ಹರಾಮಿತನವನ್ನು ...ರಾಜುಹಾಕಲು.

* ವಾಜಪೇಯಿ ಆರೋಗ್ಯ ಶ್ರೀ ಯೋಜನೆಯನ್ನು ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಬಿಪಿಎಲ್ ಹೊರತುಪಡಿಸಿದ ...ಟುಂಬಗಳಿಗೂ ವಿಸ್ತರಿಸಿದ್ದು ಅವುಗಳಲ್ಲಿ ಒಂದು. ಅಂದಾಜಿನ ಪ್ರಕಾರ 2.72 ಲಕ್ಷ ಕುಟುಂಬಗಳು ಇದರ ...ಾನುಭವಿಗಳಾಗಲಿವೆ. ಕುಟುಂಬ ಕಲ್ಯಾಣ ಮತ್ತು ಹಣಕಾಸು ಇಲಾಖೆಗಳು ಇಂತಹದ್ದೊಂದು ವಿಸ್ತರಣೆಗೆ ಅಸಮ್ಮತಿ ...ಸಿದ್ದರೂ ಚುನಾವಣೆ ಘೋಷಣೆಯಾಗುವುದಕ್ಕೆ ಒಂದು ದಿನ ಮುನ್ನವಷ್ಟೆ ಸಂಪುಟ ಸಭೆ ಇದಕ್ಕೆ ಅಸ್ತು ...ಂದಿತ್ತು. ಇದರ ಹಿಂದಿರೋದು ವೋಟ್ ಬ್ಯಾಂಕ್ ರಾಜಕಾರಣ ಎನ್ನುವುದು ಸ್ಪಷ್ಟ.


* ಮತ್ತೊಂದು, ಪದ್ಮನಾಭನಗರದ ಕಿತ್ತೂರು ರಾಣಿ ಚೆನ್ನಮ್ಮ ಸರ್ಕಲ್‌ನಲ್ಲಿ ಬೋಲ್ಸೇತುವೆ ನಿರ್ಮಾಣ. ...ಪಮುಖ್ಯಮಂತ್ರಿಯಾಗಿದ್ದ ಆಶೋಕ್ ಪ್ರತಿನಿಧಿಸುವ ಈ ಕ್ಷೇತ್ರದ ಕಾಮಗಾರಿಗೂ ಆತುರದಲ್ಲಿ ಅಂಗೀಕಾರ ಸಿಕ್ಕಿದೆ.

* ಸುಂಕೇನಹಳ್ಳಿ 62 x93 ಅಳತೆಯ ಜಾಗವನ್ನು ಆರೆಸ್ಸೆಸ್‌ನ ರಾಷ್ಟ್ರೋತ್ಥಾನ ಪರಿಷತ್‌ಗೆ ಲೀಸ್ ಆಧಾರದ ...ಲೆ [illegible] ಚುನಾವಣೆ ಘೋಷಣೆಯಾಗುವ ಕೆಲವೇ ಗಂಟೆಗಳ ಮುನ್ನ ಅನುಮೋದನೆ ಪಡೆದುಕೊಂಡಿತ್ತು.

* 115 ಕೋಟಿ ರೂಪಾಯಿಯ [illegible] ಟೆಂಡರ್ ಕರೆಯಲು ಸಂಪುಟ ಸಭೆ ಅನುಮೋದನೆ ...ದ್ದೂ [illegible]

* ಇನ್ನು ಕಡೆಯದಾಗಿ ತೇಜಸ್ವಿನಿ ಅನಂತಕುಮಾರ್ ನಡೆಸುತ್ತಿರುವ ಅದಮ್ಯ ಚೇತನ ಟ್ರಸ್ಟ್‌ಗೆ ಬಿಬಿಎಂಪಿ ...ಟ್ಟಡವನ್ನು ಲೀಸ್‌ಗೆ ಕೊಟ್ಟ ಈ ಪ್ರಕರಣ.

ಉತ್ತರ ಕನ್ನಡ: ಹೆದ್ದಾರಿ ಅಗಲೀಕರಣದ ಅನಾಹುತಗಳು





ಪರ್ಯಾಯ ಮಾರ್ಗ ಇದೆ!

ಉತ್ತರ ಕನ್ನಡದಲ್ಲಿ ಹಾದುಹೋಗಿರುವ ದ್ವಿಪಥ ರಾಷ್ಟ್ರೀಯ ಹೆದ್ದಾರಿ ಚತುಷ್ಪಥ ಆಗುವುದು ಬೇಡವೆಂದು ಯಾರೂ ಹೇಳುತ್ತಿಲ್ಲ. ಅಮಾಯಕ ಜನರ ಬಲಿ ಪಡೆಯುವ ಅವೈಜ್ಞಾನಿಕ ರಸ್ತೆ ಅಗಲೀಕರಣಕ್ಕಷ್ಟೇ ವಿರೋಧ. ಹಳ್ಳಿಗಾಡಿನ ಜನರ ನೋವು-ನಲಿವಿನ ಅರಿವಿರುವ ಉನ್ನತ ಪರಿಣಿತರ-ತಂತ್ರಜ್ಞರು ಸೇರಿ ಈಗಿನ ಸ್ಕೆಚ್ ಪುನರ್ ಪರಿಶೀಲಿಸಲಿ; ಜೀವ ಜಾಲಕ್ಕೆ-ಆರಣ್ಯ ಪರಿಸರ-ಕಡಲು-ನದಿ ಪರಿಸರಕ್ಕೆ ಧಕ್ಕೆಯಾಗದ ಹೊಸ ಹೆದ್ದಾರಿ ಯೋಜನೆ ರೂಪಿತವಾಗಲಿ ಎಂಬುದು ಜನರ ಅಳಲು. ವೆಚ್ಚ ಹೆಚ್ಚಾದರೂ ನಿರ್ಗತಿಕರಾಗುವವರ ಭವಿಷ್ಯಕ್ಕಿಂತ ದೊಡ್ಡದೇನೂ ಅಲ್ಲವಲ್ಲ!?

ಈಗ ಎನ್‌ಎಚ್‌ಎ ಅನುಷ್ಠಾನಕ್ಕೆ ಕೈಗೆತ್ತಿಕೊಂಡಿರುವ ಹೆದ್ದಾರಿ ಅಗಲೀಕರಣ ಸ್ಕೆಚ್‌ಗೆ ಪರ್ಯಾಯವಾದ ಮೂರು ಮಾರ್ಗ ಇದೆ. 1966ರಲ್ಲಿ ರಾಷ್ಟ್ರೀಯ ಹೆದ್ದಾರಿ ಅಗಲೀಕರಣಕ್ಕೆಂದು ಕುಂದಾಪುರದಿಂದ ಗೋವಾತನಕ 45 ಮೀ ಅಗಲದ ಜಾಗ ವಶಪಡಿಸಿಕೊಳ್ಳಲಾಗಿತ್ತು. ಈ 45 ಮೀನಲ್ಲಿ 20 ಮೀ ಅಷ್ಟೇ ಬಳಕೆಯಾಗಿದೆ. ಇನ್ನುಳಿದ 25 ಮೀ ನಲ್ಲಿ ಚತುಷ್ಪಥ ನಿರ್ಮಾಣ ಮಾಡಬಹುದು. ಆಗ ಹೊಸ ನಿರಾಶ್ರಿತರು ಸೃಷ್ಟಿಯಾಗುವುದಿಲ್ಲ.

ಹಾಗೆಯೇ ಕೊಂಕಣ ರೈಲು ಯೋಜನೆಗೆಂದು 100 ಮೀ. ಜಾಗ ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಈ ರೈಲು ಹಳಿ ಪಕ್ಕದಲ್ಲಿ ಚತುಷ್ಪಥ ನಿರ್ಮಾಣ ಮಾಡಬಹುದು. ಅಲ್ಲಲ್ಲಿ ಬೈಪಾಸ್ ನಿರ್ಮಿಸುತ್ತ ಅಮದಳ್ಳಿಯಿಂದ ಕಾರವಾರದವರೆಗೆ ಬ್ರಿಟಿಷರು ನಿರ್ಮಿಸಿದ ರಸ್ತೆ ಬಳಕೆ ಮಾಡಿಕೊಂಡರೆ ನಿರಾಶ್ರಿತರ ಸಮಸ್ಯೆ ಕಡಿಮೆ ಆಗುತ್ತದೆ. 12 ಕಿ.ಮೀ. ನಷ್ಟು ರಸ್ತೆ ಉದ್ದ ಕಡಿಮೆ ಆಗುತ್ತದೆ.

ಇದೆಲ್ಲ ಎನ್‌ಎಚ್‌ಎ ಅಧಿಕಾರಿಗಳಿಗೆ ಕಾಣಿಸಲು ಸಾಧ್ಯವೇ ಇಲ್ಲ ಬಿಡಿ. ಸ್ಥಳೀಯ ಎಂಪಿ-ಎಮ್ಮೆಲ್ಲೆ-ಮಂತ್ರಿಗಳಿಗೂ ಕಾಣಿಸದಿರುವುದು ಜಿಲ್ಲೆಯ ದುರಂತವೇ ಸರಿ. ಜನ ಈ ಹೊಣೆಗೇಡಿಗಳಿಗೆ ಮೂತಿಗಿಕ್ಕಲು ಯೋಚಿಸುತ್ತಿದ್ದಾರೆ!

ಉತ್ತರ ಕನ್ನಡದ ಕಣ್ಣೀರಿನ ಕತೆಗೆ ಕೊನೆಯೇ ಇಲ್ಲವೇನೋ? ಬಹುಶಃ ಈ ನತದೃಷ್ಟ ಜಿಲ್ಲೆಯಲ್ಲಿ ಅಭಿವೃದ್ಧಿ ನೆಪದಲ್ಲಿ ಆಗಿರುವಷ್ಟು ಆಘಾತ ದೇಶದ ಬೇರೆಲ್ಲೂ ಆಗಿರಲಿಕ್ಕಿಲ್ಲ! ಕಳೆದ ಆರೆಂಟು ದಶಕದಿಂದ ಒಂದರ ಹಿಂದೊಂದರಂತೆ ಪ್ರಳಯಾಂತಕ ಸರ್ಕಾರಿ ಯೋಜನೆಗಳು ವಕ್ಕರಿಸುತ್ತಲೇ ಇದೆ. ಒಂದೊಂದು ಯೋಜನೆಯೂ ಸಾವಿರಾರು ಹೆಕ್ಟೇರ್ ಜೀವನಾಧಾರ ಭೂಮಿ ನುಂಗಿ ನೊಣೆದಿದೆ. ಸಾವಿರ-ಸಾವಿರ ಮೂಲ ನಿವಾಸಿ ಕುಟುಂಬಗಳನ್ನು ಬಲಾತ್ಕಾರವಾಗಿ ಒಕ್ಕಲೆಬ್ಬಿಸಿ ಬೀದಿಗೆ ಎಸೆದಿದೆ! ತಲತಲಾಂತರದಿಂದ ಕಟ್ಟಿಕೊಂಡ ಬದುಕನ್ನು ಧ್ವಂಸ ಮಾಡಿದೆ!!

ಜಿಲ್ಲೆಯಲ್ಲಿ ನಿಂತು ಎತ್ತ ಕಣ್ಣು ಹಾಯಿಸಿದರೂ ಇದೊಂದು ನಿರಾಶ್ರಿತರ ಡೇರೆಯಂತೆ ಕಾಣಿಸುತ್ತದೆ. ಒಂದು ಕಡೆ ಕಡಲು; ಮತ್ತೊಂದೆಡೆ ಅರಣ್ಯ ಭೂಮಿ. ನಡುವೆ ಚೂರೇ ಚೂರು ಬದುಕಲು ಯೋಗ್ಯವಾದ ಜಮೀನು. ಈ ಜೀವನಾಧಾರ ಜಾಗದಲ್ಲಿ ಶೇ. 70ರಷ್ಟನ್ನು ಈಗಾಗಲೇ ಸರ್ಕಾರಿ ಪ್ರಭೃತಿಗಳು-ಆಳುವ ಖೂಳರು ದೇಶೋದ್ಧಾರಕ್ಕೆಂದು ಕಸಿದುಕೊಂಡಾಗಿದೆ. ಇಷ್ಟಾದರೂ ಅಳಿದುಳಿದಿರುವ ಜಿಲ್ಲೆಯನ್ನು ಕಬಳಿಸುವ ಹೊಸ-ಹೊಸ ನೀಲನಕ್ಷೆ ಸರ್ಕಾರಿ ಪರ್ಯಾವರ್ಣ ಪಂಡಿತರು ಲೆಕ್ಕ ಹಾಕುತ್ತಲೇ ಇದ್ದಾರೆ; ದಿಕ್ಕೆಟ್ಟ ಜನರು ಬಚಾವಾಗಲು ವಲಸೆ ಹೋಗುತ್ತಲೇ ಇದ್ದಾರೆ. ಈ ಅಮಾನುಷ ಅಭಿವೃದ್ಧಿ ದಾಳಿ ಹೀಗೇ ಮುಂದುವರಿದರೆ ಕೆಲವೇ ಕೆಲವು ವರ್ಷದಲ್ಲಿ ಉತ್ತರ ಕನ್ನಡವೆಂದರೆ, ಜನವಸತಿಯೇ ಇಲ್ಲದ ಬರೀ ಸರ್ಕಾರಿ ಸ್ಥಾವರಗಳ ಬರಡು ಭೂಮಿಯಾಗೋದು ಗ್ಯಾರಂಟಿ!

ಸಾಲು-ಸಾಲು ಅನಾಹುತಕಾರಿ ಯೋಜನೆಗಳಿಂದ ಹೈರಾಣಾಗಿರುವ ಉತ್ತರ ಕನ್ನಡಕ್ಕೆ ಹೆದ್ದಾರಿ ಅಗಲೀಕರಣ ಎಂಬ ಹೆಮ್ಮಾರಿ ಕಾಡತೊಡಗಿದೆ. ಈ 'ಅಭಿವೃದ್ಧಿ'ಗಾಗಿ ಮತ್ತೆ ಸಾವಿರಾರು ಎಕರೆ ಭೂಮಿ ವಶಪಡಿಸಿಕೊಳ್ಳಲು ಕೇಂದ್ರ ಸರ್ಕಾರದ ಕಿಂಕರರು 'ಶಸ್ತ್ರಾಸ್ತ್ರ'ಗಳೊಂದಿಗೆ ಮುನ್ನುಗ್ಗುತ್ತಿದ್ದಾರೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎ)ದ ರಣೋತ್ಸಾಹಕ್ಕೆ ಕರಾವಳಿ ಮಂದಿ ಕಂಗಾಲಾಗಿ ಹೋಗಿದ್ದಾರೆ! ಇಡೀ ಕರಾವಳಿ ಸಂಸ್ಕೃತಿಯೇ ಗಂಡಾಂತರಕ್ಕೆ ಸಿಲುಕಿದೆ. ಕಡಲ ತೀರದ ಕಾರವಾರ-ಅಂಕೋಲಾ-ಕುಮಟಾ-ಹೊನ್ನಾವರ ಮತ್ತು ಭಟ್ಕಳ ತಾಲ್ಲೂಕುಗಳ ಸಮತಟ್ಟು ಪ್ರದೇಶದಲ್ಲಿ ಕರಾವಳಿಯ ವಿಶಿಷ್ಟ ನಾಗರಿಕತೆ ನೆಲೆಗೊಂಡಿದೆ. ಈ ಸಮತಟ್ಟು ಪ್ರದೇಶದ ಮನೆ-ಮನಸ್ಸು ಹೊಲ-ಹೊಂಗನಸು ಒಡೆದು ಹಾಕಿ ಕೊಂಕಣ ರೈಲು ದಾರಿ ಹಾದುಹೋಗಿದೆ. ಈಗ ಇದಕ್ಕೆ ಸಮಾನಾಂತರವಾಗಿರುವ ರಾಷ್ಟ್ರೀಯ ಹೆದ್ದಾರಿಯನ್ನು ಚತುಷ್ಪಥ (ಎನ್‌ಎಚ್-66) ಮಾಡಲು ಇನ್ನಷ್ಟು ಜೀವ-ಜೀವನ ಆಪೋಷನ ಪಡೆಯಲು ಎನ್‌ಎಚ್‌ಎ ಅವಾಂತರಿಗಳು ಬಾಯ್ತೆರೆದು ನಿಂತಿದ್ದಾರೆ!

ಅವೈಜ್ಞಾನಿಕ ಯೋಜನೆ

ರಾಷ್ಟ್ರೀಯ ಹೆದ್ದಾರಿ ಅಗಲೀಕರಣದ ಭೂತ ಸಂಚಾರ ಉತ್ತರ ಕನ್ನಡದ ಕರಾವಳಿಯಲ್ಲಿ ಶುರುವಾಗಿ ನಾಲ್ಕೈದು ವರ್ಷವೇ ಕಳೆದುಹೋಗಿದೆ. ಅಂದು ಶುರುವಾದ ನೆಲೆ ಕಳೆದುಕೊಳ್ಳುವವರ ಆತಂಕ-ಅನುಮಾನ ಇಂದಿಗೂ ನಿಂತಿಲ್ಲ. ಹಾಗಂತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವಾಗಲಿ, ಜಿಲ್ಲಾಡಳಿತವಾಗಲಿ ಈ ಚತುಷ್ಪಥ ಯೋಜನೆಯ ಸ್ಪಷ್ಟ ರೂಪು-ರೇಷೆಯನ್ನು ಜನತೆಯ ಮುಂದಿಟ್ಟಿಲ್ಲ. ಈಗಂತೂ ಎನ್‌ಎಚ್‌ಎ ಏಕಪಕ್ಷೀಯ ಸರ್ವೆ, ಭೂಸ್ವಾಧೀನ ಪ್ರಕ್ರಿಯೆಗೆ ಕೈಹಾಕಿ ಜನರನ್ನು ಕಂಗೆಡಿಸಲಾರಂಭಿಸಿದೆ. ಒಂದು ಊಹಾಪೋಹದಂತೆ ಹೆದ್ದಾರಿ ಹರಿದುಹೋಗಿರುವ ಹಳ್ಳಿ ಭಾಗದಲ್ಲಿ 60 ಮೀಟರ್, ಪಟ್ಟಣ ಪ್ರದೇಶದಲ್ಲಿ 45 ಮೀಟರ್ ಭೂಸ್ವಾಧೀನ ಆಗಲಿದೆ. ಹೆಚ್ಚು ಕಮ್ಮಿ ಇದೇ ರೀತಿ ಸರ್ವೆ ಎನ್‌ಎಚ್‌ಎ ನಡೆಸಿ ಕಲ್ಲುಗಳನ್ನು ಹುಗಿದಿದೆ.

ಉತ್ತರ ಕನ್ನಡ ಜಿಲ್ಲೆಯ ಭೌಗೋಳಿಕ-ಪರಿಸರ ಮಾಹಿತಿಯೇ ಇಲ್ಲದ ಎನ್‌ಎಚ್‌ಎದ ಹೆಡ್ಡರ ತಂಡ ಚತುಷ್ಪಥ ರಸ್ತೆಗಾಗಿ ಬರೋಬ್ಬರಿ 2,600 ಕೋಟಿಯ ಎಸ್ಟಿಮೇಟ್ ರೆಡಿ ಮಾಡಿಕೊಂಡಿದೆ. ಯೋಜನೆಯ ನೀಲನಕ್ಷೆ ಸಿದ್ಧ ಪಡಿಸಲು ಬಿ-ಶ್ರೇಣಿಯ ಐಎಮ್‌ಸಿ ಎಂಬ ಕಂಪನಿಗೆ ಗುತ್ತಿಗೆಯನ್ನು ತರಾತುರಿಯಲ್ಲಿ ಕೊಡಲಾಗಿದೆ. ಪದ್ಧತಿಯಂತೆ ಇಂಥ ಸರ್ವೆ ಎ-ಶ್ರೇಣಿಯ ಕಂಪನಿಗಳಿಗೇ ವಹಿಸಬೇಕು. ಆದರೆ ಎನ್‌ಎಚ್‌ಎ ಕಳ್ಳಾಟದಿಂದ ಯೋಜನೆ ಅನುಷ್ಠಾನಗೊಳಿಸುವ ಹಠಕ್ಕೆ ಬಿದ್ದಿದೆ. ಕೇಂದ್ರ ಅರಣ್ಯ-ಪರಿಸರ ಮತ್ತು ಮಾಲಿನ್ಯ ಮಂತ್ರಾಲಯಕ್ಕೆ ಸುಳ್ಳು ಮಾಹಿತಿ ನೀಡಿ ಎನ್‌ಓಸಿ ಪಡೆಯುವ ಹಿಕಮತ್ತು ನಡೆಸಿದೆ.


ಎನ್‌ಎಚ್‌ಎ ಕಾರ್ಯಾಚರಣೆ ಎಲ್ಲವೂ ಮಗುಮ್ಮಾಗಿ ನಡೆದಿದೆ. ಭೂ-ಸ್ವಾಧೀನ ಪ್ರಕಟಣೆ ಪತ್ರಿಕೆಯಲ್ಲಿ ಕೊಟ್ಟರೆ ಮುಗಿಯಿತು. ಜನರಿಗೆ ಅವರ ಭೂಮಿಯ ಮೇಲೆ ಯಾವ ಹಕ್ಕೂ ಇರದೆಂಬ ದೋಖಾ ಧೋರಣೆ ಎನ್‌ಎಚ್‌ಎದಾಗಿದೆ. ಖಾಸಗಿ ಜಮೀನನ್ನು ಮನಸೋ ಇಚ್ಛೆ ಸರ್ವೆ ಮಾಡುತ್ತ ಗಡಿ ಗುರುತಿಸಲಾಗುತ್ತಿದೆ. "ಹಣ ಕೊಡುತ್ತೇವೆ... ಏಳಿ... ಎದ್ದು ಹೋಗಿ... ನಮಗೆ ಜರೂರಾಗಿ ಅಭಿವೃದ್ಧಿ ಮಾಡಬೇಕಾಗಿದೆ..." ಎಂಬುದು ಎನ್‌ಎಚ್‌ಎದ ಧ್ಯೇಯವಾಕ್ಯವಾಗಿದೆ.

ಬದುಕು ಬರಿದು!

ಸರ್ಕಾರ ನೆಲೆ ಕಳೆದುಕೊಳ್ಳುವವರಿಗೆ ಕಾಸು ಕೊಡಬಹುದು; ಪುನರ್ವಸತಿ ಕೇಂದ್ರ ಎಂದು ಒಂದು ಬರಡು ಕಾಲೋನಿ ನಿರ್ಮಿಸಿ ಅತ್ತ ಹೋಗಲು ಹೇಳಬಹುದು. ಆದರೆ ತಲತಲಾಂತರದಿಂದ ಜೀವ-ಜೀವನಕ್ಕೆ ಆಧಾರವಾಗಿ ಕಟ್ಟಿಕೊಂಡ ಕನಸು-ಉದ್ಯೋಗ-ಕೃಷಿ-ತೋಟಗಾರಿಕೆ-ಮೀನುಗಾರಿಕೆ ಸ್ಥಾಪಿಸಿ ಕೊಡಲು ಸಾಧ್ಯವಾ? ಊಹುಂ. ಇದು ಸರ್ಕಾರಿ ಪಂಡಿತರಿಂದ ಸಾಧ್ಯವೇ ಇಲ್ಲ. ಹಾಗೆಂಬುದು ಉತ್ತರ ಕನ್ನಡ ಕಂಡುಂಡ ಕಟುಸತ್ಯ. ಹಲವು ಯೋಜನಾ ನಿರಾಶ್ರಿತರಿಗೆಂದು ಮಾಡಿರುವ ಪುನರ್ವಸತಿ ಕೇಂದ್ರಗಳು ಸಾಕ್ಷಾತ್ ನರಕದಂತಾಗಿ ಜನ ಇವತ್ತಿಗೂ ವಿಲವಿಲ ಒದ್ದಾಡುತ್ತಿದ್ದಾರೆ. ಅಂಥದೇ ಭೀಕರ ದುಷ್ಪರಿಣಾಮ ಚತುಷ್ಪಥ ರಸ್ತೆ ನಿರ್ಮಾಣದಿಂದಾಗಲಿದೆ ಎಂಬುದು ಜನರ ಆತಂಕ.

ಯೋಜನೆಯಿಂದ ಬಾಧಿತರಾಗುವವರ ಭಾವನೆ-ಭಯವನ್ನೆಲ್ಲ ಧಿಕ್ಕರಿಸಿ ಎನ್‌ಎಚ್‌ಎ ಭೂಸ್ವಾಧೀನಕ್ಕೆ ನೋಟಿಸ್ ಕಳಿಸುತ್ತಲೇ ಇದೆ. ಎನ್‌ಎಚ್‌ಎದ ಅವಸರ ಕಂಡರೆ ಮೂರ್ನಾಲ್ಕು ತಿಂಗಳಲ್ಲೇ ಕಾಮಗಾರಿ ಶುರುವಾಗುವ ಸಾಧ್ಯತೆ ಗೋಚರಿಸುತ್ತದೆ. ಆಗ ಏನಿಲ್ಲವೆಂದರೂ 10 ಸಾವಿರಕ್ಕೂ ಹೆಚ್ಚು ಮನೆ ಮಂದಿಯ ಬದುಕು ಬರಿದಾಗಲಿದೆ; 25 ಸಾವಿರಕ್ಕೂ ಹೆಚ್ಚು ಕಾಡು ಮರಗಳು ಬಲಿಯಾಗಲಿವೆ; 50 ಸಾವಿರದಷ್ಟು ರೈತ, ತೋಟಿಗರ ಕಣ್ಣಾವಲಿನಲ್ಲಿ ಬೆಳೆದ ತೆಂಗು-ಕಂಗು-ಮಾವು-ಹಲಸಿನಂಥ ಮರಗಳ ಮಾರಣಹೋಮವೇ ಆಗಲಿದೆ. ಕರಾವಳಿ ಗುಂಟದ 140 ಕಿ.ಮೀ. ಉದ್ದದ ಹೆದ್ದಾರಿ ಅಕ್ಕ-ಪಕ್ಕದ ಸಾವಿರಾರು ಎಕರೆ ಪ್ರದೇಶ ಬರಡಾಗಲಿದೆ; ಅಲ್ಲಿನ ಕೃಷಿ-ಮೀನುಗಾರಿಕೆ ಧ್ವಂಸವಾಗಲಿದೆ. ಅಕ್ಷರಶಃ ಕರಾವಳಿಗರ ಬದುಕು ಬರಡಾಗಲಿದೆ.

ಅಷ್ಟೇ ಅಲ್ಲ; ಯೋಜನೆಗೆ ಅಳಿದ ಬಳಿಕ ಉಳಿವ ಜನರಿಗೂ ಕಂಟಕವೇ! ಹಲವು ತಾಲ್ಲೂಕುಗಳ ಸರ್ಕಾರಿ ಕಚೇರಿಗಳನ್ನು, ಶಾಲೆ, ಗ್ರಾಮ ಚಾವಡಿಗಳನ್ನು ಈ ಚತುಷ್ಪಥ ಸ್ವಾಹಾ ಮಾಡಲಿದೆ. ಆಗ ಸರ್ಕಾರಿ ಕಚೇರಿ-ಶಾಲೆಗಳು ಯಾವ್ಯಾವುದೋ ಮೂಲೆಗೆ ಸ್ಥಳಾಂತರ ಆಗುವುದು ಅನಿವಾರ್ಯ. ಸಾರ್ವಜನಿಕರು ಆಗ ಮತ್ತೊಂದು ಥರದ ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಹೆದ್ದಾರಿಯ ಎಡಭಾಗದಲ್ಲಿ ಭೋರ್ಗರೆವ ಸಮುದ್ರ; ಬಲ ಭಾಗದಲ್ಲಿ ರೈಲು ಹಳಿ ಅಥವಾ ಅರಣ್ಯ ಇಲಾಖೆಯ ಜಾಗ. ಒಟ್ಟಿನಲ್ಲಿ ಹೆದ್ದಾರಿ ಅಗಲೀಕರಣದಿಂದ ನೆಲೆ ಕಳೆದುಕೊಳ್ಳುವವರು ಹಿಂದೂ ಹೋಗುವ ಹಾಗಿಲ್ಲ; ಮುಂದೂ ಹೋಗುವ ಹಾಗಿಲ್ಲ. ಸರ್ಕಾರಿ ನರಕವೇ ಪ್ರಾಪ್ತಿ!!



ಎನ್‌ಎಚ್‌ಎಗೆ ಎನ್‌ಓಸಿ ಇಲ್ಲ!!

ಗ್ರಾಮೀಣ ಭಾಗದ ಜನಜೀವನದ ಸುಖ-ಸಂಕಷ್ಟದ ಅರಿವು ಒಂಚೂರು ಇಲ್ಲದ ಹವಾನಿಯಂತ್ರಿತ ಕೊಠಡಿಯ ಅಧಿಕಾರಿ ಗಣ ಮತ್ತವರ ಮೇಲಿನ ಅಜ್ಞಾನಿ ಆಡಳಿತಗಾರ ಪುಢಾರಿಗಳು ಏನೇ ಹೇಳಲಿ; ಸರ್ಕಾರ ಕೊಡುವ ಪುಡಿಗಾಸಿನ ಪರಿಹಾರದಿಂದ ಯೋಜನಾ ನಿರಾಶ್ರಿತರ ಬದುಕು ಪುನರ್ ನಿರ್ಮಾಣ ಸಾಧ್ಯವೇ ಇಲ್ಲ. ಸಂಸಾರ ನಿರ್ವಹಣೆಗೆ ನಡೆಸುತ್ತಿರುವ ಸಣ್ಣ-ಪುಟ್ಟ ವ್ಯಾಪಾರ-ಉದ್ಯಮ, ಮೀನು ಮಾರಾಟ, ತೋಟಗಾರಿಕೆ, ಸಾಂಪ್ರದಾಯಿಕ ಕುಲ ಕಸುಬುಗಳು ಹೆದ್ದಾರಿ ಪಾಲಾದರೆ ಮತ್ತೆ ಕಟ್ಟಿಕೊಳ್ಳೋದು ಸಾಧ್ಯವೇ ಇಲ್ಲ. ಇದು ಪೂರಕ ಪ್ರಾಕೃತಿಕ ಪರಿಸರ ಅವಲಂಬಿಸಿರುತ್ತದೆ. ಅಂಥದೊಂದು ಪರಿಸರವೇ ನಾಶವಾದಾಗ ಸರ್ಕಾರದ ಕಾಸು ಕೆಲಸಕ್ಕೆ ಬಾರದು.

ಇಷ್ಟೆಲ್ಲ ಮನೆಮುರುಕುತನ ಆದರೂ ಅಡ್ಡಿಲ್ಲ, ಚತುಷ್ಪಥ ರಸ್ತೆ ನಿರ್ಮಾಣ ಮಾಡಲೇಬೇಕೆಂಬ ಮಳ್ಳಾಟಕ್ಕೆ ಬಿದ್ದಿರುವ ಎನ್‌ಎಚ್‌ಎಗೆ ಕೇಂದ್ರ ಪರಿಸರ ಮಂತ್ರಾಲಯದ ನಿರಾಕ್ಷೇಪಣಾ ಪತ್ರವಾದರೂ ಇದೆಯಾ ಎಂದರೆ, ಅದೂ

ಪುನರ್ವಸತಿ ಸಾಧ್ಯವಾ?

ಉತ್ತರ ಕನ್ನಡವೆಂದರೆ ಸರ್ಕಾರಿ ಯೋಜನೆ-ಸ್ಥಾವರಗಳ ಪ್ರಯೋಗಶಾಲೆ. ಹಲವು ಜಲ ವಿದ್ಯುತ್ ಯೋಜನಾ ಡ್ಯಾಮ್‌ಗಳು, ಅಣು ಸ್ಥಾವರ, ಸೀಬರ್ಡ್ ನೌಕಾನೆಲೆ, ಬಂದರು, ದಾಂಡೇಲಿ, ಅಣಸಿ ಹುಲಿಧಾಮ, ಕೊಂಕಣಿ ರೈಲು ಮಾರ್ಗ- ಹೀಗೆ ಸಾಲುಸಾಲಾಗಿ ಬಂದ ಹುಸಿ ಅಭಿವೃದ್ಧಿ ಯೋಜನೆಗಳು ಜಿಲ್ಲೆಯ ಜನರ ಜೀವನಾಧಾರವಾದ 70% ಭೂಮಿ ಕಬಳಿಸಿ ನಿರ್ಗತಿಕರಾಗಿಸಿದೆ. ಕೈಗಾ ಅಣುಸ್ಥಾವರ 200 ಎಕರೆ ನುಂಗಿದರೆ, ಸೀಬರ್ಡ್ 8 ಸಾವಿರ ಎಕರೆ ಸ್ವಾಹಾ ಮಾಡಿದೆ. ಸುಪಾ ಜಲ ವಿದ್ಯುತ್ ಪ್ರಾಜೆಕ್ಟ್ 5 ಸಾವಿರ ಎಕರೆ, ಕೊಂಕಣ ರೈಲು ಒಂದು ಸಾವಿರ ಎಕರೆ ಕಬಳಿಸಿದೆ. ಈ ಯೋಜನಾ ನಿರಾಶ್ರಿತರ ಕಣ್ಣಲ್ಲಿ ನೀರು ಬರದಂತೆ ಪುನರ್ವಸತಿ-ಪರಿಹಾರ ನೀಡುವುದಾಗಿ ಅಂದಂದು ಸರ್ಕಾರ ನಡೆಸಿದ ಸುಳ್ಳುಗಾರರು ಭರವಸೆ ನೀಡಿದ್ದರು. ಆದರೆ ಒಂದೇ ಒಂದು ಯೋಜನೆಯ ನಿರಾಶ್ರಿತರಿಗೂ ಸಮರ್ಪಕ ಪುನರ್ವಸತಿ ನೀಡಲಾಗಿಲ್ಲ. ಹಲವು ಯೋಜನೆಗಳ ಬಾಧಿತರಿಗೆ ಈವರೆಗೆ ಪರಿಹಾರವೇ ಕೊಟ್ಟಿಲ್ಲ. ನೌಕಾನೆಲೆ ನಿರಾಶ್ರಿತರು, ಕೊಡಸಳ್ಳಿ ಜಲವಿದ್ಯುತ್ ನಿರಾಶ್ರಿತರು ಇಂದಿಗೂ ಪರಿಹಾರಕ್ಕಾಗಿ ಹೋರಾಡುತ್ತಿದ್ದಾರೆ. ನೌಕಾನೆಲೆ ಮತ್ತು ಸುಪಾ ಯೋಜನೆ ನಿರಾಶ್ರಿತರಿಗೆ ಪುನರ್ವಸತಿ ಏರ್ಪಡಿಸಿದ್ದು ಬರಡು ಪ್ರದೇಶದಲ್ಲಿ, ಈ ನರಕದಲ್ಲಿ ಬೆಳೆ ತೆಗೆಯಲಾಗದೆ, ಬೆಸ್ತರು ಕುಲ ಕಸಬು ನಡೆಸಲಾಗದೆ, ಜೀವನಾಧಾರ ಕುಲಕಸಬು ರೂಪಿಸಿಕೊಳ್ಳಲಾಗದೆ ಜೀವಂತ ಶವದಂತಾಗಿ ಹೋಗಿದ್ದಾರೆ.

ಸುಪಾ ಯೋಜನೆಯ ನಿರಾಶ್ರಿತರನ್ನು ರಾಮನಗರವೆಂಬ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಿದಾಗ ಆದ ಅನಾಹುತ ಘೋರವಾದುದು. ಅಲ್ಲಿ ಹಲವು ನಿರಾಶ್ರಿತರು ಹೊಸ ಬದುಕು ಕಟ್ಟಿಕೊಳ್ಳಲಾಗದೆ ಭಿಕ್ಷಾಟನೆಗೆ, ವೇಶ್ಯಾ ದಂಧೆಗೆ ಇಳಿದ ಬರ್ಬರ ಉದಾಹರಣೆಗಳೂ ಇದೆ. ಈ ನೊಂದವರು ಇವತ್ತಿಗೂ ಪರ್ಯಾವರ್ಣ ಪಂಡಿತರಿಗೆ, ಬೀದಿ ಪಾಲಾಗಿಸಿದ ಅಧಿಕಾರಸ್ಥರಿಗೆ ಶಾಪ ಹಾಕುತ್ತಲೇ ಇದ್ದಾರೆ. ಪುನರ್ವಸತಿ ಕೇಂದ್ರಗಳಲ್ಲಿ ಬದುಕು ಕಟ್ಟಿಕೊಳ್ಳುವುದು ಅಷ್ಟು ಸುಲಭವಲ್ಲ. ಕಮ್ಮಾರ-ಕ್ಷೌರಿಕ-ದರ್ಜಿ-ಹಾಲು ಮಾರುವವ, ಗೂಡಂಗಡಿ, ತಳ್ಳು ಅಂಗಡಿ... ಮುಂತಾದವರ ಭವಿಷ್ಯ ಬರಡಾದಂತೆಯೇ!

ಈಗ ಚತುಷ್ಪಥ ರಸ್ತೆಗೆ ಬಲಿಯಾಗುವವರಿಗಂತೂ ಪುನರ್ವಸತಿಯೂ ಸಾಧ್ಯವಿಲ್ಲ! ಸರ್ಕಾರದ ಬಳಿ ಜಾಗವೂ ಇಲ್ಲ, ಪುನರ್ವಸತಿ ಕೇಂದ್ರ ಸ್ಥಾಪಿಸುವ ಇಚ್ಛಾಶಕ್ತಿಯೂ ಸರ್ಕಾರಿ ಯಂತ್ರಕ್ಕಿಲ್ಲ. ಒಂದಿಷ್ಟು ಹಣ ಕೊಟ್ಟು ಸರ್ಕಾರಿ ಮಂದಿ ಕೈತೊಳೆದುಕೊಂಡರೆ ಬದುಕಲು ಜನರಾದರೂ ಎಲ್ಲಿ ಹೋಗಬೇಕು? ಪೂರ್ವದಲ್ಲಿ ಪಶ್ಚಿಮ ಘಟ್ಟಗಳ ಸಾಲು; ಅರಣ್ಯದಲ್ಲಿ ಕಾಲಿಟ್ಟರೆ ಸುಪ್ರೀಂ ಕೋರ್ಟಿನ ಹಸಿರು ಪೀಠದ ಭಯ; ಪಶ್ಚಿಮದಲ್ಲಿ ಅರಬ್ಬೀ ಸಮುದ್ರ; ಕರಾವಳಿ ನಿರ್ಬಂಧಿತ ವಲಯ (ಸಿಆರ್‌ಝುಡ್)ದ ಹೆದರಿಕೆ. ಅತಂತ್ರರಾಗುವವರಿಗೆ ಆಶ್ರಯ ಎಲ್ಲಿದೆ? ರಿಯಲ್ ಎಸ್ಟೇಟ್ ದೋಖಾ ದಂಧೆಯಿಂದ ಸೈಟ್ ಬೆಲೆ ಕೈಗೆಟುಕದಂತಾಗಿದೆ. ಹೀಗಿರುವಾಗ ಸರ್ಕಾರ ಕೊಡುವ ಪುಡಿಕಾಸಿನ ಪರಿಹಾರ ನಿರಾಶ್ರಿತರ ಭವಿಷ್ಯ ಕಟ್ಟಲು ಸಾಧ್ಯವಾ?

ಇತ್ತ ಹೊಸದಾಗಿ ಮಂತ್ರಿಯಾಗಿರುವ ಹಳೆ ಅನುಭವಿ ಆರ್.ವಿ. ದೇಶಪಾಂಡೆ ಗಮನ ಹರಿಸಬೇಕಿದೆ. ಜನ ಇಟ್ಟಿರುವ ನಂಬಿಕೆ ದೇಶಪಾಂಡೆ ಉಳಿಸಿಕೊಳ್ಳುವರಾ? ಪಾತಕ ಯೋಜನೆಗಳಿಂದ ಉತ್ತರ ಕನ್ನಡಿಗರನ್ನು ಬಚಾಯಿಸುವರಾ?

ಪರಿಸರ ಇಲಾಖೆಗೆ ಅದು ಅಲ್ಲಿಂದಿಲ್ಲಿಗೂ ಹುಸಿ-ಮಳ್ಳನ್ನೇ ಹೇಳುತ್ತ ಬಂದಿದೆ. ಕರ್ನಾಟಕ ಪರಿಸರ ... ಮಂಡಳಿ ಮತ್ತು ಕೇಂದ್ರ ಪರಿಸರ ಮತ್ತು ... ವೈವಿಧ್ಯ ಮಂಡಳಿ ಹೆದ್ದಾರಿ ಅಗಲೀಕರಣಕ್ಕೆ ...ಮೀ ಕೊಟ್ಟಿಲ್ಲ. ಪರಿಸರ ಇಲಾಖೆಯ ಒಪ್ಪಿಗೆ ...ಲು ಅನಿವಾರ್ಯವಾದ ಪಬ್ಲಿಕ್ ಹಿಯರಿಂಗ್ ...ಜನಿಕ ಅಹವಾಲು ಸ್ವೀಕಾರ) ಎನ್‌ಎಚ್‌ಎಐ ...ಾದಲ್ಲಿ ನಡೆಸಿತ್ತು. ಆಗ ಅಲ್ಲಿ ಸೇರಿದ್ದ ಸಾವಿರಾರು ...ತರಾಗಲಿರುವ ಮಂದಿ ಈ ಅಕ್ರಮ ಸಭೆ ...ಡುವಂತೆ ಆಗ್ರಹಿಸಿದ್ದರು.

...ಮೊಂದು ಅವೈಜ್ಞಾನಿಕ ರಸ್ತೆ ಅಗಲೀಕರಣ. ಇದರ ...-ರೇಷೆ, ಸಾಧಕ-ಬಾಧಕ ಘನತೆಯು ಮುಂದೆ ...ಚ್‌ಎ ಆಗಲಿ, ಜಿಲ್ಲಾಡಳಿತವಾಗಲಿ ಇಟ್ಟಿಲ್ಲ. ...ವಾಗ ಅಹವಾಲು ಸ್ವೀಕಾರವೇ ಅರ್ಥಹೀನ ಎಂದು ...ಕ್ರೋಶದಿಂದ ಹೇಳಿದ್ದರು. ಪರಿಸರ ಇಲಾಖೆ ಎನ್‌ಓಸಿ ...ಾರದೆಂದು ಬೊಬ್ಬೆ ಹಾಕಿದ್ದರು. ಜನಜೀವನ ನಾಶ ...ಷ, ಕಾಂದ್ಲಾವನ, ಮೂಕಾಂಬಿಕಾ ಅಭಯಾರಣ್ಯ ... ಗಡಿಯ ಹುಲಿ ಧಾಮ ನುಂಗುವ, ಪರಿಸರಕ್ಕೆ ... ಹಾನಿ ಮಾಡುವ 'ಅಗಲೀಕರಣ' ಬೇಡವೇ ...ಬುದು ಜನಾಭಿಪ್ರಾಯವಾಗಿತ್ತು.

...ಬ್ಲಿಕ್ ಹಿಯರಿಂಗ್ ಸಭೆ ಮುಂದೂಡಲು ಮಾಡಿದ ...ಗೆ ಅಧಿಕಾರಿಗಳು ಕೇರ್ ಮಾಡದಿದ್ದಾಗ ಕೆರಳಿದ ... ಕಟುಶಬ್ಧಗಳಲ್ಲಿ ಅಗಲೀಕರಣಕ್ಕೆ ವಿರೋಧ ...ಸಿದ್ದರು. ಹೆದ್ದಾರಿ ಅಕ್ಕಪಕ್ಕದ ನಿವಾಸಿಗಳಂತೂ ...ಅಧಿಕೃತವಾಗೇ ಸಲ್ಲಿಸಿದ್ದರು. ಎನ್‌ಎಚ್‌ಎ ಮತ್ತಿತರ ...ಯ ಅಧಿಕಾರಿಗಳ ಬೆವರಿಳಿಸಿದ್ದರು. ಸಾರ್ವಜನಿಕರ ...ಗೆ ಸರಿಯಾಗಿ ಉತ್ತರಿಸಲಾಗದೆ ತಡವರಿಸಿದ ...ಡಿ-ಹೆಡ್ಡ ಅಧಿಕಾರಿಗಳು ಅಭಿವೃದ್ಧಿ-ದೇಶೋದ್ಧಾರದ ...ಬೊಗಳೆ ಬಿಟ್ಟು ಪಲಾಯನ ಮಾಡಿದ್ದರು. ಜನರ ...ಕೆಯ ವಿಚಾರಣೆ ಆರಂಭವೇ ಎನ್‌ಎಚ್‌ಎ ಅಥವಾ ... ಇಲಾಖೆ ಮಾಡಿಲ್ಲ. ಆದರೂ ಎನ್‌ಎಚ್‌ಎ ...ಧೀನ ಕಾರ್ಯಾಚರಣೆ ಶುರುವಿಟ್ಟುಕೊಂಡಿದೆ. ...ಚ್‌ಎದ ಸರ್ವಾಧಿಕಾರಿ ನೀತಿ-ನಡಾವಳಿ ನೋಡಿದರೆ ...ಕ್ಷೇಪಣೆ ಸ್ವೀಕಾರ ಬೋಗಸ್ ಎಂದೆನಿಸುತ್ತದೆ.

...ನ್‌ಎಚ್‌ಎ ಹೊರಡಿಸಿರುವ ಭೂಸ್ವಾಧೀನ ...ಯಲ್ಲಿ ಇಲ್ಲದ ಗ್ರಾಮಗಳ ಜಾಗದಲ್ಲೂ ಈಗ ...ಡೆಸಲಾಗುತ್ತಿದೆ. ಅಂದರೆ ಎನ್‌ಎಚ್‌ಎಐ ಯಾವ ... ಕಟ್ಟಳೆಯನ್ನೂ ಕೇರ್ ಮಾಡದೆ ಜನಸಾಮಾನ್ಯರನ್ನು ...ಸುತ್ತಿದೆ. ಕೇಂದ್ರ ಸರ್ಕಾರದ ಕಾನೂನೇ ಹೈವೇ ...ರಣಕ್ಕೆ ತೊಡಕಾಗಿದೆ. ಇದೂ ಎನ್‌ಎಚ್‌ಎ ಲೆಕ್ಕಕ್ಕೇ ...ಿದೆ. ಸಂರಕ್ಷಿತ ಸ್ಮಾರಕದಿಂದ 100 ಮೀಟರ್ ...ಟ್ಟಡ-ರಸ್ತೆ-ಚರಂಡಿ ಅಭಿವೃದ್ಧಿಯೂ ನಿಷಿದ್ಧ. 200 ...ದ 300 ಮೀ ಒಳಗೆ ಕಟ್ಟಡ ಕಟ್ಟಲು ಪರವಾನಗಿ ...ಕಾರವಾರದಿಂದ ಭಟ್ಕಳದವರೆಗೆ ಹೆದ್ದಾರಿ ಅಂಚಿಗೇ ... ಪುರಾತನ ಸ್ಮಾರಕಗಳಿವೆ. ಅಲ್ಲದೆ ವನ್ಯಜೀವಿ ... ಕೇಂದ್ರಗಳು ಮತ್ತು ಸಮುದ್ರ ಬೇಲೆಯಲ್ಲಿರುವ ...ತತಿಗೂ ಈ ಅಗಲೀಕರಣ ಕಂಟಕಕಾರಿಯಾಗಿದೆ. ...ಯ ಹಸಿರು ಕವಚವಂತೂ ಕಳಚಿ ಬೀಳಲಿದೆ. ... ಎನ್‌ಎಚ್‌ಎದ ಹುಂಬರು ಮನಸೋ ಇಚ್ಛೆ ... ನೃತ್ಯ ನಡೆಸಿದ್ದಾರೆ!!

ಹೋರಾಟದ ಹಾದಿ

...ಶಕ್ಕಾಗಿ-ನಾಡಿಗಾಗಿ ತ್ಯಾಗ ಮಾಡಿ ಮಾಡಿ ...ಗಿರುವ ಉತ್ತರ ಕನ್ನಡ ಜನರೀಗ ಎಚ್ಚೆತ್ತಿದ್ದಾರೆ. ...ತೆಯ ಭಾಷಣ ಬಿಗಿದು ತಮ್ಮ ಕೈಗೆ ಚಿಪ್ಪು ...ಆಡಳಿತಶಾಹಿಯ ವಿರುದ್ಧ ಸಿಡಿದೆದ್ದಿದ್ದಾರೆ. ಜೀವ ...ೂ ಸರಿಯೇ ಹೈವೇ ಅಗಲೀಕರಣದ ಅವಾಂತರಕ್ಕೆ ...ೊಡದಿರುವ ಪಣ ತೊಟ್ಟಿದ್ದಾರೆ. ಜಿಲ್ಲಾಧಿಕಾರಿ ...ರಡು-ಮೂರು ಸಭೆ ಅಗಲೀಕರಣ ವಿರುದ್ಧ ಜನ ...ಕಿಚ್ಚಿನ ಧ್ವನಿಗೆ ವಿಫಲವಾಗಿವೆ. ಜನರನ್ನು ...ರಾಗಿಸಿ ಅನುಷ್ಠಾನಗೊಳಿಸುವ ಅಗಲೀಕರಣ ... ಹಿಂದೆ ಸರ್ಕಾರವನ್ನೇ ಕುಣಿಸುವ ಬಂಡವಾಳಶಾಹಿ ...ದೆಯೆಂಬ ಸತ್ಯ ಜನರಿಗೆ ಅರಿವಾಗಿದೆ.

...ಅವೈಜ್ಞಾನಿಕ-ಜೀವ ವಿರೋಧಿ ಚತುಷ್ಪಥ ಯೋಜನೆ ...ಉತ್ತರ ಕನ್ನಡಿಗರು ಬೀದಿ ಹೋರಾಟ-ಕಾನೂನು ... ಒಟ್ಟೊಟ್ಟಿಗೇ ನಡೆಸಿದ್ದಾರೆ. ಎನ್‌ಎಚ್‌ಎದ ...ಗೆ ಹೋರಾಟ-ಚಳವಳಿಯ ಮೂಲಕ ಉತ್ತರ ... ಸಜ್ಜಾಗಿದ್ದಾರೆ. "ಅವೈಜ್ಞಾನಿಕ ಹೆದ್ದಾರಿ ಅಗಲೀಕರಣ ...ಜೂನ್ ಮೊದಲ ವಾರದಲ್ಲಿ ಇಡೀ ಕರಾವಳಿಯಲ್ಲಿ ...ಆಚರಿಸಲು ನಿರ್ಧರಿಸಿದೆ. ಜನರ ಭಾವನೆಯನ್ನು ...ಳಿಸಿ ಅಗಲೀಕರಣ ಕಾಮಗಾರಿಗೆ ಮುಂದಾದರೆ ...ರ ಜನ ಜೈಲ್ ಭರೋ ಹೋರಾಟ ನಡೆಸಲು ... ತೀರ್ಮಾನ ಮಾಡಲಾಗಿದೆ.

...ದರೂ ಸತ್ತಂತಿರುವ ಸಂಸದ ಅನಂತಕುಮಾರ್ ...ರಾಷೆ ಆಸಾಮಿ ಎಚ್ಚೆತ್ತುಕೊಳ್ಳುವನಾ? ಕೇಂದ್ರ ..., ಹೆದ್ದಾರಿ ಅಗಲೀಕರಣದ ಅನಾಹುತ ...ನಾ? ಅವೈಜ್ಞಾನಿಕ ಚತುಷ್ಪಥ ನಿರ್ಮಾಣದಿಂದ ...ಾಗುವವರ ಸಂಕಷ್ಟಕ್ಕೆ ಸ್ಪಂದಿಸಿ ಎಂಪಿಗಿರಿ ಕರ್ತವ್ಯ ...ಸುವನಾ? ಎನ್‌ಎಚ್‌ಎಐದ ಅಧಿಕ ಪ್ರಸಂಗಿಗಳಿಗೆ ...ಸುವನಾ?

● ಶುದ್ಧೋಧನ

ಕಾಗೋಡು ಸಂದರ್ಶನ: ವ್ಯಕ್ತಿಗಿಂತ ವರ್ಗ ಮುಖ್ಯ

ದಾಖಲೆಯ ಮತಗಳ ಅಂತರದಿಂದ ಚುನಾವಣೆಯಲ್ಲಿ ಗೆದ್ದಿರುವ ಕರ್ನಾಟಕದ ಹಿರಿಯ ಮತ್ತು ಇಚ್ಛಾಶಕ್ತಿಯುಳ್ಳ ರಾಜಕಾರಣಿ ಕಾಗೋಡು ತಿಮ್ಮಪ್ಪನವರು ತಮ್ಮ ರಾಜಕೀಯ ಜೀವನದ ಇನ್ನೊಂದು ಮಗ್ಗಲಿಗೆ ಹೊರಳಿದ್ದಾರೆ. ಅದು ಅತ್ಯಂತ ಗೌರವಯುತ ಹುದ್ದೆಯಾಗಿರುವ ವಿಧಾನಸಭೆಯ ಸ್ಪೀಕರ್ ಹುದ್ದೆ. ಸಾಮಾನ್ಯವಾಗಿ ವಿಧಾನಸಭೆಯ ಸ್ಪೀಕರ್ ಹುದ್ದೆ ಎಂದರೆ ಆಡಳಿತ ಪಕ್ಷದ ರಬ್ಬರ್ ಸ್ಟ್ಯಾಂಪ್ ಎನ್ನುವ ಭಾವನೆ ಜನರಲ್ಲಿ ಇದೆ. ಆದರೆ ಸಂವಿಧಾನದಲ್ಲಿ ಇದಕ್ಕೆ ಇರುವ ಅಧಿಕಾರದ ವ್ಯಾಪ್ತಿ ಮತ್ತು ಗೌರವ ಬಹಳ ಎತ್ತರದ್ದು. ಇದನ್ನು ಸರಿಯಾಗಿ ಅರ್ಥಮಾಡಿಕೊಂಡವರು ಮಾತ್ರ ಈ ಸ್ಥಾನದಲ್ಲಿದ್ದು ಏನು ಮಾಡಬಹುದು ಎನ್ನುವುದನ್ನು ತೋರಿಸಬಹುದು. ಇಡೀ ಸದನ ಎನ್ನುವುದು ಎಷ್ಟು ಪವಿತ್ರವಾದದ್ದು ಮತ್ತು ಈ ಸದನದಲ್ಲಿ ನಡೆಯಬೇಕಾದ ಚರ್ಚೆಗಳೇನು ಎನ್ನುವುದನ್ನು ರೆಸಾರ್ಟ್ ಸಂಸ್ಕೃತಿಯ ಶಾಸಕರಿಗೆ ಕಿವಿ ಹಿಡಿದು ಬಗ್ಗಿಸಬಹುದು. ಇದನ್ನು ಈ ಹಿಂದೆ ಕರ್ನಾಟಕದ ವಿಧಾನಸಭೆಯಲ್ಲಿ ರಮೇಶ್ ಕುಮಾರ್, ಡಿ.ಬಿ.ಚಂದ್ರೇಗೌಡ ಮುಂತಾದವರು ಮಾಡಿ ತೋರಿಸಿದ್ದಾರೆ. ಕಳೆದ ಎರಡು ಅವಧಿಯಲ್ಲಿ ಕರ್ನಾಟಕದ ವಿಧಾನಸಭೆಯ ಸ್ಪೀಕರ್ ಎಂದರೆ ಜನತೆ ಅಪನಂಬಿಕೆ ಪಡುವಂತ ಸ್ಥಿತಿ ನಿರ್ಮಾಣವಾಗಿತ್ತು. ಇಂತಹ ಸಂದರ್ಭದಲ್ಲಿ ಕಾಗೋಡು ತಿಮ್ಮಪ್ಪನವರು ಸ್ಪೀಕರ್ ಹುದ್ದೆಗೆ ನಿಯೋಜಿತರಾಗಿದ್ದಾರೆ. ಈ ಹೊತ್ತಿನಲ್ಲಿ ಪತ್ರಿಕೆ ಇವರೊಂದಿಗೆ ಒಂದಿಷ್ಟು ಮಾತನಾಡಿದೆ. ಅದರ ಪೂರ್ಣ ವಿವರ ಇಲ್ಲಿದೆ.

ಪತ್ರಿಕೆ: ನಮಸ್ಕಾರ ಸಾರ್, ನೀವು ಮೂಲತಃ ಒಬ್ಬ ಆಕ್ಟಿವಿಸ್ಟ್ ರಾಜಕಾರಣದಿಂದ ಬಂದವರು, ಈ ಸ್ಪೀಕರ್ ಹುದ್ದೆ ನಿಮ್ಮ ಮನಸ್ಥಿತಿಗೆ ಸರಿ ಹೊಂದುತ್ತದಯೇ?

ಹೌದು, ನಾನು ಹೋರಾಟದ ಮೂಲಕ ರಾಜಕಾರಣ ಪ್ರವೇಶ ಮಾಡಿದವನು. ಈ ರೀತಿ ಹೋರಾಟ ಮಾಡಿಕೊಂಡು ಬಂದಿರುವುದಕ್ಕೆ ಪಕ್ಷ ಇಂತಹ ಜವಾಬ್ದಾರಿಯುತ ಹುದ್ದೆಯನ್ನು ನೀಡಿದೆ. ಹೀಗಾಗಿ ಇದು ಹೆಚ್ಚಿನ ಜವಾಬ್ದಾರಿ ಮತ್ತು ಸಂವಿಧಾನಾತ್ಮಕವಾಗಿ ಕರ್ತವ್ಯವನ್ನು ನಿರ್ವಹಿಸಬೇಕಾದ ಮನಸ್ಥಿತಿಯನ್ನು ಬೆಳೆಸಿಕೊಳ್ಳಬೇಕಿದೆ. ಇದಕ್ಕೆ ಇಚ್ಛಾಶಕ್ತಿ ಮುಖ್ಯ. ಜವಾಬ್ದಾರಿಯನ್ನು ನಿರ್ವಹಿಸಲು ಒಪ್ಪಿಕೊಂಡ ಮೇಲೆ ಬದ್ಧತೆಯನ್ನು ಪ್ರದರ್ಶಿಸಬೇಕು. ಜವಾಬ್ದಾರಿಯಿಂದ ನುಣುಚಿಕೊಳ್ಳುವ ಮನಸ್ಥಿತಿ ನನ್ನದಲ್ಲ, ಎಲ್ಲಾ ಸದಸ್ಯರೊಂದಿಗೆ ಸಮಾನ ನಂಬಿಕೆ ಮತ್ತು ವಿಶ್ವಾಸವನ್ನು ಬೆಳೆಸಿಕೊಳ್ಳೋದು ಮತ್ತು ಸದಸ್ಯರ ಮೆಚ್ಚುಗೆಯನ್ನು ಗಳಿಸೋ ರೀತಿಯಲ್ಲಿ ಕೆಲಸ ನಿರ್ವಹಿಸುತ್ತೇನೆ ಎಂಬ ಪೂರ್ಣ ನಂಬಿಕೆ ಇದೆ.

ಪ್ರಶ್ನೆ: ಸ್ಪೀಕರ್ ಹುದ್ದೆ ಅನ್ನೋದು ಸಂವಿಧಾನಿಕ ಕರ್ತವ್ಯಗಳನ್ನು ನಿರ್ವಹಿಸುವಂತದ್ದು. ಆದರೆ ಕಳೆದ ಎರಡು ಅವಧಿಯಲ್ಲಿ ಸ್ಪೀಕರ್ ಆದವರು ಆಡಳಿತ ಪಕ್ಷದ ಏಜೆಂಟರಂತೆ ವರ್ತಿಸಿದ್ದಾರೆ. ನಿಮ್ಮ ಅಭಿಪ್ರಾಯವೇನು?

ಹಿಂದೆ ಏನು ನಡೆದಿದೆ ಎಂದು ನಾನು ಗಮನಿಸೋದು ಇಲ್ಲ ಮತ್ತು ಗಣನೆಗೆ ತೆಗೆದುಕೊಳ್ಳುವುದೂ ಇಲ್ಲ, ಅವೆಲ್ಲ ಸದನ ಮತ್ತು ಸಾರ್ವಜನಿಕರಿಗೆ ಬಿಟ್ಟ ವಿಚಾರ. ನಿಜ, ಈ ಹುದ್ದೆಯನ್ನು ಏರುವಾಗ ಪಕ್ಷದ ಬೆಂಬಲ ಅಗತ್ಯ. ಹಾಗಂತ ನಾನು ಈ ಸ್ಥಾನದಲ್ಲಿದ್ದಾಗ ಪಕ್ಷಕ್ಕೆ ವಿಧೇಯನಲ್ಲ, ನಾನು ಸಂವಿಧಾನಕ್ಕೆ ವಿಧೇಯ. ಈ ಸ್ಥಾನದಲ್ಲಿ ಕುಳಿತು ಅರ್ಥಪೂರ್ಣವಾಗಿ ಕಾರ್ಯ ನಿರ್ವಹಿಸಿ ಮಾದರಿಯಾಗಬೇಕು ಎಂಬ ಮನಸ್ಥಿತಿಯಲ್ಲಿ ಇದ್ದೇನೆ.

ಪ್ರಶ್ನೆ: ಇತ್ತೀಚೆಗೆ ಸದನ ಸರಿಯಾಗಿ ನಡೆಯೋದೆ ಇಲ್ಲ. ಬರೀ ಹೊಡೆದಾಟ, ಗದ್ದಲ, ಧರಣಿಯಲ್ಲೆ ಮುಗಿದುಹೋಗುತ್ತೆ. ಇದಕ್ಕೆ ಪರಿಹಾರ ಏನು?

ನೋಡಿ, ಪ್ರತಿಯೊಬ್ಬ ಮತದಾರನಿಗೂ ಮತದಾನದ ಹಕ್ಕು, ಇರೋದರಿಂದ ಸ್ಪರ್ಧೆ ಮಾಡುವ ಹಕ್ಕು ಪ್ರತಿಯೊಬ್ಬನಿಗೂ ಇರುತ್ತದೆ. ಇಲ್ಲಿ ಮತದಾರನೇ ಪ್ರಭು. ಹೀಗಾಗಿ ಮತದಾರರ ಆಲೋಚನೆಯಂತೆ ಪ್ರತಿನಿಧಿಗಳು ಆಯ್ಕೆಯಾಗುತ್ತಾರೆ. ಆದ್ದರಿಂದ ಸದನದೊಳಗೆ ಎಲ್ಲರೂ ಪ್ರಬುದ್ಧರು ಬರಬೇಕೆಂದು ನಿರೀಕ್ಷಿಸಲು ಆಗುವುದಿಲ್ಲ. ಆದರೆ ಇವರಿಗೆ ಅಗತ್ಯ ಮಾರ್ಗದರ್ಶನ ನೀಡಬೇಕು. ಆಗ ಅನುಭವವಿಲ್ಲದವರು ಸರಿಯಾಗುತ್ತಾರೆ.

ಪ್ರಶ್ನೆ: ಕರ್ನಾಟಕದ ವಿಧಾನಸಭೆ ಕಳೆದ ಬಾರಿ ಬಿಹಾರ, ಉತ್ತರ ಪ್ರದೇಶವನ್ನು ನೆನಪಿಸುವ ಹಾಗಿತ್ತಲ್ಲವೇ ಸಾರ್?


ಸದಸ್ಯರು ಇಲ್ಲಿಗೆ ಬರೋದು ತಮ್ಮ ಅಭಿಪ್ರಾಯ ಹೇಳಲು. ನಾವು ಸದನದಲ್ಲಿ ಅವರ ಅಭಿಪ್ರಾಯ ಹೇಳುವ ವಾತಾವರಣವನ್ನು ನಿರ್ಮಿಸಬೇಕು. ಇದರಿಂದ ಸದಸ್ಯರಲ್ಲಿ ಸಿಟ್ಟು, ಉದ್ವೇಗ ಕಡಿಮೆಯಾಗುತ್ತೆ, ಜನರ ಸಮಸ್ಯೆಗಳ ಬಗ್ಗೆ ಸದನದ ಗಮನ ಸೆಳೆದೆ ಎನ್ನುವ ತೃಪ್ತಿ ಅವರಿಗೆ ಆಗುತ್ತೆ, ಆಗ ಜನಪರವಾದ ಕಾನೂನು ರೂಪಿಸಲು ಸಾಧ್ಯ.

ಪ್ರಶ್ನೆ: ಶಾಸಕರುಗಳಿಗೆ ಸದನಕ್ಕಿಂತ ಟಿ.ವಿ.ಯಲ್ಲಿ ಕಾಣಿಸಿಕೊಳ್ಳುವುದು ಮುಖ್ಯವಾಗಿದೆ ಅನ್ನಿಸುವುದಿಲ್ಲವೇ?

ಸದನದಲ್ಲಿ ಅವಕಾಶ ಸಿಗದೇ ಇದ್ದಾಗ ಇವೆಲ್ಲ ಕಾಮನ್.

ಪ್ರಶ್ನೆ: ಮುಖ್ಯವಾಗಿ ಕರ್ನಾಟಕದ ಮಂಡ್ಯ ಮೈಸೂರು, ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ ಮುಂತಾದ ಜಿಲ್ಲೆಗಳ ಜನರು ಇಂಡೀಕರಣ, ಅರಣ್ಯ ಭೂಮಿ, ಕಂದಾಯ ಭೂಮಿಯ ಬಗ್ಗೆ ಮಾಡಿರುವ ಹೊಸ ಕಾನೂನಿನಿಂದ ಬಹಳ ಸಂಕಷ್ಟದಲ್ಲಿದ್ದಾರೆ. ಇದನ್ನು ಹೇಗೆ ನಿಭಾಯಿಸುತ್ತೀರಿ?

ಅದಕ್ಕೆ ಸದನ ಒಳಕ್ಕೆ ಮತ್ತು ಹೊರಕ್ಕೆ ಕೆಲಸ ಆಗಬೇಕಿದೆ. ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಹೇಗೆ ಕಾರ್ಯ ನಿರ್ವಹಿಸಬೇಕೋ ಹಾಗೆ ನಿರ್ವಹಿಸುತ್ತೇನೆ. ನನಗೆ ಗೊತ್ತು ಅದನ್ನು ಹೇಗೆ ಮಾಡಬೇಕೆಂದು. ಮಾತನಾಡುವುದಿಲ್ಲ,



ಮಾಡಿ ತೋರಿಸುತ್ತೇನೆ.

ಪ್ರಶ್ನೆ: ಸಿದ್ದರಾಮಯ್ಯನವರು ಮುಖ್ಯಮಂತ್ರಿ ಸ್ಥಾನವನ್ನು ವಹಿಸಿಕೊಂಡ ಒಂದು ಗಂಟೆಯಲ್ಲಿ 8 ಅಂಶಗಳ ಕಾರ್ಯಕ್ರಮವನ್ನು ಪ್ರಕಟಿಸಿದರು. ಇದು ಒಂದು ಏಕ ವ್ಯಕ್ತಿ ಪ್ರತಿಷ್ಠೆ ಅನ್ನಿಸುವುದಿಲ್ಲವೇ?

ಇಲ್ಲ, ಮುಖ್ಯಮಂತ್ರಿ ಆಗಿ ಅಧಿಕಾರ ಸ್ವೀಕರಿಸಿದ ತಕ್ಷಣ ಅದು ಸರ್ಕಾರವೇ ಹೌದು. ಹೀಗಾಗಿ ಪಕ್ಷ ಚುನಾವಣೆ ಪೂರ್ವದಲ್ಲಿ ನೀಡಿದ ಭರವಸೆಯಂತೆ ಮುಖ್ಯ ಮಂತ್ರಿಗಳು ಯೋಜನೆಗಳನ್ನು ಜಾರಿಗೆ ಮಾಡಿ ತಮ್ಮ ಬದ್ಧತೆಯನ್ನು ಸಾಬೀತುಮಾಡಿದ್ದಾರೆ. ಇದರಿಂದ ಜನರಿಗೆ ಅನುಕೂಲವಾಯಿತು. ಪಕ್ಷಕ್ಕೂ ಹೆಸರು ಬಂತು. ಸರ್ಕಾರ ಮುಂದಿನ ದಿನಗಳಲ್ಲಿ ಹೇಗೆ ನಡೆಯುತ್ತದೆ ಎನ್ನುವುದರ ಮುನ್ಸೂಚನೆ ಇದು.

ಪ್ರಶ್ನೆ: ಸಿದ್ದರಾಮಯ್ಯನವರು ಆಡಳಿತ ಹೇಗೆ ನಡೆಸಬಹುದು?

ನೋಡಿ ಸಿದ್ದರಾಮಯ್ಯನವರು ಹಿಂದುಳಿದ ಪ್ರಮುಖ ಕೋಮಿಗೆ ಸೇರಿದವರು. ಈ ಕೋಮಿಗೆ ಈ ಹಿಂದೆಯೇ ಅವಕಾಶ ಸಿಗಬೇಕಿತ್ತು, ಈಗ ಸಿಕ್ಕಿದೆ. ಸಿದ್ದರಾಮಯ್ಯ ಈ ಹಿಂದೆ ಹಲವು ಹುದ್ದೆಗಳನ್ನು ನಿರ್ವಹಿಸಿ ಸೈ ಅನ್ನಿಸಿಕೊಂಡವರು ಮತ್ತು ಸಮಾಜದ ವೀಕರ್ ಸೆಕ್ಷನ್ ಬಗ್ಗೆ ಅವರಿಗೆ ಬಹಳ ಕಳಕಳಿ. ಹೀಗಾಗಿ ಅವರು ತಮ್ಮ ಸಮುದಾಯಕ್ಕೆ ಮಾತ್ರ ಸೀಮಿತವಾಗದೆ ಎಲ್ಲಾ ಜಾತಿಯ ಬಡವರ ಪರವಾಗಿ ಕೆಲಸ ಮಾಡುವುದು ಖಚಿತ. ಹೀಗಾಗಿ ಜನಪರವಾದ ಸರ್ಕಾರವನ್ನು ಸಿದ್ದರಾಮಯ್ಯನವರು ಕೊಡುತ್ತಾರೆ ಎಂಬ ನಂಬಿಕೆ ನನಗೆ ಇದೆ.

ಪ್ರಶ್ನೆ: ಕರ್ನಾಟಕದಲ್ಲಿ ದಲಿತನೋರ್ವ ಮುಖ್ಯಮಂತ್ರಿಯಾಗಲೇ ಇಲ್ಲ, ಹಿಂದೆ ಖರ್ಗೆ ಅವರಿಗೆ ಅವಕಾಶ ತಪ್ಪಿತು ಈ ಬಾರಿ ಪರಮೇಶ್ವರ್‌ಗೆ ತಪ್ಪಿತು. ದುರಂತವಲ್ಲವೇ ಸಾರ್?

ಹೌದಪ್ಪ ದುರಂತ ಹೌದು. ನಮ್ಮ ದಲಿತ ನಾಯಕರು ಒಗ್ಗಟ್ಟನ್ನು ಪ್ರದರ್ಶಿಸಿದರೆ ಸಾಧ್ಯವಾಗುತ್ತಿತ್ತು, ಒಬ್ಬರು ಲೆಫ್ಟ್ ಅಂದರೆ ಇನ್ನೊಬ್ಬರು ರೈಟ್ ಅನ್ನುತಾರೆ. ಪರಮೇಶ್ವರ್ ಪಕ್ಷದ ಅಧ್ಯಕ್ಷರಾಗಿದ್ದವರು. ಸೋಲಬಾರದಿತ್ತು, ಇಲ್ಲವೇ ಚುನಾವಣೆಗೆ ನಿಲ್ಲದೆ ಪಾರ್ಟಿ ಕೆಲಸ ಮಾಡಿದರೆ ಇಂದಿನ ಸ್ಥಿತಿ ಬರುತ್ತಿರಲಿಲ್ಲ, ಇನ್ನು ಖರ್ಗೆ ಇಲ್ಲೆ ಇದ್ದು ಕೆಲಸ ಮಾಡಿದ್ದರೆ, ಪಕ್ಷ ಕಟ್ಟಿದ್ದರೆ ಅವಕಾಶ ಇರುತ್ತಿತ್ತು, ಸೋತ ಕೂಡಲೇ ಓಡಿಹೋಗುವುದಲ್ಲ, ಈಗ ನಾನು ಎರಡು ಬಾರಿ ಸೋತೆ, ಓಡಿ ಹೋದ್ನ. ನಿಂತು ಕೆಲಸ ಮಾಡಬೇಕು. ಬೆನ್ನು ತೋರಿಸಿ ಓಡಿ ಹೋಗುವುದಲ್ಲ,

ಪ್ರಶ್ನೆ: ಸಿದ್ದರಾಮಯ್ಯ ಕುರುಬ ಜನಾಂಗಕ್ಕೆ ಸೇರಿದವರು. ಅವರು ಅದಕ್ಕೆ ಸೀಮಿತವಾಗಿಬಿಟ್ಟರೆ?

ನೋಡಿ ಒಬ್ಬ ಜನ ನಾಯಕನಿಗೆ ಯಾವಾಗಲು ವ್ಯಕ್ತಿ ಕೋಮು ಮುಖ್ಯವಾಗಬಾರದು. ವರ್ಗ ಮುಖ್ಯವಾಗಬೇಕು. ಸಹಜವಾಗಿ ಒಂದು ಜಾತಿಯ ಮೂಲಕ ನಾಯಕರಾಗುತ್ತಾರೆ. ಆದರೆ ನಾವು ಅದನ್ನು ಮೀರಿ ಬೆಳೆಯಬೇಕು. ಇಂದು ಸಮುದಾಯಗಳನ್ನು ಛಿದ್ರೀಕರಣಗೊಳಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಷಡ್ಯಂತ್ರ ಹೆಚ್ಚಿದೆ. ಇದನ್ನು ಅರಿತುಕೊಂಡು ಎಲ್ಲಾ ಸಮುದಾಯಗಳನ್ನು ಒಟ್ಟಿಗೆ ತೆಗೆದುಕೊಂಡು ಹೋಗಬೇಕು. ದಲಿತರಿಗೆ ದಲಿತರೇ ನಾಯಕರಾಗಬೇಕು ಎಂದೇನಿಲ್ಲ, ಸಿದ್ದರಾಮಯ್ಯ ಕೂಡ ಈ ಸ್ಥಾನವನ್ನು ತುಂಬಬಲ್ಲರು.

ಪ್ರಶ್ನೆ: ನೀವು ಮಂತ್ರಿಯಾಗಿದ್ದಾಗ ದಲಿತರಿಗಾಗಿ ಹಲವು ಕಾರ್ಯಕ್ರಮ ಕೊಟ್ಟವರು. ಬ್ಯಾಕ್‌ಲಾಗ್‌ನಂತಹ ಹುದ್ದೆ ತುಂಬಿದ್ದು ನೀವು. ನಿಜವಾಗಲೂ ನೀವು ಕೂಡ ದಲಿತರು ಹಿಂದುಳಿದವರ ನಾಯಕರೇ ಅಲ್ಲವೇ?

ಅದೇನೋ ನನಗೆ ಗೊತ್ತಿಲ್ಲ, ಆದರೆ ನಾನು ಎಲ್ಲಾ ರೀತಿಯ ಪ್ರಯೋಗಗಳನ್ನು ಮಾಡಿದ್ದೇನೆ. ಖರ್ಗೆಯವರು ಮಾಡಿದರು. ಆದರೆ ಈ ದಲಿತ ನಾಯಕರು ಯಾರಾದ್ರು ಹೇಳ್ತಾರೇನು? ಆದರೆ ಹಾಗಂತ ಸಮುದಾಯವನ್ನು ಬಿಡಲು ಆಗುವುದಿಲ್ಲ, ಆ ಸಮುದಾಯಕ್ಕೆ ಆಸ್ತಿಯನ್ನು ಹೊಂದುವಂತ ಮನಸ್ಥಿತಿಯಿಲ್ಲ, ಶ್ರಮ ಸಂಸ್ಕೃತಿಯಿಂದ ಬಂದ ಸಮುದಾಯವದು. ಹಾಗಾಗಿ ಈ ಸಮುದಾಯ ಬದಲಾವಣೆಯನ್ನು ಅಷ್ಟು ಸುಲಭವಾಗಿ ಸ್ವೀಕರಿಸುವುದಿಲ್ಲ, ಉದಾಹರಣೆಗೆ ಹೇಳ್ತಿನಿ ಕೇಳಿ, ಬಸವಲಿಂಗಪ್ಪನೋರು ಮಂತ್ರಿಯಾದಾಗ ನಾನು ಒಂದು ಹಳ್ಳಿಯಲ್ಲಿ ಎಲ್ಲಾ ಜಾತಿಯವರಿಗೂ ಸೈಟ್ ಕೊಡುವ ಯೋಜನೆ ಮಾಡಿದೆ. ಆದರೆ ದಲಿತರೆ ಅಲ್ಲಿಗೆ ಬಾರದೆ ಹೋದರು. ಹಾಗಂತ ನಾವು ಕೈಕಟ್ಟಿ ಕೂರೋದು ಅಲ್ಲ, ಅವರ ಏಳಿಗೆಗಾಗಿ ನಿರಂತರವಾಗಿ ಕೆಲಸ ಮಾಡುತ್ತಲೇ ಇರಬೇಕು.

ಪ್ರಶ್ನೆ: ಕರ್ನಾಟಕದಲ್ಲಿ ರಿಯಲ್ ಎಸ್ಟೇಟ್ ಮಾಫಿಯಾ ಸಿಕ್ಕಾಪಟ್ಟೆ ಬೆಳೆದು ಬಿಟ್ಟಿದೆ. ಇದರ ನಿಯಂತ್ರಣ ಹೇಗೆ ಸಾಧ್ಯ?

ಇದು ಬಹಳ ದೊಡ್ಡ ಮಾಫಿಯಾ. ಅಷ್ಟು ಸುಲಭಕ್ಕೆ ಇದನ್ನು ಭೇದಿಸಲು ಸಾಧ್ಯವಿಲ್ಲ, ಈ ವಿಷಯದಲ್ಲಿ ಎಲ್ಲಾ ಪಕ್ಷದಲ್ಲೂ ವೈಯಕ್ತಿಕ ಹಿತಾಸಕ್ತಿ ಇರುವವರು ಇದ್ದಾರೆ. ಆದರೆ ಇದನ್ನು ನಿಯಂತ್ರಣ ಮಾಡಲು ಸರ್ಕಾರ ಸರ್ಕಾರಿ ಜಾಗವನ್ನು ಗುರುತಿಸಿ ಜನರಿಗೆ ಸಬ್ಸಿಡಿ ದರದಲ್ಲಿ ನಿವೇಶನ ಕೊಡಲು ಮುಂದಾದರೆ ಸಾಧ್ಯ. ಇದಕ್ಕೆ ಸೂಕ್ತ ಸಮಯ ನೋಡಿ ಸರ್ಕಾರಕ್ಕೆ ಮಾರ್ಗದರ್ಶನ ಮಾಡುವೆ.

ಪ್ರಶ್ನೆ: ಈ ಬಾರಿಯ ಫಲಿತಾಂಶದಿಂದ ರಾಜ್ಯದಲ್ಲಿ ಅಹಿಂದ ರಾಜಕಾರಣ ಆರಂಭವಾಗುವುದೇ?

ಅಂತಹ ಆದರ್ಶದ ಸ್ಥಿತಿ ಸದ್ಯ ಈ ಸಮಾಜದಲ್ಲಿ ಇಲ್ಲ, ಅಂತಹ ರಾಜಕಾರಣವನ್ನು ಪ್ರಜ್ಞಾಪೂರ್ವಕವಾಗಿ ಜನರ ನಡುವೆ ಯಾರು ಮಾಡಿಕೊಂಡುಬಂದಿಲ್ಲ, ನಾವು ಇದನ್ನು ಘೋಷಣೆಗೆ ಹೇಳಿಕೊಳ್ಳಬಹುದು ಅಷ್ಟೆ. ಭೂಮಿ, ಬಂಡವಾಳ ಮತ್ತು ಅಧಿಕಾರವು ಅಹಿಂದ ಸಮುದಾಯಕ್ಕೆ ಸಿಗಲು ಹಲವು ರೀತಿಯ ಹೋರಾಟಗಳು ಅಗತ್ಯ. ಯಾವಾಗಲು ನಾವು ವರ್ಗ ಹಿತಾಸಕ್ತಿಯೆಡೆಗೆ ಗಮನ ಕೊಡಬೇಕು. ಬಡವರ ಬದುಕಿನಲ್ಲಿ ಬದಲಾವಣೆ ತರಬೇಕು ಎಂಬ ಇಚ್ಛಾಶಕ್ತಿ ಇರಬೇಕು. ಆದರೆ ಇಂತಹ ಹೆಜ್ಜೆಗಳಿಗೆ ಜಾತಿಯ ಮುಖಂಡರು ಅಡ್ಡಿ ಬಂದು ಹಾದಿ ತಪ್ಪಿಸುತ್ತಾರೆ. ಹಾಲಿ ಒಂದಿಷ್ಟು ಅಧಿಕಾರ ಸಿಕ್ಕಿರಬಹುದು. ಆದರೆ ಸಾಮಾಜಿಕ ಸ್ಥಾನಮಾನದಲ್ಲಿ ಹೇಳಿಕೊಳ್ಳುವಂತ ಬದಲಾವಣೆ ಏನೂ ಆಗಿಲ್ಲ, ಹೆಗಡೆರು ಹಗಡೆರೆ, ಗೌಡ್ರು, ಗೌಡ್ರೆ, ದಲಿತ್ರು ದಲಿತ್ರೆ ಅನ್ನುವ ಸ್ಥಿತಿ ಇನ್ನೂ ಇರೋದೆ ಇದಕ್ಕೆ ಉದಾಹರಣೆ.


ಪ್ರಶ್ನೆ: ಹತ್ತು ವರ್ಷಗಳ ನಂತರ ಮತ್ತೆ ಶಾಸಕರಾಗಿದ್ದೀರಾ. ಜನರ ನಿರೀಕ್ಷೆಗಳು ಬಹಳ. ಹೇಗೆ ನಿಭಾಯಿಸುತ್ತೀರಾ?

ಹೌದು ಜನರ ನಿರೀಕ್ಷೆಗಳು ಬಹಳ ಇದೆ. ಸಾಗರ ಸೇರಿದಂತೆ ಕರ್ನಾಟಕ ಸುಮಾರು 10 ವರ್ಷ ಹಿಂದೆ ಹೋಗಿದೆ. ನೂರಕ್ಕೆ ನೂರು ಮಾಡಲಾಗದಿದ್ದರೂ ಶೇ. 75ರಷ್ಟನ್ನಾದರೂ ಮಾಡಬೇಕು. ಹೀಗಾಗಿ ನಾನು ಸೇರಿದಂತೆ ಎಲ್ಲರೂ ಮುಂದಿನ 5 ವರ್ಷದಲ್ಲಿ ಕರ್ನಾಟಕವನ್ನು ಹತ್ತು ವರ್ಷಗಳ ಹಿಂದಿನಿಂದ ಮೇಲೆತ್ತಿ ಮುಂದಿನ ಹತ್ತು ವರ್ಷಕ್ಕಾಗುವಷ್ಟು ಅಭಿವೃದ್ಧಿಯನ್ನು ಮಾಡಬೇಕಿದೆ. ಅದಕ್ಕೆ ಅಧಿಕಾರಿಗಳ ಬೆಂಬಲ ಅಗತ್ಯ, ಅವರಿಗೆ ಚುರುಕು ಮುಟ್ಟಿಸಿ ಕೆಲಸ ತೆಗೆದುಕೊಳ್ಳಬೇಕು.

ಪ್ರಶ್ನೆ: ಅಧಿಕಾರ ಬಂದಾಗ ದಲ್ಲಾಳಿಗಳು, ಬಂಡವಾಳಶಾಹಿಗಳು, ಗುತ್ತಿಗೆದಾರರು, ಕಂಪನಿ ಮಾಲೀಕರು ಮುತ್ತಿಕೊಂಡು ನಿಜವಾಗಿ ಕೆಲಸ ಮಾಡಿದ ಕಾರ್ಯಕರ್ತರನ್ನು ದೂರಕ್ಕೆ ಸರಿಸುತ್ತಾರೆ. ಇದನ್ನು ನೀವು ಹೇಗೆ ನಿಭಾಯಿಸುತ್ತೀರಿ?

ಇದು ಎಲ್ಲಾ ಕಾಲದಲ್ಲೂ ಇದ್ದದ್ದೇ. ನಾಯಕನಾದವನು ತನ್ನ ಸೋಲಿನಲ್ಲಿ ತನ್ನೊಂದಿಗೆ ಯಾರಿದ್ದರು ಅನ್ನುವುದನ್ನು ಗಮನಿಸಿ ಹೆಜ್ಜೆ ಇಡಬೇಕು. ಆದರೆ ಎಲ್ಲವನ್ನು ಕುಲುಮೆಯಲ್ಲಿ ಹಾಕಿ ಕರಗಿಸಿ ನೋಡಿದ ಹಾಗೆ ಮಾಡಲು ಸಾಧ್ಯವಿಲ್ಲ, ಹಾಗೆ ಕಾರ್ಯಕರ್ತರು ಅಂತ ತಲೆಮೇಲೆ ಕೂರಿಸಿಕೊಂಡು ಹೋಗಲು ಆಗುವುದಿಲ್ಲ, ಎಲ್ಲವನ್ನು ಬ್ಯಾಲೆನ್ಸ್‌ನಲ್ಲಿ ಮುಂದಕ್ಕೆ ತೆಗೆದುಕೊಂಡು ಹೋಗಬೇಕು.

● ಎಚ್.ಬಿ.ರಾಘು ಮತ್ತು
ಬಿ.ಎಲ್.ರಾಜು



ಮಂಡ್ಯ ವಕೀಲನ ದುರಂತ

ಸಾಲಕ್ಕೆ ಹೆದರಿ ಸಾವಿಗೆ ಶರಣಾದ ಪಾರ್ಥಸಾರಥಿ

ಮಂಡ್ಯದ ಹೆಸರಾಂತ ವಕೀಲರಲ್ಲಿ ಒಬ್ಬರಾದ ಬಿ.ಜೆ.ಪಾರ್ಥಸಾರಥಿ ತೀರಿಸಲಾಗದಷ್ಟು ಸಾಲಕ್ಕೆ ಹೆದರಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಮಂಡ್ಯದಲ್ಲಿ ಪತ್ನಿ, ಇಬ್ಬರು ಪುತ್ರಿಯರ ಮುಖ ನೋಡಿಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಧೈರ್ಯ ಸಾಲದ ಪಾರ್ಥಸಾರಥಿ ಬೆಂಗಳೂರಿನಲ್ಲಿರುವ ತನ್ನ ಸ್ನೇಹಿತನ ಮನೆಯಲ್ಲಿ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆ ಮೂಲಕ ತಮ್ಮ ಲಂಗು-ಲಗಾಮಿಲ್ಲದ ಶೋಕಿ ಜೀವನಕ್ಕೆ ವಿದಾಯ ಹೇಳಿದ್ದಾರೆ.

ಒಳ್ಳೆಯ ಹೆಸರಿತ್ತು

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಬಲ್ಲೇನಹಳ್ಳಿ ಗ್ರಾಮದವರಾದ ಪಾರ್ಥಸಾರಥಿ ವಕೀಲ ವೃತ್ತಿಯಲ್ಲಿ ಒಳ್ಳೆಯ ಹೆಸರು ಸಂಪಾದಿಸಿದ್ದರು. ನಾಲ್ಕು ಜನ ಅಣ್ಣ-ತಮ್ಮಂದಿರಲ್ಲಿ ಎರಡನೆಯವರಾದ ಪಾರ್ಥಸಾರಥಿ ಮಂಡ್ಯದ ವಕೀಲ ಸಮೂಹದಲ್ಲಿ ಹೆಸರು ಗಳಿಸಿದ್ದವರು. ಪಾರ್ಥಸಾರಥಿ ಕೋರ್ಟ್‌ನಲ್ಲಿ ವಾದ ಮಾಡುತ್ತಿದ್ದರೆ ಅದನ್ನು ಆಲಿಸಲು ಯುವ ವಕೀಲರುಗಳ ಗುಂಪೇ ನೆರೆದಿರುತ್ತಿತ್ತು.

ಕ್ರಿಮಿನಲ್ ಕೇಸ್‌ಗಳಲ್ಲಿ ಎತ್ತಿದ ಕೈ ಆಗಿದ್ದ ಪಾರ್ಥಸಾರಥಿಗೆ ಕೇಸ್ ಕೊಟ್ಟರೆ ಗೆಲ್ಲಿಸುತ್ತಾರೆಂಬ ಮಾತು ಕೇಳಿಬರುತ್ತಿದ್ದಂತೆ ಅವರ ಬಳಿ ಬರುವವರ ಸಂಖ್ಯೆ ಹೆಚ್ಚಾಯಿತು. ದಿನ ಕಳೆದಂತೆ ದೊಡ್ಡ ಪ್ರಮಾಣದ ದುಡ್ಡು ಕೈಸೇರಿತು.

ರಾಜಕೀಯ-ಸಿನಿಮಾ ಹುಚ್ಚು

ಯಾವಾಗ ದುಡ್ಡು ಸೇರಲಾರಂಭಿಸಿತೋ ಪಾರ್ಥಸಾರಥಿ ರಾಜಕೀಯದ ಹುಚ್ಚು ಹತ್ತಿಸಿಕೊಂಡರು. ಬಿಜೆಪಿ ಯುವಮೋರ್ಚಾದ ಅಧ್ಯಕ್ಷರಾಗಿದ್ದ ಪಾರ್ಥಸಾರಥಿ ನಂತರ ಲೋಕ ಜನಶಕ್ತಿ ಪಕ್ಷದ ಅಧ್ಯಕ್ಷರಾಗಿದ್ದರು. ಮಂಡ್ಯದ ಶಾಸಕರಾಗಿ ಎರಡು ಬಾರಿ ಆಯ್ಕೆಯಾಗಿದ್ದ ಎಂ.ಶ್ರೀನಿವಾಸ್ ಅದಕ್ಕೂ ಹಿಂದೆ ಲೋಕಜನಶಕ್ತಿ ಪಕ್ಷದಿಂದ ನಿಂತು ಸೋತಿದ್ದರು. ಆ ಸಂದರ್ಭದಲ್ಲಿ ಮಂಡ್ಯದಿಂದ ಪಾರ್ಥಸಾರಥಿ ಎಂಎಲ್‌ಎ ಟಿಕೆಟ್ ಕೂಡ ಕೇಳಿದ್ದರು. ಮದುವೆ, ತಿಥಿ, ನಾಟಕಗಳಿಗೆ ಹಣ ನೀಡುತ್ತಾ ರಾಜಕಾರಣಿಯಂತೆ ವರ್ತಿಸಲು ಶುರು ಮಾಡಿದ ಪಾರ್ಥಸಾರಥಿಯವರನ್ನು ಹಾಡಿ-ಹೊಗಳಿ ಒಂದಷ್ಟು ಜನ ಹಣ ಮಾಡಿಕೊಂಡರು.

ನಾಟಕದಲ್ಲಿ ಆಸಕ್ತಿ ಇದ್ದ ಪಾರ್ಥಸಾರಥಿಗೆ ಅದ್ಯಾರು ಸಿನಿಮಾ ಹುಚ್ಚು ಹಿಡಿಸಿದರೋ ಗೊತ್ತಿಲ್ಲಾ. ಸಾಯಿಕುಮಾರ್ ನಾಯಕನಟನಾಗಿ ನಟಿಸಿದ 'ದಿ ಸಿಟಿ' ಸಿನಿಮಾದಲ್ಲಿ ವಿಲನ್ ರೋಲ್‌ನಲ್ಲಿ ಕಾಣಿಸಿಕೊಂಡ ಪಾರ್ಥಸಾರಥಿ 'ಹೃದಯವಂತ' ಸೇರಿದಂತೆ 3-4 ಸಿನಿಮಾಗಳಲ್ಲಿ ನಟಿಸಿದ್ದರು. ಸಿನಿಮಾದಲ್ಲಿ ನಟಿಸುವ ತೆವಲಿಗೆ ಬಿದ್ದ ಪಾರ್ಥಸಾರಥಿ ಅಲ್ಲೂ ಒಂದಷ್ಟು ಹಣ ಕಳೆದುಕೊಂಡರು.

ಸುಮಾರು 20-25 ಲಕ್ಷ ರೂ. ಸಾಲ ಮಾಡಿ ಎರಡು ಬಾರಿ ರಾಜ್ಯ ವಕೀಲರ ಸಂಘದ ನಿರ್ದೇಶಕ ಸ್ಥಾನಕ್ಕೆ ನಿಂತು ಸೋತಿದ್ದರಿಂದ ಸಾಲ ಮತ್ತಷ್ಟು ಹೆಚ್ಚಾಯಿತು.

ಬೆದರಿಕೆಗೆ ಬಗ್ಗಲಿಲ್ಲ

ವಕೀಲರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ಸಂದರ್ಭದಲ್ಲೇ ಸಾಕಷ್ಟು ಸಾಲ ಮಾಡಿಕೊಂಡಿದ್ದ ಪಾರ್ಥಸಾರಥಿ ಸಾಲಗಾರರು ಹಾಕಿದ್ದ ಚೆಕ್ ಬೌನ್ಸ್ ಕೇಸುಗಳ ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಹಾಜರಾಗದೆ ಇದ್ದರು. ಈ ಸಂದರ್ಭದಲ್ಲಿ ನೂತನ ನ್ಯಾಯಾಲಯ ಸಂಕೀರ್ಣ ಉದ್ಘಾಟನೆ ಆಗಬೇಕಿತ್ತು. ಚೆಕ್‌ಬೌನ್ಸ್ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹಾಜರಾಗದೆ ವಾರಂಟ್ ಪಡೆದಿದ್ದ ಪಾರ್ಥಸಾರಥಿಯನ್ನು ಉದ್ಘಾಟನಾ ಸಮಾರಂಭಕ್ಕೆ ಆಹ್ವಾನಿಸಬಾರದು ಎಂದಾಗ ಕೊನೆಗೆ ಅವೆಲ್ಲವನ್ನು ಸರಿಪಡಿಸಿಕೊಂಡು ಹೈಕೋರ್ಟ್ ನ್ಯಾಯಾಧೀಶರೊಂದಿಗೆ ವೇದಿಕೆ ಹತ್ತಿದ್ದಲ್ಲದೆ ನೂತನ ನ್ಯಾಯಾಲಯ ಸಂಕೀರ್ಣ ಉದ್ಘಾಟನೆ ಮಾಡಿಸುವ ಮೂಲಕ ವಿರೋಧಿಗಳಿಗೆ ಸೆಡ್ಡು ಹೊಡೆದು ಅಧ್ಯಕ್ಷ ಸ್ಥಾನಕ್ಕೆ ಚ್ಯುತಿ ಬರದಂತೆ ನೋಡಿಕೊಂಡಿದ್ದರು.

ಅಧ್ಯಕ್ಷರಾಗಿದ್ದ ಸಂದರ್ಭದಲ್ಲೇ ನ್ಯಾಯಾಲಯದ ಆವರಣದಲ್ಲಿ ಪೊಲೀಸ್ ಠಾಣೆ ತೆರೆಯಲು ಜಾಗವೊಂದಕ್ಕೆ ಪೊಲೀಸ್ ಇಲಾಖೆ ಬೇಲಿ ಹಾಕಿತ್ತು. ಇದನ್ನು ತೆರವುಗೊಳಿಸುವ ಸಂದರ್ಭದಲ್ಲಿ ಪೊಲೀಸರು ಮತ್ತು ವಕೀಲರ ಮಧ್ಯೆ ನಡೆದ ಮಾತಿನ ಚಕಮಕಿ ವಿಕೋಪಕ್ಕೆ ತೆರಳಿ ದೊಡ್ಡ ಗಲಾಟೆಯೇ ಶುರುವಾಗಿತ್ತು. ಈ ಸಂದರ್ಭದಲ್ಲಿ ಅಧ್ಯಕ್ಷ ಪಾರ್ಥಸಾರಥಿ ಸೇರಿದಂತೆ ವಕೀಲ ಸಮೂಹವೇ ಪೊಲೀಸರ ವಿರುದ್ಧ ತಿರುಗಿ ಬಿತ್ತು. ಆಗ ಸರ್ಕಲ್ ಇನ್ಸ್‌ಪೆಕ್ಟರ್ ಆಗಿದ್ದ ನಾಗೇಶ್ ಕುಮಾರ್ ರಿವಾಲ್ವರ್ ತೆಗೆದು ಬೆದರಿಸಿದ ಸಂದರ್ಭದಲ್ಲಿ ಅವರನ್ನು ಪಾರ್ಥಸಾರಥಿ ಎದುರಿಸಿ ನಿಲ್ಲುವ ಮೂಲಕ ದೊಡ್ಡ ಸುದ್ದಿಯಾಗಿದ್ದರು.

ವೈವಾಹಿಕ ಜೀವನದಲ್ಲಿ ಏರುಪೇರು

ಪಾರ್ಥಸಾರಥಿಯವರಿಗೆ ವೀಣಾ ಎಂಬಾಕೆಯೊಂದಿಗೆ ಮದುವೆಯಾಗಿ ಇಬ್ಬರು ಹೆಣ್ಣು ಮಕ್ಕಳಿದ್ದರು. ಆದರೂ ಇವರ ಆಫೀಸಿನಲ್ಲೇ ವಕೀಲಿಕೆ ಕಲಿಯಲು ಬಂದಿದ್ದ ಬೃಂದಾ ಎಂಬ ಹೆಣ್ಣುಮಗಳನ್ನು ಪ್ರೀತಿಸಿದ ಫಲವಾಗಿ ಅವರಿಗೂ ಒಂದು ಗಂಡು ಮಗುವಿದೆ. ಕೊನೆಗೆ ಅವರೊಂದಿಗಿನ ಸಂಬಂಧ ಕಡಿದುಕೊಂಡು ಮೊದಲ ಹೆಂಡತಿ ವೀಣಾ ಜೊತೆ ಬಾಳ್ವೆ ನಡೆಸಿದ್ದ ಪಾರ್ಥಸಾರಥಿಯವರ ಇಬ್ಬರೂ ಹೆಣ್ಣು ಮಕ್ಕಳಲ್ಲಿ ಮೊದಲನೆಯವಳು ಬಿಇ ಮುಗಿಸಿದ್ದರೆ, ಮತ್ತೊಬ್ಬರು ಬಿಇ ಓದುತ್ತಿದ್ದಾರೆ.

ಸಿಕ್ಕಾಪಟ್ಟೆ ಸಾಲ

ವಕೀಲಿಕೆಯಲ್ಲಿ ಸಾಕಷ್ಟು ಹಣ ಮಾಡಿಕೊಂಡಿದ್ದ ಪಾರ್ಥಸಾರಥಿ ರಾಜಕೀಯ, ಸಿನಿಮಾ ಮತ್ತಿತರ ಶೋಕಿಗಳಿಗೆ ಬಿದ್ದು ಇದ್ದ-ಬಿದ್ದ ಹಣವನ್ನು ಖಾಲಿ ಮಾಡಿದರು. ನಂತರ ಸಿಕ್ಕ ಸಿಕ್ಕ ಕಡೆ ಸಾಲ ಎತ್ತಿದ್ದರು. ಐದು ಸಾವಿರದಿಂದ ಹಿಡಿದು ಐದು ಲಕ್ಷ, 10 ಲಕ್ಷ ಅಂತೆಲ್ಲಾ ಅನೇಕರಿಂದ ಸಾಲ ಮಾಡಿದ ಪಾರ್ಥಸಾರಥಿ ಅದಕ್ಕೆ ಬಡ್ಡಿ ಕಟ್ಟಿಕಟ್ಟಿಯೇ ಸುಸ್ತಾದರು. ಮನೆಯಲ್ಲಿದ್ದ ಒಂದೂವರೆ ಕೆ.ಜಿ.ಗೂ ಅಧಿಕ ಚಿನ್ನವನ್ನು ಅಡವಿಟ್ಟಿದ್ದರು. ಹೊಸದಾಗಿ ಕೊಂಡಿದ್ದ ಸ್ವಿಫ್ಟ್ ಕಾರು ಕೂಡ ಸಾಲಗಾರರ ಪಾಲಾಗಿತ್ತು. ಬಡ್ಡಿ, ಚಕ್ರಬಡ್ಡಿ ಬೆಳೆದು ಸಾಲದ ಮೊತ್ತ 60 ಲಕ್ಷಕ್ಕಿಂತಲೂ ಹೆಚ್ಚಾಯಿತು. ಈ ಮಧ್ಯೆ ಆರೋಗ್ಯವೂ ಕೈಕೊಟ್ಟಿತ್ತು. ಬಿಪಿ, ಶುಗರ್, ಹೃದಯಬೇನೆ ಕಾಣಿಸಿಕೊಂಡಿತ್ತು. ಒಂದೆಡೆ ಮನೆಗೆ ಬಂದು ಬಾಯಿಗೆಬಂದಂತೆ ಬೈಯುತ್ತಿದ್ದ ಸಾಲಗಾರರ ಕಾಟ, ಮತ್ತೊಂದೆಡೆ ಆರೋಗ್ಯ ಕೈಕೊಟ್ಟಿದ್ದರಿಂದ ಕಂಗ... ಪಾರ್ಥಸಾರಥಿ ಆತ್ಮಹತ್ಯೆಯ ಯೋಚನೆ ಮಾಡಿದ್ದರು... ಅದರಂತೆ ಆತ್ಮಹತ್ಯೆ ಮಾಡಿಕೊಳ್ಳಲು ... ಮಾಡಿಕೊಂಡಿದ್ದ ಪಾರ್ಥಸಾರಥಿ ಒಂದು ತಿಂಗಳ... ಅದಕ್ಕೆ ಅಣಿಯಾಗುತ್ತಿದ್ದರು. ತಮ್ಮ ಆಫೀಸ್... ಪುಸ್ತಕಗಳನ್ನು ಎರಡು ಲಕ್ಷಕ್ಕೆ ಮಾರಿದ ಪಾರ್ಥ... ಆಫೀಸನ್ನು ಖಾಲಿ ಮಾಡಿದ್ದರು.

ಆತ್ಮಹತ್ಯೆಗೆ ಶರಣು

ಮಾಡಿಕೊಂಡಿದ್ದ ಸಾಲ ತೀರಿಸಲು ಆಗ... ಬೆಟ್ಟದಂತೆ ಬೆಳೆಯುತ್ತಿತ್ತು. ಇತ್ತೀಚಿನ ದಿನ... ವಕೀಲವೃತ್ತಿಯಲ್ಲಿ ಹಲವು ಯುವ ವಕೀಲರು ... ಮಾಡಿದ್ದರಿಂದ ಇವರಿಗೆ ಬರುವ ಕೇಸುಗಳ ಸಂಖ್ಯೆ... ಇಳಿಮುಖವಾಗಿತ್ತು. ಆರ್ಥಿಕ ಸಂಕಷ್ಟ, ಶೋಕಿ... ಜೀವನದಿಂದ ಸರಿಯಾಗಿ ವಕೀಲವೃತ್ತಿ ... ಕಾರಣದಿಂದ ಕೇಸುಗಳೇ ಸಿಗುತ್ತಿರಲಿಲ್ಲ. ಸಾಲಗ... ಹಾಕಿದ್ದ 50ಕ್ಕೂ ಹೆಚ್ಚು ಚೆಕ್ ಬೌನ್ಸ್ ಪ್ರಕರ... ವಿವಿಧ ನ್ಯಾಯಾಲಯದಲ್ಲಿ ನಡೆಯುತ್ತಿದ್ದವು. ಹಣ ... ಸಾಲಗಾರರು ಮನೆಗೆ ಬಂದು ಹೆಂಡತಿ, ... ಮುಂದೆಯೇ ಬಾಯಿಗೆ ಬಂದಂತೆ ಬೈಯ್ದು ಅಪ... ಮಾಡಿದ್ದರು. ಇದರಿಂದ ಜರ್ಜರಿತರಾಗಿದ್ದ ಪಾರ್ಥ... ಸಾವೊಂದೇ ಇದಕ್ಕೆಲ್ಲ ಪರಿಹಾರ ಎಂದು ಭಾವಿಸಿ... ಸೋಮವಾರ ಮೇ 27ರಂದು ಬೆಂಗಳ... ಬಾಣಸವಾಡಿಯಲ್ಲಿರುವ ತಮ್ಮ ಸ್ನೇ... ರೆಹಮಾನ್‌ಖಾನ್‌ರವರ ಮನೆಗೆ ಹೋಗಿದ್ದಾರೆ. ... ಆಗಿರುವ ರೆಹಮಾನ್‌ಖಾನ್ ತಮ್ಮ ಅಂಗಡಿಗೆ ತೆರ...


ಮಧ್ಯಾಹ್ನ ಊಟಕ್ಕೆ ಹೊರಗೆ ಹೋ... ರೆಹಮಾನ್‌ಖಾನ್ ಪಾರ್ಥಸಾರಥಿ ಅವರ ಮೊಬೈ... ಕರೆ ಮಾಡಿದ್ದಾರೆ. ಹಲವು ಬಾರಿ ಯತ್ನಿಸಿ... ಪಾರ್ಥಸಾರಥಿ ಕರೆ ಸ್ವೀಕರಿಸಲಿಲ್ಲ. ಇದ... ಅನುಮಾನಗೊಂಡ ರೆಹಮಾನ್ ತಮ್ಮ ಮನೆಗೆ ... ನೋಡಿದಾಗ ಪಾರ್ಥಸಾರಥಿ ಫ್ಯಾನ್‌ಗೆ ... ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು.

ಶೋಕಿತನದ ಜೀವನ ಸಿನಿಮಾ-ರಾಜಕೀ... ಹುಚ್ಚಿಗೆ ಬಿದ್ದು, ಸುಂದರವಾದ ಬದುಕನ್ನು ... ಮಾಡಿಕೊಂಡು ಪತ್ನಿ, ಇಬ್ಬರು ಹೆಣ್ಣು ಮಕ್ಕಳನ್ನು ... 54ನೇ ವಯಸ್ಸಿನಲ್ಲಿ ಆತ್ಮಹತ್ಯೆಗೆ ಶರ... ಪಾರ್ಥಸಾರಥಿಯವರು ಆಡಂಬರ, ಶೋಕಿತನದ ... ಮಾಡುವವರೆಲ್ಲರಿಗೂ ಎಚ್ಚರಿಕೆಯ ಪಾಠ ಹೇಳಿ... ದ್ದಾರೆಂದರೆ ತಪ್ಪಾಗಲಾರದು.

● ವರದಿ...

ಮೀಡಿಯಾ ಮಸಾಲ

TV9 ಶಿವಪ್ರಸಾದ್ ಸೂಸೈಡ್ ಡ್ರಾಮಾ!



TV 9 ಚಾನಲ್ಲಿನಲ್ಲಿದ್ದ ಶಿವಪ್ರಸಾದ್ ನಕಲಿ ಪಾಸ್‌ಪೋರ್ಟ್ ದಂಧೆಗೆ ಕೈಹಾಕಿ ಸಿಟಿ ಕ್ರೈಂ ಬ್ರಾಂಚ್ ಪೊಲೀಸರಿಗೆ ಸಿಕ್ಕಿಬಿದ್ದ ನಂತರ ಈಗ ಇನ್ನೊಂದು ರಗಳೆ ಮಾಡಿಕೊಂಡಿದ್ದಾನೆ.

ಅದು ಆತ್ಮಹತ್ಯೆ ಪ್ರಯತ್ನ!

ಯಾವಾಗ ಈ ಸುದ್ದಿ ಹಬ್ಬಿತೊ ಟಿವಿ ನೈನ್ ಸಿಬ್ಬಂದಿ ಓಡಿಹೋಗಿ ಕನ್ನಿಂಗ್‌ಹ್ಯಾಂ ರಸ್ತೆಯ ಫೋರ್ಟಿಸ್ ಆಸ್ಪತ್ರೆಗೆ ಹೋಗಿ ನೋಡಿದರೆ ಅಲ್ಲಿ ಶಿವಪ್ರಸಾದನಿರಲಿಲ್ಲ! ಮತ್ತೂ ವಿಚಾರಿಸಿ ನೋಡಿದರೆ ಮಾನ್ಯ ಶಿವಪ್ರಸಾದರು ರಾಜಾಜಿನಗರದ ತಮ್ಮ ಮನೆಯೊಳಗೇ ಕ್ಷೇಮದಿಂದಿರುವುದು ಪತ್ತೆಯಾಗಿದೆ.


ಪತ್ರಕರ್ತನಾಗುವ ಮುನ್ನ ಕಂಪ್ಯೂಟರ್ ಸೆಂಟರ್ ಒಂದನ್ನು ನಡೆಸಲು ಹೋಗಿ ಕೊಂಚ ಸಾಲ ಮಾಡಿಕೊಂಡಿದ್ದ ಪ್ರಸಾದ್ ಸಾಲ ಕೊಟ್ಟವರಿಗೆ ತೀರ್ಥ-ಪ್ರಸಾದ ಅರ್ಥಾತ್ ಬಡ್ಡಿ-ಅಸಲು ಏನೊಂದನ್ನು ಕೊಡದೆ ತಿರುಗುತ್ತಿದ್ದುದರಿಂದ ಸಾಲಗಾರರು ಆತನ ಬೆನ್ನುಹತ್ತಿದ್ದರು. ಅವರನ್ನೆಲ್ಲ ಸುಮ್ಮನಾಗಿಸಲು ಈಗ ಚಾನಲ್ ಹೆಸರನ್ನು ಬಳಸುವಂತಿಲ್ಲದ ಈತ ಕೊನೆಗೆ ಸಿಂಪಥಿ ಗಿಟ್ಟಿಸಲು ಹೀಗೆ ಸೂಸೈಡ್ ಡ್ರಾಮ ಸೃಷ್ಟಿಸಿದ್ದ ಎನ್ನಲಾಗಿದೆ.

ಸುವರ್ಣ ಚಾನಲ್‌ಗೆ ಚಿನಿವಾರ್?



ಜನಶ್ರೀ ಚಾನಲ್‌ನ ಹೆಡ್ ಅನಂತ್ ಚಿನಿವಾರ್ ಸದ್ಯದಲ್ಲೇ ಸುವರ್ಣ ಚಾನಲ್‌ನ ಮುಖ್ಯಸ್ಥರಾಗಲಿದ್ದಾರೆ!

ಹಾಗಂತ ಸುದ್ದಿಯೊಂದು ಸುದ್ದಿಮನೆಗಳಲ್ಲಿ ಕಳೆದೆರಡು ವಾರಗಳಿಂದ ಹರಿದಾಡುತ್ತಿತ್ತು. ಹಾಲಿ ಸುವರ್ಣ ಚಾನಲ್ ಹಾಗೂ ಕನ್ನಡ ಪ್ರಭ ದಿನಪತ್ರಿಕೆ ಇವೆರಡರ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿರುವ ವಿಶ್ವೇಶ್ವರ ಭಟ್ಟರಿಗೆ ಇನ್ನು ಮುಂದೆ ಕನ್ನಡ ಪ್ರಭ ಜವಾಬ್ದಾರಿ ಮಾತ್ರ ಇರಲಿದ್ದು ಖಾಲಿಯಾಗುವ ಸುವರ್ಣ ನ್ಯೂಸ್ ಹೆಡ್ ಸ್ಥಾನಕ್ಕೆ ಅನಂತ್ ಚಿನಿವಾರ್‌ರನ್ನು ಕರೆತರಲು ಮಾಲೀಕ ರಾಜೀವ್ ಚಂದ್ರಶೇಖರ್ ಯೋಚಿಸಿದ್ದಾರೆಂತಲೂ ಸುದ್ದಿಗಳಿದ್ದವು. ವಿಶ್ವೇಶ್ವರ ಭಟ್‌ರಿಗೆ ಚಾನಲ್ ಹಾಗೂ ಪತ್ರಿಕೆ ಎರಡನ್ನೂ ನಿಭಾಯಿಸುವುದು ಕೊಂಚ ಭಾರ ಎನಿಸಿದ್ದು ಹಾಗೂ ಎಲೆಕ್ಷನ್ ವೇಳೆಯಲ್ಲಿ ಸುವರ್ಣದಲ್ಲಿ ಪ್ರಸಾರಗೊಂಡ ಕೆಲ ಸುದ್ದಿಗಳ ಬಗ್ಗೆ ಮಾಲೀಕರಿಗೆ ಕೊಂಚ ಆಕ್ಷೇಪಗಳಿದ್ದ ಕಾರಣದಿಂದ ಈ ರೀತಿ ಬದಲಾವಣೆಯಾಗಲಿದೆ ಎಂಬ ಮಾತುಗಳು ಹರಡುತ್ತಿತ್ತು.



ಅನಂತ್ ಚಿನಿವಾರರ ಕೆಲ ಕಂಡೀಷನ್‌ಗಳಿಗೆ ಸುವರ್ಣ ಮಾಲೀಕರು ಪೂರ್ಣ ಒಪ್ಪಿದ್ದೇ ಆದಲ್ಲಿ ಇನ್ನು ಕೆಲವೇ ದಿನಗಳಲ್ಲಿ ಈ ಬದಲಾವಣೆ ಆಗಲೂಬಹುದು ಎಂಬ ಮಾತುಗಳು ತೇಲಿದ್ದವು. ಆದರೆ ವಿ. ಭಟ್ 'ಅಂತಾದ್ದೇನೂ ಆಗಲ್ಲ' ಎನ್ನುತ್ತಿದ್ದಾರೆ.

ಅಂದಹಾಗೆ ಚಿನಿವಾರ್ ಜನಶ್ರೀ ಬಿಟ್ಟದ್ದೇ ಆದಲ್ಲಿ ಅವರ ಸ್ಥಾನಕ್ಕೆ ಯಾರು ಬರಬಹುದು? ಎಂಬ ಚರ್ಚೆಯೂ ಶುರುವಾಗಿ ಹೋಗಿದೆ.

ಜನಶ್ರೀಯ ಮಾಲೀಕ ಶ್ರೀರಾಮುಲುರ ಬಿಎಸ್‌ಆರ್ ಕಾಂಗ್ರೆಸ್‌ನಲ್ಲಿರುವ 'ಬುದ್ಧಿಜೀವಿ'ಯೊಬ್ಬರ ಹೆಸರು ಸದ್ಯಕ್ಕೆ ಕೇಳಿಬರುತ್ತಿದ್ದು ಆ ಸುದ್ದಿ ಕೇಳಿದ ಚಾನಲ್ ಸಿಬ್ಬಂದಿ "ಅದೆಲ್ಲಾ ಬೇಡ, ... ಚಾನಲ್ ಕೆಲಸ ಚೆನ್ನಾಗಿ ನಿಭಾಯಿಸುತ್ತೇವೆ" ಎನ್ನುತ್ತಿದ್ದಾರಂತೆ...

ಹುಣಸೂರು-ಮೈಸೂರು ಪತ್ರಕರ್ತರ ಕದನ

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಮೆಂಬರ್‌ಗ... ಹುಣಸೂರು ತಾಲ್ಲೂಕಿನ ಪತ್ರಕರ್ತರಾದ ಎಚ್. ಕೃಷ್ಣ ಕೆ... ಹಾಗೂ ಜೂನಿಯರ್ ಪತ್ರಕರ್ತ ಪ್ರತಾಪ್ ಎಂಬುವವರು ... ಸದಸ್ಯತ್ವ ಕಳೆದುಕೊಂಡಿದ್ದಾರೆ. ಇವರೆಲ್ಲಾ ಸ್ಥಳೀಯ ಕೇಬಲ್ ಆಪರೇಟರ್ ಸ್ವಾಮಿನಾಥ್ ಜೊತೆ ಸೇರಿಕೊಂಡು ತಾಲ್ಲೂಕು ವರ... ಕೂಟ ಅಂತ ಒಂದು ಪ್ರತ್ಯೇಕ ಗುಂಪು ಕಟ್ಟಿದ್ದಲ್ಲದೇ ಹುಣ... ತಾಲ್ಲೂಕು ಪತ್ರಕರ್ತರ ಸಂಘದ ಕಚೇರಿಯನ್ನೇ ವಶಪಡಿಸಿಕೊಳ್ಳಲು ಹೋಗಿ, ಜಿಲ್ಲಾ ಪತ್ರಕರ್ತರ ಸಂಘಕ್ಕೂ ಸವಾಲಾಕಿ ಎಲ್ಲರಿಂದಲೂ ದೂಷಣೆಗೊಳಗಾಗಿ ಕೊನೆಗೆ ಸಂಘದಿಂದಲೇ ಹೊರ ಹಾಕಲ್ಪಟ್ಟಿದ್ದಾರೆ. ಸಣ್ಣ ಟೌನ್ ಸೆಂಟರ್‌ಗಳಲ್ಲಿ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಪತ್ರಕರ್ತರೆಂದರೆ ಸರ್ಕಾರಿ ಕಚೇರಿ, ಪೊಲೀಸ್ ಸ್ಟೇಷನ್ನು ಹಾಗೂ ರಾಜಕಾರಣಿಗಳ ನಡುವೆ ಕೊಂಚ 'ಹವಾ' ಮೈಂಟೇನ್ ಮಾಡುವ ಅವಕಾಶಗಳಿದ್ದೇ ಇರುತ್ತವೆ.



ಕೆ. ಕೃಷ್ಣ

ಹಾಗಾಗಿ ಹುಣಸೂರು ತಾಲ್ಲೂಕು ಪತ್ರಕರ್ತರಾಗಿದ್ದ ಈ ಮೂ... ಅರ್ಜೆಂಟಾಗಿ ಸಂಘದ ಲೀಡರ್‌ಗಳಾಗಲು ಯತ್ನಿಸಿ ಈಗ ಅತ್ತ ಸ... ಇಲ್ಲ, ಇತ್ತ ಸದಸ್ಯತ್ವವೂ ಇಲ್ಲ ಎನ್ನುವ ಸ್ಥಿತಿ ತಂದುಕೊಂಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಮುಖಂಡರಾದ ... ಮಹೇಶ್ವರ, ಸುಬ್ರಮಣ್ಯ ಮುಂತಾದವರು ತೆಗೆದುಕೊಂಡಿರುವ ನಿ... ಸರಿಯಾಗಿಯೇ ಇದೆಯಾದರೂ, ಈ ಮೂವರನ್ನು ತಿದ್ದುವ ಅವಕಾಶ ಇದೆಯಾ ಎಂಬುದನ್ನೂ ಇನ್ನೊಮ್ಮೆ ಪರಿಶೀಲಿಸಿ ನೋಡಲಿ.

ೇವಾಲಾಲ್ ಸ್ವಾಮಿಯ ಲವ್ವು ಡವ್ವು!

ಚಿತ್ರದುರ್ಗದ ಐತಿಹಾಸಿಕ ಮುರಘಾರಾಜೇಂದ್ರ ದ ಶಿವಮೂರ್ತಿ ಶರಣರು ಮಾಡಿದ ಟ್ಟುಗಳಲ್ಲಿ ಸೇವಾಲಾಲ್ ಎಂಬ ಮಠವನ್ನು ಸಿ ಅದಕ್ಕೆ ನಾಲಾಯಕ್ ಮನುಷ್ಯನೊಬ್ಬನನ್ನು ಯನ್ನಾಗಿಸಿದ್ದು. ಈಗ ಈ ಸೇವಾಲಾಲ್ ಮಠದ ದ್ಗುರು ಸೇವಾಲಾಲ್ ಸ್ವಾಮಿ 'ಡೀಪ್ ಲವ್' ರಣವೊಂದರಲ್ಲಿ ಸಿಲುಕಿಕೊಂಡು ಪ್ರೇಯಸಿಯ ವಲೋ, ಕಾವಿ ಕಳಚಲೋ ಎಂಬ ಂದಲದಲ್ಲಿದ್ದರೆ ಜನರೆಲ್ಲ ಕುಂಡಿ ಬಡಿದುಕೊಂಡು


ಮುರುಘಾ ಶರಣ

ಡುತ್ತಿದ್ದಾರೆ.

ತಮಾಷೆಯ ವಿಚಾರ ಏನೆಂದರೆ ಈ ಸೇವಾಲಾಲ್ ವೆಂಬುದು ನೂತನ ಮಠವಾದರೂ ಇದಕ್ಕಾಗಲೇ ' ಮಠ ಎಂಬ ಅಡ್ಡಹೆಸರು ಅಂಟಿಕೊಂಡಿದೆ. ಕ್ಕೆ ಶಿವಮೂರ್ತಿ ಶರಣರ ಕೊಡುಗೆಯೂ ಇದೆ. ಕೆಂದರೆ ಈ ಮಠವನ್ನು ಸ್ಥಾಪಿಸಿದ ಹೊಸದರಲ್ಲಿ ಾರು ಇದಕ್ಕೆ ಸೇವಾಲಾಲ್ ಸಂಗನ ಬಸವ ಎಂಬ ಯನ್ನು ತಂದು ಕೂರಿಸಿ ಬಂಜಾರ ುದಾಯಕ್ಕೆ ಆತನೇ ಜಗದ್ಗುರು ಎಂದು ೀಷಿಸಿದ್ದರು. ಆದರೆ ಸರ್ವಸಂಗ ಪರಿತ್ಯಾಗಿ ೇಕಿದ್ದ ಸಂಗನ ಬಸವ ಯುವತಿಯೊಬ್ಬಳ ಮಪಾಶಕ್ಕೆ ಬಿದ್ದು, ರಾತ್ರೋರಾತ್ರಿ ಕಾವಿಯನ್ನು ದು ಆಕೆಯೊಂದಿಗೆ ಓಡಿಹೋಗಿದ್ದ!

ಅದು ಆದದ್ದು 2001ರಲ್ಲಿ, ಆತ ಖಾಲಿ ಬಿಟ್ಟು ದ ಜಾಗಕ್ಕೆ ಶರಣರು ಒಂದೇ ತಿಂಗಳಲ್ಲಿ ಧರ ನಾಯ್ಕ ಎಂಬ ಅಬ್ಬೇಪಾರಿಯನ್ನು ತಂದು ಸಿದ್ದರು. ಈಗ ಈ ಶ್ರೀಧರ ನಾಯ್ಕನೂ ಬ್ಲಾಗ್ ಒಂದು ಲವ್ ಸ್ಟೋರಿ'ಯಲ್ಲಿ ಾಕಿಕೊಂಡು ರಂಪಾಟ ಎಬ್ಬಿಸಿದ್ದಾನೆ.

ಈ ಶ್ರೀಧರ ನಾಯ್ಕನ ಜನ್ಮಸ್ಥಳ ದಾವಣಗೆರೆ ಬ್ಲಾಕಿನಲ್ಲಿರುವ ದೊಡ್ಡರಂಗವ್ವನಹಳ್ಳಿ. ಈತ ಣಗೆರೆಯ ಭಾರತ್ ಕಾಲೋನಿಯ ಬಂಬೂ ರಿನ ಅಡ್ಡೆಗಳಲ್ಲಿ ಪೋಲಿ ಅಲೆದವನು. ಪಿ.ಯು.ಸಿ ತ್ತಿದ್ದಾಗಲೇ ಪ್ರೀತಿ ಪ್ರೇಮ ಪ್ರಣಯ ಅಂತೆಲ್ಲಾ ಮನಸ್ಸು ಕೆಡಿಸಿಕೊಂಡವನು. ಕುಡಿತದ ಾಗಿದ್ದವನು. ಈ ಹಿಂದೆ 2001ರಲ್ಲಿ ದಾವಣಗೆರೆ ಪಾಲಿಕೆಗೆ ಭಾರತ್ ಕಾಲೋನಿ ವಾರ್ಡಿನಿಂದ ಸ್ಪರ್ಧಿಸಿ ಠೇವಣಿ ಕಳೆದುಕೊಂಡವನು. ದುಡಿಯಲಾರದ ಈತ ಅದು ಹೇಗೆ ಬಂಜಾರರ ದೊಡ್ಡ ಸಮಾಜವನ್ನು ಉದ್ಧಾರ ಮಾಡಿಯಾನು?

ಸೇವಾಲಾಲ್ ಮಠವನ್ನು ಸ್ಥಾಪಿಸಿ ಎಂದು ಬಂಜಾರ ಸಮುದಾಯದವರು ಮುರುಘಾಶರಣರನ್ನು ಕಾಡಿಬೇಡಿರಲಿಲ್ಲ, ಅಷ್ಟೇ ಅಲ್ಲ, ಈ ಸಮುದಾಯದ ಆಚಾರವಿಚಾರಗಳಿಗೂ ಶರಣ ಸಂಸ್ಕೃತಿಗೂ ಅಜಗಜಾಂತರ ವ್ಯತ್ಯಾಸಗಳಿವೆ. ಬಂಜಾರ ಸಮಾಜ ವೈದಿಕಶಾಹಿ ಪರಂಪರೆಯನ್ನು ಅನುಸರಿಸುತ್ತದೆ.


ಬಸವರಾಜ್ ನಾಯ್ಕ

ಹೋಮ-ಹವನದಲ್ಲಿ ನಂಬಿಕೆ ಇಟ್ಟಿದೆ. ವೈಷ್ಣವ ಪರಂಪರೆಯವರಾದ ಬಂಜಾರರು ಶೈವ ಪದ್ಧತಿಯನ್ನು ಸುತಾರಾಂ ಒಪ್ಪುವುದಿಲ್ಲ.

"ನಾವು ವೈಷ್ಣವ ನಾಮಧಾರಿಗಳು. ತಿರುಪತಿ ತಿಮ್ಮಪ್ಪ ಶ್ರೀ ಕೃಷ್ಣನ ಆರಾಧಕರು. ಶೈವ ಪದ್ಧತಿ ನಮಗೆ ಆಗಬರುವುದಿಲ್ಲ. ನಮ್ಮ ಸಮಾಜದ ಜಗದ್ಗುರು ಎಂದು ಯಾರಿಗೋ ತಲೆ ಬೋಳಿಸಿ, ಕಾವಿ ತೊಡಿಸಿದರೆ ನಾವು ಅದನ್ನು ಹೇಗೆ ಒಪ್ಪುವುದು? ತಲೆ ಬೋಳಿಸಿ ಕಾವಿ ತೊಡುವುದು ವಿಧವೆಯರ ವೇಷ ಭೂಷಣ. ನಮ್ಮ ಸಮುದಾಯದ ಮೂಲ ಮಠ ಇರುವುದು ಮಹಾರಾಷ್ಟ್ರದ ಪೋರಾದೇವಿ ಎಂಬಲ್ಲಿ. ನಮಗೆ ರಾಮರಾವ್ ಮಹಾರಾಜ್ ಎಂಬ 82 ವರ್ಷದ ಗುರುವಿದ್ದಾರೆ. ಹೀಗಿರುವಾಗ ನಾವು ಈ ಸೇವಾಲಾಲನನ್ನು ನಮ್ಮ ಸ್ವಾಮಿ ಎಂದು ಒಪ್ಪಿಕೊಳ್ಳುವುದು ಹೇಗೆ" ಎಂದು ಬಂಜಾರ ಸಮುದಾಯದ ನಾಯಕರು ಪ್ರಶ್ನಿಸಿದ್ದುಂಟು.

ಇಂಥಾ ಶ್ರೀಧರ ನಾಯ್ಕ ಸೇವಾಲಾಲ್ ಸಂಗನ ಬಸವ ಸ್ವಾಮಿಯಾಗಿ ಕಡಿದು ಕಟ್ಟೆಹಾಕಿದ್ದಾದರೂ ಏನು ಎಂದು ಹುಡುಕಹೊರಟರೆ ಎಂಥವರೂ ಬೆಚ್ಚಿಬೀಳುತ್ತಾರೆ. ಯಾಕೆಂದರೆ ಈಗ ಪಕ್ಕಾ ರಾಜಕಾರಣಿ. ಇವನ ಹಿಂದೆ ಬಂಜಾರ ಸಮಾಜದ ನಿವೃತ್ತ ಸರಕಾರಿ ಅಧಿಕಾರಿಗಳು, ದುಡ್ಡಿರುವವರು, ರಾಜಕೀಯದ ಹುಚ್ಚು ಹಿಡಿದಿರುವವರು ಸದಾ ಇರುತ್ತಾರೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ಶ್ರೀಧರ ನಾಯ್ಕ ಅಲಿಯಾಸ್ ಸೇವಾಲಾಲ್ ಸ್ವಾಮಿ ಸರ್ಕಾರದ ಕೆಲಸ ಮಾಡಿಸುತ್ತೇನೆಂದು, ಪಾರ್ಟಿ ಟಿಕೆಟ್ ಕೊಡಿಸುತ್ತೇನೆಂದು ಹಲವರಿಗೆ ಹೇಳಿ ದುಡ್ಡು ಕಿತ್ತ ಪ್ರಕರಣಗಳಿಗೆ ಲೆಕ್ಕವಿಲ್ಲ. ಇದು ಸಾಲದೆಂಬಂತೆ ಕರಾಟೆ ತರಬೇತಿ ಶಾಲೆ ತೆರೆದು ಹುಡುಗಿಯರೊಟ್ಟಿಗೆ ಸಾಮು ತೆಗೆದದ್ದೂ ಇದೆ! ಪಾಪ, ಇಷ್ಟೆಲ್ಲ ಮಾಡುತ್ತಿರುವ ಸೇವಾಲಾಲ್ ಸ್ವಾಮಿಗೆ ತಾಂಡಾಗಳ ಗುಡಿಸಲುಗಳಲ್ಲಿ ಬೇಯುತ್ತಿರುವ ಬಡ ಬಂಜಾರ ಸಮುದಾಯದತ್ತ ತಿರುಗಿನೋಡಲು ಪುರುಸೊತ್ತಾದರೂ ಎಲ್ಲಿಂದ ಸಿಗಬೇಕು?!

ಬಂಜಾರ ಸಮಾಜದ ಸೇವೆ ಮಾಡೊ ಅಂದರೆ ನಾನು ಶೇವ್ ಮಾಡ್ತಿನಿ ಎನ್ನುವ ಈತ ಸ್ವಾಮಿಯಾದ ನಂತರ ಗಳಿಸಿರುವ ದುಡ್ಡು ಮತ್ತು ಆಸ್ತಿ ಮಾತ್ರ ಮುರುಘಾರಾಜೇಂದ್ರ ಮಠದ ಶಿವಮೂರ್ತಿ ಶರಣರನ್ನೂ ಬೆಚ್ಚಿಬೀಳಿಸುವಂತಿದೆ.

ಅದೆಲ್ಲ ಬದಿಗಿರಲಿ, ವರ್ತಮಾನದ ಸಂಗತಿಯಾವುದೆಂದರೆ ಈ ಶ್ರೀಧರ ನಾಯ್ಕನ ಹದಿನೈದು ವರ್ಷಗಳ ಹಳೆಯ ಲವ್ವು ಡವ್ವು ಒಂದು ಈಗ ಸುದ್ದಿ ಮಾಡುತ್ತಿರುವುದು. ಈತನ ಮಾಜಿ ಪ್ರೇಯಸಿ ಗಂಗೂಬಾಯಿ ಎಂಬಾಕೆ "ನನಗೆ ನೀನು ಬೇಕು ಸಂಗನ ಬಸವಾ. ಕಾವಿ ಕಳಚಿ ನನ್ನೊಂದಿಗೆ ಬಾರೋ" ಎಂದು ರಾದ್ಧಾಂತ ಶುರುಹಚ್ಚಿದ್ದಾಳೆ.

ಇತ್ತ ಆಕೆಯೊಂದಿಗೆ ಹೋಗಬೇಕೋ, ಮಠದಲ್ಲಿಯೇ ಉಳಿಯಬೇಕೋ ಎಂಬ ಗೊಂದಲದಲ್ಲಿ ಸೇವಾಲಾಲ್ ಸ್ವಾಮಿ ಇದ್ದರೆ ಈತ ಏನು ಮಾಡಿದರೂ ನಮಗೇನು ಎಂಬ ನಿರ್ಲಕ್ಷ್ಯ ಬಂಜಾರ ಸಮುದಾಯದವರದ್ದಾಗಿದೆ. ಈ ಪ್ರಕರಣದಿಂದ ಒಂದಿಷ್ಟು ಗಾಬರಿ ಆಗದಿರುವ ಬಂಜಾರ ಸಮಾಜ "ಯಾರು ಈ ಸೇವಾಲಾಲ್? ಆತನಿಗೆ ಮುರುಘಾ ಶರಣರೇ ಬಾಸ್. ಅವನ ಪ್ರೇಮ ಪ್ರಕರಣಕ್ಕೆ ಶರಣರೇ ಮುಕ್ತಿಯ ಮಾರ್ಗ ತೋರಿಸಲಿ" ಎಂಬಂತೆ ಮೌನಿಗಳಾಗಿದ್ದಾರೆ.

ಈ ಸಂಗನ ಬಸವ ಸ್ವಾಮಿಯ ಹದಿನೈದು ವರ್ಷಗಳ ಹಳೆಯ ಪ್ರೇಮ ಪ್ರಕರಣವನ್ನು ಈಗ ಅದ್ಯಾರು ಕೆದಕಿದರು ಎಂಬುದು ಚಿದಂಬರ ರಹಸ್ಯವಾಗಿಲ್ಲ. ಇದರ ಹಿಂದೆ ರಾಜಕೀಯ ಲೆಕ್ಕಾಚಾರಗಳು ಇವೆ.

ಇತ್ತೀಚಿಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮಾಯಕೊಂಡ ಮೀಸಲು ಕ್ಷೇತ್ರದಲ್ಲಿ ಬಿಜೆಪಿಯಿಂದ ಬಸವರಾಜ ನಾಯ್ಕ ಮತ್ತು ಕಾಂಗ್ರೆಸ್‌ನಿಂದ ಶಿವಮೂರ್ತಿ ನಾಯ್ಕ ಕಣಕ್ಕಿಳಿದಿದ್ದರು. ಈ ಹಿಂದೆ ಬಸವರಾಜ ನಾಯ್ಕ ಬಿಜೆಪಿ ಶಾಸಕನಾಗಿ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷನಾಗಿದ್ದಾಗ ಸೇವಾಲಾಲ್ ಮಠದ ಅಭಿಬೃದ್ಧಿಗೆಂದು ಕೋಟಿಗಟ್ಟಲೆ ಅನುದಾನ ಬೇಕೆಂದು ಅರ್ಜಿ ಗುಜರಾಯಿಸಿದ್ದ. ಆದರೆ ಬಸವರಾಜ ನಾಯ್ಕ "ಸೇವಾಲಾಲ್ ಮಠ ನಮ್ಮ ಸಮಾಜದ ಮಠವೇ ಅಲ್ಲ, ನೀನು ನಮ್ಮ ಗುರುವೂ ಅಲ್ಲ" ಎಂದು ಸಂಗನ ಬಸವನ ಬೇಡಿಕೆಯನ್ನು ಸಾರಾಸಗಟು ರಿಜೆಕ್ಟ್ ಮಾಡಿದ್ದ.

ಬಸವರಾಜ ನಾಯ್ಕನಿಂದ ಅವಮಾನಿತನಾದ ಸಂಗನ ಬಸವಸ್ವಾಮಿ ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದ. ಚುನಾವಣೆಯಲ್ಲಿ ಬಸವರಾಜ ನಾಯ್ಕನನ್ನು ಸೋಲಿಸಬೇಕೆಂದು ಪ್ರಯತ್ನಿಸಲಾರಂಭಿಸಿದ. ಅದಕ್ಕೆ ಸರಿಯಾಗಿ ಕಾಂಗ್ರೆಸ್ ಪಕ್ಷದ ಟಿಕೆಟ್ ಪಡೆದದ್ದು ಸಂಗನ ಬಸವಸ್ವಾಮಿಯ ಖಾಸಾ ಚಿಕ್ಕಪ್ಪ ಶಿವಮೂರ್ತಿ ನಾಯ್ಕ.


ಸೇವಾಲಾಲ್

ಇದನ್ನೇ ಅಸ್ತ್ರವಾಗಿಸಿಕೊಂಡ ಸಂಗನ ಬಸವಸ್ವಾಮಿ ಬಸವರಾಜ ನಾಯ್ಕನ ವಿರುದ್ಧ ಚುನಾವಣೆಯಲ್ಲಿ ಪ್ರಚಾರ ಮಾಡಿದ. ಇವನ ಪ್ರಚಾರದಿಂದಾಗಿ ಬಸವರಾಜ ನಾಯ್ಕ ಸೋಲಲಿಲ್ಲ, ಶಿವಮೂರ್ತಿ ನಾಯ್ಕನೂ ಗೆಲ್ಲಲಿಲ್ಲ, ಮಾಯಕೊಂಡ ಕ್ಷೇತ್ರದ ಮತದಾರರು ತಮ್ಮ ಕರ್ತವ್ಯವನ್ನು ನಿರ್ವಹಿಸಿದರಷ್ಟೇ. ಆದರೂ ಸಂಗನ ಬಸವಸ್ವಾಮಿ ತನ್ನ ವಿರುದ್ಧ ಅಡ್ಡಾಡಿದ್ದಕ್ಕೆ ಕೋಪಗೊಂಡಿದ್ದ ಬಸವರಾಜ್ ನಾಯ್ಕನ ಕೈಗೆ ಸಿಕ್ಕವಳೇ ಸ್ವಾಮಿಯ ಮಾಜಿ ಡವ್ವು ಗಂಗೂಬಾಯಿ! ಗಂಗೂಬಾಯಿಯನ್ನು ಪುಸಲಾಯಿಸಿದ ಬಸವರಾಜ ನಾಯ್ಕ ಆಕೆ ಹಾದಿರಂಪ ಬೀದಿರಂಪ ಮಾಡುವಂತೆ ನೋಡಿಕೊಂಡ.

ಒಟ್ಟಾರೆ ಸೇವಾಲಾಲ್ ಸಂಗನ ಬಸವನ ರಾದ್ಧಾಂತದಿಂದಾಗಿ ಮುರುಘಾರಾಜೇಂದ್ರ ಶರಣರು ಕಂಗಾಲಾಗಿದ್ದಾರೆ. ಬಂಜಾರ ಸಮುದಾಯದವರು ತಮಗೆ ಆದ ಅವಮಾನದಿಂದ ಕುಪಿತರಾಗಿದ್ದಾರೆ. ಸಂಗನ ಬಸವನ ಸ್ವಾಮಿ ಯಾರಿಗೂ ತನ್ನ ಮುಖ ತೋರಿಸಲಾಗದೆ ಬೆಚ್ಚಿಬಿದ್ದಿದ್ದಾನೆ.


ಮುರುಘಶರಣರಿಗೆ ಇದೆಲ್ಲ ಬೇಕಿತ್ತಾ?


● ವರದಿಗಾರ

ೂಕ್ಷ್ಮ ಸಂವೇದನೆಯ ನಿರ್ದೇಶಕ ರಿತುಪರ್ಣ ಘೋಷ್

ಭಾರತೀಯ ಚಿತ್ರರಂಗ ಇತ್ತೀಚಿಗೆ ಕಂಡಿದ್ದ ಭಾವಂತ ನಿರ್ದೇಶಕ ರಿತುಪರ್ಣ ಘೋಷ್ ಗುರುವಾರ ಸ್ಥಾನದಲ್ಲಿ ನಿಧನರಾದ ಸುದ್ದಿ ಎಲ್ಲರನ್ನು ಬೆಚ್ಚಿಬೀಳಿಸಿದೆ. ್ನ 50 ವರ್ಷ ವಯಸ್ಸು ಕೂಡ ಆಗಿರದಿದ್ದ ಘೋಷ್ ದು 20 ಸಿನಿಮಾಗಳನ್ನು ನಿರ್ದೇಶಿಸಿ ದೇಶ ಮತ್ತು ೇಶಗಳಲ್ಲಿ ಹಲವಾರು ಪ್ರಶಸ್ತಿಗಳನ್ನು ಗಳಿಸಿದ್ದರು.

ಅರ್ಥಶಾಸ್ತ್ರದಲ್ಲಿ ಡಿಗ್ರಿ ಪಡೆದಿದ್ದರೂ ಖ್ಯಾತ ನಿರ್ದೇಶಕ ಜಿತ್ ರೇ ಅವರ ಸಿನಿಮಾಗಳಿಂದ ಪ್ರಭಾವಿತರಾಗಿ ನಿರ್ದೇಶನಕ್ಕೆ ಇಳಿದವರು ಘೋಷ್. ಅವರು ದಲು ನಿರ್ದೇಶಿಸಿದ್ದು 'ಹೀರೇರ್ ಅಂಗ್ಟಿ' (ವಜ್ರದ ಗುರ) ಎಂಬ ಮಕ್ಕಳ ಚಿತ್ರವನ್ನು. ಇದು ಹೆಚ್ಚು ರ ಪಡೆಯದಿದ್ದರೂ ವಿಮರ್ಶಕರ ಪ್ರಶಂಸೆ ಪಡೆದಿತ್ತು. ಮಗಳ ನಡುವಿನ ಸಂಬಂಧ ಕುರಿತು ಅವರು ೇಶಿಸಿದ ಎರಡನೆ ಚಿತ್ರ 'ಉನಿಶೆ ಏಪ್ರಿಲ್' (ಏಪ್ರಿಲ್) ಎಲ್ಲರ ಗಮನ ಸೆಳೆದು ರಾಷ್ಟ್ರೀಯ ಪ್ರಶಸ್ತಿಯನ್ನು ದಿತ್ತು. ಅದಾದನಂತರ ಅವರು ತಿರುಗಿ ನೋಡಲಿಲ್ಲ. ಜನಪ್ರಿಯ ಚಿತ್ರಗಳಲ್ಲಿ ಘೋಷ್ ಅವರು ಹೆಚ್ಚಾಗಿ





ಮನುಷ್ಯರ ನಡುವಿನ ಸಂಬಂಧಗಳನ್ನು ಚಿತ್ರಿಸುತ್ತಿದ್ದರು. ಆದರೆ ಕಲಾ ಚಿತ್ರಗಳಂತಲ್ಲ, ಬದಲಾಗಿ ನಿಜ ಜೀವನದಲ್ಲಿ ಇರುವಂತೆ ಸಹಜವಾಗಿ ತೋರಿಸುತ್ತಿದ್ದರು.

ಘೋಷ್ ಅವರ ಪ್ರತಿಭೆಯನ್ನು ಮೆಚ್ಚಿ ಅವರ ಸಿನಿಮಾದಲ್ಲಿ ನಟಿಸಲು ಭಾರತೀಯ ಚಿತ್ರರಂಗದ ದಿಗ್ಗಜರೆಲ್ಲ ಆಶಿಸುತ್ತಿದ್ದರು. ಅವರು ನಿರ್ದೇಶಿಸಿದ್ದ 'ದಿ ಲಾಸ್ಟ್ ಲಿಯರ್' ಎಂಬ ಇಂಗ್ಲಿಷ್ ಚಿತ್ರದಲ್ಲಿ ಬಾಲಿವುಡ್ಡಿನ ಬಿಗ್ ಬಿ ಅಮಿತಾಭ್ ಬಚ್ಚನ್ ನಟಿಸಿದ್ದರೆ, 'ಸನ್ ಗ್ಲಾಸ್' ಚಿತ್ರದಲ್ಲಿ ಬಚ್ಚನ್ ಅವರ ಪತ್ನಿ ಜಯಾ ನಟಿಸಿದ್ದರು. ಹಾಗೆಯೇ ಬಚ್ಚನ್ ಸೊಸೆ ಐಶ್ವರ್ಯ ರೈ 'ರೈನ್‌ಕೋಟ್' ಎಂಬ ಚಿತ್ರದಲ್ಲೂ, ಮಗ ಅಭಿಷೇಕ್ ಬಚ್ಚನ್ 'ಅಂತರ್‌ಮಹಲ್' ಚಿತ್ರದಲ್ಲಿ ನಟಿಸಿದ್ದರು.

ನಿರ್ದೇಶನವಲ್ಲದೆ ಘೋಷ್ ಅವರು ಹಲವು ಸಿನಿಮಾಗಳಲ್ಲೂ ನಟಿಸಿದ್ದರು. ಅವರು ನಿರ್ವಹಿಸಿದ್ದ ಪಾತ್ರಗಳಲ್ಲಿ ಮುಖ್ಯವಾದದ್ದು 'ಚಿತ್ರಾಂಗದ' ಸಿನಿಮಾದ್ದು. ಆ ಚಿತ್ರದಲ್ಲಿ ಮಹಿಳೆಯ ಸಂವೇದನೆಯನ್ನು ಹೊಂದಿರುವ, ಮಹಿಳೆ ಆಗಲು ಇಚ್ಛಿಸುವ ಪುರುಷ ನೃತ್ಯಗಾರನ ಪಾತ್ರವನ್ನು ಮಾಡಿದ್ದರು. ಅದು ಒಂದು ರೀತಿಯಲ್ಲಿ ಅವರ ನಿಜಜೀವನಕ್ಕೆ ಹತ್ತಿರವಾಗಿತ್ತು.

ಯಾಕೆಂದರೆ ಸ್ವತಃ ಘೋಷ್ ಅವರು ಪುರುಷರಾಗಿ ಜನಿಸಿದ್ದರೂ ಮಹಿಳೆಯರ ಉಡುಪುಗಳನ್ನು, ಕಣ್ಣಿಗೆ ಕಾಡಿಗೆಯನ್ನು, ಸರ ಓಲೆಗಳನ್ನು ಯಾವ ಮುಚ್ಚು ಮರೆಯಿಲ್ಲದೆ ಧರಿಸುತ್ತಿದ್ದರು. ಯಾರಾದರೂ ಇದರ ಬಗ್ಗೆ ಕೇಳಿದರೆ ಅದು ತನ್ನ ವೈಯಕ್ತಿಕ ವಿಷಯ ಎನ್ನುತ್ತಿದ್ದರು. 'ನಾನು ಪುರುಷನೂ ಅಲ್ಲ ಮಹಿಳೆಯೂ ಅಲ್ಲ, ನಾನು ಓರ್ವ ವ್ಯಕ್ತಿ' ಎನ್ನುತ್ತಿದ್ದರು. ಮಹಿಳೆಯರ, ಅದರಲ್ಲೂ ಲಿಂಗ ಅಲ್ಪಸಂಖ್ಯಾತರ, ಬಗ್ಗೆ ನಮ್ಮ ಸಮಾಜದಲ್ಲಿ ಕಾಳಜಿ ಕಡಿಮೆ ಎಂದು ದೂರುತ್ತಿದ್ದರು.

ಘೋಷ್ ಅವರು ಇನ್ನೂ ಹೆಚ್ಚು ಕಾಲ ಬದುಕಿದ್ದರೆ ಅವರು ಖಂಡಿತವಾಗಿಯೂ ಅದ್ಭುತ ಸಿನಿಮಾಗಳನ್ನು ಕೊಡು ತ್ತಿದ್ದರು ಎಂಬುದರ ಬಗ್ಗೆ ಯಾವ ಅನುಮಾನಗಳೂ ಇಲ್ಲ.

ಘೋಷ್ ಅವರ ಅಕಾಲಿಕ ಸಾವಿನಿಂದಾಗಿ ಭಾರತೀಯ ಚಿತ್ರರಂಗ ಬಡವಾಗಿದೆ. ○

ಸಿದ್ದು ಸೆಳೆಯಲು ಬರುತ್ತಿದ್ದಾನೆ ಅಕ್ಕಿ ಮಾಫಿಯಾದ ನಾಗರಾಜ್



ಬಡವರಿಗೆ ರೂಪಾಯಿಗೆ ಕೆಜಿ ಅಕ್ಕಿ ಕೊಡುವ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಘೋಷಣೆ ಕೇಳಿ ನಾಡಿನ ರೈತಾಪಿ ಬಡಬಗ್ಗರೆಷ್ಟು ಖುಷಿ ಪಟ್ಟರೋ ಗೊತ್ತಿಲ್ಲ. ಆದರೆ ಕೇಕೆ ಹಾಕಿ ಕುಣಿದಾಡುತ್ತಿರುವುದು ಮಾತ್ರ ಪಡಿತರ ಮಾಫಿಯಾ ದೊರೆ ಸುರಕ್ಷಾ ನಾಗರಾಜ್ ಮತ್ತು ಆತನ ಅಕ್ಕಿ ಸ್ಮಗ್ಲರುಗಳ ಹಿಂಡು!

ಯಾವ ಕಾಳಜಿ ಮತ್ತು ಛಲದಿಂದ ಮುಖ್ಯಮಂತ್ರಿಗಳು ಬಡಬಗ್ಗರಿಗೆ ಅಕ್ಕಿಯ ಬಂಪರ್ ಕೊಡುಗೆಯನ್ನು ಘೋಷಿಸಿದ್ದಾರೋ ಅದಕ್ಕಿಂತಲೂ ಆಗಾಧವಾದ ಕುತಂತ್ರ ಮತ್ತು ಲೂಟಿಯ ಟೆಕ್ನಿಕ್ಕುಗಳನ್ನು ಮೈಗೂಡಿಸಿಕೊಂಡಿರುವ 'ಪಡಿತರ ಮಾಫಿಯಾ' ರಾಜ್ಯದಲ್ಲಿ ಬೇರು ಬಿಟ್ಟಿರುವಾಗ ಸಿದ್ದರಾಮಯ್ಯನವರ ಅಕ್ಕಿ ಹೇಗೆ ತಾನೇ ಬಡವರಿಗೆ ಸೇರಲು ಸಾಧ್ಯ? ಸೇರಿದರೂ ಅದು ತಿನ್ನಲು ಯೋಗ್ಯವಾಗಿರುತ್ತಾ? ಕುಮಾರಸ್ವಾಮಿ ಸರ್ಕಾರದಿಂದ ಹಿಡಿದು ನಿನ್ನೆ ಮೊನ್ನೆಯ ಶೆಟ್ಟರ್ ಸರ್ಕಾರಗಳ ತನಕ ಬಗ್ಗುಬಡಿಯಲಾಗದ ಪಡಿತರ ಮಾಫಿಯಾ ಜಾಲವನ್ನು ಈಗ ಸಿದ್ದರಾಮಯ್ಯನವರಿಂದ ಮಟ್ಟಾ ಹಾಕಲು ಸಾಧ್ಯವೇ?

ಬಡವರ ಓಟು ಮತ್ತು ಆಗದಿಯ ಅಕ್ಕಿ ಪಾಲಿಟಿಕ್ಸು ಯಾವ ಪಕ್ಷ-ನಾಯಕನಿಗೇನು ಲಾಭ ತಂದುಕೊಟ್ಟಿದೆಯೊ? ಆದರೆ ಸಾವಿರಾರು. ಕೋಟಿ ರೂಪಾಯಿಗಳ ಹಗಲು ದರೋಡೆಗಂತೂ ಕಾರಣವಾಗಿದೆ. ಇಂಥದೊಂದು ಲೂಟಿ ಕಾಂಡ ತನ್ನ ಪರಮಾವಧಿಯ ನಿರ್ಲಜ್ಜತೆಗಿಳಿದಿದ್ದು ಬಿಜೆಪಿ ಆಳ್ವಿಕೆಯಲ್ಲಿ, 2012ರ ಆಗಸ್ಟ್ ಹೊತ್ತಿಗೆ ರಾಜ್ಯದ ತುಮಕೂರು, ಬೆಂಗಳೂರು, ಕೋಲಾರ, ಶಿವಮೊಗ್ಗ ಮತ್ತು ದಾವಣಗೆರೆಗಳಲ್ಲಿ ನ್ಯಾಯಬೆಲೆ ಅಂಗಡಿಗಳ ವಿರುದ್ಧ ಜನ ರೊಚ್ಚಗೆದ್ದು ಬೀದಿಗಿಳಿದರು. ಬೆಂಗಳೂರಿನ ಕೆಲ ಸ್ಲಮ್ಮುಗಳ ಜನರಂತೂ ನ್ಯಾಯಬೆಲೆ ಅಂಗಡಿಗೆ ನುಗ್ಗಿದ್ದೇ ಕಳಪೆ ಸರ್ಕಾರಿ ಅಕ್ಕಿ ಮೂಟೆಗಳನ್ನು ರಸ್ತೆಗೆಸೆದು ಪ್ರತಿಭಟಿಸಿದರು.

ಇಬ್ಬರು ಐಎಎಸ್‌ಗಳ ಬಲಿ!

ಬಡವರಿಗೆಂದು ಬಿಜೆಪಿ ಸರ್ಕಾರ ವಿತರಣೆಗಿಟ್ಟಿದ್ದ ಪಡಿತರ ಅಕ್ಕಿಯ ತುಂಬ ಹುಳುಗಳ ಗೂಡು. ಗೊಂಡಲಕ್ಕಿ, ಮುಗ್ಗುಲಕ್ಕಿ, ಭೂಸ್ಟು ಬಂದಕ್ಕಿ- ಹೀಗೆ ಮನುಷ್ಯ ತಿನ್ನುವುದಿರಲಿ ನಾಯಿನರಿಗಳು ಕೂಡ ಮೂಸಲಾಗದಷ್ಟು ಕಳಪೆ ಅಕ್ಕಿಯನ್ನು ಬಿಜೆಪಿ ಸರ್ಕಾರ ವಿತರಣೆಗಿಳಿದಿದ್ದರ ಹಿಂದೆ ಬೇರೆಯದೇ ಮರ್ಮವೊಂದಿತ್ತು, ಅದು ಮುಖ್ಯಮಂತ್ರಿ ಯಡ್ಡಿ ಮತ್ತು ಉಪಮುಖ್ಯಮಂತ್ರಿ ಈಶ್ವರಪ್ಪನವರೊಂದಿಗೆ ಪಡಿತರ ಮಾಫಿಯಾ ದೊರೆ ಸುರಕ್ಷಾ ನಾಗರಾಜ್‌ಗಿದ್ದ ವ್ಯಾವಹಾರಿಕ ಸಂಬಂಧ!

ರಾಜ್ಯಾದ್ಯಂತ ಜನ ಕಳಪೆ ಪಡಿತರ ಅಕ್ಕಿಯ ವಿರುದ್ಧ ಬೀದಿಗಿಳಿದಿದ್ದರೆ ಅರ್ಧ ಡಜನ್ ಬಿಜೆಪಿ ಮಂತ್ರಿಗಳ ಹೆಗಲ ಮೇಲೆ ಸುರಕ್ಷಾ ನಾಗರಾಜ್ ಕೈಯಿಟ್ಟಿದ್ದ. ಪಡಿತರ ಮಾಫಿಯಾ ಮತ್ತು ಬಿಜೆಪಿ ಸಂಬಂಧ ಕೊನೆಕೊನೆಗೆ ಯಾವ ಹಂತ ತಲುಪಿತೆಂದರೆ ರಾಜ್ಯದ ಇಬ್ಬರು ಪ್ರಾಮಾಣಿಕ ಐಎಎಸ್ ಅಧಿಕಾರಿಗಳನ್ನು ಕೇವಲ ಸುರಕ್ಷಾ ನಾಗರಾಜ್‌ನ ಹಿತಾಸಕ್ತಿಗೆಂದೇ ಬಿಜೆಪಿ ಸರ್ಕಾರ ಬಲಿ ಹಾಕಿತು.

ಅದು 2012 ಜುಲೈ ತಿಂಗಳು. ಪಡಿತರ ಅಕ್ಕಿಯ ಗುಣಮಟ್ಟದ ವಿರುದ್ಧ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರತಿಭಟನೆಗಳಾಗುತ್ತಿದ್ದಂತೆಯೇ ಆಗ ಜಿಲ್ಲಾಧಿಕಾರಿಯಾಗಿದ್ದ ಪೊನ್ನುರಾಜ್ ಸವಳಂಗ ರಸ್ತೆಯ ಸುರಕ್ಷಾ ಗೋಡೌನಿನ ಮೇಲೆ ದಾಳಿಯಿಟ್ಟರು. ಎಂಥಾ ಆಘಾತಕಾದಿತ್ತೆಂದರೆ ಲಕ್ಷ ಕ್ವಿಂಟಾಲಿಗೂ ಅಧಿಕ ಮೊತ್ತದ ಅಕ್ಕಿ ಮೂಟೆಗಳಿಗೆ ಭೂಸ್ಟ್ ಹಿಡಿದು ಹುಳ ಬದ್ದಿತ್ತು. ಅಕ್ಕಿಯ ಮಾದರಿಯನ್ನು ಬೆಂಗಳೂರಿನ ಕೇಂದ್ರ ಪ್ರಯೋಗಾಲಯದ ಪರೀಕ್ಷೆಗೆ ಕೊಟ್ಟರೆ ಅದು 'ಮನುಷ್ಯ ಸೇವನೆಗೇ ಯೋಗ್ಯವಲ್ಲ' ಎಂಬ ವರದಿ ಬಂತು.


ಅದೇ ಹೊತ್ತಿಗೆ ಕೆಎಫ್‌ಸಿಎಸ್‌ಸಿ ಅಂದರೆ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮಕ್ಕೆ ಎಂ.ಡಿ.ಯಾಗಿದ್ದದ್ದು ಮತ್ತೊಬ್ಬ ಪ್ರಾಮಾಣಿಕ ಐಎಎಸ್ ಅಧಿಕಾರಿ ಜಗದೀಶ್. ಬೆಂಗಳೂರಿನಿಂದ ಒಂದು ಡಜನ್ ಅಧಿಕಾರಿಗಳ ಸಮೇತ ಶಿವಮೊಗ್ಗದ ಸುರಕ್ಷಾ ಗೋಡೌನುಗಳ ಮೇಲೆ ದಾಳಿಯಿಟ್ಟರೆ ಹುಳು ಬಿದ್ದ ಅಕ್ಕಿಯ ಕತೆ ಒತ್ತಟ್ಟಿಗಿರಲಿ ಬರೋಬ್ಬರಿ ಒಂದು ಲಕ್ಷ ಕ್ವಿಂಟಾಲುಗಳಷ್ಟು ಭತ್ತವೇ ನಾಪತ್ತೆಯಾಗಿತ್ತು!

ಇದರರ್ಥ ಇಲ್ಲದ ಭತ್ತಕ್ಕೆ ಸುರಕ್ಷಾ ನಾಗರಾಜ್ ಹದಿನೈದು ಕೋಟಿಗೂ ದೊಡ್ಡ ಮೊತ್ತದ ನಿಗಮದ ದುಡ್ಡನ್ನು ಲಪಟಾಯಿಸಿದ್ದ!

ಸುರಕ್ಷಾ ನಾಗರಾಜ್


ಕೆಎಫ್‌ಸಿಎಸ್‌ಸಿಯ ಮ್ಯಾನೇಜರ್‌ನಿಂದ ಹಿಡಿದು ಜಿಲ್ಲಾ ಮಟ್ಟದ ಬಹುತೇಕ ಅಧಿಕಾರಿಗಳಿಗೆ ನಾಗರಾಜ್ ಹೊಡೆದ ಕೊಳ್ಳೆಯ ಪಾಲು ಕೊಟ್ಟಿದ್ದ.

ದುರಂತವೆಂದರೆ ಯಾವ ಕೆಎಫ್‌ಸಿಎಸ್‌ಸಿಯ ಎಂ.ಡಿ. ಜಗದೀಶ್ ಸುರಕ್ಷಾ ನಾಗರಾಜ್‌ನ ಗೋಡೌನಿನ ಮೇಲೆ



ದಾಳಿಯಿಟ್ಟಿದ್ದರೋ ರೇಡು ನಡೆಯುತ್ತಿರುವಾಗಲೇ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಆಯುಕ್ತ ಗೋವಿಂದರಾಜು ಫೋನ್ ಮಾಡಿದ್ದೇ ನಡೆಸಿದ ದಾಳಿಯನ್ನು ಕೈಬಿಟ್ಟು ವಾಪಸ್ಸಾಗುವಂತೆ ಗದರಿ ಬಿಟ್ಟರು. ವಿಧಿಯಿಲ್ಲದೆ ಬೆಂಗಳೂರಿಗೆ ವಾಪಸ್ಸಾದ ಜಗದೀಶ್ ನಲವತ್ತು ಪುಟಗಳ ವಿಸ್ತಾರ ವರದಿ ಬರೆದು ಆಹಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹರೀಶ್‌ಗೌಡರಿಗೆ ಕೊಟ್ಟರಾದರೂ ಇದಾಗಿ ಒಂದೇ ತಿಂಗಳಿಗೆ ಕೆಎಫ್‌ಸಿಎಸ್‌ಸಿ ಎಂ.ಡಿ. ಹುದ್ದೆಯಿಂದ ನಿರ್ದಾಕ್ಷಿಣ್ಯವಾಗಿ ಅವರನ್ನು ಎತ್ತಂಗಡಿ ಮಾಡಲಾಯ್ತು.

ಇತ್ತ ಶಿವಮೊಗ್ಗ ಜಿಲ್ಲಾಧಿಕಾರಿ ಪೊನ್ನುರಾಜ್ ಸುರಕ್ಷಾ ನಾಗರಾಜ್‌ನ ಪಡಿತರ ಲೂಟಿ ವಿರುದ್ಧ ಏನೆಲ್ಲ ಕ್ರಮ ಜರುಗಿಸಲೆಂದು ಕಾರ್ಯಾಚರಣೆಗಿಳಿದಿದ್ದರೋ ಅವರನ್ನೂ ಅಷ್ಟೇ ನಿರ್ದಯವಾಗಿ ಬೆಂಗಳೂರಿಗೆ ಎತ್ತಂಗಡಿ ಮಾಡಲಾಯಿತು. ಒಂದೆಡೆ ಮುಖ್ಯಮಂತ್ರಿ ಯಡ್ಡಿಯ ಶ್ರೀರಕ್ಷೆ ಮತ್ತೊಂದೆಡೆ ಉಪಮುಖ್ಯಮಂತ್ರಿ ಈಶ್ವರಪ್ಪನವರ ಕುಮ್ಮಕ್ಕಿನ ಫಲವಾಗಿ ಪಡಿತರ ಮಾಫಿಯಾ ವಿರುದ್ಧ ದನಿಯೆತ್ತಿದ ಇಬ್ಬರು ನಿಷ್ಠಾವಂತ ಐಎಎಸ್ ಅಧಿಕಾರಿಗಳನ್ನು ಕೇವಲ ಎರಡು ತಿಂಗಳೊಳಗೆ ಬಿಜೆಪಿ ಸರ್ಕಾರ ಎತ್ತಂಗಡಿ ಮಾಡಿತು.



ಆಹಾರ ನಿಗಮದ ಎಂ.ಡಿ. ಸಿ.ಕೆ. ಶಿವಣ್ಣ

ಅದು ಸುರಕ್ಷಾ ನಾಗರಾಜನ ತಾಕತ್ತು. ಎಲ್‌ಐಸಿ ನಾಗರಾಜ್ ಅಲಿಯಾಸ್ ಆಶ್ರಯಾ ನಾಗರಾಜ್ ಉರ್ಫ್ ಸುರಕ್ಷಾ ನಾಗರಾಜ್ ಎಂಬ ಹೆಸರನ್ನು ಯಾರೆಷ್ಟು ಕೇಳಿದ್ದಾರೋ ಗೊತ್ತಿಲ್ಲ. ಆದರೆ ಶಿವಮೊಗ್ಗದಿಂದ ಹಿಡಿದು ಬೆಂಗಳೂರಿನ ತನಕ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಯಾವೊಬ್ಬ ಅಧಿಕಾರಿಯನ್ನು ಕೇಳಿ ನೋಡಿ- ಸಾಕ್ಷಾತ್ ಮುಖ್ಯಮಂತ್ರಿಗೇ ಅಷ್ಟೊಂದು ಗೌರವ ಕೊಡಲಿಕ್ಕಿಲ್ಲ, ಆದರೆ ಸುರಕ್ಷಾ ಎಂಬ ಶಬ್ದ ಕೇಳಿದ್ದೇ ತಡ ಆಹಾರ ಇಲಾಖೆಯ ಪ್ರತಿಯೊಬ್ಬರೂ ಗಡಗಡ ನಡುಗುತ್ತಾರೆ. ಆತ ಆಹಾರ ನಿಗಮದ ಭ್ರಷ್ಟರ ಪಾಲಿಗೆ ಹೇಗೆ ಕಾಮಧೇನುವೋ ಹಾಗೇ ಪ್ರಾಮಾಣಿಕ ನೌಕರರು ಮತ್ತು ಅಧಿಕಾರಿಗಳ ಪಾಲಿಗೆ ಸಿಂಹಸ್ವಪ್ನ.

ಭ್ರಷ್ಟ ಎಂ.ಡಿ. ಶಿವಣ್ಣ

ಶಿವಮೊಗ್ಗದ ಸವಳಂಗ ರಸ್ತೆಯ ಈತನ ಸುರಕ್ಷಾ ಗೋಡೌನ್ ಎಂಬುದು ಇವತ್ತು ಇಡೀ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಪಾಲಿಗೆ ಹೆಡ್ಡಾಫೀಸಿದ್ದಂತೆ. ಮುತ್ತೋಡು, ಹೊನ್ನಾಳಿ, ಶಿಕಾರಿಪುರ ಇತ್ಯಾದಿ ಊರುಗಳಲ್ಲೂ ಈತನ ಸುರಕ್ಷಾ ಹೆಸರಿನ ಗೋಡೌನುಗಳಿವೆ. ಬೇಕಾಬಿಟ್ಟಿ ರೈಸ್ ಮಿಲ್ಲುಗಳನ್ನೂ ನಡೆಸುತ್ತಾನೆ. ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿ ಭವ್ಯ ಬಂಗಲೆ, ಶಿವಮೊಗ್ಗ ಸುತ್ತಮುತ್ತ ಒಂದು ಡಜನ್ನುಗಳಷ್ಟು ಬಾರ್ ಮತ್ತು ವೈನ್‌ಸ್ಟೋರ್‌ಗಳು, ಬೆಂಗಳೂರಿನ ಪ್ರತಿಷ್ಠಿತ ಗೋಲ್ಡ್ ಫಿಂಚ್ ಹೋಟೇಲಿನ ಪಾಲುದಾರಿಕೆ, ನೆಲಮಂಗಲ ಸಮೀಪ 'ಪ್ರಥಮ್' ಎಂಬ ಮಿನರಲ್ ವಾಟರ್ ಫ್ಯಾಕ್ಟರಿ ಮತ್ತು ಶಿವಮೊಗ್ಗದಲ್ಲಿ 'ಜನ ವಾರ್ತೆ' ಎಂಬ ಬಿಟ್ಟಿಗೆ ಹಂಚುವ ಯಾರೂ ಓದದ ದಿನಪತ್ರಿಕೆ- ಇವಿಷ್ಟೂ ಸುರಕ್ಷಾ ನಾಗರಾಜನ ಸಾಮ್ರಾಜ್ಯದ ಆಧಾರ ಸ್ತಂಭಗಳು.

ಒಂದಾನೊಂದು ಕಾಲಕ್ಕೆ ಶಿವಮೊಗ್ಗದಲ್ಲಿ ಎಲ್‌ಐಸಿ ಏಜೆಂಟಾಗಿದ್ದ ನಾಗರಾಜು ಬಂಗಾರಪ್ಪ ಮುಖ್ಯಮಂತ್ರಿಯಾಗಿದ್ದೇ ಆಶ್ರಯ ಮನೆಗಳ ನಿರ್ಮಾಣದ ಕಾಂಟ್ರಾಕ್ಟರ್ ದಂಧೆಗಿಳಿದ. ಆಶ್ರಯ ಹಗರಣದ ರೂವಾರಿಯೇ ಈತನೆಂದು ಸಿಒಡಿ ತನಿಖೆಯಲ್ಲಿ ಬಯಲಾಗಿ 20 ಕೋಟಿಗೂ ದೊಡ್ಡ ಕರ್ಮಕಾಂಡದಲ್ಲಿ ಜೈಲಿಗೂ ಹೋಗಿ ಬಂದ. 2004ರ ಹೊತ್ತಿಗೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ ಅಕ್ಕಿ ಸಾಗಾಣಿಕೆ ಮಾಡುವ ಲಾರಿ ಗುತ್ತಿಗೆದಾರನಾಗಿ ಎಂಟ್ರಿ ಕೊಟ್ಟವನು ಕಾಲಕ್ರಮೇಣ ಗೋಡೌನ್ ಮಾಲಿಕನಾಗಿ, ಅಕ್ಕಿ ಸರಬರಾಜುದಾರನಾಗಿ, ರೈತರಿಂದ ಬೆಂಬಲ ಬೆಲೆಗೆ ಭತ್ತ ಖರೀದಿಸುವ ಏಜೆಂಟಾಗಿ, ಕೊನೆಗೆ ತಾನೇ ಭತ್ತವನ್ನು ಅಕ್ಕಿಯಾಗಿ ಪರಿವರ್ತಿಸಿಕೊಡುವ ರೈಸ್‌ಮಿಲ್‌ಗಳ ಮಾಲಿಕನೂ ಆಗಿಬಿಟ್ಟ.

ಸದ್ಯ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಎಂ.ಡಿ. ಹುದ್ದೆಯಲ್ಲಿರುವ ಸಿ.ಕೆ. ಶಿವಣ್ಣ ಎಂಬ ಐಎಫ್‌ಎಸ್ ಅಧಿಕಾರಿಯನ್ನು ಆ ಜಾಗಕ್ಕೆ ಹಾಕಿಸಿಕೊಂಡಿದ್ದೇ ಈತ. ಏಕೆಂದರೆ ಸಿ.ಕೆ. ಶಿವಣ್ಣ ಮತ್ತು ಸುರಕ್ಷಾ ನಾಗರಾಜ್ ಸಂಬಂಧ ಕೇವಲ ಕೆಎಫ್‌ಸಿಎಸ್‌ಸಿಯ ವ್ಯವಸ್ಥಾಪಕ ನಿರ್ದೇಶಕ ಹುದ್ದೆಗಷ್ಟೇ ಸೀಮಿತಗೊಂಡಿಲ್ಲ. ಈ ಹಿಂದೆ ರಾಜ್ಯ ಉಗ್ರಾಣ ನಿಗಮಕ್ಕೂ ಎಂ.ಡಿ.ಯಾಗಿದ್ದ ಶಿವಣ್ಣ ರಾಜ್ಯ ಪಡಿತರ ವ್ಯವಸ್ಥೆಗೆ ಬಗೆದ ಅತೀ ದೊಡ್ಡ ದ್ರೋಹವೆಂದರೆ ರಾಜ್ಯಾದ್ಯಂತ ಬೇಕಾಬಿಟ್ಟಿ ಸರ್ಕಾರಿ ಗೋಡೌನುಗಳಿದ್ದರೂ ಅಂಥ



ಪಡಿತರ ಮಾಫಿಯಾ ಡಾನ್ ಸುರಕ್ಷಾ ನಾಗರಾಜ

ಗೋಡೌನುಗಳಲ್ಲಿ ಪಡಿತರ ಅಕ್ಕಿಯನ್ನು ದಾಸ್ತಾನು ಮಾಡಲ ಸ್ಥಳಾವಕಾಶವೇ ಇಲ್ಲವೆಂದು ಸುಳ್ಳು ವರದಿಕೊಟ್ಟು ಪಡಿತ ಅಕ್ಕಿಯನ್ನು ಸುರಕ್ಷಾ ನಾಗರಾಜನ ಖಾಸಗಿ ಗೋದಾಮಿನ ಸಂಗ್ರಹಿಸಿಡುವ ಮೋಸದ ಸಂಪ್ರದಾಯವೊಂದನ್ನು ಹುಟ ಹಾಕಿದ.

ಗೋಡೌನುಗಳ ಮರ್ಮ

ಹಾಗೆ ನೋಡಿದರೆ ರಾಜ್ಯಾದ್ಯಂತ ಬೇಕಾಬಿಟ್ಟಿ ಸರ್ಕಾ ಉಗ್ರಾಣಗಳಿವೆ. ರಾಜ್ಯ ಉಗ್ರಾಣ ನಿಗಮವಲ್ಲದೆ ಕೇಂ ಉಗ್ರಾಣ ನಿಗಮವೂ ರಾಜ್ಯದ ಬೇರೆ ಬೇರೆ ಭಾಗಗಳ ಗೋದಾಮುಗಳನ್ನು ನಿರ್ಮಿಸಿದೆ. ಅವುಗಳಲ್ಲಿ ಪಡಿತ ಸಂಗ್ರಹಣೆಗೂ ಸಾಕಷ್ಟು ಸ್ಥಳಾವಕಾಶವಿದೆ. ಸರ್ಕಾ ಉಗ್ರಾಣಗಳಲ್ಲೇ ಪಡಿತರ ಧಾನ್ಯಗಳ ಸಂಗ್ರಹಣೆಯಾದ ಯಾವ ಅವ್ಯವಹಾರಕ್ಕೂ ಆಸ್ಪದವಾಗುವುದಿಲ್ಲ. ಇ ಗಮನಿಸಬೇಕಾದ ಸೂಕ್ಷ್ಮವೆಂದರೆ ಸರ್ಕಾರಿ ಗೋದಾಮುಗಳ ಬೇಕಾಬಿಟ್ಟಿ ಧಾನ್ಯ ಸಂಗ್ರಹಣೆಗೆ ಸ್ಥಳಾವಕಾಶವಿದ್ದು ನೊ ಹೊಡೆಯುತ್ತಿದ್ದರೂ ಕೇಂದ್ರ ಮತ್ತು ರಾಜ್ಯ ಉಗ್ರಾ ನಿಗಮಗಳೆರಡರ ಅಧಿಕಾರಿಗಳನ್ನೂ ಬುಟ್ಟಿಗೆ ಹಾಕಿಕೊಂ 'ನಮ್ಮಲ್ಲಿ ಪಡಿತರ ಅಕ್ಕಿ ಸಂಗ್ರಹಣೆಗೆ ಸ್ಥಳಾವಕಾಶ ಇಲ್ಲ...' ಎಂದು ವರದಿ ಕೊಡುವಂತೆ ಸುರಕ್ಷಾ ನಾಗರಾ ಕೈಚಳಕ ಮೆರೆಯುತ್ತಾನೆ.

ಸರ್ಕಾರಿ ಗೋದಾಮುಗಳಲ್ಲಿ ಸ್ಥಳಾವಕಾಶ ಇಲ್ಲವೆಂ ಮೇಲೆ ಸಹಜವಾಗೇ ಖಾಸಗಿ ಗೋಡೌನುಗಳ ಅವಲಂಬಿಸಲೇಬೇಕಾದ ಕೃತಕ, ಘಾತುಕ, ವಂ ಅನಿವಾರ್ಯತೆಯೊಂದನ್ನು ಅಧಿಕಾರಿಗಳು ಮತ್ತು ನಾಗರಾ ಸೇರಿಕೊಂಡೆ ಸೃಷ್ಟಿಸುತ್ತಾರೆ. ಏಕೆಂದರೆ ಖಾಸಗಿ ಗೋಡೌ ಅಂತಿದ್ದರೆ ಅದು ಸುರಕ್ಷಾ ನಾಗರಾಜನದ್ದು ಮಾತ್ರ. ಇವ ಪಡಿತರ ಮಾಫಿಯಾ ಜಾಲ ಇಷ್ಟೊಂದು ಬಲಾಢ್ಯವಾಗ ಇರುವ ಕಾರಣ ಇದೊಂದೇ.


ಇದಕ್ಕೆ ಕಾರಣನಾದವನೇ ಸದ್ಯ ಕೆಎಫ್‌ಸಿಎಸ್‌ಸಿ ಎಂ.ಡಿ.ಯಾಗಿರುವ ಸಿ.ಕೆ. ಶಿವಣ್ಣ, ಈತ ಜೆಡಿಎಸ್ ನಾಯ ಮತ್ತು ದೇವೇಗೌಡರ ಪುತ್ರ ಹೆಚ್.ಡಿ. ರೇವಣ್ಣನ ಸಮೀ ಸಂಬಂಧಿ. ರೇವಣ್ಣನ ಪತ್ನಿ ಭವಾನಿಯವರ ತಂಗಿಯ ಈತ ಮದುವೆಯಾಗಿದ್ದಾನೆಂದ ಮೇಲೆ ಈತನ ಪ್ರಭ ಮತ್ತು ತಾಕತ್ತೇನೂ ಕಮ್ಮಿಯದಲ್ಲ. ಉಗ್ರಾಣ ನಿಗ ಎಂ.ಡಿ. ಹುದ್ದೆಯ ನಂತರ ಮಾರ್ಕೆಟಿಂಗ್ ಫೆಡರೇಷ ಈತನನ್ನೇ ಎಂ.ಡಿ.ಯಾಗಿ ಹಾಕಿಸಿಕೊಂಡವನು ಸು ನಾಗರಾಜ. ಹಾಗೆ ಮಾರ್ಕೆಟಿಂಗ್ ಫೆಡರೇಷನ್ನ ಜೊತೆಯಾದ ನಾಗರಾಜ ಮತ್ತು ಶಿವಣ್ಣ ಸೇರಿಕೊ ಆಹಾರ ಧಾನ್ಯಗಳ ದಾಸ್ತಾನಿನ ಹೆಸರಲ್ಲಿ ಬರೋಬ್ಬರಿ ಕೋಟಿ ರೂಪಾಯಿಗಳನ್ನು ದೋಚಿ ಭಾರೀ ಹಗ ಸೃಷ್ಟಿಸಿ ಬಿಟ್ಟರು.

ಇಂಥ ಖದೀಮ ಶಿವಣ್ಣನ ಹಿನ್ನೆಲೆ ಗೊತ್ತಿದ್ದೂ ಬಜೆಪಿ ಸರ್ಕಾರದ ಆಹಾರ- >>>1



ಶಿವಮೊಗ್ಗದ ಸುರಕ್ಷಾ ಗೋಡೌನ್

ನಾಗರಾಜನ ಕಳಪೆ ಗೋದಾಮುಗಳು...







ಬೆಟ್ಟಿಂಗ್ ದಂಧೆಯಲ್ಲಿ ನಟಿಯರು! ರಾಗಿಣಿ-ನಿಧಿ ಸುಬ್ಬಯ್ಯ-ಸಂಜನಾ?

ಸದ್ಯಕ್ಕೆ ರೂಮರ್‌ನಂತಿರುವ ಈ ಸುದ್ದಿ ಖಚಿತಗೊಳ್ಳಲು ...ಷ್ಟು ಸಮಯ ಬೇಕಾಗಬಹುದು. ಆದರೆ ಕ್ರಿಕೆಟ್ ಬೆಟ್ಟಿಂಗ್ ...ಧೆಯ ತನಿಖೆ ನಡೆಸುತ್ತಿರುವ ಪೊಲೀಸರು ಈ ...ಮಣಿಯರನ್ನು ವಿಚಾರಣೆಗೊಳಪಡಿಸುವ ದಿನವಂತೂ ...ರವಿರಲಾರದು.

ರಾಗಿಣಿ, ನಿಧಿ ಸುಬ್ಬಯ್ಯ ಹಾಗೂ ಸಂಜನಾ ಎಂಬ ಕನ್ನಡ ಸಿನಿಮಾ ನಟಿಯರಿಗೆ ಐಪಿಎಲ್ ಕ್ರಿಕೆಟ್‌ನೊಂದಿಗೆ ...ಪರ್ಕವಿದ್ದದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದರೆ ಈ ಸಂಪರ್ಕವೇ ನಂತರದ ದಿನಗಳಲ್ಲಿ ಕ್ರಿಕೆಟ್ ಬೆಟ್ಟಿಂಗ್ ...ಲ್ಲಿ, ಮ್ಯಾಚ್ ಫಿಕ್ಸಿಂಗ್ ದಂಧೆಕೋರ ಬುಕ್ಕಿಗಳೊಂದಿಗೂ ...ಬಂಧ ಬೆಸೆದಿತ್ತಾ ಎಂಬುದನ್ನೀಗ ಹುಡುಕಲು ...ಪೊಲೀಸರು ಹೊರಟಿದ್ದಾರೆ.

ಕಳ್ಳ ಕ್ರಿಕೆಟರ್ ಶ್ರೀಶಾಂತ್ ದೆಹಲಿಯ ತಿಹಾರ್ ...ಲಿನಲ್ಲಿ ನಿದ್ರೆಬಾರದ ರಾತ್ರಿಗಳನ್ನು ಕಳೆಯುತ್ತಿರುವ ಸುದ್ದಿ ...ಳಿಬರುತ್ತಿರುವ ಹೊತ್ತಲೇ ಈ ನಟಿಯರಿಗೂ ಈಗಾಗಲೇ ...ದ್ರೆ ಹಾರಿ ಹೋಗಿದೆ.

ಪೊಲೀಸ್ ತನಿಖೆಯ ಭಯಕ್ಕೆ!

ರಾಜಸ್ತಾನ್ ರಾಯಲ್ಸ್ ಟೀಂನ ಶ್ರೀಶಾಂತ್, ಚಾಂಡಿಲ, ...ಕಾಶ್ ಮುಂತಾದ ಆಟಗಾರರು ಬುಕ್ಕಿಗಳಿಂದ ಹಣ ...ದು ಕ್ರಿಕೆಟ್ ಆಟಕ್ಕೆ ವಿಷ ತಿನ್ನಿಸುತ್ತಿದ್ದ ವಿಚಾರ ಬಯಲಿಗೆ ...ಂದ ನಂತರ ದೇಶಾದ್ಯಂತ ಅಸಂಖ್ಯ ಬುಕ್ಕಿಗಳ, ಬೆಟ್ಟಿಂಗ್ ...ಂಧೆಕೋರರು ಅರೆಸ್ಟಾಗುತ್ತಿದ್ದಾರೆ.

ಐಪಿಎಲ್ ಕ್ರಿಕೆಟ್‌ನಲ್ಲಿ ಹರಿದು ಬರುತ್ತಿರುವ ಸಾವಿರಾರು ...ಕೋಟಿ ರೂಪಾಯಿಗಳಲ್ಲಿ ಟೀಂ ಮಾಲೀಕರು, ಆಟಗಾರರು, ...ಮೆಂಟರಿ ಬೊಗಳುವವರು, ಅನ್ಯಾಯದ ಅಂಪೈರಿಂಗ್ ...ಮಾಡುತ್ತಿರುವವರೆಲ್ಲಾ ತಮ್ಮ ತಮ್ಮ ಪಾಲನ್ನು ...ಹಂಚಿಕೊಳ್ಳುತ್ತಿದ್ದಾರಷ್ಟೇ. ಇದರೊಂದಿಗೆ ಇದಕ್ಕೆ ...ಪರ್ಯಾಯವಾಗಿ ಬೆಳೆದಿರುವ ಮ್ಯಾಚ್ ಫಿಕ್ಸಿಂಗ್ ದಂಧೆಯಲ್ಲೂ ಸಾವಿರಾರು ಕೋಟಿ ರೂಪಾಯಿ ಹರಿದಾಡುತ್ತಿದೆ. ಇದರಲ್ಲೂ ಟೀಂ ಮಾಲೀಕರು ಆಟಗಾರರೊಂದಿಗೆ ಕೆಲ ಸಿನಿಮಾ ನಟಿಯರ ಹೆಸರುಗಳೂ ಈಗ ಕೇಳಿಬರುತ್ತಿದೆ.

ಆಟಗಾರರು ಹಾಗೂ ಬುಕ್ಕಿಗಳೊಂದಿಗೆ ಲಿಂಕ್‌ನಂತೆ ಈ ನಟಿಯರು ಕೆಲಸ ಮಾಡಿರುವ ಸಾಧ್ಯತೆಗಳತ್ತ ಈಗ ಪೊಲೀಸರು ತನಿಖೆ ಚಾಲು ಮಾಡಿದ್ದಾರೆ.

ಇತ್ತೀಚೆಗೆ ಅರೆಸ್ಟಾದ ಬುಕ್ಕಿ ಕೆಎಂಆರ್ ಎಂಬ ಕೋಡ್‌ವರ್ಡ್‌ನ ವ್ಯಕ್ತಿಯೊಬ್ಬ ಇಂಥದೊಂದು ನಡೆದಿದೆ ಎಂದು ಬಾಯಿಬಿಟ್ಟಿರುವುದೇ ಈ ಹೊಸ ಬೆಳವಣಿಗೆಗೆ ಕಾರಣವಾಗಿದೆ.

ಸಂಜನಾ ಮೇಲೆ ಅನುಮಾನ!

ಪೊಲೀಸರು ಶ್ರೀಶಾಂತ್‌ನ ಕುಂಡಿ ಮೇಲೊದ್ದು ಎಳೆದೊಯ್ದಾಗ ಸಿಕ್ಕ ಲ್ಯಾಪ್‌ಟಾಪ್ ಹಾಗೂ ಐಪ್ಯಾಡ್‌ಗಳಲ್ಲಿ ಕನ್ನಡ ನಟಿ ಸಂಜನಾ ಹಾಗೂ ತೆಲುಗಿನ ಲಕ್ಷ್ಮಿ ರೈ ಜೊತೆ ಶ್ರೀಶಾಂತ್ ಬಹಳ ಕ್ಲೋಸಾಗಿರುವ ಒಂದಷ್ಟು ಫೋಟೋಗಳು ಸಿಕ್ಕಿವೆ.





ಸ್ಪಾಟ್ ಮರೆತು ಮೈದಾನಕ್ಕೆ ಬಂದ ಸಂಜನಾ

ಈ ಶ್ರೀಶಾಂತ್ ಹೇಳಿಕೇಳಿ ಚಂಗುಲಿ ಬುದ್ಧಿಯವನು. ಐಪಿಎಲ್ ಮ್ಯಾಚ್‌ಗಳು ನಡೆಯುವ ಎಲ್ಲಾ ಸಿಟಿಗಳಲ್ಲೂ ಅವನಿಗೆ ಹುಡುಗಿಯರ ಒಡನಾಟವಿದೆ. ಐಪಿಎಲ್ ಶುರುವಾದ ಮೇಲಂತೂ ಕ್ರಿಕೆಟ್-ಸಿನಿಮಾ-ಫ್ಯಾಷನ್ ಪ್ರಪಂಚ-ಚಿಯರ್ ಗರ್ಲ್ಸ್, ಕಾರ್ಪೊರೇಟ್ ಜಗತ್ತು ಎಲ್ಲಾ ಒಂದರೊಳಗೊಂದು ಕಲಸಿಕೊಂಡು ಇನ್ನಷ್ಟು ಅದ್ವಾನವೇ ಆಗಿದೆ. ಇಲ್ಲಿ ಬ್ಯಾಟ್ ಎತ್ತಿ ಬೀಸುವವನು, ಗ್ಲಾಸೆತ್ತಿ ಕುಡಿಯುವವರು, ಸೊಂಟ ಅಲ್ಲಾಡಿಸಿ ಕುಣಿಯುವವಳೂ ಸಾಕಷ್ಟು ಕಾಸು ಬಾಚಿಕೊಳ್ಳುತ್ತಿದ್ದಾರೆ. ಇಂತಲ್ಲಿ ಫೋನೆತ್ತಿ ಮ್ಯಾಚ್ ಫಿಕ್ಸ್ ಮಾಡುವವರು ಕಾಣಿಸಿಕೊಳ್ಳದಿರುತ್ತಾರಾ?

ಸಿನಿಮಾದಲ್ಲಿ ಏನೆಲ್ಲಾ ಸರ್ಕಸ್ ಮಾಡಿದರೂ ಯಶಸ್ಸು ಕಾಣದ ಸಂಜನಾಗೆ ನಟನಾ ವಿದ್ಯೆ ನೈವೇದ್ಯ. ಹಾಗಾಗಿ ಪ್ರತಿಭೆ ಕೇಳದ ಕೇವಲ ದೇಹ ಸೌಂದರ್ಯ, ಥಳಕು-ಬಳುಕನ್ನಷ್ಟೇ ಕೇಳುವ ಐಪಿಎಲ್ ಕ್ರಿಕೆಟ್‌ನತ್ತ ಅವಳ ಗಮನ ಹರಿಯಿತು. ಅಲ್ಲಿ ದುಡ್ಡು, ಪಬ್ಲಿಸಿಟಿ ಇತ್ಯಾದ್ದರಿಂದ ಆರಾಮಾಗಿ ಸೆಟಲ್ ಆದ ಸಂಜನಾಗೆ ಶ್ರೀಶಾಂತ್ ಪರಿಚಯವಾಗುವುದೇನೂ ತಡವಾಗಲಿಲ್ಲ. ಹಿಟ್ಟೂ ಹಳಸಿತ್ತು, ನಾಯಿಯೂ ಕಾದಿತ್ತು ಎನ್ನುವಂತೆ ಇವರಿಬ್ಬರ ಓಡಾಟ ಶುರುವಾಯಿತು. ಬೆಂಗಳೂರಿನ ಫ್ಯಾಷನ್ ಶೋಗಳಲ್ಲಿ, ಮ್ಯಾಚ್‌ಗಳಲ್ಲಿ ಕಾಣಿಸಿಕೊಂಡ ಇವರು 2010 ರ ಡಿಸೆಂಬರ್ 31 ರ ರಾತ್ರಿ ಗೋವಾದಲ್ಲಿ ನ್ಯೂ ಇಯರ್ ಪಾರ್ಟಿ ಮಾಡುವಾಗ ಎ ಸರ್ಟಿಫಿಕೇಟ್ ದೃಶ್ಯಗಳನ್ನು ಸೃಷ್ಟಿಸಿದರೆಂತಲೂ ಮೀಡಿಯಾಗಳಲ್ಲಿ ವರದಿಗಳು ಬಂದವು. ಸಂಜನಾ ಇದನ್ನು ನಿರಾಕರಿಸಿದಳಾದರೂ ಶ್ರೀಶಾಂತ್ ನಿರಾಕರಿಸಿರಲಿಲ್ಲ.

ಇದಲ್ಲದೆ ಹೈದರಾಬಾದ್‌ನ ನಟಿ ಲಕ್ಷ್ಮೀ ರೈ ಕೂಡ ಶ್ರೀಶಾಂತ್‌ನ ಹುಡುಗಿಯರ ಟೀಂ ಮೆಂಬರ್ ಆಗಿದ್ದಾಳೆನ್ನಲಾಗಿದೆ. ಶ್ರೀಶಾಂತ್ ಮುಂಬೈನಲ್ಲಿ ಅರೆಸ್ಟಾದಾಗಲೂ ಅವತ್ತು ಅಲ್ಲೂ ಒಬ್ಬ ಹುಡುಗಿಯೊಂದಿಗಿದ್ದ. ಹೀಗೆ ಒಂದು ಕ್ರಿಕೆಟ್ ಟೀಂನಷ್ಟು ಹುಡುಗಿಯರನ್ನು ಮೈಂಟೇನ್ ಮಾಡುತ್ತಿದ್ದ ಶ್ರೀಶಾಂತ್‌ಗೆ ಖರ್ಚಿಗೆ ಕಾಸು ಬೇಕಲ್ಲ

ದುಬಾರಿ ಹೋಟೆಲ್‌ಗಳು, ಅತೀ ದುಬಾರಿ ವಾಚು, ಬಟ್ಟೆಗಳು, ಬ್ಲ್ಯಾಕ್‌ಬೆರ್ರಿ ಮೊಬೈಲುಗಳ ಖಯಾಲಿಯಿದ್ದ ಶ್ರೀಶಾಂತ್ ಸುಲಭವಾಗಿ ದುಡ್ಡು ಮಾಡಲು ತೀರ್ಮಾನಿಸಿ ಬುಕ್ಕಿಗಳ ಜೊತೆ ಕೈಜೋಡಿಸಿದ್ದ.

ನೀವೇ ಒಮ್ಮೆ ನೋಡಿ.

ಕ್ರಿಸ್ ಗೇಲ್ 66 ಬಾಲ್‌ಗೆ 175 ರನ್ ಹೊಡೆದದ್ದು ದೊಡ್ಡ ಸಾಧನೆಯಾದರೂ ಶ್ರೀಶಾಂತ್ ಕೇವಲ 6 ಬಾಲ್‌ನಲ್ಲಿ 40 ಲಕ್ಷ ಜೇಬಿಗಿಳಿಸುತ್ತಾನೆಂದರೆ ಅದು ಕಡಿಮೆ ಸಾಧನೆಯಾ?

ಇಂಥ ಕಳ್ಳ ಕ್ರಿಕೆಟರ್ ಜೊತೆ ನಿರಂತರ ಸಂಪರ್ಕ ಹೊಂದಿದ್ದ, ಫ್ಯಾಷನ್ ಶೋ, ರಾತ್ರಿ ಪಾರ್ಟಿಗಳಲ್ಲೂ ಪದೇಪದೇ ಕಾಣಿಸಿಕೊಳ್ಳುತ್ತಿದ್ದ ಹಾಗೂ ಶ್ರೀಶಾಂತನ ಲ್ಯಾಪ್‌ಟಾಪ್‌ನಲ್ಲೂ ಕೆಲವು ಕ್ಲೋಸಪ್ ಫೋಟೋಗಳಿದ್ದ ನಟಿ ಸಂಜನಾಳನ್ನು ಇಂದಲ್ಲ ನಾಳೆ ಪೊಲೀಸರು ವಿಚಾರಣೆಗೊಳಪಡಿಸಿದರೆ ವಿನಾಶ್ಚರ್ಯವೂ ಇರುವುದಿಲ್ಲ!

ರಾಗಿಣಿ ದ್ವಿವೇದಿ ಡಬಲ್ ಆಕ್ಟಿಂಗ್ ಮಾಡಿದಳಾ?

ಕೊಂಚ ಬಲಿತ ಹೆಂಗಸಿನಂತೆ ಕಾಣುವ ನಟಿ ರಾಗಿಣಿ ದ್ವಿವೇದಿ ಒಮ್ಮೆ ಬೆಂಗಳೂರಿನಲ್ಲಿ ನಡೆದ ಐಪಿಎಲ್ ಮ್ಯಾಚ್‌ನಲ್ಲಿ ತೊಡೆ ಕಾಣುವಂತ ತುಂಡುಡುಗೆ ಧರಿಸಿ ಮೈದಾನದ ಸುತ್ತ ವಿನಾಕಾರಣ ಓಡಾಡಿದ್ದನ್ನು ಜನ ಇನ್ನೂ ಮರೆತಿರಲಾರರು.

ಮೇ 30 ರ ವಿಜಯ ಕರ್ನಾಟಕದ ಮುಖಪುಟದಲ್ಲಿ 'ಬೆಟ್ಟಿಂಗ್‌ನಲ್ಲಿ ಚಂದನದ ಗೊಂಬೆಗಳ ಪಾತ್ರ' ಎಂಬ ವರದಿ ಪ್ರಕಟವಾಗಿದ್ದು ಅದರಲ್ಲಿ ಇಬ್ಬರು ಕನ್ನಡ ನಟಿಯರಿಗೆ ಬೆಟ್ಟಿಂಗ್ ದಂಧೆಯವರೊಂದಿಗೆ ಲಿಂಕ್ ಇರುವ ಬಗ್ಗ [illegible]

ಧೋನಿಯೂ ಕೊಳಕನೆ

ಭಾರತದ ಕ್ರಿಕೆಟ್ ಕ್ಯಾಪ್ಟನ್ ಮಹೇಂದ್ರ ಸಿಂಗ್ ಧೋನಿ ಮ್ಯಾಚ್ ಫಿಕ್ಸಿಂಗ್ ಬಗ್ಗೆ ಇಷ್ಟೆಲ್ಲ ವಿವಾದಗಳಾಗುತ್ತಿದ್ದರೂ ಏನೊಂದನ್ನು ಮಾತಾಡದೆ ಇರುವುದು ಹೊಸ ಅನುಮಾನಗಳಿಗೆ ಕಾರಣವಾಗಿದೆ.

ಚೆನ್ನೈ ಸೂಪರ್ ಕಿಂಗ್ಸ್ ಟೀಂನ ಕ್ಯಾಪ್ಟನ್ ಕೂಡ ಆಗಿರುವ ಧೋನಿಗೆ ಈಗ ಟೀಂನ ಫ್ರಾಂಚೈಸಿ ಹೊಂದಿರುವ ಇಂಡಿಯಾ ಸಿಮೆಂಟ್ಸ್ ಕಂಪನಿಯ ಉಪಾಧ್ಯಕ್ಷ ಹುದ್ದೆ ದೊರೆತಿದೆ. ಇಂದೇ ಕಂಪನಿಯ ಮಾಲೀಕ ಶ್ರೀನಿವಾಸನ್ ಹಾಲಿ ಬಿಸಿಸಿಐನ ಅಧ್ಯಕ್ಷನೂ ಹೌದು. ಈ ಶ್ರೀನಿವಾಸನ್‌ನ ಅಳಿಯ ಗುರುನಾಥ್ ಮೇಯಪ್ಪನ್ ಬೆಟ್ಟಿಂಗ್ ದಂಧೆ ನಡೆಸುತ್ತಿರುವುದು ಈಗ ಬಹಿರಂಗವಾಗಿದೆ. ಅವನ ಬಂಧನವೂ ಆಗಿದೆ. ಇಷ್ಟೆಲ್ಲ ಆದರೂ ಧೋನಿ ಇಂಡಿಯಾ ಸಿಮೆಂಟ್ಸ್‌ನ ಉಪಾಧ್ಯಕ್ಷನಾಗಿಯೇ ಮುಂದುವರೆದಿದ್ದಾನೆ. ಇದಲ್ಲದೆ ಧೋನಿಯ ಪತ್ನಿ ಸಾಕ್ಷಿಯ ಗೆಳತಿ ಸಾಕ್ಷಿ ಜಾಲಾ ಎಂಬಾಕೆ ಶ್ರೀಶಾಂತನ ಗೆಳತಿಯೂ ಆಗಿದ್ದು ಅವನಿಂದ ಲಕ್ಷಾಂತರ ರೂಪಾಯಿಗಳ ಗಿಫ್ಟ್ ಪಡೆದಿರುವ ಸಾಕ್ಷಿಗಳು ಸಿಕ್ಕಿವೆ. ಕಿಂಗ್‌ಫಿಷರ್ ಏರ್‌ಲೈನ್ಸ್‌ನಲ್ಲಿ ಮಿಠಾಯಿ ಹಂಚುವ ಅರ್ಥಾತ್ ಗಗನಸಖಿಯಾಗಿದ್ದ ಸಾಕ್ಷಿ ಜಾಲಳನ್ನು ಹಿಡಿದಿರುವ ಪೊಲೀಸರು ಕನ್ನಡ ನಟಿ ಸಂಜನಾಳನ್ನು ಇನ್ನೂ ಯಾಕೆ ವಿಚಾರಣೆಗೊಳಪಡಿಸುತ್ತಿಲ್ಲ ಎಂಬುದು ಪ್ರಶ್ನಾರ್ಹವಾಗಿದೆ.

ಬೆಂಗಳೂರು-ಹುಬ್ಬಳ್ಳಿ-ದಾವಣಗೆರೆ ಒಳಗೊಂಡ ಬೃಹತ್ ಬೆಟ್ಟಿಂಗ್ ನೆಟ್‌ವರ್ಕ್ ಕಟ್ಟಿದ್ದಾನೆ. ಕ್ರಿಕೆಟ್ ಮ್ಯಾಚ್‌ಗಳು ನಡೆಯುವಾಗ ಬೆಟ್ಟಿಂಗ್ ಮೊತ್ತ ಕೈಬದಲಾಗುತ್ತದಲ್ಲವೆ ಅಂತಹ ಸಂದರ್ಭದಲ್ಲೆಲ್ಲ ಈ ಚಿತ್ರ ನಟಿಯರನ್ನು ಹಣ ಸಾಗಿಸುವ, ಕೈಬದಲಾಯಿಸುವ ಸಂಪರ್ಕ ಕೊಂಡಿಯಾಗಿ ಬಳಸಿರಬಹುದಾದ ಅನುಮಾನ ಈಗ ಪೊಲೀಸರಿಗೆ ಬಂದಿದೆ.

ಹುಬ್ಬಳ್ಳಿ-ಬೆಂಗಳೂರು ನಡುವಿನ ಈ ಬೆಟ್ಟಿಂಗ್ ಡೀಲ್‌ಗಳಲ್ಲಿ ಕೆಲವೊಮ್ಮೆ ನಟಿ ರಾಗಿಣಿಯನ್ನು ಈ ಬುಕ್ಕಿಗಳು ಬಳಸಿಕೊಂಡಿರಬಹುದೆಂಬ ಅನುಮಾನವನ್ನು ವಿಜಯ ಕರ್ನಾಟಕದ ವರದಿ ಹೇಳಿರುವ ಸಾಧ್ಯತೆಗಳಿವೆ.

ಈ ವರದಿಯಲ್ಲಿ ಕಾಣಿಸಿರುವ 'ಹೈ ಹೀಲ್ಡ್ ಬೆಡಗಿ' ಅಂದರೆ ಅದು ರಾಗಿಣಿಯೇ ಇರಬಹುದೆಂಬ ರೂಮರ್ ಅಂತೂ ಇದೆ.

ನಿಧಿ ಸುಬ್ಬಯ್ಯ ನಾಪತ್ತೆ

ಅಲ್ಲೊಂದು ಇಲ್ಲೊಂದು ಸಿನಿಮಾ ಮಾಡಿ ಕನ್ನಡ ಚಿತ್ರರಂಗದಲ್ಲಿ ಕೊಂಚ ಹೆಸರು ಮಾಡಿದ್ದ ನಟಿ ನಿಧಿ ಸುಬ್ಬಯ್ಯ ಈಗ ಎಲ್ಲಿದ್ದಾರೆ ಗೊತ್ತೆ?

ಮುಂಬೈನಲ್ಲಿ!

ಸಿನಿಮಾ ಹಾಗೂ ಮಾಡೆಲಿಂಗ್‌ನಲ್ಲಿ ಅವಕಾಶ ಹುಡುಕಿಕೊಂಡು ಮುಂಬೈಗೆ ಹೋಗಿರುವ ನಿಧಿ ಈಗ ಕನ್ನಡ ಸಿನಿಮಾ ಹಾಗೂ ಬೆಂಗಳೂರಿನಲ್ಲೆಲ್ಲೂ ಕಾಣಸಿಗುತ್ತಿಲ್ಲ.

ಬೆಟ್ಟಿಂಗ್ ಏಜೆಂಟ್ ಕೆಎಂಆರ್ ಪೊಲೀಸರಿಗೆ ಹೇಳಿರುವ ಟ್ರ್ಯಾಯಾಂಗಲ್ ಶೇಪ್ ಫೇಸ್‌ನ ನಟಿ ಈಕೆಯೇ ಆಗಿರಬಹುದೆಂಬ ಅನುಮಾನ ಈಗ ಹಬ್ಬಿದೆ. ಈಕೆಗೆ ಕ್ರಿಕೆಟ್ ಬುಕ್ಕಿ ಸಾಹುವಿನ ಸಂಪರ್ಕವಿದ್ದು ಆ ಲಿಂಕ್ ಮುಂಬೈನಿಂದ ಏರ್ಪಟ್ಟಿದೆ ಅಂತಲೂ ಈ ಬೆಟ್ಟಿಂಗ್ ಏಜೆಂಟ್ ಹೇಳಿದ್ದಾನಂತೆ. ಹಾಗೆಂದು ವಿಜಯ ಕರ್ನಾಟಕವು ನಿಧಿ ಹೆಸರನ್ನು ಪ್ರಸ್ತಾಪಿಸದೆ ವರದಿ ಪ್ರಕಟಿಸಿದೆ. ನಿಧಿ ಸುಬ್ಬಯ್ಯ ಕೂಡಾ ಐಪಿಎಲ್ ಕ್ರಿಕೆಟ್ ಮ್ಯಾಚ್‌ಗಳಲ್ಲಿ ಕೆಲವೊಮ್ಮೆ ಕಾಣಿಸಿಕೊಂಡಿದ್ದಲ್ಲದೆ, ಲೇಟ್‌ನೈಟ್ ಪಾರ್ಟಿಗಳು ಹಾಗೂ ಯುಬಿ ಸಿಟಿಯಲ್ಲಿ ನಡೆದ ಐಪಿಎಲ್ ಫ್ಯಾಷನ್ ಶೋನಲ್ಲೂ ಭಾಗಿಯಾಗಿದ್ದನ್ನು ಈಗ ಜ್ಞಾಪಿಸಿಕೊಳ್ಳಲಾಗುತ್ತಿದೆ. ನಿಧಿ ಹೆಸರು ಈಗ ಮುಂ... [illegible]

• [illegible]

ಬೆಂಗಳೂರು ಪೊಲೀಸರ ದೀರ್ಘ ನಿದ್ದೆ ಹಾಗೂ ಹುಬ್ಬಳ್ಳಿ ಬೆಟ್ಟಿಂಗ್ ಜಾಲ

ದೆಹಲಿ, ಮುಂಬೈ, ಚೆನ್ನೈ, ಕಾನ್ಪುರಗಳಲ್ಲೆಲ್ಲ ಕ್ರಿಕೆಟ್ ಬೆಟ್ಟಿಂಗ್ ದಂಧೆಕೋರರ ಜಾಲದ ಮೇಲೆ ಅಲ್ಲಿನ ಪೊಲೀಸರು ಸತತ ದಾಳಿ ನಡೆಸುತ್ತಿದ್ದರೂ ಬೆಂಗಳೂರು ಪೊಲೀಸರು ಮಾತ್ರ ಕಂಡರೂ ಕಾಣದವರಂತೆ ನಿದ್ರೆ ಮಾಡುತ್ತಿದ್ದಾರೆ. ಬೆಂಗಳೂರು ಹಾಗೂ ಕರ್ನಾಟಕದಲ್ಲಿ ಎಲ್ಲೂ ಕ್ರಿಕೆಟ್ ಬೆಟ್ಟಿಂಗೇ ನಡೆಯುತ್ತಿಲ್ಲ ಎನ್ನುವಂತಿದೆ ನಮ್ಮ ಪೊಲೀಸರ ವರ್ತನೆ.

ಆದರೆ ಮುಂಬೈ ಪೊಲೀಸರು ಅರೆಸ್ಟ್ ಮಾಡಿರುವ ಕೆಎಂಆರ್ ಎಂಬ ಬೆಟ್ಟಿಂಗ್ ಏಜೆಂಟ್ ಬಾಯಿಬಿಟ್ಟಿರುವ ...ಸಾಹು' ಎಂಬ ಕ್ರಿಕೆಟ್ ಬುಕ್ಕಿಯ ಮೂಲ ಸ್ಥಳ ಹುಬ್ಬಳ್ಳಿಯಾಗಿದೆ.

ಅಲ್ಲಿ ಸಾಹು ಮಾತ್ರವಲ್ಲದೆ ವೀರೂ ಕರಾರೆ, ಅರ್ಜುನ ಸಿರಾಳಕರ್, ಭೊಂಡುಸಾ ಇಳಕಲ್, ಮಾದ್ರರ ಓಣಿಯ ...-ಮಂಜು, ಶಂಕರ ಮೆಹರವಾಡೆ, ಸಂಜೂ ಕಾಟವೆ, ಹಳೇ ಹುಬ್ಬಳ್ಳಿಯ ಅಲ್ತಾಫ್, ರಫೀಕ್ ಮುಂತಾದ ಬೆಟ್ಟಿಂಗ್ ದಂಧೆಕೋರರ ದೊಡ್ಡ ಪಡೆಯೇ ಇದೆ.

ಇನ್ನು ಬೇಕೆಂದರೆ ಶಂಭೂ ಹಬೀಬ್, ಶೀನೂ ಪವಾರ್, ಸಂತೋಷ್ ಬಾಕಳೆ, ಶಂಕರ್ ಮೆಹರ್‌ವಾಡ್, ...ಗಾಧರ ಮಿಸ್ಕಿನ್, ಸಂತೋಷ್ ದೇವಗನ್‌ರ ಹೆಸರನ್ನು ಸೇರಿಸಿಕೊಳ್ಳಬಹುದು. ಒಂದು ಐಪಿಎಲ್ ಸೀಜನ್‌ನಲ್ಲಿ ಈ ...ಗ್ ಏಜೆಂಟರು ಸರಾಸರಿ ಹತ್ತು ಕೋಟಿ ರೂಪಾಯಿಯಷ್ಟು ಹಣ ಟರ್ನ್‌ಓವರ್ ಮಾಡುತ್ತಿದ್ದಾರೆ.

ಈ ದಂಧೆಕೋರರಲ್ಲಿ ನೇರವಾಗಿ ಬೆಂಗಳೂರು ಹಾಗೂ ಮುಂಬೈ ಬುಕ್ಕಿಗಳೊಂದಿಗೆ [illegible]

[illegible] ಬುಕ್ಕಿ ಸಾಹುಗೆ [illegible]

[illegible] ಕಾಸು ಕೈಗೆ ತಲುಪುತ್ತದೆ. ಎಂದು ಕೆಎಂಆರ್ ಎಂಬಾತ ಪೊಲೀಸರಿಗೆ ಹೇಳಿದ್ದಾನೆ.

[illegible] ಸುದ್ದಿ ಕೇಳಿಬಂದರೂ ಇಲ್ಲಿನ ಪೊಲೀಸರು [illegible]

ಎಡೂರಪ್ಪನ ಹೃದಯಾಲಯದಲ್ಲಿ...!

ನಮ್ಮದೊಂದು ಹುಡುಗ ಹೇಳಿಕೊಳ್ಳಲಾಗದ ಸಮಸ್ಯೆಯೊಂದರಿಂದ ನರಳುತ್ತಿದ್ದ. ಕಾಯಿಲೆಗಳನ್ನು ಬಚ್ಚಿಡಬಾರದೆಂದು ಉಪದೇಶ ಕೊಟ್ಟಾಗ ಬಾಯಿಬಿಟ್ಟ. ಪರೀಕ್ಷಿಸಿ ನೋಡಿದಾಗ, ಆತನ ಜನನೇಂದ್ರಿಯದ ಮುಂದೊಗಲು ಕಿರಿದಾಗಿತ್ತು. ಇದರಿಂದ ಮೂತ್ರ ಮಾಡುವ ಸಮಯಕ್ಕೆ ಫುಟಾಣಿ ಫುಂಗಿಯಂತಾಗುತ್ತಿತ್ತು. ಇದೇನು ಅಂತಹ ಸಮಸ್ಯೆಯಲ್ಲ, ಶಿವಮೊಗ್ಗದ ಯಾವನಾದರೂ ವೈದ್ಯ ಪೆನ್ಸಿಲ್ ಎರೆದಂತೆ ಎರೆದು ಸರಿಮಾಡಿಕೊಡುತ್ತಾನೆ ಎಂದು ಅಂತಹ ನುರಿತ ವೈದ್ಯರಿಗಾಗಿ ಹುಡುಕಿದೆವು.

ಕಡೆಗೂ ಸಿಕ್ಕಿದ ಒಬ್ಬ ವೈದ್ಯ ಕೈಗೆ ಗ್ಲೌಸ್ ಹಾಕಿಕೊಂಡು, ಮರಿ ಶಿಶ್ನದೊಡನೆ ಆಟವಾಡಿದಂತೆ ಮಾಡಿ, ಇಷ್ಟು ದಿನ ಸುಮ್ಮನಿದ್ದ ಕಾರಣಗಳನ್ನು ಕೇಳಿ, ಪೂರ್ತಿ ಚರ್ಮ ತೆಗೆದು ಅದರ ತುದಿಯೇನಾಗಿದೆಯೆಂದು ನೋಡಬೇಕೆಂದು ಹೇಳಿ ಹುಡುಗನಿಗೆ ಭಯ ಹುಟ್ಟಿಸಿದ. ಹುಡುಗ "ಆಪರೇಷನ್ ಮಾಡುವುದಾದರೆ ಮುಂದೊಗಲು ಪೂರ್ತಿ ತೆಗೆದು ಮುಸ್ಲಿಮರಂತೆ ಮಾಡಬೇಡಿ, ನನಗದು ಇಷ್ಟವಿಲ್ಲ" ಎಂದ. ನನಗೆ ಸಿಟ್ಟು ಬಂತು. "ಅರೆ, ಆಪರೇಷನ್ ಹೇಗೆ ಮಾಡಬೇಕೆಂಬುದು ವೈದ್ಯರಿಗೆ ಬಿಟ್ಟ ವಿಚಾರ. ಅದು ಲಕ್ಷಣವಾಗಿ ಕಾಣಬೇಕಿದ್ದರೆ ನೀನೆ ಚಾಕು ತೆಗೆದುಕೊಂಡು ನಿನಗಿಷ್ಟ ಬಂದಷ್ಟು ಕತ್ತರಿಸಿಕೊ" ಎಂದು ರೇಗಿದೆ. ವೈದ್ಯರು ಕೂಡ ನನ್ನ ಜೊತೆ ದನಿಗೂಡಿಸಿ ಹುಡುಗನನ್ನು ಹೆದರಿಸಿದ. ನಂತರ ಪೂರ್ಣ ಬ್ಲಡ್ ಚೆಕಪ್ ಮಾಡಿಸಿಕೊಂಡು ಬನ್ನಿ ಎಂದು ಹೇಳಿ ನಾವು ಬರದೆ ಹೋದರೆ ಎಂಬ ಅನುಮಾನದಿಂದ ಫೀಸು ತೆಗೆದುಕೊಂಡು ಕಳುಹಿಸಿದ.

ಬ್ಲಡ್ ರಿಪೋರ್ಟ್ ಕೈಗೆ ಬಂದನಂತರ ಹುಡುಗ ಮತ್ತೆ ಆ ವೈದ್ಯರ ಬಳಿ ಹೋಗುವುದು ಬೇಡವೆಂದು ಹಟ ಹಿಡಿದ. "ಆಯ್ತು ಬಿಡಪ್ಪ" ಎಂದ ನಾನು ಪರಿಚಿತ ಗೆಳೆಯರಲ್ಲಿ ವಿಚಾರಿಸಿದೆ. ಒಬ್ಬ ಗೆಳೆಯ ಈಗಾಗಲೇ ಮುಂದೊಗಲು ಕಟಾವು ಮಾಡಿಸಿಕೊಂಡು ನಿಶ್ಚಿಂತೆಯಾಗಿರುವ ಮಿತ್ರನನ್ನು ಪರಿಚಯಿಸಿ, "ಅವನೆಲ್ಲಿ ಮಾಡಿಸಿಕೊಂಡ ಎಂದು ಕೇಳಿಕೊಳ್ಳಿ. ಸಾಧ್ಯವಾದರೆ ನೀವು ಅಲ್ಲೇ ಮಾಡಿಸಿ" ಎಂದ. ಆತನನ್ನು ಕೇಳಿದಾಗ ಗುಟ್ಟಾಗಿ ಕಿವಿ ಹತ್ತಿರ ಬಂದು "ನಾನೇನೂ ಚೀಪ್ ರೇಟಲ್ಲಿ ಮಾಡಿಸಿಕೊಂಡೆ ಸಾರ್. ಆದ್ರು ನೋಡಕ್ಕೆ ಚೆನ್ನಾಗಿಲ್ಲ, ಒಂಥರಾ ಮಂಗಣ್ಣನ ಮರ್ಮಾಂಗ ನೋಡಿದಂಗಾಯ್ತದೆ. ಇರ್ಲಿ ಹೋಗಿ. ಅವುರು ನಿಮ್ಮೂರ ಗೌಡ್ರು. ನಿಮ್ಗಾರ ಚೆನ್ನಾಗಿ ಮಾಡಬಹುದು" ಎಂದ. ಹುಡುಗ ಆ ವೈದ್ಯರ ಬಳಿ ಬರಲು ಸುತರಾಂ ಒಪ್ಪಲಿಲ್ಲ.

ಕಡೆಗೊಬ್ಬ "ಅದೆಲ್ಲಾ ಯಾಕ್ರಿ? ಸುಮ್ಮನೆ ಎಡೂರಪ್ಪನ ಆಸ್ಪತ್ರೆಗೋಗಿ. ಯಲ್ಲಾ ಚೀಪ್ ರೇಟಲ್ಲಿ ಮಾಡಿ ಕಳುಸ್ತಾರೆ" ಎಂದು ಎಡೂರಪ್ಪನ ಕಟ್ಟಡದಲ್ಲಿರುವ ನಾರಾಯಣ ಹೃದಯಾಲಯಕ್ಕೆ ಕಳುಹಿಸಿಕೊಟ್ಟ.

ತೀರ್ಥಹಳ್ಳಿ ರೋಡಿನ ಅರಕೆರೆಯಲ್ಲಿರುವ ನಾರಾಯಣ ಹೃದಯಾಲಯ ನಿಜಕ್ಕೂ ಭವ್ಯವಾಗಿದೆ. ಸುತ್ತಲೂ ಗದ್ದೆ ತೆಂಗು, ಅಡಕೆ ತೋಟ. ಇದೆಲ್ಲದರ ನಡುವೆ ಎತ್ತರವಾದ ದಿಬ್ಬದಲ್ಲಿರುವ ಈ ಆಸ್ಪತ್ರೆ ದೂರದ ನೋಟಕ್ಕೆ ಯಾವುದೊ ದೇಶದ ಕಟ್ಟಡದಂತಿದೆ. ನಿಜಕ್ಕೂ ಶಿವಮೊಗ್ಗಕ್ಕೆ ಇಂತಹದೊಂದು ಆಸ್ಪತ್ರೆ ಬೇಕಿತ್ತು. ಸ್ವಾತಂತ್ರ ಪೂರ್ವದಲ್ಲಿ ದೊಡ್ಡ ಆಸ್ಪತ್ರೆ ಬೆಂಗಳೂರು, ಮೈಸೂರು ಮತ್ತು ಶಿವಮೊಗ್ಗದಲ್ಲಿ ಮಾತ್ರ ಇದ್ದವು. ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆ ಯಾವಾಗ ತನ್ನ ಮಹತ್ವ ಕಳೆದುಕೊಂಡಿತೊ ಏನೋ, ಅಂತೂ ಈ ಪ್ರಾಂತ್ಯದಲ್ಲಿ ಏನೇ ಸಂಭವಿಸಿದರೂ ರೋಗಿಯನ್ನು ಹೇರಿಕೊಂಡು ಮಣಿಪಾಲದ ಕಡೆ ಓಡುತ್ತಿದ್ದರು. ಸೀರಿಯಸ್ ಕೇಸುಗಳಂತೂ ಆಗುಂಬೆ, ತೀರ್ಥಹಳ್ಳಿ ತಲುಪುವಷ್ಟರಲ್ಲಿ ಕೊನೆಯುಸಿರು ಎಳೆಯುತ್ತಿದ್ದವು.

ಆದರೆ ಎಡೂರಪ್ಪ ಇಂತಹ ಅನಾಹುತಕ್ಕೆ ತಡೆಗೋಡೆಯೊಡ್ಡಿದ್ದಾರಂತೆ. ಸಂಪೂರ್ಣ ಸಾರ್ವಜನಿಕರ ದುಡ್ಡಿನಲ್ಲಿ ನಿರ್ಮಿಸಿರುವ ಈ ಆಸ್ಪತ್ರೆಯನ್ನು ಜನ ನೋಡುತ್ತ ಎಡೂರಪ್ಪನ ಭ್ರಷ್ಟ ಕೆಲಸಗಳನ್ನೇ ಮರೆತು ಮೆಚ್ಚುಗೆಯಿಂದ ಕೊಂಡಾಡತೊಡಗಿದ್ದಾರೆ. ಆಸ್ಪತ್ರೆ ಆವರಣದಲ್ಲಿ ಕುಳಿತ ಜನ ಮಾತನಾಡುವುದನ್ನು ಕೇಳಿಸಿಕೊಂಡಾಗ ಇವರು ನಿಜಕ್ಕೂ ಎಡೂರಪ್ಪನ ಕಡೆಯವರೆ ಇರಬೇಕು ಅನ್ನಿಸಿತು. ಏಕೆಂದರೆ ಜಾತಿ ಮನುಷ್ಯನ ನರನಾಡಿಯಲ್ಲಿ ಸೇರಿಕೊಂಡು, ಅದೇ ಬದುಕಿನಲ್ಲಿ ಹಾಸುಹೊಕ್ಕಾಗ ಬರುವ ಮಾತುಗಳೇ ಇವು.

Narayana Hrudayalaya

CARING WITH COMPASSION

"ಎಡೂರಪ್ಪನ ಪಾರ್ಟಿ ಸೋಲಬಾರದಿತ್ತು. ಕನಿಷ್ಠ ಇಪ್ಪತ್ತೈದು ಸೀಟು ಬರಬೇಕಿತ್ತು. ಆತ ಹೊಸ ಸರಕಾರದ ರೂವಾರಿಯಾಗಬೇಕಿತ್ತು. ಶಿವಮೊಗ್ಗವನ್ನ ಇನ್ನೂ ಬದಲಿಸಿ ಬಿಡುತ್ತಿದ್ದ" ಎಂದು ಜನ ಮಾತನಾಡುತ್ತಿದ್ದರು.

ಹಾಗೆ ನೋಡಿದರೆ ಶಿವಮೊಗ್ಗ ನಿಜಕ್ಕೂ ಬದಲಾಗಿದೆ. ಬೈಪಾಸಿನಲ್ಲಿ ಎಡೂರಪ್ಪನ ಕಟ್ಟಡಗಳು ಎದುರಾಗುತ್ತವೆ. ತೀರ್ಥಹಳ್ಳಿ ರಸ್ತೆಯಲ್ಲಿ ನಾರಾಯಣ ಹೃದಯಾಲಯದ ಕಟ್ಟಡಗಳಿವೆ. ಇನ್ನು ಸಾಗರ ರಸ್ತೆಯಲ್ಲಿ ಆಯನೂರ್‌ವರೆಗೂ ಎಡೂರ್ ಸಾಮ್ರಾಜ್ಯವೇ ವ್ಯಾಪಿಸಿಕೊಂಡಿದೆ. ಹೊನ್ನಾಳಿ ರಸ್ತೆ ಶಿಕಾರಿಪುರ ರಸ್ತೆ ಶಿರಾಳಕೊಪ್ಪ ರಸ್ತೆ ಇಲ್ಲೆಲ್ಲಾ ಎಷ್ಟು ಆಸ್ತಿಗಳಿವೆಯೋ ಏನೊ. ಯಾವುದಾದರೂ ತನಿಖಾ ಸಂಸ್ಥೆ ಎಡೂರಪ್ಪನ ನಿಜವಾದ ಆಸ್ತಿಯನ್ನು ಪತ್ತೆ ಹಚ್ಚಿ ಅಳೆದಾಗ ಮಾತ್ರ ಸತ್ಯ ಸಂಗತಿ ಹೊರಬರಬಲ್ಲದು.

ಆದರೆ ಎಡೂಪರಪ್ಪನ ಕಡೆಯವರ ವರಸೆಯೇ ಬೇರೆ. "ಎಡೂರಪ್ಪಂದೇಳ್ತಿರಲ್ಲಾ, ಕುಮಾರಸ್ವಾಮಿ, ದೇವೇಗೌಡ ಎಷ್ಟು ಮಾಡಿದಾರೆ ಗೊತ್ತೇನ್ರಿ? ಆ ಎಸ್.ಎಂ. ಕೃಷ್ಣ ಎಷ್ಟು ಲೂಟಿ ಹೊಡದ ಗೊತ್ತೇನ್ರಿ? ಅದನ್ನ ಕಣ್ಣಾರೆ ನೋಡಿ ಡಿ.ಬಿ. ಚಂದ್ರೇಗೌಡ ಕೃಷ್ಣನಿಗಿಂತ ಎಡೂರಪ್ಪನೇ ವಾಸಿ ಅಂತ ಬಂದು ಬಿ.ಜೆ.ಪಿ.ಗೆ ಸೇರಿಕೊಂಡ ಗೊತ್ತ" ಎಂದು ವಾದಿಸುತ್ತಾರೆ. ಜಾತಿ ಮನಸ್ಸಿನ ಇಂತಹ ವಕಾಲತ್ತಿಗೆ ಉತ್ತರ ಹೇಳುವುದು ಕಷ್ಟ.

ಇಂತಹ ಮನಸ್ಸುಗಳೇ ಶಿವಮೊಗ್ಗದಲ್ಲಿ ಒಟ್ಟಾಗಿ ವೀರಾವೇಶದಿಂದ ಹೋರಾಡಿದವು. ಆದರೂ ರುದ್ರೇಗೌಡರು ಗೆಲ್ಲಲಾಗಲಿಲ್ಲ, ಏಕೆಂದರೆ ಶಿವಮೊಗ್ಗದಲ್ಲಿ ಬಡವರೆಲ್ಲ ಒಟ್ಟಾಗಿದ್ದರು. ಹಾಗೆಯೇ ಬ್ರಾಹ್ಮಣರೂ ಒಟ್ಟಾಗಿದ್ದರು. ಹಾಗಾಗಿ ಕಾಂಗ್ರೆಸ್ಸಿನ ಪ್ರಸನ್ನಕುಮಾರ್ ಗೆದ್ದು ಬಂದರು. ಈತ ಎಷ್ಟು ಸರಳ ಮತ್ತು ಸಾಮಾನ್ಯ ವ್ಯಕ್ತಿ ಎಂದರೆ ಮುಂದೆ ಎಂದೂ ಈಶ್ವರಪ್ಪ ಗೆದ್ದು ಬರಲು ಸಾಧ್ಯವಿಲ್ಲ, ಅಂತೂ ಈಶ್ವರಿ ಕತೆ ಮುಗಿಯಿತು ಎಂದು ಯೋಚಿಸುತ್ತ ಕುಳಿತಿರಬೇಕಾದರೆ ನಮ್ಮ ಸರದಿ ಬಂತು.

ಆ ಆಸ್ಪತ್ರೆಯಲ್ಲಿ ತರುಣ ವೈದ್ಯರು ಮತ್ತು ಕೇರಳದ ದಾದಿಯರೇ ತುಂಬಿದ್ದರು. ಜಾಗದ ಕೊರತೆಯಿಲ್ಲದ ಕಾರಣಕ್ಕೆ ಕಾರಿಡಾರಿಂದ ಹಿಡಿದು ರೂಮುಗಳೆಲ್ಲಾ ವಿಶಾಲವಾಗಿದ್ದವು. ನಮ್ಮ ಹುಡುಗನನ್ನು ಅಡ್ಮಿಶನ್ ಮಾಡಿಸಿ, ಅಡ್ವಾನ್ಸ್ ಫೀಜು ಕಟ್ಟಿಸಿಕೊಂಡು, ರೂಮಿಗೆ ಕರೆದುಕೊಂಡು ಹೊರಟರು. ಈವರೆಗೆ ಖುಷಿಯಾಗಿದ್ದ ಹುಡುಗ ಡಲ್ಲಾದ. ಏಕೆಂದರೆ ಆತನ ರೂಮಿನಲ್ಲಾಗಲೇ ಮೂವರು ರೋಗಿಗಳು ಅಂಗಾತ ಮಲಗಿ ಕೆನೆ ಬಣ್ಣದ ಮಾಳಿಗೆಗೆ ದೃಷ್ಟಿ ನೆಟ್ಟಿದ್ದರು.

ಅವರು ಈ ಪುಟ್ಟ ಹುಡುಗನಿಗೆ ಏನು ಕಾಯಿಲೆ ಇರಬಹುದು? ಹೆಸರಿಗೆ ಇದು ನಾರಾಯಣ ಹೃದಯಾಲಯವಾಗಿರುವುದರಿಂದ ಹೃದಯ ಸಂಬಂಧಿ ಕಾಯಿಲೆ ಇರಬಹುದೆಂದು ತಮ್ಮ ನೋವನ್ನ ಮರೆತು ಕನಿಕರದಿಂದ ನೋಡಿದರು. ಅವರಲ್ಲೊಬ್ಬ ಕಣ್ಣಿನಿಂದಲೇ 'ಏನೆಂದು?' ಹೇಳಿದ. ನಾನು ಎಡಗೈ ಕಿರು ಬೆರಳನ್ನ ಮುಂದೆ ಮಾಡಿ ಬಲಗೈಯಲ್ಲಿ ಕತ್ತರಿಯಾಡಿಸಿ ನಕ್ಕೆ. ಅವ್ರನು ಏನಂದುಕೊಂಡನೊ ಏನೊ ಸುಮ್ಮನಾದ.

ಹುಡುಗನನ್ನು ತಪಾಸಣೆ ಮಾಡಿದ ವೈದ್ಯರು ಆ ರಿಪೋರ್ಟನ್ನು ನರ್ಸಿಗೆ ಕೊಟ್ಟರು. ಅವಳು ಅದನ್ನು ಫೈಲ್ ಮಾಡಿದಳು. ಅಷ್ಟರಲ್ಲಿ ಅಡ್ಮಿಶನ್ ಫೈಲ್ ಬಂದು ಸೇರಿಕೊಂಡಿತು. ಹುಡುಗನ ಬಟ್ಟೆ ಬದಲಿಸಿ ಕರಾಟೆ ವೇಷ ಹಾಕಿದರು. ಅಷ್ಟರಲ್ಲಿ ಒಬ್ಬ ಹುಡುಗನ ಶಿಶ್ನವನ್ನು ಗೆಡ್ಡೆಗೆ ಕೂದು ಬಿಸಾಡುವವನಂತೆ ಬಂದು ನಿಂತ. ಅವನಾರೆಂದು ವಿಚಾರಿಸಲಾಗಿ ನರ್ಸುಗಳು ವಿಚಿತ್ರವಾಗಿ ನಕ್ಕರು. ಆತ "ಬಾರಪ್ಪ" ಎಂದು ಎಬ್ಬಿಸಿಕೊಂಡು ಹೊರಟ. ಹುಡುಗ ಆಪರೇಷನ್ ಮಾಡುವ ವೈದ್ಯನೇಕೆ ಎಳನೀರು ಕೊಚ್ಚುವವನಂತಿದ್ದಾನೆಂದು ಕೇಳಿದ. "ಏ, ಅವ್ರನು ಡಾಕ್ಟರಲ್ಲ, ನಿನ್ನ ತುಪ್ಪಳಗೂದಲ ಸವಿರ್ತಾನೆ. ಹೆದರಬ್ಯಾಡ ಸುಮ್ಮನಡಿ" ಅಂದೆ. ಹುಡುಗ ನಾಚಿಕೊಂಡು "ನಾನೇ ಮಾಡಿಕತ್ತಿನಿ" ಅಂದ. "ಆಸ್ಪತ್ರೆಲಿ ಹೇಳಿದಂಗೆ ಕೇಳಬೇಕು" ಅಂದೆ. ಹುಡುಗ ವಾಪಸು ಬರುವಷ್ಟರಲ್ಲಿ ಕೇಸ್ ಫೈಲ್ ನೋಡುತ್ತ ಸುಮಾರು ಏಳು ಜನ ನರ್ಸುಗಳಿದ್ದರು. ಅವರೆಲ್ಲಾ ಮಲಯಾಳದಲ್ಲಿ ಮಾತನಾಡುತ್ತ ಗಿಲಿಗುಟ್ಟುತ್ತಿದ್ದರು. ನಿಜಕ್ಕೂ ಈ ಮಲಯಾಳಿ ಭಾಷೆ ಹೆಣ್ಣುಮಕ್ಕಳ ಬಾಯಲ್ಲಿ ಕೇಳಲು ಎಷ್ಟು ಚೆಂದ ಅನ್ನಿಸಿತು. ಇವರಿಗೆಲ್ಲಾ ಲೀಡರಂತಿದ್ದ ನರ್ಸ್ ಬಂದಳು. ಅವಳ ಗತ್ತೆ ಬೇರೆಯಾಗಿತ್ತು, ಎಲ್ಲರನ್ನು ಗದರಿದಂತೆ ಮಾತನಾಡಿಸುತ್ತ ಆಪರೇಷನ್ ನಂತರ ಗ್ಲೂಕೋಸ್ ಔಷಧಿ ಕೊಡಲು ಪರ್ಮನೆಂಟಾಗಿ ಇಂಜಕ್ಷನ್ ಟ್ಯೂಬು ಚುಚ್ಚತೊಡಗಿದಳು. ಅವಳೂ ಕಲಿಕೆಯವಳಿರಬೇಕು. ಮೂರು ಜಾಗದಲ್ಲಿ ಚುಚ್ಚಿದರೂ ನರ ಹಿಡಿಯಲಾಗಲಿಲ್ಲ, ಹುಡುಗನ ಮುಖದ ಹಿಂಸೆ ನೋಡಲಾಗದೆ ಇನ್ನೇನು ರೇಗುವವನಿದ್ದೆ ಅಷ್ಟರಲ್ಲಿ ಸ್ಟ್ರೆಚರ್ ಬಂತು.

ಜಿಂಕೆಮರಿಯಂತೆ ಓಡಾಡುವ ಹುಡುಗನನ್ನು ಹಿಡಿದು ಸ್ಟ್ರೆಚರ್‌ನಲ್ಲಿ ಮಲಗಿಸಿ ದೂಡಿಕೊಂಡು ಹೊರಟರು. ಅಲ್ಲಿ ನೋಡಿದರೆ ಕಲಿಕಾ ವೈದ್ಯರಿಗೆ ಸಿಕ್ಕ ಹುಡುಗನ ಆಪರೇಷನ್ ಮುಗಿಸಲು ಒಂದು ಗಂಟೆ ತೆಗೆದುಕೊಂಡರು. ನಂತರ ಬಹು ದೊಡ್ಡ ಆಪರೇಷನ್ ಮುಗಿಸಿದವರಂತೆ ಎಲ್ಲರೂ ಜೂಸನ್ನೊ, ಎಳನೀರನ್ನೊ ಕುಡಿದು ಸುಧಾರಿಸಿಕೊಂಡು ಹುಡುಗನನ್ನು ಬೆಡ್‌ಗೆ ಕಳಿಸಿದರು.

ನಡೆದೇ ಬರಬಹುದಾದ ಹುಡುಗನನ್ನು ಅಂಗಾತ ಮಲಗಿಸಿಕೊಂಡು ಮೂರ್ನಾಲ್ಕು ಜನ ನೂಕಿಕೊಂಡು ಬಂದು ಬಹಳ ಉಪಾಯದಲ್ಲಿ ಬೆಡ್ ಮೇಲೆ ಮಲಗಿಸಿದರು. ಅಲ್ಲಿಗೆ ಟೋಟಲ್ಲಿ ಒಂಬತ್ತು ಜನ ನರ್ಸ್, ಮೂರು ಜನ ಡಾಕ್ಟರು ಶ್ರದ್ಧೆಯಿಂದ ತಮ್ಮ ಕರ್ತವ್ಯ ನಿರ್ವಹಿಸಿದಂತಾಗಿತ್ತು.

ನಾನು ನಗು ತಡೆದುಕೊಂಡು, ಅವರ ಇಡೀ ಕಾರ್ಯಾಚರಣೆಯನ್ನು ಆಡಿಕೊಂಡು ಅಕ್ಕಪಕ್ಕದ ಪೇಶಂಟುಗಳನ್ನು ನಗಿಸಿದ್ದೆ. ಕಿಟಕಿ ಕಡೆಯಿದ್ದ ಶುಗರ್ ಪೇಶಂಟ್ ಒಂದು "ಏನು ಆಪರೇಷನ್ ಸಾರ್?" ಎಂದ. "ಏನಿಲ್ಲ, ಮುಂಜಿ ಕಂಡ್ರಿ" ಎಂದೆ. "ಅದಕ್ಯಾಕ್ ಸಾರ್ ಇಲ್ಲಿ ಬರಕ್ಕೋದ್ರಿ? ನಮ್ಮೂರ್ಗೆ ಯಾರ್ಗಾದ್ರು ಹೇಳಿದ್ರೆ ಕಿಲೀನಾಗಿ ಮಾಡಿ ಕೊಡೋರು. ನೂರೊ ಇನ್ನೂರೊ ಕೊಟ್ಟಿದ್ರೆ ನಿಮ್ಮುದು ಹುಡುಗಂಗೆ ಮದುವೆ ಗಂಡು ಮಾಡಿ ಕಳುಸ್ತಿದ್ರು" ಎಂದು ನಕ್ಕ.

"ಛೇ ನನಗೆ ಮೊದಲೇ ಹೊಳೀಲಿಲ್ಲ ಕಂಡ್ರೀ" ಎಂದು ಪೇಚಾಡಿದೆ. "ಇಷ್ಟೇ ಸಾರ್. ಒಂದು ಕೋಳಿ ಮೊಟ್ಟೆ, ಗೋದಿದು ಬೂದಿ, ಒಂದು ಬಕ್ರಿ. ಇಷ್ಟರಲ್ಲಿ ನಿಮ್ಮು ಕೆಲಸ ಆಗ್ತಿತ್ತು, ಈಗ ನೋಡಿ ಎಷ್ಟು ಖರ್ಚಾಗ್ತದೆ" ಎಂದ. "ಈಗಾಗ್ಲೆ ಐದು ಸಾವುರುಪಾಯಿ ಆಯ್ತಪ್ಪ, ನಿಮ್ಮೊರತ್ರ ಹೋಗಿದ್ರೆ ಒಂದು ಸಾವ್ರರ ಆಯ್ತಿತ್ತಲವೆ" ಎಂದೆ.

"ಏ, ಒಂದು ಸಾವ್ರರ ನೀವು ಕೊಡೋದಾದ್ರೆ ಹತ್ತು ಜನ ಕರಕಂದಿ ಹೋಗಬವ್ರುದಿತ್ತು. ಏನಿಲ್ಲ ಸಾರ್, ಒಂದು ಇರುವೆ ಕಚ್ಚಿದಷ್ಟು ನೋವಾಗುತ್ತ ಅಷ್ಟೆ. ನಾವೆಲ್ಲಾ ಚಿಕ್ಕ ಹುಡುಗ್ರೆ ಮಾಡಿಸಿಕೊಂಡಿಲ್ವಾ. ಎಷ್ಟು ಚೆನ್ನಾಗಿದೆ ಗೊತ್ತ. ಇನ್ಮೇಲೆ ಇದಕ್ಕೆಲ್ಲಾ ಆಸ್ಪತ್ರೆಗೆ ಬರಬೇಡಿ ಸಾರ್. ಇವ್ರುದ್ದು ಓಡಾಟ ನೋಡಿ ನಾನು ಏನೊ ಆಗಿದೆ ಅನ್ಕೊಂಡಿದ್ದೆ. ಥೂ ಯಂಥಾ ಕೆಲಸ ಮಾಡಿದ್ರಿ ಸಾರ್" ಎಂದ.

"ಇನ್ನು ಮುಂದೆ ಮಾಡಲ್ಲ ಬಿಡಿ. ನಮ್ಮ ಕತಿಯಂತೂ ಆಯ್ತಲ್ಲ, ಇನ್ನು ನಮ್ಮ ಪೈಕಿ ಯಾರಿಗೆ ಹಿಂಗಿದ್ರೂ ನಿಮ್ಮೊರತ್ರ ಕರಕಂಡೊಯ್ತಿನಿ" ಎಂದು ನಗಾಡುತ್ತ ಆತನ ಹತ್ತಿರವೇ ಹೋಗಿ ಕುಳಿತೆ.

ಏಕೆಂದರೆ ಆತ ತನ್ನ ನೋವಿನ ಶಮನಕ್ಕೆ ಮೊಬೈಲ್‌ನಲ್ಲಿ ಮೊಹಮದ್ ರಫಿಯ ಹಳೆ ಹಾಡುಗಳನ್ನು ಹಾಕಿಕೊಂಡು ಕೇಳುತ್ತಿದ್ದ. ಮೆಲುದನಿಯಲ್ಲಿ ಕೇಳುವ ರಫಿ ಹಾಡಿಗೆ ಎಂತಹ ಶಕ್ತಿಯಿದೆ ಅನ್ನಿಸಿ ತಲೆದೂಗುತ್ತಿರುವಾಗಲೇ ಹುಡುಗ ಎದ್ದು "ಮನಿಗೆ ಹೋಗಣ. ಡಿಸ್‌ಚಾರ್ಜು ಮಾಡುಸು" ಎನ್ನುತ್ತಾ ಪಿಡ ಮಾಡಿದ ಹೋತನಂತೆ ನಡೆಯತೊಡಗಿದ!!

● ಬಿ.ಚಂದ್ರೇಗೌಡ

ನೆಲ ಕಚ್ಚಿದ ಬಿಎಸ್‌ಪಿ

ಈ ಬಾರಿಯ ಚುನಾವಣೆಯಲ್ಲಿ ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ಸ್ಥಿತಿ ಎಡ ಪಕ್ಷಗಳಂತೆಯೇ ಮತ್ತಷ್ಟು ಹೀನಾಯ ಹಂತ ತಲುಪಿದೆ. ಉತ್ತರ ಪ್ರದೇಶದಲ್ಲಿ ಅಕ್ಕ ಮಾಯಾವತಿಯೇ ಈ ಬಾರಿ ಅಸೆಂಬ್ಲಿ ಚುನಾವಣೆಯಲ್ಲಿ ಮಕಾಡೆ ಬಿದ್ದು ತಮ್ಮ ಹಗರಣಗಳ ಕೇಸುಗಳಿಂದ ಬಿಡಿಸಿಕೊಳ್ಳಲು ಪರದಾಡುತ್ತಿದ್ದಾರೆ. ಹೀಗಿರುವಾಗ ಕರ್ನಾಟಕದ ಫಲಿತಾಂಶ ಅಕ್ಕನಿಗೆ ಮತ್ತಷ್ಟು ನಿರಾಶೆ ಮೂಡಿಸಿದೆ. ಬಿಎಸ್‌ಪಿಯ ಪ್ರಚಾರಕರು ಅಕ್ಕ ಮಾಯಾವತಿಯನ್ನು ದೇಶದ ಪ್ರಧಾನಿ ಮಾಡಬೇಕೆಂಬ ಕನಸು ಹೊತ್ತಿದ್ದರು. ಚುನಾವಣಾ ಫಲಿತಾಂಶಗಳು ಹೀಗೇ ಮುಂದುವರೆದರೆ ಅಂಥಾ ಕನಸೂ ಕೂಡ ಬೀಳದಂತಾಗುವ ಸಾಧ್ಯತೆಯಿದೆ.

ಸಾಮಾಜಿಕ ತಂತ್ರಗಾರಿಕೆಯೆಂಬ ವಿಶಿಷ್ಟ ಅಸ್ತ್ರ ಬಳಸಿ, ಉತ್ತರ ಪ್ರದೇಶದ ಗದ್ದುಗೆ ಹಿಡಿದ ಬಿಎಸ್‌ಪಿ ಪಕ್ಷ ಕರ್ನಾಟಕದಲ್ಲೂ ಅದೇ ತಂತ್ರವನ್ನು ಬಳಸಿ, ಉತ್ತರಪ್ರದೇಶದ ಇತಿಹಾಸವೇ ಕರ್ನಾಟಕದಲ್ಲೂ ಮರುಕಳಿಸಲಿದೆ ಎಂದೇ ಭ್ರಮಿಸಿದ್ದರು. ಆದರೆ ಒಂದೊಂದು ಚುನಾವಣೆ ಕಳೆದಂತೆಲ್ಲಾ ಭ್ರಮೆ ಕಳಚಿ ವಾಸ್ತವದ ಅನಾವರಣ ಆಗುತ್ತಿದೆ.

ಇದುವರೆಗೂ ಕರ್ನಾಟಕದ ಅಸೆಂಬ್ಲಿಗೆ ಆನೆ ಪಕ್ಷದ ಅಭ್ಯರ್ಥಿ ಆರಿಸಿ ಹೋಗಿದ್ದು ಬೀದರ್‌ನಿಂದ ಜುಲ್ಫಿಕರ್ ಹಾಷ್ಮಿ ಒಬ್ಬರೇ. ಅದೂ ಕೂಡ 1994ರಲ್ಲಿ, ಅಲ್ಲಿಂದ ಇಲ್ಲಿಯವರೆಗೆ ಬಿಎಸ್‌ಪಿ ಧುರೀಣರು ಏನೆಲ್ಲಾ ತಿಪ್ಪರಲಾಗ ಹಾಕಿದರೂ ಒಂದೂ ಸೀಟು ಗೆಲ್ಲಲಾಗಿಲ್ಲ.

ಈ ಬಾರಿಯ ಚುನಾವಣೆಯಲ್ಲಿ ಒಟ್ಟು 176 ಕ್ಷೇತ್ರಗಳಲ್ಲಿ ಬಿಎಸ್‌ಪಿ ಸ್ಪರ್ಧಿಸಿತ್ತು. ಬೆರಳೆಣಿಕೆ ಕ್ಷೇತ್ರಗಳನ್ನು ಹೊರತುಪಡಿಸಿ ಉಳಿದ ಕಡೆಗಳಲ್ಲಿ ಠೇವಣಿ ಕಳೆದುಕೊಂಡಿದೆ. ಅಂಕಿಅಂಶಗಳು ಹೊರಬಂದ ನಂತರ ಇನ್ನೂ ನಿಖರವಾದ ಚಿತ್ರಣ ಸಿಗಬಹುದಾದರೂ ಈ ಬಾರಿ ಬಿಎಸ್‌ಪಿಯ ಸಾಧನೆ ಕಳೆದೆರಡು ಚುನಾವಣೆಗಳಿಗೆ ಹೋಲಿಸಿದರೆ ತೀರಾ ಹೇಲವವಾಗಿದೆ ಎಂದು ಸ್ಪಷ್ಟವಾಗಿ ಹೇಳಬಹುದು.

2008ರ ಚುನಾವಣೆಯಲ್ಲಿ ಒಟ್ಟು 217 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಬಿಎಸ್‌ಪಿ ಒಟ್ಟು 7,16,770 ಮತಗಳನ್ನು ಗಳಿಸಿ, ಚಲಾವಣೆಯಾದ ಒಟ್ಟು ಮತಗಳಲ್ಲಿ ಶೇ.2.74ರಷ್ಟು ಮತಗಳನ್ನು ಗಳಿಸಿತ್ತು. ಸುಮಾರು 12 ಕ್ಷೇತ್ರಗಳಲ್ಲಿ 10 ಸಾವಿರಕ್ಕಿಂತಲೂ ಅಧಿಕ ಮತ ಗಳಿಸಿ ಗಮನ ಸೆಳೆದಿತ್ತು. 2004ರ ವಿಧಾನಸಭಾ ಚುನಾವಣೆಯಲ್ಲಿ 102 ಸ್ಥಾನಗಳಲ್ಲಿ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಒಟ್ಟು 4,37,564 ಮತಗಳನ್ನು ಗಳಿಸಿತ್ತು. ಯಾವೊಂದು ಸ್ಥಾನವನ್ನು ಗೆಲ್ಲಲಾಗದಿದ್ದರೂ ಕೆಲವು ಕ್ಷೇತ್ರಗಳಲ್ಲಿ ಅದು ಗಳಿಸಿದ್ದ ಮತಗಳ ಪ್ರಮಾಣ ಹೇಗಿತ್ತೆಂದು ನೋಡಿ; ಆನೇಕಲ್- 24,840, ಕೊಳ್ಳೇಗಾಲ- 19,042, ಸೇಡಂ- 19,041,




ಸಕಲೇಶಪುರ- 17,159, ಮೊಳಕಾಲ್ಮೂರು- 16,571, ಪಿರಿಯಾಪಟ್ಟಣ- 12,897 ಹಾಗೂ ಬಸವಕಲ್ಯಾಣ- 11,850 ಇತ್ಯಾದಿ. ಈ ಫಲಿತಾಂಶ ಬಿಎಸ್‌ಪಿ ಬೆಂಬಲಿಗರಿಗೆ ಆಶಾದಾಯಕವಾಗಿ ಕಂಡುಬಂದಿದ್ದರೆ, ದಲಿತರನ್ನು ಪುಕ್ಕಟೆ ಮತಬ್ಯಾಂಕ್ ಆಗಿ ಬಳಸಿಕೊಳ್ಳುತ್ತಿದ್ದ ಕಾಂಗ್ರೆಸ್ ನಾಯಕರ ತಲೆಯಲ್ಲಿ ಅಲ್ಪ ಪ್ರಮಾಣದ ಆತಂಕವನ್ನಾದರೂ ಸೃಷ್ಟಿಸಿತ್ತೆಂದೇ ಹೇಳಬಹುದು.

ಈ ಬಾರಿ ಆನೇಕಲ್‌ನ ಕಾಂಗ್ರೆಸ್ ಅಭ್ಯರ್ಥಿ 40,182 ಮತಗಳ ಅಂತರದಿಂದ ಗೆದ್ದು ಬಂದಿದ್ದಾರೆ. ಕೊಳ್ಳೇಗಾಲದಿಂದ ಸ್ಪರ್ಧಿಸಿದ್ದ ಎನ್.ಮಹೇಶ್ ಅವರೊಬ್ಬರಾದರೂ ಈ ಬಾರಿ ಗೆಲ್ಲಬಹುದು ಎಂದು ನಿರೀಕ್ಷಿಸಲಾಗಿತ್ತು, ಆದರೆ ಅಲ್ಲೂ ಕಾಂಗ್ರೆಸ್‌ನ ಅಭ್ಯರ್ಥಿ 10 ಸಾವಿರಕ್ಕೂ ಹೆಚ್ಚು ಅಂತರದಿಂದ ಗೆದ್ದು ಬಂದಿದ್ದಾರೆ. ಉಳಿದಂತೆ ಬಹುಪಾಲು ಕ್ಷೇತ್ರಗಳಲ್ಲಿ ಬಿಎಸ್‌ಪಿಯ ಮತಗಳ ಪ್ರಮಾಣ ಒಂದೋ ಎರಡೋ ಸಾವಿರದಷ್ಟು ಮಾತ್ರ. ಕಳೆದ ಲೋಕಸಭಾ ಚುನಾವಣೆಯಲ್ಲೂ ಬಿಎಸ್‌ಪಿಯ ಮತಗಳ ಪ್ರಮಾಣ ಕುಸಿತ ಕಂಡಿತ್ತು.

ಕಳೆದ ಚುನಾವಣೆಯಲ್ಲಿ 30 ಕಡೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಸೋಲಿಸಿದ್ದೇವೆ ಎಂದು ಬಿಎಸ್‌ಪಿ ಪಕ್ಷ ಸ್ವಘೋಷಣೆ ಮಾಡಿತ್ತು. ಆದರೆ ಈ ಬಾರಿ ಅಂಥಾ ಯಾವ ಘೋಷಣೆ ಹೊರಡಿಸುವ ಸಾಧ್ಯತೆಯೂ ಇಲ್ಲ. ಯಾಕೆಂದರೆ ಕೊಳ್ಳೇಗಾಲದ ಅಭ್ಯರ್ಥಿಯ ವೈಯಕ್ತಿಕ ವರ್ಚಸ್ಸಿನ ಕಾರಣಕ್ಕೆ ಎರಡನೇ ಸ್ಥಾನಗಳಿಸಿದ್ದು ಹಾಗೂ ಬೀದರ್‌ನಲ್ಲಿ ಮೂರನೇ ಸ್ಥಾನ ಗಳಿಸಿದ್ದು ಬಿಟ್ಟರೆ ಉಳಿದ ಎಲ್ಲಾ ಕಡೆಗಳಲ್ಲಿ ಪರಿಸ್ಥಿತಿ ಹೀನಾಯವಾಗಿದೆ. ಈ ಬಾರಿ ಮಾಯಾವತಿ ಖುದ್ದಾಗಿ ಹಲವು ಕ್ಷೇತ್ರಗಳಲ್ಲಿ ಪ್ರಚಾರ ಮಾಡಿದ್ದರು. ಈಗ ಅದೆಲ್ಲಾ ವ್ಯರ್ಥವಾಗಿದೆ.

ಬಿಎಸ್‌ಪಿಯ ಚುನಾವಣಾ ಸೂತ್ರದ ಮೊದಲ ಅಂಶವೇ 'ಮೊದಲು ಸೋಲಿಸುತ್ತೇವೆ' ಎಂಬುದು. ಆದರೆ ದುರದೃಷ್ಟವಶಾತ್ ಅವರಿಗೆ ಈಗ ಸೋಲಿಸುವ ಶಕ್ತಿಯೂ ಕುಂದಿ ಹೋಗಿದೆ. ಇನ್ನು ಗೆಲ್ಲುವುದಂತೂ ಕನಸಿನ ಮಾತಾಯಿತು.

ಇಷ್ಟಕ್ಕೆಲ್ಲ ಕಾರಣವೇನು ಎಂದು ಹುಡುಕುತ್ತಾ ಹೊರಟರೆ ಕೆಲವು ಎದ್ದು ಕಾಣುವ ಅಂಶಗಳು ಹೀಗಿವೆ. ಎಲೆಕ್ಷನ್ ಟೈಮ್‌ನಲ್ಲಿ ಬೀದಿಗೆ ಬರೋದು ಬಿಟ್ಟರೆ ಬಿಎಸ್‌ಪಿ ಎಂಬ ಪಕ್ಷ ಜೀವಂತ ಇದೆ ಅನ್ನೋದಕ್ಕೆ ಯಾವುದೇ ಸಾಕ್ಷ್ಯಾಧಾರ ಕನ್ನಡ ನಾಡಿನ ಜನತೆಗೆ ಇದುವರೆಗೂ ಲಭ್ಯವಾಗಿಲ್ಲ. ದಲಿತರ ಪರವಾಗಿ ಅಥವಾ ಹಿಂದುಳಿದವರ, ಮುಸ್ಲಿಮರ ಪರವಾಗಿ ಗಂಭೀರವಾದ ಯಾವ ಚಟುವಟಿಕೆಯೂ ಇಲ್ಲದಂತಾಗಿ ಸಂಘಟನೆ



ವಿಮಾನ ನಿಲ್ದಾಣ ಭೂಸ್ವಾಧೀನ ಶೆಟ್ಟರ್ ದರ್ಬಾರಿನಲ್ಲಿ ರೈತರಿಗೆ ಪಂಗನಾಮ!

ಹುಬ್ಬಳ್ಳಿಯ ವಿಮಾನ ನಿಲ್ದಾಣ ಅಂತಾರಾಷ್ಟ್ರೀಯ ಮಟ್ಟಕ್ಕೇರಲಿಲ್ಲ, ರೈತರಿಗೆ ಕೃಷಿ ಭೂಮಿಯೂ ಉಳಿಯಲಿಲ್ಲ. ಆದರೆ ಪಕ್ಕಾ ವ್ಯಾಪಾರಸ್ಥ ಜಗದೀಶ್ ಶೆಟ್ಟರ್ ನೆರಳಲ್ಲಿ ಇಲ್ಲಿನ ರಿಯಲ್ ಎಸ್ಟೇಟ್ ಕುಳಗಳು ಮಾತ್ರ ದುಂಡಗಾಗಿ ಕೂತಿದ್ದಾರೆ. ನೂರಾರು ಎಕರೆ ಫಲವತ್ತಾದ ಭೂಮಿಯನ್ನು ವಿಮಾನ ನಿಲ್ದಾಣದ ಅಭಿವೃದ್ಧಿ ಹೆಸರಿನಲ್ಲಿ ರೈತರಿಂದ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಈ ನೆಪದಲ್ಲಾದರೂ ನಮ್ಮ ಭಾಗ ಒಂದಷ್ಟು ಅಭಿವೃದ್ಧಿಯಾದರೆ ಸಾಕು ಎಂತಲೇ ಒಲ್ಲದ ಮನಸ್ಸಿನಿಂದ ತಮ್ಮ ಭೂಮಿ ಬಿಟ್ಟುಕೊಟ್ಟಿದ್ದ ರೈತರಿಗೆ ಸರ್ಕಾರ ನಿಗದಿಪಡಿಸಿದ್ದು ತೀರಾ ಕಡಿಮೆ ಬೆಲೆಯನ್ನು. ಅದೂ ಸಹ ರೈತರ ಕೈ ಸೇರಿಲ್ಲ. ಸತತ ನಾಲ್ಕು ಅವಧಿಯಿಂದ ಇಲ್ಲಿನ ಶಾಸಕನಾದ ಶೆಟ್ಟರ್ ಸಾಹೇಬರು ಇದರತ್ತ ತಲೆಯನ್ನೆ ಕೆಡಿಸಿಕೊಂಡಿಲ್ಲವಾದರೂ ಮುಖ್ಯಮಂತ್ರಿಯಾಗುತ್ತಿದ್ದಂತೆಯೇ ಭೂಸ್ವಾಧೀನ ಕಾಯ್ದೆಯನ್ನೆ ಉಲ್ಲಂಘಿಸಿ ಖಾಸಗಿಯವರಿಗೆ ಮಾರಾಟ ಮಾಡುವ ಮೂಲಕ ಕೃಷಿಕರಿಗೆ ದ್ರೋಹ ಬಗೆದಿದ್ದಾರೆ.

ರೈತರಿಗೆ ಶೆಟ್ಟರ್ ಕುತಂತ್ರದ ಅರಿವಾದದ್ದು ತೀರಾ ಇತ್ತೀಚೆಗೆ. 2007-08ರಲ್ಲಿ ನಡೆದ ಎರಡನೇ ಹಂತದ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಹುಬ್ಬಳ್ಳಿ ತಾಲ್ಲೂಕಿನ ಗೋಕುಲ ಮತ್ತು ಉಣಕಲ್ಲ ಗ್ರಾಮದ ರೈತರೂ ಭೂಮಿಯನ್ನು ಬಿಟ್ಟುಕೊಟ್ಟಿದ್ದರು. ಭೂಸ್ವಾಧೀನ ಕಾಯ್ದೆಯ ಪ್ರಕಾರ ಯಾವ ಉದ್ದೇಶಕ್ಕೆ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆಯೋ ಅದಕ್ಕೆ ಮಾತ್ರವೇ ಜಮೀನನ್ನು ಬಳಸಬೇಕು. ಒಂದು ವೇಳೆ ಹೆಚ್ಚುವರಿ ಭೂಮಿಯೇನಾದರು ಉಳಿದಲ್ಲಿ ಕೆಐಎಡಿಬಿ ಸೆಕ್ಷನ್ 28ರ ಪ್ರಕಾರ ಸರಕಾರಿ ಸಂಸ್ಥೆಗಳಾದ ಅಂಚೆ, ರೈಲ್ವೇ ಇಲಾಖೆಗಳಂತವುಗಳಿಗೆ ಉಚಿತವಾಗಿ ಹಸ್ತಾಂತರಿಸಬೇಕು. ಇದನ್ನು ಉಲ್ಲಂಘಿಸಿದರೆ ಜಮೀನು ಮೂಲ ವಾರಸುದಾರರ ಸ್ವತ್ತಾಗುತ್ತದೆ. ಆದರೆ ಶೆಟ್ಟರ್ ಸಾಹೇಬರು ತಮ್ಮ ಕೊನೇ ದಿನಗಳಲ್ಲಿ ಈ ಜಾಗವನ್ನು ಖಾಸಗೀ ಸಂಸ್ಥೆಗಳಿಗೆ ಮಾರಾಟ ಮಾಡಿ ಹೋಗಿದ್ದಾರೆ. ಹೀಗೆ ಕೊಂಡವರಲ್ಲಿ ದೇಶಪಾಂಡೆ ಫೌಂಡೇಶನ್ ಕೂಡಾ ಒಂದು.

ಸ್ವಾಧೀನಪಡಿಸಿಕೊಂಡ ಸರ್ವೇ ನಂಬರ್ 901ರಲ್ಲಿದ್ದ ಒಟ್ಟು 6 ಎಕರೆ 9 ಗುಂಟೆ ಜಾಗವನ್ನು ಈ ಫೌಂಡೇಶನ್‌ಗೆ ಏಪ್ರಿಲ್ 2013ರಲ್ಲಿ ಪ್ರತಿ ಎಕರೆಗೆ 50 ಲಕ್ಷ ರೂಪಾಯಿಯಂತೆ ಮಾರಾಟ ಮಾಡಲಾಗಿದೆ. ಆಗ ಮುಖ್ಯಮಂತ್ರಿಯಾಗಿದ್ದದ್ದು ಇದೇ ಜಗದೀಶ್ ಶೆಟ್ಟರ್. ರೈತರಿಂದ ಅದೇ ಜಮೀನನ್ನು ಸರ್ಕಾರ ವಶಪಡಿಸಿಕೊಳ್ಳುವಾಗ, ಪರಿಹಾರವಾಗಿ ನೀಡಿರೋದು ಕೇವಲ 26 ಲಕ್ಷ ರೂಪಾಯಿ ದರವನ್ನು ಮಾತ್ರ. ಮೊನ್ನೆ ದೇಶಪಾಂಡೆ ಫೌಂಡೇಶನ್‌ನವರು ತಾವು ಖರೀದಿಸಿದ ಜಾಗಕ್ಕೆ ಬೌಂಡರಿ ಫಿಕ್ಸ್ ಮಾಡಲು ಬಂದಾಗಲೆ ಬಿಜೆಪಿ ಸರ್ಕಾರದ ಗೋಲ್‌ಮಾಲ್ ಬೆಳಕಿಗೆ ಬಂದದ್ದು. ವಿಷಯ ತಿಳಿಯುತ್ತಿದ್ದಂತೆ ರೊಚ್ಚಿಗೆದ್ದ ರೈತರು 'ಜಮೀನನ್ನು ನೀಡಿದ್ದು ವಿಮಾನ ನಿಲ್ದಾಣ ಅಭಿವೃದ್ಧಿಗೆ ಹೊರತು ಖಾಸಗಿ ಬಕರಿಗಲ್ಲ, ನಾವು ಸತ್ತರೂ ನಿಮಗೆ ಜಾಗ ಬಿಟ್ಟುಕೊಡೊಲ್ಲ' ಅಂತ ಪಟ್ಟು ಹಿಡಿದು ಕೂತಿದ್ದಲ್ಲದೆ ಫೌಂಡೇಶನ್‌ನವರು ಬೆದರಿ ಹೋಗುವಂತೆ ದಬಾಯಿಸಿ ಕಳಿಸಿದ್ದಾರೆ. ನಂತರ ಕೆದಕಿದಾಗ ನವೆಂಬರ್ 4, 2012ರಂದು ಪತ್ರ ಸಂಖ್ಯೆ KGM/SLSWCC-75/E-1/614/2012-13 ರನ್ವಯ ರೈತರ ಜಮೀನನ್ನು ಅನಂತ ರೆಸಿಡೆನ್ಸಿ ಎಂಬ ಫೈವ್‌ಸ್ಟಾರ್ ಹೋಟೆಲ್ ಉದ್ಯಮಕ್ಕೆ ಬರೋಬ್ಬರಿ 2 ಎಕರೆ ಜಮೀನು ಮಾರಿದ್ದೂ ಬಹಿರಂಗಗೊಂಡಿದೆ. ಇಂತಹ ಅದೆಷ್ಟು ಖಾಸಗಿ ಡೀಲ್‌ಗಳು ನಡೆದಿವೆಯೋ ಇನ್ನು ಮುಂದೆ ಬೆಳಕಿಗೆ ಬರಬೇಕಾಗಿದೆ. ಹಿಂದಿನ ಸರ್ಕಾರ ಮಾಡಿದ ಈ ದಲ್ಲಾಳಿ ಕೆಲಸದ ವಿರುದ್ಧ ಹೊಸ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಬಳಿ ದೂರು ಹೊತ್ತೊಯ್ದಿರುವ ರೈತರು ಶೆಟ್ಟರ್‌ಗೆ ಹಿಡಿಶಾಪ ಹಾಕುತ್ತಿದ್ದಾರೆ.

ಕೇವಲ ಜಮೀನಲ್ಲ, ಭಾವನೆಗಳೂ ಬೆಸೆದುಕೊಂಡಿವೆ

ಬಂಡವಾಳಿಗರಿಗೆ ಅದು ಚದರಡಿ ಲೆಕ್ಕದ ಜಾಗ ಮಾತ್ರವಾಗಿ ಕಾಣಬಹುದು. ಆದರೆ ರೈತರಿಗೆ ಅದು ಫಲವತ್ತಾದ ಜಮೀನು ಮಾತ್ರವಲ್ಲ, ಅದರೊಟ್ಟಿಗೆ ಅವರ ಭಾವನೆಗಳೂ ಬೆಸೆದುಕೊಂಡಿರುತ್ತವೆ. ಹುಬ್ಬಳ್ಳಿ ವಿಮಾನ ನಿಲ್ದಾಣ ಭೂಸ್ವಾಧೀನದಲ್ಲಿ ಜಮೀನು ಕಳೆದುಕೊಂಡ ಜಯಮ್ಮ ಕುಬಸದಗೌಡರ ಕೂಡಾ ಅಂತವರಲ್ಲಿ ಒಬ್ಬಳು. ಗೋಕುಲ ಗ್ರಾಮದ ಹೊರವಲಯದಲ್ಲಿ ಈಕೆಗೆ 12.35 ಎಕರೆಯ ತೋಟವಿತ್ತು. 1972ರಲ್ಲಿ ಭೂಮಿ ಸ್ವಾಧೀನಪಡಿಸಿಕೊಂಡಾಗಲೆ ಈಕೆಯ ತೋಟ ನೋಟಿಫೈ ಆಗಿತ್ತು. ದುರದೃಷ್ಟವಶಾತ್ ಜಯಮ್ಮನ ತಂದೆ, ತಾಯಿ, ಗಂಡ, ಅತ್ತಿಗೆ ಇವರೆಲ್ಲರ ಸಮಾಧಿಗಳೂ ಇದೇ ತೋಟದಲ್ಲಿವೆ. ಅವುಗಳೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿರುವ ಜಯಮ್ಮ ಭೂಮಿಯನ್ನು ಕೊಡಲು ಸುತರಾಂ ಒಪ್ಪುತ್ತಿಲ್ಲ. ಮೊದಲಿನಿಂದಲೂ ಹೋರಾಡುತ್ತಲೇ ಬಂದಿದ್ದಾಳೆ. ಕಾರ್ಪೋರೇಟ್ ಬಂಡವಾಳಿಗರಿಗೆ ರತ್ನಗಂಬಳಿ ಹಾಸುವ ಭರಾಟೆಯಲ್ಲಿ ನಮ್ಮದೇ ಸರ್ಕಾರಗಳು ಇಂತಹ ನೂರಾರು ರೈತ ಕುಟುಂಬಗಳ ವೇದನೆಯನ್ನು ತುಳಿದು ನರ್ತಿಸುತ್ತಿರುವುದು ಎಷ್ಟು ಸರಿ?



ವಂಚನೆ ವಿರುದ್ಧ ತಿರುಗಿ ಬಿದ್ದ ರೈತರು — ದೇಶಪಾಂಡೆ ಫೌಂಡೇಷನ್ ಮಾರಿಕೊಂಡ ಸರ್ಕಾರಿ ಜಾಗ

1972ರ ಫ್ಲ್ಯಾಶ್‌ಬ್ಯಾಕ್...

ಹುಬ್ಬಳ್ಳಿ ವಿಮಾನ ನಿಲ್ದಾಣ ಉನ್ನತೀಕರಣದ ಗೋಳು ಶುರುವಾಗೋದು 1972ರ ಫ್ಲ್ಯಾಶ್‌ಬ್ಯಾಕ್‌ನಿಂದ. ಸದರಿ ವಿಮಾನ ನಿಲ್ದಾಣವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೇರಿಸಲು ಉದ್ದೇಶಿಸಿ ಇದಕ್ಕಾಗಿ 422 ಎಕರೆ ಜಾಗ ಬೇಕಾಗುತ್ತದೆಂದು ಸರ್ಕಾರ ಅಂದಾಜಿಸಿತ್ತು. ಅದರ ಪ್ರಕಾರ ಈ ವ್ಯಾಪ್ತಿಗೆ ಒಳಪಡುವ ಗೋಕುಲ ಮತ್ತು ಉಣಕಲ್ಲ ಗ್ರಾಮದ ಸುಮಾರು 422 ಕೃಷಿ ಜಮೀನನ್ನು ಸರ್ಕಾರ ವಶಪಡಿಸಿಕೊಂಡು ರೈತರಿಗೆ ಎಕರೆಗೆ ತಲಾ 1.94 ಲಕ್ಷದಂತೆ ಜುಜುಬಿ ಪರಿಹಾರ ಮೊತ್ತವನ್ನೂ ನಿಗದಿಪಡಿಸಿತ್ತು. ಇದರಲ್ಲಿ ಆಶ್ರಯ ಯೋಜನೆಗೆಂದು 7 ಎಕರೆ, ರಸ್ತೆ ಅಭಿವೃದ್ಧಿಗೆಂದು 12 ಎಕರೆ ಹಾಗೂ ಕೈಗಾರಿಕಾ ಉದ್ದೇಶಕ್ಕೆಂದು 32 ಎಕರೆಯನ್ನು ಪ್ರತ್ಯೇಕಿಸಿ ನೋಟಿಫೈ ಮಾಡಲಾಗಿತ್ತು.

ದಿನಗಳು ಉರುಳಿದವೆ ಹೊರತು ಅಲ್ಯಾವ ಅಭಿವೃದ್ಧಿ ಕಾಮಗಾರಿಗಳೂ ಶುರುವಾಗಲಿಲ್ಲ. ಆದರೆ 2007-08ರಲ್ಲಿ ಮರು ಮನವಿ ಮಾಡಿಕೊಂಡ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ಬದಲಾದ ಸಂದರ್ಭಗಳಲ್ಲಿ 422 ಎಕರೆ ಜಾಗ ಸಾಕಾಗುವುದಿಲ್ಲ, ನಿಲ್ದಾಣದ ಸಮಗ್ರ ಅಭಿವೃದ್ಧಿಗೆ ಒಟ್ಟು 650 ಎಕರೆ ಜಾಗ ಬೇಕಾಗುತ್ತದೆಂದು ಪ್ರಸ್ತಾವನೆ ಸಲ್ಲಿಸಿತ್ತು. ಅಷ್ಟರಲ್ಲಾಗಲೆ ಅಧಿಕಾರದ ಗದ್ದುಗೆಗೇರಿದ್ದ ಭೂದಾಹಿ ಬಿಜೆಪಿ ಸರ್ಕಾರಕ್ಕೆ, ಅಂತಹ ಬೇಡಿಕೆ ತೂಕಡಿಸುವವನಿಗೆ ಹಾಸಿಕೊಟ್ಟಂತಾಗಿತ್ತು. ಎರಡನೇ ಹಂತದ ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಿದ ಬಿಜೆಪಿ ಸರ್ಕಾರ ರೈತರಿಂದ ಕಿತ್ತುಕೊಂಡದ್ದು 711 ಎಕರೆ ಜಾಗವನ್ನು!

20.12.2008ರಂದು ನಡೆದ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಹಾಗೂ ಮುಖ್ಯ ಕಾರ್ಯದರ್ಶಿಗಳ ಸಭೆಯಲ್ಲಿ ಭೂಸ್ವಾಧೀನ ವೆಚ್ಚದ ಅರ್ಧ ಪಾಲನ್ನು ಕೆಐಎಡಿಬಿ ವಹಿಸಿಕೊಳ್ಳಬೇಕೆಂದು ತೀರ್ಮಾನಿಸಲಾಗಿತ್ತು. ಲ್ಯಾಂಡ್ ಗ್ರ್ಯಾಬರ್ ಕುಖ್ಯಾತಿಯ ಅಂದಿನ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಸಿಕ್ಕಿದ್ದೇ ಛಾನ್ಸ್ ಎಂದು ರೈತರಿಂದ ಅಗತ್ಯಕ್ಕಿಂತ ಹೆಚ್ಚಿನ ಭೂಮಿಯನ್ನು ವಶಪಡಿಸಿಕೊಂಡು ಕೆಐಎಡಿಬಿ ವಶವಾಗುವಂತೆ ನೋಡಿಕೊಂಡಿದ್ದ. ತಮಗೆ ಬೇಕಾದವರಿಗೆ ಡಿ-ನೋಟಿಫೈ ಮಾಡುವುದು ಇಲ್ಲವೇ ಖಾಸಗಿಯವರಿಗೆ ಮಾರಾಟ ಮಾಡಿ ಡೀಲ್ ಕುದುರಿಸಿಕೊಳ್ಳುವುದು ಇದರ ಹಿಂದಿದ್ದ ದುರುದ್ದೇಶವಾಗಿತ್ತು. ಇದನ್ನು ಸ್ಪಷ್ಟೀಕರಿಸುವಂತೆ ಇತ್ತೀಚೆಗೆ ಈ ವಿಷಯವಾಗಿ ವಿವರಣೆ ಕೇಳಿದಾಗ ಕೆಐಎಡಿಬಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಂ.ಬಿ.ದ್ಯಾಬೇರಿ 'ವಿಮಾನ ನಿಲ್ದಾಣಕ್ಕೆಂದು ಜಮೀನು ವಶಪಡಿಸಿಕೊಳ್ಳಲಾಗಿತ್ತು. ಹೆಚ್ಚುವರಿ ಜಮೀನನ್ನು ಕೈಗಾರಿಕಾ ಅಭಿವೃದ್ಧಿ ಪ್ರಾಧಿಕಾರ ಖರೀದಿ ಮಾಡಿದೆ. ನಾವು ಆ ಜಮೀನಿನ ಮಾಲೀಕರು. ಹಾಗಾಗಿ ನಾವದನ್ನು ಯಾರಿಗಾದರೂ ಕೊಡಬಹುದು. ನಮ್ಮನ್ಯಾರೂ ಕೇಳುವಂತಿಲ್ಲ' ಎಂದು ದರ್ಪದ ಡೈಲಾಗ್ ಉದುರಿಸಿದ್ದ. ಅಲ್ಲಿಗೆ ರೈತರ ಜಮೀನನ್ನು ಖಾಸಗಿಯವರಿಗೆ ಮಾರಿಕೊಳ್ಳಲು ಬಿಜೆಪಿ ಸರ್ಕಾರ ಥೇಟ್ ಪ್ರಜಾದ್ರೋಹಿ ದಲ್ಲಾಳಿಯಂತೆ ವರ್ತಿಸಿರೋದು ಸಾಬೀತಾಗುತ್ತದೆ.

ರೈತರ ಕತ್ತು ಕುಯ್ಯುವಲ್ಲಿ ಶೆಟ್ಟರ್ ಬಲು ನಾಜೂಕಿನ ಕೆಲಸ ಮಾಡಿದ್ದಾರೆ. ಪರಿಹಾರದ ಮೊತ್ತದ ವಿಚಾರಕ್ಕೆ ಬಂದಾಗಲೆಲ್ಲ ಅವರ ಪರವಾಗಿ ಕೆಲಸ ಮಾಡುವ ನಾಟಕವಾಡಿ ರೈತರ ದೃಷ್ಟಿಯಲ್ಲಿ ಒಳ್ಳೆಯವರಾಗುವ ಹುನ್ನಾರ ನಡೆಸಿದ್ದು ಈಗ ಬಯಲಾಗಿದೆ. ಎರಡನೇ ಹಂತದ ಸ್ವಾಧೀನ ಪ್ರಕ್ರಿಯೆ ಆರಂಭವಾದಾಗ ಮೊದಲು ರೈತರಿಗೆ ಪರಿಹಾರ ಮೊತ್ತವಾಗಿ ಪ್ರತಿ ಎಕರೆಗೆ ಗೊತ್ತು ಮಾಡಿದ್ದು 2.5 ಲಕ್ಷವನ್ನು ಮಾತ್ರ. ಜಮೀನನ್ನು ಬಿಟ್ಟುಕೊಡಲೇ ಸಿದ್ಧವಿಲ್ಲದ ರೈತರು ಈ ನಿಕೃಷ್ಟ ಬೆಲೆ ಕೇಳಿದಾಕ್ಷಣ ಕೊಡುವುದೇ ಇಲ್ಲವೆಂದು ಹಠ ಹಿಡಿದಿದ್ದರು. ಪ್ರಜಾಪ್ರತಿನಿಧಿಯಾಗಿ ಜನರ ಬಯಕೆಗಳಿಗೆ ಸ್ಪಂದಿಸುವ ಬದಲು ಪಕ್ಕಾ ದಲ್ಲಾಳಿಯಂತೆ ವರ್ತಿಸಿದ್ದ ಶೆಟ್ಟರ್ ಮೊತ್ತ 26 ಲಕ್ಷಕ್ಕೆ ಏರಿಕೆಯಾಗುವಂತೆ ನೋಡಿಕೊಂಡು ಮಾರಲು ರೈತರನ್ನು ಪುಸಲಾಯಿಸಿದ್ದರು. 2.5 ಲಕ್ಷದಿಂದ 26 ಲಕ್ಷಕ್ಕೆ ಜಮೀನು ಮಾರಿಸಿಕೊಟ್ಟ ಶೆಟ್ಟರ್ ಆ ಕ್ಷಣಕ್ಕೆ ರೈತರಿಗೆ ಆಪದ್ಬಾಂಧವರಂತೆಯೇ ಕಂಡುಬಂದಿರಬಹುದು. ಆದರೆ ತಾನೆ ಮುಖ್ಯಮಂತ್ರಿಯಾಗಿದ್ದಾಗ ಅದೇ ಜಾಗವನ್ನು ಖಾಸಗಿಯವರಿಗೆ ಮಾರಿಕೊಂಡಿರುವ ಶೆಟ್ಟರ ನಿಜವಾದ ಬಣ್ಣ ಬೆಳಕಿಗೆ ಬಂದಿದೆ.

ಸರ್ಕಾರದಿಂದಲೇ ವಂಚನೆಗೆ ಒಳಗಾದ ಹುಬ್ಬಳ್ಳಿಯ ರೈತರು ಕೆಪಿಸಿಸಿ ರಾಜ್ಯ ಕಾರ್ಯದರ್ಶಿ ರಾಜಶೇಖರ ಮೆಣಸಿನಕಾಯಿ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಬಳಿ ಗೋಳು ತೋಡಿಕೊಂಡಿದ್ದಾರೆ. ಜೊತೆಗೆ, ಹಿಂದಿನ ದಗಲ್ಬಾಜಿ ಬಿಜೆಪಿ ಸರ್ಕಾರದ ವಿರುದ್ಧ ಹೈಕೋರ್ಟ್ ಮೆಟ್ಟಿಲೇರಲೂ ಕಾನೂನು ಸಿದ್ಧತೆಯಲ್ಲಿದ್ದಾರೆ. ಹಾಗೇನಾದರು ಅದಲ್ಲಿ ಅಥವಾ ಸಿದ್ದರಾಮಯ್ಯನವರೆ ಮುತುವರ್ಜಿ ವಹಿಸಿ ರೈತರ ಪರವಾಗಿ ನಿಂತು ತನಿಖೆಗೆ ಆದೇಶ ನೀಡಿದ್ದೇ ಆದಲ್ಲಿ ಮಾಜಿ ಜಗದೀಶ್ ಶೆಟ್ಟರ್‌ಗೆ (ಅಷ್ಟೇ ಏಕೆ, ಮಾಜಿ ಆದ ಮಾಜಿ ಮುಖ್ಯಮಂತ್ರಿ ಅಂತ) ಮತ್ತು [illegible] ಮುರುಗೇಶ್ ನಿರಾಣಿಗೆ ಮತ್ತೊಂದು ಕಂಟಕ [illegible] ಎದುರಾಗುವುದರಲ್ಲಿ ಅನುಮಾನವೇ ಇಲ್ಲ.

• ಹುಬ್ಬಳ್ಳಿ ಯಾಂವ

ರಿಯಲ್ ಎಸ್ಟೇಟ್ ಕುಳಗಳಿಗೆ ಶೆಟ್ರು ಕೊಡುಗೆ

ಬೆಂಗಳೂರಿನಷ್ಟು ಪ್ರಬಲವಾಗಿಲ್ಲವಾದರೂ ಹುಬ್ಬಳ್ಳಿಯಲ್ಲಿ ರಿಯಲ್ ಎಸ್ಟೇಟ್ ದಂಧೆ ಕಳೆದ ಮೂವತ್ತು ವರ್ಷಗಳಿಂದಲೂ ಪಸರಿಸಿಕೊಳ್ಳುತ್ತಲೇ ಬಂದಿದೆ. ಈ ದಂಧೆಯೊಂದಿಗೆ Compromise ಆಗಿರುವುದೇ ಶೆಟ್ಟರ್‌ರ ಸತತ ಗೆಲುವುಗಳ ಹಿಂದಿನ ರಹಸ್ಯ. ಸ್ವತಃ ಅವರ ತಮ್ಮ ಪ್ರದೀಪ್ ಶೆಟ್ಟರ್‌ನೇ ರಿಯಲ್ ಎಸ್ಟೇಟ್ ದಂಧೆಯ ಕಿಂಗ್‌ಪಿನ್. ಪರಿಹಾರ ಕೊಡಿಸುವಲ್ಲೂ ಶೆಟ್ಟರ್ ರಿಯಲ್ ಎಸ್ಟೇಟ್ ದಂಧೆಕೋರರ ಬಗ್ಗೆ ಹೆಚ್ಚು ಕಾಳಜಿಯನ್ನು ತೋರಿಸಿದ್ದಾರೆ. ವಶಪಡಿಸಿಕೊಂಡಿರುವುದು ಶುದ್ಧ ಕೃಷಿ ಭೂಮಿಯಾದರೂ ಹುಬ್ಬಳ್ಳಿಯ ಬಹುಪಾಲು ರಿಯಲ್ ಎಸ್ಟೇಟಿಗರು, ಬಿಜೆಪಿ ಚೇಲಾಗಳಿಗೆ ಪರಿಹಾರ ಸಂದಾಯವಾಗುವಂತೆ ನೋಡಿಕೊಳ್ಳಲಾಗಿದೆ. ಮಧುರಾ ಎಸ್ಟೇಟ್ ಮತ್ತು ಅನಂತ ರೆಸಿಡೆನ್ಸಿಯ ಎಂ.ಡಿ ಯ 1 ಎಕರೆ 32 ಗುಂಟೆ ಜಮೀನಿಗೆ 3.56 ಕೋಟಿ, ಸುರೇಶ ವಿಶ್ವನಾಥನ 9 6.9 ಎಕರೆಗೆ 12.44 ಕೋಟಿ, ಶಾಂತಿಲಾಲ್ ಜೈನ್ ಮತ್ತು ಸಂತೋಷ್ ಕೊಠಾರಿಯ 3 ಎಕರೆ 17 ಗುಂಟೆ ಜಮೀನಿಗೆ 2.62 ಕೋಟಿ, ಸಂತೋಷ ಹಿರೇಕೆರೂರ 6 ಎಕರೆಗೆ 1.75 ಕೋಟಿ, ಪ್ರದೀಪ್ ಶೆಟ್ಟರ್‌ನ 2 ಆಣೆ ... 4.2 ಆಣೆಗೆ 44.33 ಲಕ್ಷ, ಮಾನಸಿ ಗುಂಟೆ 2 ಆಣೆಗೆ 13.06 ಲಕ್ಷ, ಸಿಧಿ ಆರ್.ಶೆಟ್ಟಿಯ 6 ಗುಂಟೆ 4.2 ಆಣೆಗೆ 44.33 ಲಕ್ಷ, ಮಾನಸಿ ಆರ್.ಶೆಟ್ಟಿಯ 8 ಗುಂಟೆ 4.2 ಆಣೆಗೆ 40.50 ಲಕ್ಷ, ಜಯರಾಮ್ ಶೆಟ್ಟಿಯ 13 ಗುಂಟೆ 3 ಆಣೆಗೆ 61.17 ಲಕ್ಷ ರೂಪಾಯಿ ಪರಿಹಾರ ದಕ್ಕಿಸಿಕೊಂಡಿದ್ದಾರೆ. ಅರೆಘಳಿಗೆಯೂ ಬಿಸಿಲಲ್ಲಿ ಒಣಗದ ಈ ಜೀವಗಳು ಅದ್ಯಾವಾಗ ಕೃಷಿ ಭೂಮಿಯ ಒಡೆಯರಾಗಿ ಉತ್ತು-ಬಿತ್ತಿದ್ದವೊ? ಅದೆಂತಹ ಬೆದರಿಕೆ, ಆಮಿಷ ಒಡ್ಡಿ ರೈತರಿಂದ ಜಮೀನು ಬರೆಸಿಕೊಂಡಿದ್ದವ್ರೊ? ಮಾಜಿ ಶೆಟ್ಟರೇ ಬಲ್ಲ.....

ಅಂದಹಾಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ನಿರಾಶ್ರಿತರಾದವರಿಗೆ ಪರಿಹಾರ ನೀಡಲೆಂದು ಸರ್ಕಾರ ಬಿಡುಗಡೆ ಮಾಡಿರೋದು 20 ಕೋಟಿ ರೂಪಾಯಿಯನ್ನು ಮಾತ್ರ. ಅದೆಲ್ಲವೂ ರಿಯಲ್ ದಂಧಾಕೋರರಿಗೆ ಹಂಚಿಹೋಗಿರುವಾಗ ರೈತರ ಕೈ ಸೇರುವುದಾದರೂ ಹೇಗೆ?


ಸೊರಗಿದೆ. ಕೆಲವು ನಾಯಕರು ಕಾಂಗ್ರೆಸ್ ಬಾಗಿಲು ತಟ್ಟಿದ್ದಾರೆ. ಇನ್ನೂ ಕೆಲವು ಪ್ರಮುಖ ನಾಯಕರು ನಾನಾ ಹಗರಣಗಳಲ್ಲಿ ಮುಳುಗಿದ್ದಾರೆ. ಅಧಿಕಾರ ಸಿಗುವ ಮುಂಚೆಯೇ ಆಡಬಾರದ ಆಟಗಳನ್ನೆಲ್ಲಾ ಆಡಿ ಕೋಟಿಗಟ್ಟಲೆ ಹಣ ಬಾಚಿ, ನಾನಾ ಕೇಸುಗಳಲ್ಲಿ ಸಿಕ್ಕಿಬಿದ್ದಿರುವ ಕೆಲವು ನಾಯಕರ ಕಡೆ ಬೊಟ್ಟು ಮಾಡಲೇ ಬೇಕಾಗುತ್ತದೆ. ಇಲ್ಲಿ ವಿಶೇಷವಾಗಿ ಗಮನಿಸಬೇಕಾದ ಮತ್ತೊಂದು ಅಂಶವಿದೆ. ಈ ನಾಯಕರ ವಿರುದ್ಧ ದೂರುದಾರರಾಗಿರುವವರು ಬೇರೆ ಯಾರೂ ಅಲ್ಲ; ಅಮಾಯಕ ದಲಿತರು! ಬಿಎಸ್‌ಪಿ ರಾಜ್ಯ ನಾಯಕರೊಬ್ಬರ ದೌರ್ಜನ್ಯವನ್ನು ವಿರೋಧಿಸುವ ಸಲುವಾಗಿಯೇ ಒಂದು ದಲಿತ ಸಂಘಟನೆಯೂ ಶುರುವಾಗಿತ್ತು ಎಂದರೆ ಇವರ ಉಪಟಳ ಯಾವ ಲೆವೆಲ್ ಮುಟ್ಟಿತ್ತು ಎಂಬುದನ್ನು ಯಾರಾದರೂ ಊಹಿಸಬಹುದು. ಹೀಗಾದರೆ ಅಕ್ಕ ಮಾಯಾವತಿಯನ್ನು ದೆಹಲಿಯ ಗದ್ದುಗೆಗೇರಿಸುವುದು ಹೇಗೆ?


ಇನ್ನೂ ತಮಾಷೆಯ ಸಂಗತಿಯೊಂದಿದೆ. ಅದೇನೆಂದರೆ ಬರುವ ಲೋಕಸಭಾ ಚುನಾವಣೆಗೆ ಆಗಲೇ ರೆಡಿಯಾಗಿರುವ ಆನೆ ಪಕ್ಷದ ಅಕ್ಕ ಮಾಯಾವತಿ ಉತ್ತರಪ್ರದೇಶದಲ್ಲಿ ಇತ್ತೀಚೆಗೆ 36 ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದ್ದಾರೆ. ಅದರಲ್ಲಿ 18 ಮಂದಿ ಮೇಲ್ಜಾತಿಯವರು ಎಂಬುದನ್ನು ಗಮನಿಸಬೇಕು! ಉತ್ತರ ಪ್ರದೇಶದ ಬ್ರಾಹ್ಮಣಗಳೇ ಇಲ್ಲಿ; ಕರ್ನಾಟಕದಲ್ಲಿ ಅದೇ ತಂತ್ರ ಫಲ ನೀಡುವುದು ಅಸಾಧ್ಯ ಎಂಬುದನ್ನು ಇನ್ನಾದರೂ ಬಿಎಸ್‌ಪಿ ನಾಯಕರು ಅರ್ಥಮಾಡಿಕೊಳ್ಳುವುದು ಒಳ್ಳೆಯದು.


• ದೊಡ್ಡಿಹಾಳ ನರಸಿಂಹಮೂರ್ತಿ

ಮತ್ಸ್ಯಗಂಧಿಯ ಹಾಡು...

ಮರೆತ ಜೀವಕ್ಕೆ ಹಂಬಲಿಸುವ ಕವಿತೆಗಳು







ಸ್ತ್ರೀ ಪ್ರಧಾನ ನಿಲುವನ್ನು ಗಟ್ಟಿಗೊಳಿಸಬೇಕಾದ ಅನಿವಾರ್ಯತೆ ಈ ಕಾಲದ್ದು. ಸ್ತ್ರೀವಾದಿ ವಿಮರ್ಶಕರು ಈ ಕ್ರಿಯೆಯನ್ನ ಸಾಂಸ್ಕೃತಿಕ ಸಾಮಾಜಿಕ ಒತ್ತಡಗಳಿಂದ ನಿರ್ಮಿತವಾಗಿರುವ ನಿರ್ದಿಷ್ಟ ಸ್ತ್ರೀ ನೆಲೆಯಿಂದ ಬಂದ. ಸ್ತ್ರೀಯರ ಅಭಿವ್ಯಕ್ತಿಯನ್ನ ಸ್ತ್ರೀಯಾತ್ಮಕತೆಯ ಅಭಿವ್ಯಕ್ತಿ ಎನ್ನುತ್ತಾರೆ.

ಸ್ತ್ರೀ ಇಂದು ಪರಂಪರಾಗತವಾಗಿರುವ ಪುರುಷನ ನೆರಳಿನಿಂದ ಹೊರಬಂದು ತನ್ನದೇ ಅಸ್ತಿತ್ವ ನಿರ್ಮಿಸಿಕೊಳ್ಳುವ ತಾಕತ್ತು ಪಡೆಯುತ್ತಿದ್ದಾಳೆ. ಪುರುಷ ವೈಭವೀಕರಿಸುವ ಪಾತಿವ್ರತ್ಯ ಭಕ್ತಿ ಮೋಕ್ಷ ಹೃದಯಗಳಂತಹ ಸಿದ್ಧಮಾದರಿಗಳ ಹಿಂದಿನ ಸತ್ಯಗಳನ್ನು ಛಿದ್ರಿಸಿ ತನ್ನ ಅಸಲೀತನವನ್ನು ಪ್ರದರ್ಶಿಸುವಲ್ಲಿ ಸಫಲಳಾಗಿದ್ದಾಳೆ. ಇಂತಹ ಅಭಿವ್ಯಕ್ತಿಗಳ ಅನೇಕ ಕಾಲುದಾರಿಗಳಲ್ಲಿ ಮಹಿಳಾ ಕಾವ್ಯವೂ ಒಂದು.

ಆಧುನಿಕ ಮಹಿಳಾಕಾವ್ಯವನ್ನು ಒಮ್ಮೆ ಇಣುಕಿನೋಡಿದರೆ ಅಲ್ಲಿ ತಕ್ಷಣ ನಮ್ಮ ಕಣ್ಣಿಗೆ ರಾಚುವುದು ಇವರು ಪುರಾಣ ಇತಿಹಾಸಗಳ ಸ್ತ್ರೀ ಮಾದರಿಗಳನ್ನು ಭಗ್ನಗೊಳಿಸಿರುವುದು. ಅವಜ್ಞೆಗೆ, ತುಳಿತಕ್ಕೆ ಒಳಗಾದ ಪಾತ್ರಗಳಿಗೆ ಮರುಚಿಂತನೆಯ ಧಾರೆಯೆರೆದು ಅವುಗಳನ್ನು ಪ್ರತಿರೋಧಿಸುವ, ಪ್ರಶ್ನಿಸುವ, ಧಿಕ್ಕರಿಸಿ ನಿಲ್ಲುವ ಪಾತ್ರಗಳನ್ನಾಗಿಸಿರುವುದು.

ಆಧುನಿಕ ಮಹಿಳಾಕಾವ್ಯವು ಎರಡು ನೆಲೆಗಳಲ್ಲಿ ಗಟ್ಟಿಗೊಂಡಿದೆ. ಮೊದಲ ತಲೆಮಾರು ರಹದಾರಿಗಳನ್ನು ನಿರ್ಮಿಸಿದರೆ ಇದರ ಮೇಲೆ ಎರಡನೇ ತಲೆಮಾರು ನಿರಂತರ ಚಲನಶೀಲತೆಯನ್ನು ಕಾದುಕೊಂಡಿದೆ. ಮಹಿಳಾ ದಲಿತ ಕಾವ್ಯ ಎಂಬ ಪ್ರಶ್ನೆಗೆ ಬಂದಾಗ ನಿಜಕ್ಕೂ ಎದ್ದು ಕಾಣುವ ಹೆಸರು ಅನಸೂಯ ಕಾಂಬಳೆ ಅವರದ್ದು.

ಕಾಂಬಳೆಯವರ ಕವಿತೆಗಳಲ್ಲಿ ಆತ್ಮರತಿಯ ಅತಿರಂಜಕ ಗುಣಗಳಿಲ್ಲ, ಕೌಟುಂಬಿಕ ಚೌಕಟ್ಟನಲ್ಲೇ ಗಿರಿಕಿಹೊಡೆವ ಬರಹಗಳಿಲ್ಲ, ನವ್ಯ ಮಾದರಿ ತಂದೊಡ್ಡಿದ ದೇಹಮೀಮಾಂಸೆಗಳ ಹಸಿಬರಹಗಳಿಲ್ಲ, ಮೈಥುನಗಳ ರೋಚಕ ಸಾಲುಗಳಿಲ್ಲ, ಇವರ ಸಂಕಲನವೊಂದು ಸಂಕಟಗಳ ಬುತ್ತಿ, ಇಲ್ಲಿ ನೋವೇ ಸ್ಥಾಯಿ ನಗುವೇ ಸಂಚಾರಿ. ಇವರಲ್ಲಿ ಮಹಿಳಾ ಸಮಸ್ಯೆಗಳ ಆಚೆಗೂ ಜೀವಜಗತ್ತನ್ನು ಕಾಣುವ ತಾಳ್ಮೆ ಇದೆ. ಸಾಮಾಜಿಕ ಸಂಗತಿಗಳು, ನಿರುದ್ಯೋಗ, ಗುಳೆ, ಜಾಗತೀಕರಣದಂತಹ ವಿಷಯಗಳೂ ಇಲ್ಲಿ ಕವಿತೆಗಳಾಗಿವೆ. ಕಳೆದ ಕೆಲವು ದಶಕಗಳಲ್ಲಿ ನಮ್ಮೆದುರೇ ನಡೆದ ದಲಿತ ದೌರ್ಜನ್ಯಗಳ ತಾಜಾ ಚರಿತ್ರೆಗಳೂ ಇಲ್ಲಿವೆ.

ಕಾಂಬಳೆಯವರು ತಳಸಂಸ್ಕೃತಿಯ ನಿರ್ಲಕ್ಷಿತ ಜಗತ್ತನ್ನು ಅಕ್ಷರ ಮಾಡ ಹೊರಟಿದ್ದಾರೆ. ಹಾಗಾಗಿ ಇವರ ಕವಿತೆಗಳಲ್ಲಿ ನಗರದ ಮಹಿಳಾ ಬರಹಗಳ ಕೊರಗಿನ ದಾಟಿ ಇಲ್ಲ, ಬದಲಿಗೆ ಹಳ್ಳಿ ಹೆಣ್ಣೊಬ್ಬಳ ಸಿಡಿವ ಅಬ್ಬರಗಳಿವೆ.

ನನ್ನ ಕವಿತೆಗಳು
ಕತ್ತಲಿಂದೆದ್ದ ಬೆಳಕಿನ ಕಿಡಿಗಳು
ಹರಕು ಚಪ್ಪರಿನ ಹಾಡುಗಳು
ಹುಸಿ ಮೌಲ್ಯಗಳ ಬಿತ್ತುವವರ ಮುಂದೆ
ಎಸೆದ ಎಚ್ಚತ್ತ ಪ್ರಶ್ನೆಗಳು

... ಎಂದು ತಮ್ಮ ಕವಿತೆಗಳ ಕಾಳಜಿ ಹೇಳುವ ಈ ಸಂಕಲನದಲ್ಲಿ ದೇವದಾಸಿಯ ಶವದ ಎದುರು ಪ್ರಶ್ನೆಗಳ ಹೊತ್ತು ಕುಳಿತ ಹೆಣ್ಣಿದ್ದಾಳೆ. ಕಾಗೆಗೂಬೆಗಳಂತಹ ಹಳ್ಳಿಗಳ ಪ್ರತಿಷ್ಠಿತರ ನಡುವೆ ಸದ್ದಿಲ್ಲದೆ ಬಾಳು ಸವೆಸುವ ಅನಾಮಿಕರ ಜಗತ್ತಿದೆ. ಕವಿತೆ ಆಚೆಗೂ ಕಾಡುವ ಜೀವಗಳು ದಟ್ಟ ನೋವುಂಡ ಕತೆಯನ್ನ ಈ ಸಂಕಲನ ಹೊತ್ತು ನಿಂತಿದೆ.

ನೂರು ಜೋಗೇರ ಹುಡುಗಿಯರಿಗೆ
ನೂರೊಂದು ಸ್ವರವಾಗಿ ಕಾಡಿದಳು
ನಡುರಸ್ತೆಯ ತಗ್ಗು ಮುಚ್ಚುವ ಕಲ್ಲಾದಳು.

ನಗರದವರಿಗೆ ಹಳ್ಳಿಯೆಂದರೆ ಮರುಜೀವ ನೀಡುವ ಸಂಜೀವಿನಿ, ಮರಳಿ ಮರಳಿ ಕರೆವ ಮಧುರ ನೆನಪು. ಆದರೆ ದಲಿತರಿಗೆ ಹಳ್ಳಿ ಒಂದು ದುಸ್ವಪ್ನ, ಅದು ಎಂದೂ ಮಾಸದ ಅವಮಾನದ ಬರೆ. ಕರಗಲಾರದ ದುಃಖದ ಕಡಲು. ಅಸಲಿಗೆ ಮನುಷ್ಯತ್ವವೇ ಇಲ್ಲದ ಕ್ರೌರ್ಯಗಳ ಜೀವಜಾಲ ಎಂಬುದನ್ನ ಇವರ ಕವಿತೆಗಳು ಸಾಬೀತು ಮಾಡುತ್ತವೆ.

ಸಾವಕಾರನ ಹೊಲದಲ್ಲಿ ಸಾಲ ಬೆವರ ಸುರಿಸಿ
ಸುಡು ಬೆಂಕಿಯಲ್ಲಿ ಸುಟ್ಟುಕರಕಾದ ಅಪ್ಪ
ಅರೆಕಾಸು ಗಂಜಿಗೂ ಅರೆಜೀವವಾದ ಅವ್ವ
ಕ್ರೌರ್ಯದಲಿ ಕರಗಿ ಶಿಲುಬೆಯಾದ ಅಜ್ಜಿ
ಮೀಸೆ ಮುಂಡಾಸು ಒತ್ತೆ ಇಟ್ಟು ಎಲ್ಲರ ಜೀವಕ್ಕೆ
ನಡುಗಂಬವಾಗಿದ್ದ ಅಜ್ಜನ ರೂಹು ಎಲ್ಲೂ ಕಾಣಲೂ
ಇಲ್ಲ

... ಎಂದು ಹಳ್ಳಿಗಳ ಒಡಲೊಳಗಿನ ವಿಷಾದಭರಿತ ಚರಿತ್ರೆ ಬಿಚ್ಚುವ ಇವರು ಅಕ್ಷರ ಲೋಕದವರು ಸಂಭ್ರಮಿಸುವ ಮಾಸ್ತಿ ಕಲ್ಲುಗಳನ್ನ ಮರು ಚಿಂತಿಸುವಂತೆ ಮಾಡುತ್ತಾರೆ.

ತವರೂರು ಯಾಕೆ ಜಾಲೀಯ ಮರವಾತು?
ಗಂಡನ ಮನೆಯೇಕೆ ಮಾಸ್ತಿಯ ಕಲ್ಲಾತು?

... ಹೀಗೆ ಉತ್ತರ ಕಾಣದ ಪ್ರಶ್ನೆಗಳಿಂದ ಕೇರಿ ನೋಡುವ ಇವರು ಹೆಣ್ಣುಗಳ ಬದುಕು ಹೇಗೆ ಬಲಿಯಾಗುತ್ತಲೇ ಹೋಯಿತು ಎಂಬುದನ್ನು ಮಿಡಿವ ನೋವಿಗಿಂತಲೂ ಸಿಡಿವ ಮದ್ದಂತೆ ಸ್ಫೋಟಿಸುತ್ತಾರೆ.

ಉಸಿರಾಡಲು ನಾವು ಗಾಳಿಯು ಬೇಕೆಂದು
ಬೀದಿಗೆ ಬಂದರೆ ಹಾದರಗಿತ್ತಿಯರೆಂದು ಪಟ್ಟವ
ಕಟ್ಟಿದರು
ಸೂಳ್ಯಾಗಿ ಸೇವೆ ಮಾಡಲು ಬಿಟ್ಟರು
ದೇವದಾಸಿಯೆಂದು ಮೀಸಲಾಗಿಟ್ಟರು
ಇಷ್ಟೆಲ್ಲಾ ಸಹಿಸಿ ನಗುನಗುತ್ತಿದ್ದರೆ
ದೇವತೆಯೆಂದು ಕೊಂದುಬಿಟ್ಟರು ತಾಯಿ
ಎದ್ದೇಳು ಸಾಕಿನ್ನು.

ಹಳ್ಳಿಗಳ ಕೇರಿ ಒಳಗೆ ಬಾಲ್ಯ ವಿವಾಹಗಳು ತರುವ ಮದುಗಟ್ಟಿದ ನೋವುಗಳೂ ಇವೆ. ಅಂತಹ ನೋವೊಂದನ್ನ ಬಿಡಿಸಿ ಹೇಳುವ ಕವಿತೆ ಒಗಟು.

ಹದಿನಾರರ ಹರೆಯದಲಿ
ಗಂಡನ ಕಳೆದುಕೊಂಡು ಆಯಿ
ತುಂಬಿದ ಮನೆಯ ತೊಲೆ ಬಾಗಿಲ ನಡುವೆ
ಜಂತಿ ಎಣಿಸುತ್ತ ಬೆಂಕಿಯಂತ
ಹರೆಯ ಕಳೆದದ್ದು
ಒಡೆಯಲಾರದ ಒಗಟು.

ಹಳ್ಳಿಯ ಕೇರಿಗಳಲ್ಲಿ ಬೆಳಕಿಲ್ಲ ಬಣ್ಣದ ಕನಸುಗಳಿಲ್ಲ ಹೆಣ್ಣೆಂಬ ಜೀವಕ್ಕೆ ಬೆಳವಣಿಗೆ ಇಲ್ಲ ಎಂಬ ಧ್ವನಿ ಇವರ ಸಂಕಲನದ ಮುಖ್ಯ ಭಾವವೆಂಬಂತಿದೆ.

ಸಣ್ಣ ಸಾಲಿ ಒಳಗೂ ಅಕ್ಷರ ನುಂಗಿದರು
ಬಣ್ಣದ ಕನಸುಗಳ ಕೊಂದವರು
ಹೊಲೆದಂಡೆಯ ಎಳೆಯ ಸವತೆಕಾಯಿ ಚಿವುಟಿದರು.

ಅನಸೂಯ ಅವರ ಕವಿತೆಗಳಲ್ಲಿ ಏಕತಾನತೆ ಇಲ್ಲ, ಅವರು ದಲಿತ ಕೇರಿಯ ಬಳಿಯೇ ನಿಂತಿಲ್ಲ, ನಗರಕ್ಕೆ ಬಂದಿದ್ದಾರೆ, ಜಾಗತೀಕರಣಕ್ಕೆ ತೆರಕೊಂಡಿದ್ದಾರೆ. ಹಾಗಾಗಿ ಇವರ ಕವಿತೆಗಳಿಗೆ ಸೂಕ್ಷ್ಮ ಮತ್ತು ವಿಶಾಲ ಗುಣಗಳೆರಡೂ ದಕ್ಕಿವೆ. ಜೀವ ಜಗತ್ತನ್ನ ಬೆನ್ನಟ್ಟಿಹೊರಟ ಇವರು ಅಲ್ಲೂ ಅಲಕ್ಷಿತರನ್ನೇ ಕವಿತೆಯ ಸಾಲಾಗಿಸಿದ್ದಾರೆ.

ಸಂದಿಸಂದಿಗಳಲ್ಲಿ ತಿಪ್ಪೆ ಕೊಳಚೆಯಲಿ
ಚಿಂದಿ ಆಯುವ ಮಕ್ಕಳು
ಅತ್ಯಾಚಾರಕ್ಕೀಡಾದ ಹಸುಗೂಸುಗಳ
ಬದುಕ ಬರೆಯುವ ಕೈಗಳಿಲ್ಲ
ನಗರದಲ್ಲಿ ಕಾಪಾಡುವ ದೇವರುಗಳು
ಸಂತೆಯಲಿ ಹಾವಾಡಿಗ ಪುಂಗಿ ಊದಿದಂತೆ

... ಎಂದು ಸೊಗಸಾಗಿ ಹೇಳುವ ಇವರು ದೇಶದ ಗುಡಿ ಚರ್ಚು ಮಸೀದಿಗಳ ರಕ್ತ ಸಿಕ್ತ ಚರಿತ್ರೆಯನ್ನು ಬಿಚ್ಚುತ್ತಾರೆ. ಗೋಹತ್ಯೆಯ ಹೆಸರಿನಲ್ಲಾದ ಮಾನವ ಹತ್ಯೆಯನ್ನ ಸೂಚಿಸುತ್ತಾರೆ. ಮಠ ಮಾನ್ಯಗಳ ಒಳಗಿನ ರಕ್ತದ ಕಲೆಗಳನ್ನ ಪರಿಶೀಲಿಸುತ್ತಾರೆ.

ಕೆಸರಲ್ಲಿ ಕಾಲು ಹೂತಂತೆ
ಎದೆಯಲ್ಲಿ ನೋವು ಪದವಾಗುವುದು

... ಎಂದು ನೋವಿನ ಹಾಡನ್ನು ಹುಲಿಯ ಮೂಲಕ ಗೋವನ್ನ ಗೋವಿನ ಹಾಡಿನ ಹಿನ್ನೆಲೆಯಲ್ಲಿ ವ್ಯಂಗ್ಯ ಮಾಡಿದ್ದಾರೆ.

ಊರ ದೇವರುಗಳೆಲ್ಲಾ ರಾಜ ಗದ್ದುಗೆ ಏರಿ
ಜನರಂತೆ ಕುಂತವು ಪಾಲುಕೇಳಿ!
ವಠಾರದ ಮೋರಿ ಮೋರಿಗಳಲ್ಲಿ
ತೇಲಿ ತೇಲಿ ಹರಿದವು ಮಕ್ಕಳು ಮರಿ.

ಅಲಕ್ಷಿತರ ಜೀವಗಳ ಮೂಲಕವೇ ಜಗತ್ತನ್ನ ಗ್ರಹಿಸುವ ಅನಸೂಯ ಕಾಂಬಳೆ ಅವರ ಕವಿತೆಗಳಲ್ಲಿ ಜಾಗತೀಕರಣವೂ ವಿಷಾದಭರಿತ ಹಾಡಾಗಿದೆ.

ಹದ್ದು ಹಾರುತ್ತಿದೆ
ಹರಿವ ನದಿಯ ಮೇಲೆ ಸವಾರಿಮಾಡಿ
ನಲಿವ ಜೀವಗಳ ಮೇಲೆರಗಿ
ತಿನ್ನುತ್ತಿದೆ.
ಜಗವು ಮಲಗಿದೆ
ಜಾಗತೀಕರಣದ ಜಗಲಿಯ ಮೇಲೆ.

ನೋವಿಗೆ ಕಾವ್ಯದ ಕಾವು ಬೇಕು, ಅದಕ್ಕೂ ಮುಖ್ಯವಾಗಿ ವಾಸ್ತವದ ಅನುಸಂಧಾನ ಇರಬೇಕು. ಇಲ್ಲಿನ ಕೆಲವು ಕವಿತೆಗಳಿಗೆ ವಾಚ್ಯದ ಗುಣಗಳಿವೆ ಆದರೆ ಇಲ್ಲಿನ ಕಾಳಜಿಯಿಂದಾಗಿ ಈ ಲೋಪ ಮುಖ್ಯವೆನಿಸದು.

ಮಸಾಜ್ ಮಾಲೀಸ್ ಹೆಸರಿನಲ್ಲಿ ಮನೆಯ ಮುತ್ತೈದೆ
ಸಿಕ್ಕಿದ್ದಾಳೆ ಹೈಟೆಕ್ ವೇಶ್ಯಾವಾಟಿಕೆ ಜಾಲದಲ್ಲಿ
ಹಸೆಮಣೆ ಏರುವ ಕನಸುಗಳ ಮಾರಿ
ಜಾಹಿರಾತಿನಲಿ ಚಿತ್ರಲಾಗಿ ನಗುತ್ತಿದ್ದಾಳೆ
ತನ್ನಾಸೆಗಳ ನುಂಗಿ ಮನೆಮಗಳು
ಬಂಧುಬಾಂಧವರ ಬದುಕು ಕಟ್ಟಲು
ಕುಣಿಯುತ್ತಿದ್ದಾಳೆ ಲೈವ್ ಬ್ಯಾಂಡ್‌ಗಳಲ್ಲಿ
ಹಣವುಳ್ಳವರ ಮುಂದೆ ಹೆಣವಾಗಿ
ಧರ್ಮ ಗುರುಗಳ ಕಾವಿಯ ತುಂಬ
ಕಾಮದ ಕಲೆಗಳ ಸುಪಾರಿ ಕೊಲೆಗಳು
ಬಲಿಯಾದ ಜೀವ ಜೀವಗಳೆಷ್ಟೋ?

... ಎಂದು ಈ ದೇಶದ ಒಳಗಿನ ಸಂಕಟ, ಆತಂಕಗಳನ್ನ ಕವಿತೆ ಮಾಡುವ ಕಾಂಬಳೆಯವರ ಮತ್ಸ್ಯಗಂಧಿಯ ಹಾಡು ಜೀವವನ್ನು ಮತ್ತು ಜೀವನವನ್ನು ಸ್ಥಾಯಿಯಾಗಿಸಿಕೊಂಡು ಅದರ ಬದುಕಿನ ಹಕ್ಕಿನ ಸುತ್ತಾ ಸಂಚಾರಿಯಾಗುತ್ತದೆ. ಇದೀ ಸಂಕಲನವೇ ಒಂದು ರೂಪಕದಂತೆ ತನ್ನ ಈ ನಿರೀಕ್ಷೆಯನ್ನು ಹೀಗೆ ಹೇಳುವಂತಿದೆ:

ಜೋತಾಡುವ ಮಜಲಿನ ಗೂಡು
ಬಾಚೊಳಗೆ ಕೂತ ಗುಬ್ಬಿ
ನೀರ ಕನ್ನಡಿಯಲಿ ಮುಖವ ನೋಡಿ
ಪುಕ್ಕ ಕುಣಿಸಿ, ರೆಕ್ಕೆ ಬಲಿಯದ ಮರಿಗಳಿಗೆ
ಗುಟುಕು ತರಲು ಹಾರಿದಂತೆ
ಮುಗಿಲಿಗೆ ಮುತ್ತಿಡುತ್ತದೆ ನಿರೀಕ್ಷೆ.

ಒಟ್ಟಾರೆ ಬರಗೂರು ರಾಮಚಂದ್ರಪ್ಪನವರು ಗುರುತಿಸಿರುವಂತೆ ಇವರ ಬಹುಪಾಲು ಕವಿತೆಗಳಲ್ಲಿ ನಿಸರ್ಗದ ವಿವರಗಳು ಒಡಲಾಗಿ ಮೂಡಿವೆ. ಆದರೆ ನಿಸರ್ಗ ಎಂದರೆ ಕಣ್ಣಿಗೆ ತಂಪನೀಯುವ ಸುಂದರತೆ ಮಾತ್ರ ಎಂಬ ಸಾಂಪ್ರದಾಯಿಕ ನೋಟವೂ ಇಲ್ಲಿ ಬದಲಾಗಿದೆ. ಜನಪದ ಕಾವ್ಯವನ್ನು, ವೈಚಾರಿಕ ಬೆಸುಗೆಯನ್ನ ತನ್ನ ಕವಿತೆಯ ಹೆಣಿಗೆಯನ್ನಾಗಿಸಿಕೊಂಡಿರುವ ಕಾಂಬಳೆಯವರು ಈ ಸಂಕಲನವನ್ನು ಯಶಸ್ವೀ ಪ್ರಯೋಗವನ್ನಾಗಿಸಿದ್ದಾರೆ ಎನ್ನಬಹುದು.

● ಡಾ.ಶಿವಕುಮಾರ್ ಕಂಪ್ಲಿ

10<<< ಸಿದ್ದು ಸೆಳೆಯಲು ಬರುತ್ತಿದ್ದಾನೆ...

ನಾಗರಿಕ- ಸರಬರಾಜು ಮಂತ್ರಿಯಾಗಿದ್ದ ಜೀವರಾಜ್ ಈತನನ್ನೇ ಕೆಎಫ್‌ಸಿಎಸ್‌ಸಿ ಎಂ.ಡಿ.ಯನ್ನಾಗಿ ನೇಮಿಸಿಕೊಂಡಿದ್ದರಲ್ಲೂ ಸುರಕ್ಷಾ ನಾಗರಾಜನದ್ದೇ ಕೈವಾಡವಿತ್ತು.

20 ಕೋಟಿ ಲೂಟಿ!

ಆದರೆ ಶಿವಣ್ಣ ಎಂ.ಡಿ.ಯಾಗಿ ಬರುವುದಕ್ಕೂ ಮೊದಲೇ ಪತ್ರಿಕೆ ಪಡಿತರ ಮಾಫಿಯಾ ಮತ್ತು ಕಳಪೆ ಅಕ್ಕಿ ಕರ್ಮಕಾಂಡವನ್ನು ಬಯಲಿಗೆಳೆದಿತ್ತು. ಪತ್ರಿಕೆಯ ತನಿಖಾ ವರದಿಯನ್ನಾಧರಿಸಿ ಆಗ ನಿಗಮದ ಎಂ.ಡಿ.ಯಾಗಿದ್ದ ವೆಂಕಟೇಶ್ 2013ರ ಮಾರ್ಚ್ ಆರರಂದು ಶಿವಮೊಗ್ಗದ ಸುರಕ್ಷಾ ಗೋಡೌನಿನ ಮೇಲೆ ದಾಳಿಯಿಟ್ಟರು. ಎಂಥಾ ಆಘಾತ ಕಾದಿತ್ತೆಂದರೆ ಬರೋಬ್ಬರಿ 90 ಸಾವಿರ ಕ್ವಿಂಟಾಲುಗಳಷ್ಟು ಭತ್ತವೇ ನಾಪತ್ತೆಯಾಗಿತ್ತು, ಅದರರ್ಥ ಒಂದು ಲಕ್ಷ ಕ್ವಿಂಟಾಲಿಗೂ ಅಧಿಕ ಮೊತ್ತದ ಭತ್ತದ ಹೆಸರ ಸುರಕ್ಷಾ ನಾಗರಾಜನಿಗೆ ನಿಗಮದಿಂದ 20 ಕೋಟಿ ರೂಪಾಯಿಗಳ ಕಳ್ಳಬಿಲ್ಲನ್ನು ಪಾವತಿಸಲಾಗಿತ್ತು!

ನಾಪತ್ತೆಯಾಗಿದ್ದ 90 ಸಾವಿರ ಕ್ವಿಂಟಾಲ್ ಭತ್ತವಲ್ಲದೆ ಹಲ್ಲಿಂಗ್ ಮಾಡದೇ ಬಾಕಿಯಿಟ್ಟದ್ದೆಂದು ಸುರಕ್ಷಾ ನಾಗರಾಜ್ ಹೇಳಿಕೊಂಡಿದ್ದ 18 ಸಾವಿರ ಕ್ವಿಂಟಾಲ್ ಭತ್ತ ಸೇರಿದರೆ ಒಟ್ಟು ಒಂದು ಲಕ್ಷದ ಎಂಟು ಸಾವಿರ ಕ್ವಿಂಟಾಲುಗಳಷ್ಟು ಭತ್ತದ ಕೊರತೆಯಿತ್ತು, ವಿಚಿತ್ರವೆಂದರೆ ಇಲ್ಲದ ಭತ್ತದ ಹೆಸರಲ್ಲಿ ಸರಿಸುಮಾರು 20 ಕೋಟಿ ರೂಪಾಯಿಗಳಷ್ಟು ನಿಗಮದ ದುಡ್ಡನ್ನು ನಾಗರಾಜ ಕೊಳ್ಳೆ ಹೊಡೆದಿದ್ದ. ಇದು ರಾಜ್ಯದ ಪಡಿತರ ವ್ಯವಸ್ಥೆಯ ಇತಿಹಾಸದಲ್ಲೇ ಕಂಡರಿಯದ ಭಾರೀ ದೊಡ್ಡ ಹಗರಣವಾಗಿತ್ತು, 2012ರಲ್ಲಿ ಎಂ.ಡಿ.ಯಾಗಿದ್ದ ಜಗದೀಶ್ ನಡೆಸಿದ ದಾಳಿಯಲ್ಲಿ ಪತ್ತೆಯಾದ 1 ಲಕ್ಷ ಕ್ವಿಂಟಾಲ್ ಭತ್ತದ ಕೊರತೆಯ ದೋಖಾ ಬಯಲಾಗುವ ಮೊದಲೇ ಮುಚ್ಚಿಹೋಗಿದ್ದನ್ನು ಹೊರತುಪಡಿಸಿಯೂ ಈಗ ಮತ್ತೆ ಅಷ್ಟೇ ಮೊತ್ತದ ಭತ್ತದ ಕೊರತೆ ಪತ್ತೆಯಾಗಿದ್ದಕ್ಕೆ, ಆಹಾರ ನಿಗಮವಾಗಲಿ, ಇಲಾಖೆಯಾಗಲಿ, ಸರ್ಕಾರವಾಗಲಿ ಎಂಥಾ ಕಠಿಣ ಕ್ರಮ ಜರುಗಿಸಬೇಕಿತ್ತಲ್ಲವೇ?

ವಿಚಿತ್ರವೆಂದರೆ ಸರಿಸುಮಾರು 20 ಕೋಟಿ ರೂಪಾಯಿಗಳ ಭತ್ತವನ್ನೇ ನಾಪತ್ತೆ ಮಾಡಿದ್ದ ಅಂದರೆ ಇಲ್ಲದ ಭತ್ತಕ್ಕೆ ಕಳ್ಳ ಬಿಲ್ಲು ಹಾಕಿ 20 ಕೋಟಿ ದೋಚಿದ್ದ ಸುರಕ್ಷಾ ನಾಗರಾಜನನ್ನು ಬಿಟ್ಟು ಆತನ ಗೋಡೌನಿನಲ್ಲಿ ಗುಣಮಟ್ಟ ಪರೀಕ್ಷಕನಾಗಿ ನೇಮಕಗೊಂಡಿದ್ದ ಹೆಚ್.ಎಸ್.ನಾಗರಾಜ್ ಎಂಬ ಗುಮಾಸ್ತನನ್ನು ಎಂ.ಡಿ. ಶಿವಣ್ಣ ಸಸ್ಪೆಂಡ್ ಮಾಡಿಬಿಟ್ಟರು.

ವಾಸ್ತವವಾಗಿ ಜೈಲಿಗೆ ಹಾಕಬೇಕಿದ್ದು ಗೋಡೌನ್ ಮಾಲಿಕ ಸುರಕ್ಷಾ ನಾಗರಾಜನನ್ನು, ಅಗತ್ಯ ವಸ್ತು ಕಾಯ್ದೆಯ ಪ್ರಕಾರವೇ ಆತನನ್ನು ಬಂಧಿಸಿ, ಜೈಲಿಗಟ್ಟಿ ಆತನ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಎಲ್ಲಾ ಅಧಿಕಾರವಿದ್ದೂ ನಿಗಮದ ಎಂ.ಡಿ. ಶಿವಣ್ಣ ಆತನಿಗೊಂದು ಕಾಟಾಚಾರದ ನೋಟಿಸ್ ಕೂಡ ನೀಡದೆ ಇದ್ಯಾವುದಕ್ಕೂ ಸಂಬಂಧವಿಲ್ಲದ ಗುಮಾಸ್ತನನ್ನು ಸಸ್ಪೆಂಡ್ ಮಾಡಿದ್ದ.

ಇದರರ್ಥ ಕೊಂದವನನ್ನು ಬಿಟ್ಟು ಸಾಕ್ಷಿಯನ್ನು ಗಲ್ಲಿಗೇರಿಸಿದಂತೆ!

ಸಿದ್ದು ಪಡಸಾಲೆಯಲ್ಲಿ...

ಹೀಗೆ 20 ಕೋಟಿ ಮೊತ್ತದ ಅಕ್ಕಿಯ ದರೋಡೆಯಾಗಿದ್ದರೂ ಸುರಕ್ಷಾ ನಾಗರಾಜನ ಕೂದಲು ಕೂಡ ಕೊಂಕದಂತೆ ಕಾಪಾಡಿದ್ದು ಆಗ ಡಿಸಿಎಂ ಆಗಿದ್ದ ಈಶ್ವರಪ್ಪ ಕೆದಕುತ್ತಾ ಹೋದರೆ ಈತನಕ ಸುರಕ್ಷಾ ನಾಗರಾಜ್ ಪಡಿತರ ದಾಸ್ತಾನಿನ ಹೆಸರಲ್ಲಿ ನಡೆಸಿದ ಲೂಟಿಯೇ ನೂರಾರು ಕೋಟಿ ರೂಪಾಯಿಗಳ ಬೃಹತ್ ಕರ್ಮಕಾಂಡವಾಗುತ್ತದೆ. ತಮಿಳುನಾಡು ಮತ್ತು ಛತ್ತೀಸ್‌ಘಡ್ ರಾಜ್ಯಗಳಿಂದ ಹುಳ ಬಿದ್ದ ಅಕ್ಕಿಯ ಲೋಡುಗಳನ್ನು ಕಳ್ಳ ಸಾಗಾಣಿಕೆದಾರರ ಮೂಲಕ ತನ್ನ ಗೋಡೌನಿಗೆ ತುಂಬಿಸಿಕೊಳ್ಳುವುದು, ಅದನ್ನು ಶಿವಮೊಗ್ಗ ಜಿಲ್ಲೆಯ ರೈತರಿಂದ ಖರೀದಿಸಿದಂತೆ ಕಳ್ಳ ದಾಖಲೆ ಸೃಷ್ಟಿಸುವುದು, ರೈತರ ಹೆಸರಲ್ಲಿ ನಕಲಿ ಬ್ಯಾಂಕ್ ಖಾತೆಗಳನ್ನು ತೆರೆದು ಬೆಂಬಲ ಬೆಲೆಯ ನಿಧಿಯನ್ನು ದೋಚುವುದು, ಇಲ್ಲದ ಭತ್ತವನ್ನು ಖರೀದಿ ಕೇಂದ್ರದಿಂದ ತನ್ನ ಗೋಡೌನಿಗೆ ಸಾಗಿಸಿದೆನೆಂದು ಸಾಗಾಣಿಕೆ ವೆಚ್ಚವನ್ನು ಲಪಟಾಯಿಸುವುದು, ದಾಸ್ತಾನೇ ಇಲ್ಲದೆ ಕೋಟಿ ಲೆಕ್ಕದಲ್ಲಿ ಗೋಡೌನಿನ ಬಾಡಿಗೆ ಬಿಲ್ಲು ದೋಚುವುದು- ಹೀಗೆ ಕಳೆದ ಹತ್ತಾರು ವರ್ಷಗಳಿಂದ ಈತ ಪಡಿತರದ ಹೆಸರಲ್ಲಿ ನಡೆಸಿದ ಲೂಟಿಯನ್ನು ಕೆದಕ ಹೊರಟರೆ ಅದೇ ದೊಡ್ಡ ಧಾರಾವಾಹಿಯಾಗುವಷ್ಟಿದೆ.

ಏಕೆಂದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಈಗಷ್ಟೇ ಅಕ್ಕಿಗೆ ಕೈ ಹಾಕಿದ್ದಾರೆ. ನಿನ್ನೆ ಮೊನ್ನೆಯ ತನಕ ಬಿಜೆಪಿ ನಾಯಕ ಈಶ್ವರಪ್ಪ ಮತ್ತು ಮಾಜಿ ಮು.ಮಂ. ಯಡ್ಡಿಯನ್ನು ಮುಂದಿಟ್ಟುಕೊಂಡು ಪಡಿತರ ದರೋಡೆಗಿಳಿದಿದ್ದ ಇದೇ ನಾಗರಾಜ ಈಗ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಬಲೆ ಬೀಸುತ್ತಿದ್ದಾನೆ. ಅದಕ್ಕೆ ತನ್ನ ಜಾತಿಯನ್ನು ಬಳಸಿಕೊಳ್ಳುತ್ತಿದ್ದಾನೆ. ಜಾತಿಯಲ್ಲಿ ತಾನು ಕೂಡ ಕುರುಬನೆಂದೂ ಆ ಕಾಲದಿಂದಲೂ ತಾನು ಸಿದ್ದು ಅನುಯಾಯಿಯೆಂದೂ ಈತ ಮುಖ್ಯಮಂತ್ರಿಗಳ ಗೃಹಕಚೇರಿಯಲ್ಲಿ ಪದೇಪದೇ ಕಾಣಿಸಿಕೊಳ್ಳುತ್ತಿರುವುದು ಸಿದ್ದರಾಮಯ್ಯನವರ ಒಂದಾನೊಂದು ಕಾಲದ ಅನುಯಾಯಿ ಶಿವಮೊಗ್ಗದ ಶೇಷಾದ್ರಿ ಎಂಬಾತನ ಜೊತೆ. ಈ ಶೇಷಾದ್ರಿ ಹಿಂದೆ ಜೆಡಿಎಸ್‌ನಲ್ಲಿದ್ದಾಗ ಸಿದ್ದು ಭಟ್ಟಂಗಿಯಂತಿದ್ದ. ಸಿದ್ದು ಜೊತೆಗೇ ಕಾಂಗ್ರೆಸ್ಸಿಗೂ ಬಂದ. ಪಡಿತರ ದರೋಡೆಯಲ್ಲಿ ಶೇಷಾದ್ರಿ ಸುರಕ್ಷಾ ನಾಗರಾಜನ ರಹಸ್ಯ ಪಾಲುದಾರನೆಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ, ಈಗ ಇದೇ ಶೇಷಾದ್ರಿ ಮತ್ತು ನಾಗರಾಜ ಮುಖ್ಯಮಂತ್ರಿಗಳ ಪಡಸಾಲೆಯಲ್ಲಿ ಪ್ರತ್ಯಕ್ಷರಾಗಿದ್ದಾರೆಂದರೆ ರೂಪಾಯಿಗೆ ಕೆಜಿ ಅಕ್ಕಿ ಕೊಡುವ ಅವರ ಕಾರ್ಯಕ್ರಮದ ಗತಿಯೇನು?

ಯಾವುದಕ್ಕೂ ಈ ಬಗ್ಗೆ ಮುಖ್ಯಮಂತ್ರಿಗಳು ಹುಷಾರಾಗುವುದೊಳಿತು.

● ರಾ. ಸೋಮನಾಥ್

ಚ್.ಕೆ.ಪಾಟೀಲರ ಮುಂದಿರುವ ಸವಾಲುಗಳು: ಒಂದು ಧ್ಯಾನ

ಪ್ರಿಯ ಗೌರಿ,

ಚ್.ಕೆ.ಪಾಟೀಲ ಅವರ ಕುಡಿಯುವ ನೀರಿನ ವಿಶಿಷ್ಟ ತಿ ಬಗ್ಗೆ ಬರೆದದ್ದು ಬಲು ಉಚಿತ.


ಅಬ್ಬರವಿಲ್ಲದ ಜನೋಪಕಾರಿ ಈ ವ್ಯವಸ್ಥೆ ರಾಜ್ಯಾದ್ಯಂತ ಿಕಿದೆ. ನಾನು ಕೆಲಸ ಮಾಡುತ್ತಿರುವ ಚಿತ್ರದುರ್ಗದ ು ಗ್ರಾಮಗಳಲ್ಲಿ ವಿಶೇಷತಃ ಚಳ್ಳಕೆರೆ ಮೊಳಕಾಲ್ಮುರು ಾಕಿನ ಹಳ್ಳಿಗಳಲ್ಲಿ ಫ್ಲೋರೈಡ್ ನೀರು ಎಂಥಾ ನರಕ ವೆಯೆಂದರೆ, ಬೆಂಗಳೂರಿಗರ ಥರ ಕ್ಯಾನಿಗೆ ರೂ. 0 ತೆತ್ತು ನೀರು ಕುಡಿಯುವ ಸ್ಥಿತಿ ಇದೆ. ಆ ಳ ವಿವರದೊಂದಿಗೆ ಪಾಟೀಲ ಅವರ ಫೌಂಡೇಶನ್ನಿಗೆ ಸಲ್ಲಿಸುವ ನಿಟ್ಟಿನಲ್ಲಿದ್ದೆವು. ಈಗ ಪಾಟೀಲರೇ ಣಾಭಿವೃದ್ಧಿ ಸಚಿವರಾಗಿರುವ ಕಾರಣ ಇದೀಗ ವಾಗಿ ಈ ಕೆಲಸ ಆಗುತ್ತದೆ ಎಂಬ ನಂಬಿಕೆ ನನ್ನದು.

ದರೊಂದಿಗೆ ಕಳೆದ ದಶಕದಿಂದ ರಾಜ್ಯದ ಪಂಚಾಯತ್ ಮತ್ತು ಗ್ರಾಮೀಣಾಭಿವೃದ್ಧಿ ಯೋಜನೆಗಳ ಬಗ್ಗೆ ಷ್ಟು ಕೆಲಸ ಮಾಡುತ್ತಿರುವ ನನ್ನಂಥವನಿಗೆ ಪಾಟೀಲ ಈ ವ್ಯವಸ್ಥೆಯ ಅಧ್ವಾನಗಳನ್ನು ಸರಿಪಡಿಸಿಯಾರು ಆಸೆ ಇದೆ.

ಒಂದೆರಡು ಸಾಧ್ಯತೆಗಳ ಬಗ್ಗೆಯಷ್ಟೇ ಇಲ್ಲಿ ಹೇಳಬಯಸುವೆ.

1. ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆ: ಗ್ರಾಮೀಣ ಭಾಗದ ಸಕಲ ಶಾಪಗಳಿಗೂ ಪರಿಹಾರವಾಗಬಹುದೆಂಬ ಆಶಯದೊಂದಿಗೆ ಜಾರಿಗೆ ಬಂದ ಈ ಯೋಜನೆ ಸರ್ಕಾರದ ಸಿನಿಕತನ, ಅಧಿಕಾರಶಾಹಿಯ ಅಸಡ್ಡೆ ಪಂಚಾಯತ್ ಮಟ್ಟದ ಪುಢಾರಿ ಕಿರುಬಗಳಿಂದಾಗಿ ಸೂರೆಹೋದ ಗಣಿಯಂತಾಗಿದೆ. ಕಳೆದ ಸಾಲಿನಲ್ಲಿ ಕನಿಷ್ಠ ಒಂದು ಸಾವಿರ ಕೋಟಿ ಅಧಿಕೃತ ಘೋಟಾಲ ಈ ಯೋಜನೆಯಲ್ಲಿ ನಡೆದಿದೆ ಎನ್ನಲಾಗಿದೆ. ಇದರ ಹೊರತಾಗಿ ಲೆಕ್ಕಪತ್ರ ಇರುವ ಕಾಮಗಾರಿಗಳಲ್ಲೂ ಬಹುತೇಕ ಕಂಟ್ರಾಕ್ಟರುಗಳ ಮೂಲಕ ನಡೆದಿದೆ. ಅದಕ್ಕಿಂತಲೂ ಕಳವಳಕಾರಿಯೆಂದರೆ, ಇಡೀ ದೇಶದಲ್ಲಿ ಇರುವ ಅಪೂರ್ಣ ಕಾಮಗಾರಿಗಳ ಪೈಕಿ ಶೇ. 90ರಷ್ಟು ಕರ್ನಾಟಕದಲ್ಲೇ ಇವೆ ಎಂಬ ಅಂಕಿಅಂಶ.

ಸರ್ಕಾರ ಒಂದು ರೂಪಾಯಿಗೆ ಕೆಜಿ ಅಕ್ಕಿ ಕೊಡುವ ಯೋಜನೆ ಘೋಷಿಸಿರುವ ಕಾರಣ ಈ ಯೋಜನೆಯಡಿ ಕೂಲಿಗೆ ಹಳ್ಳಿಗರು ಬರುವ ಸಾಧ್ಯತೆ ಕಡಿಮೆ. ಆದರೆ ಈ ಖಾತರಿ ಯೋಜನೆಯಲ್ಲಿ ರೈತರು ಅವರ ಜಮೀನು ಅಭಿವೃದ್ಧಿಪಡಿಸಿಕೊಳ್ಳುವ ಅವಕಾಶ ಇದೆ. ಆದರೆ ಜಮೀನು ಅಭಿವೃದ್ಧಿಪಡಿಸುವ ಆಸೆ ಎಲ್ಲಾ ರೈತರಿಗೂ ಇದೆ. ಆದರೆ ಈಗ ಅರ್ಜಿ, ಎಸ್ಟಿಮೇಟು, ಅಳತೆ ಇದೆಲ್ಲವೂ ಇಲಾಖೆಗಳ ನಿಗೂಢ ಕೈಯಲ್ಲಿದೆ. ಅರ್ಜಿ ಹಾಕಿ ಕೈಸುಟ್ಟುಕೊಂಡ ರೈತರು ನಿಟ್ಟುಸಿರು ಬಿಟ್ಟು ದೂರವೇ ಉಳಿದಿದ್ದಾರೆ. ಕೂಲಿಗೆ ಹೋಗಲು ಮುಜುಗರ ಪಡುವ ರೈತರ ಕಾರ್ಡುಗಳು ಕಂಟ್ರಾಕ್ಟರುಗಳ ಜೇಬು ಸೇರುವ ಬಗ್ಗೆ ಈ ರೈತರಿಗೂ ಏನೂ ಅನ್ನಿಸುತ್ತಿಲ್ಲ.



ಕೇರಳದಲ್ಲಿ ಈ ಜಮೀನು ಅಭಿವೃದ್ಧಿಯ ಎಸ್ಟಿಮೇಟು, ಉಸ್ತುವಾರಿಯ ಪ್ರಕ್ರಿಯೆಯನ್ನು ಸರಳಗೊಳಿಸಿದ ಕಾರಣ ಕೆಲಸವಾಗಿದೆ. ಮಧ್ಯಪ್ರದೇಶದಂಥ ರಾಜ್ಯಗಳಲ್ಲಿ ಒಂದಷ್ಟು ಮಾನವಂತ ಎನ್.ಜಿ.ಓ.ಗಳಿಗೆ ಪಂಚಾಯತ್‌ಗಳಲ್ಲಿ ಅರ್ಜಿ ನೀಡಿಸುವುದು ಇತ್ಯಾದಿ ಮಧ್ಯಪ್ರವೇಶದ ಅವಕಾಶ ನೀಡಿದ ಕಾರಣ, ಹೆಚ್ಚಿಟ್ಟು ಭಾಗ್ಯದ ಬಡವರಿಗೆ ಕಂಬ ಸುತ್ತುವ ಕಷ್ಟ ಕಡಿಮೆಯಾಗಿದೆ.

ಅರ್ಥಾತ್, ಇಡೀ ಯೋಜನೆಯನ್ನು ಪುನರ್ವಿಮರ್ಶಿಸಿ, ಒಂದೆರಡು ವರ್ಷ ರೈತರ ಜಮೀನು ಅಭಿವೃದ್ಧಿಯನ್ನು ಬಯಲುಸೀಮೆಯಲ್ಲಿ ಆದ್ಯತೆ ಮೇಲೆ ತೆಗೆದುಕೊಂಡರೆ ಕೊಂಚ ಅನುಕೂಲವಾದಿತು. ಕೂಲಿ ಬೇಕಾದವರು ಈ ರೈತರ ಜಮೀನಿನಲ್ಲಿ ದುಡಿಯಬಹುದು.

2. ಜೀವನೋಪಾಯಗಳ ಸುಸ್ಥಿರಗೊಳಿಸುವ ಬಗೆ: ಈ ಹಿಂದೆ ಸ್ವರೋಜಗಾರ್ (ಎಸ್.ಜಿ.ಎಸ್.ವೈ) ಯೋಜನೆಯಲ್ಲಿ ಎಷ್ಟು ಸಾಧನೆ ಆಯಿತೋ ಗೊತ್ತಿಲ್ಲ, ಆದರೆ ಈ ಯೋಜನೆ ನಮ್ಮ ಗ್ರಾಮಗಳಲ್ಲಿ ಅಳಿದುಳಿದ ಹುಡುಗರನ್ನೂ ಪಟ್ಟಣಕ್ಕೆ ಕಳಿಸುವ ವೇಗವರ್ಧಕವಾಯಿತು. ಈ ಬಗ್ಗೆ ಸಾಕಷ್ಟು ಅಧ್ಯಯನಗಳಾದ ಬಳಿಕ ಭಾರತ ಸರ್ಕಾರ 'ಗ್ರಾಮೀಣ ಜೀವನೋಪಾಯಗಳ ಮಿಶನ್' ಸ್ಥಾಪಿಸಿತು. ಇದು ಮಹಿಳೆಯರನ್ನು ಕೇಂದ್ರವಾಗಿರಿಸಿಕೊಂಡು; ಕೇರಳದ 'ಕುಟುಂಬಶ್ರೀ' ಹಾಗೂ ಆಂಧ್ರದ ಎಸ್.ಇ.ಆರ್.ಪಿ. ಸೊಸೈಟಿಯ ಮಾದರಿಯಲ್ಲಿ ರೂಪಿತಗೊಂಡ ಯೋಜನೆ. ಕೃಷಿಯಂಥಾ ಪ್ರಮುಖ ಜೀವನೋಪಾಯದಲ್ಲಿ ಮಹಿಳೆಯರ ಸಾಮರ್ಥ್ಯ ವೃದ್ಧಿ, ಅವರಿಗೆ ಬೇಕಾದ ಅನುಕೂಲಗಳನ್ನು ಸ್ವಸಹಾಯಗುಂಪುಗಳ ವೇದಿಕೆ ಮೂಲಕ ನೀಡುವುದು ಇವೆಲ್ಲ ಈ ಹೊಸ ಪ್ರಸ್ತಾವದ ಹೂರಣ. ಮುಖ್ಯತಃ ಅಧಿಕಾರಶಾಹಿಯ ನಿಯಂತ್ರಣ ತಪ್ಪಿಸಿ ಜಿಲ್ಲಾ ಮಟ್ಟದ/ತಾಲೂಕು ಮಟ್ಟದ ಮಹಿಳಾ ಸಮಖ್ಯ/ಫೆಡರೇಶನ್ನುಗಳಿಗೆ ನಿಯಂತ್ರಣಾಧಿಕಾರವನ್ನು ನೀಡುವುದೂ ಇದರ ಉದ್ದೇಶ. ಆದರೆ ಕರ್ನಾಟಕದಲ್ಲಿ ಅನುದಾನ ನಿಲ್ಲಿಸುತ್ತೇವೆ ಎಂದು ಕೇಂದ್ರ ಸರ್ಕಾರ ಬೆದರಿಕೆ ಹಾಕಿದ ಮೇಲೆ 'ಸಂಜೀವಿನಿ' ಎಂಬ ಸೊಸೈಟಿಯನ್ನು ಸ್ಥಾಪಿಸಿದರೂ ಅದಕ್ಕೆ ಬೇಕಾದ ಸದೃಢ ವ್ಯವಸ್ಥೆ ರೂಪಿತವಾಗಿಲ್ಲ, ನಮ್ಮ ಜಿಲ್ಲಾಪಂಚಾಯತ್‌ಗಳು ಇನ್ನೂ ಹಳೇ ಮಾದರಿ ಸ್ವ ಉದ್ಯೋಗ ತರಬೇತಿ ಬಗ್ಗೆ ಮಾತಾಡುತ್ತಿವೆ.

ನಾನು ಗಮನಿಸಿದ ಹಾಗೆ ಆಂಧ್ರ, ಕೇರಳ ಮತ್ತು ಬಿಹಾರ ಈ ಮಿಶನ್ ಮೂಲಕ ಗಮನಾರ್ಹ ಹೆಜ್ಜೆ ಇಟ್ಟಿವೆ. ಕರ್ನಾಟಕದಲ್ಲಿ ಈ ಮಿಶನ್‌ಗೆ ವೇಗೋತ್ಕರ್ಷ ಕೊಡುವುದು ಪಾಟೀಲರ ಆದ್ಯತೆಯಾಗಬೇಕು.

ರಾಜ್ಯದ ಅಭಿವೃದ್ಧಿ ಬಜೆಟ್ಟಿನ 1/3ರಷ್ಟು ಗ್ರಾಮೀಣಾಭಿವೃದ್ಧಿ ಇಲಾಖೆ ಮೂಲಕ ಅನುಷ್ಠಾನಗೊಳ್ಳುತ್ತದೆ ಮತ್ತು ಸರ್ಕಾರದ 'ಮಾಯೀ ಬಾಪ್' ಜವಾಬ್ದಾರಿಯ ಪರಿಣಾಮ ಕಾಣಿಸಿಕೊಳ್ಳುವುದೂ ಈ ಇಲಾಖೆಯ ಮೂಲಕವೇ.

ಅನ್ಯ ಇಲಾಖೆಗಳ ಕೆಲವು ಕಾರ್ಯಗಳನ್ನೂ ಸಲೀಸಾಗಿ ಮಾಡುವ ಅನುದಾನ-ಅವಕಾಶಗಳೆರಡೂ ಈ ಇಲಾಖೆಗಿದೆ. ಉದಾ: ಕರ್ನಾಟಕದಲ್ಲಿ ಅತೀ ಜರೂರಾಗಿ ಆಗಬೇಕಿರುವ ಕೆಲಸ ಮಳೆ ಆಶ್ರಿತ ಕೃಷಿ ಪ್ರದೇಶಗಳ ನೆಲಜಲ ಅಭಿವೃದ್ಧಿಪಡಿಸುವುದು. ರಾಜಸ್ಥಾನದ ಬಳಿಕ ಅತೀ ಹೆಚ್ಚು ಒಣಭೂಮಿ ಹೊಂದಿರುವ ರಾಜ್ಯ ಕರ್ನಾಟಕ. ಆದರೆ ನಮ್ಮ ಆಡಳಿತದ ಧ್ಯಾನ ನೀರಾವರಿ ಬಗ್ಗೆಯೇ ಇದೆ. ಕಳೆದ ಒಂದು ದಶಕದಲ್ಲಿ ದೇಶಾದ್ಯಂತ ಒಂದು ಕೋಟಿ ರೈತರು ಮಾಯವಾಗಿದ್ದಾರೆ ಎಂದು ಇತ್ತೀಚಿಗಿನ ಅಂಕಿಅಂಶ ಹೇಳುತ್ತದೆ. ಈ ರೈತರು ಯಾವ ವಲಯದವರು ಎಂದು ಊಹಿಸಲು ಪ್ರಚಂಡ ಬುದ್ಧಿಮತ್ತೆಯೇನೂ ಬೇಕಾಗಿಲ್ಲ, ನೀರಾವರಿ ಪ್ರದೇಶದಲ್ಲಿ ಉಚಿತ ನೀರು, ಬೀಜ, ಗೊಬ್ಬರ, ಕೊನೆಗೆ ಬೆಳೆದಿದ್ದಕ್ಕೆ ಬೆಂಬಲ ಬೆಲೆ ಎಲ್ಲವೂ ಇದೆ. ಇದ್ಯಾವುದೂ ಇಲ್ಲದ ಮಳೆಯಾಶ್ರಿತ ಪ್ರದೇಶ ಮಾತ್ರ ರೈತ ಆತ್ಮಹತ್ಯೆಯ ಸ್ಮಶಾನವಾಗುತ್ತಿದೆ. ಕಾಸು ಇರುವ ರೈತರು, ಬೋರು ಹೊಡೆದು, ನೀರಾವರೀ ರೈತರನ್ನು ಅನುಕರಿಸಿ, ಹಳ್ಳ ಹತ್ತುತ್ತಿದ್ದಾರೆ.

ಈ ರೈತರಿಗೆ ತಿಳಿವಳಿಕೆ, ಧೈರ್ಯ ತುಂಬುವ ವ್ಯವಸ್ಥಿತ ಕೆಲಸ ಆಗಿಯೇ ಇಲ್ಲ. ಭೂಮಿಯನ್ನು ತಿದ್ದುವುದು, ಮಳೆ ನೀರಿನ ಸಂಗ್ರಹ, ನೀರಿನ ಮಿತವ್ಯಯಕ್ಕೆ ಬೇಕಾದ ಬೆಂಬಲ ಇದ್ಯಾವುದರಲ್ಲೂ ಒಂದು ದೂರಗಾಮೀ ಅನುಕಂಪೆಯ ಕಾರ್ಯಕ್ಷಮತೆಯ ಯೋಜನೆಗಳೇ ಇಲ್ಲವೆನ್ನಬಹುದು.

ಎಸ್ಟಿಮೇಟು, ಬಿಲ್ಲುಗಳ ಕೋಟಲೆಗೆ ರೈತ ಸಿಗದಂಥಾ ಸರಳಗೊಳಿಸಿದ ಜಮೀನು ಕಾಮಗಾರಿಗಳನ್ನು ಉತ್ತೇಜಿಸಿದರೆ, ಎರಡೇ ವರ್ಷದಲ್ಲಿ ನಮ್ಮ ಬಹುತೇಕ ಬಡರೈತರು ಊರು ಬಿಡುವ ಹತಾಶ ಸ್ಥಿತಿ ನಿಂತೀತು.

ಪಾಟೀಲರು ಇದನ್ನು ಸಾಧಿಸಬಹುದಾದ ಇಲಾಖೆಯ ಕರ್ಣಧಾರತ್ವ ವಹಿಸಿದ್ದಾರೆ. ಅದಕ್ಕಿಂತಲೂ ಹೆಚ್ಚಾಗಿ "ನೀರುಸಾಬ"ರ ಬಳಿಕ ಅಂಥಾದ್ದೇ ಒಂದು ಕನಸು ಎದೆಯೊಳಗೆ ಉಳಿಸಿಕೊಂಡು ಕಾಪಿಟ್ಟಂತೆ ಕಾಣುತ್ತದೆ. ಅನುದಾನ ಇರುವುದೇ ಕಾಣ್ಕೆ ಇಲ್ಲದ ಕಂಡಕಂಡ ಯೋಜನೆಗಳಿಗೆ ಹಣ ಪೋಲು ಮಾಡಲು ಎಂದು ಭಾವಿಸಿ ತನ್ನ ಹಳ್ಳ ತಾನೇ ತೋಡಿಕೊಂಡ ಹಿಂದಿನ ಸರ್ಕಾರದ ಬೌದ್ಧಿಕ ಮತ್ತು ನೈತಿಕ ದಾರಿದ್ರ್ಯವನ್ನು ನೆನಪಿಸಿಕೊಂಡರೆ, ಪಾಟೀಲರ ಗುರಿ ಸ್ಪಷ್ಟ. ನಾಗರಿಕ ಸಮಾಜ ತನ್ನ ಸಿನಿಕತನ ಬಿಟ್ಟು ಆಸ್ಥೆ ವಹಿಸಿದರೆ ಕೆಲಸವೂ ಸುಲಭವಾದೀತು.

● ಕೆ.ಪಿ.ಸುರೇಶ, ಬೆಂಗಳೂರು

ರೊಂದು ಕನಸು, ಅದಕ್ಕೊಂದು ಗುರಿ...

ರ್ನಾಟಕದ ರಾಜಕೀಯ ಮುತ್ಸದ್ದಿಗಳನ್ನು, ಸಾತ್ವಿಕರನ್ನು, ನನ್ನು ಕಂಡಂತ ದುಷ್ಟರನ್ನೂ, ಭ್ರಷ್ಟರನ್ನೂ ಕಂಡಿದೆ. ಕಟ್ಟವರನ್ನೆಲ್ಲ ಒರೆಸಿ ಹಾಕಿದೆ.

ದೇವರಾಜ ಅರಸುರಂತಹ ಧೀಮಂತ ಜನಪರ ನಾಯಕ, ಹಳ್ಳಿಗೆ ನೀರು ನೀಡಿದ ನಜೀರ್ ಸಾಬ್ (ನೀರು), ಸಾಂಸ್ಕೃತಿಕ ರಾಜಕಾರಣಿ ಎಂ.ಪಿ. ಪ್ರಕಾಶ್, ಸ್ತದ ನಿಜಲಿಂಗಪ್ಪ, ತಾತ್ವಿಕ ಬದ್ಧತೆಯ ಶಾಂತವೇರಿ ಗೋಪಾಲಗೌಡ, ಪತಿ ಪಂಪಾಪತಿಯವರು ಹಾಗೂ ಇದ್ದಿ ಮಾರುವ ಕಾಯಕವನ್ನು ನಿಲ್ಲಿಸದ ಇವರನ್ನೆಲ್ಲ ಕಾಲ ತನ್ನೆದೆಯ ಮೇಲೆ ಕೊಂಡಿದೆ. ರಾಜ್ಯದ ಹೊಸ ಸರ್ಕಾರದಲ್ಲೂ ಹಲವು ರಾಜಕಾರಣಿಗಳಿರುವುದು ನಮ್ಮ ಸುದೈವ.

ನ್ನು ನೆನಪಿಸಿಕೊಳ್ಳಲು ಕಾರಣ ಗೌರಿ ಲಂಕೇಶ್ ಗೌರಕ್ಕ ಬರೆದ ಸಂಪಾದಕೀಯ 'ಪಾಟೀಲರ ಕುಡಿಯುವ ನೀರಿನ ಕನಸು' ನನ್ನೊಳಗೊಂದು ...ಜ್ ಬಗ್ಗೆ ಮುಕ್ತವಾಗಿ ... ಬಿಡುತ್ತವೆ.

... ಅವಿವೇಕದ ರಾಜಕಾರಣದಿಂದಲೂ ... ಕುಡಿಯುವ ನೀರಿಗೂ ... ಜನಪರ ಯೋಜನೆಗಳನ್ನು ... ಕಾರ್ಯ ಮಾಡುವ ರಾಜಕಾರಣಿಗಳು ... ಅಂತಹವರಲ್ಲಿ ಎಚ್.ಕೆ. ಪಾಟೀಲರು ...

...ನ್ನು, ಒಂದು ಕಳಕಳಿ. ಅದನ್ನು ಪಾಸಾಗಬೇಕೆಂದರೆ ಜನರ ಮನಸ್ಸನ್ನು, ಬದುಕನ್ನು ಗಂಭೀರವಾಗಿ ಅಧ್ಯಯನ ಮಾಡಬೇಕು. ಐದು ವರ್ಷಕ್ಕೊಮ್ಮೆ ಜನ ಪರೀಕ್ಷೆ ಮಾಡುವರು. ಜನಪರವಾಗಿರದಿದ್ದರೆ ಜನರು ನಪಾಸು ಮಾಡುವರು.

ಬಳ್ಳಾರಿಯ ಗಣಿಗಳ್ಳರು ಕೇವಲ ಮಣ್ಣನ್ನು ಲಾರಿಯಲ್ಲಿ ತುಂಬಿ ಮಾರಲಿಲ್ಲ, ನೋಟುಗಳನ್ನು ತುಂಬಿಕೊಂಡು ಬರಗಾಲದ ಬವಣೆಗೆ ಒಳಗಾದ ಜನರ ಬಡತನವನ್ನೂ ಕೊಂಡುಕೊಳ್ಳಲು ಮುಂದಾದರು. ಬಳ್ಳಾರಿಯ ಸುತ್ತಮುತ್ತಲ ಜಿಲ್ಲೆಗಳಿಗೂ ಗಣಿಗಳ್ಳರ ಹರಾಮಿ ಹಣ ಕೆಲವು ವರ್ಷದ ಹಿಂದೆ ಕೊಚ್ಚೆ ನೀರಿನಂತೆ ಹರಿದಾಡಿ ರಾಜಕಾರಣಿಗಳ ನಿದ್ದೆಯನ್ನು ಕೆಡಿಸಿತ್ತು. ಹೀಗೆ ನಿದ್ದೆಗೆಟ್ಟವರಲ್ಲಿ ಎಚ್.ಕೆ.ಪಾಟೀಲರೂ ಒಬ್ಬರೆಂದು ಜನರು ಮಾತನಾಡಿಕೊಂಡಿದ್ದರು.

ಗಣಿಗಳ್ಳರ ದುಡ್ಡು ಜನರನ್ನು ಒಂದಿಷ್ಟು ಎಚ್ಚರ ತಪ್ಪಿಸಿದ್ದು ನಿಜ. ಹಾಗಂತ ಜನರೇನು ಇಡಿಯಾಗಿ ಮಾರಾಟವಾಗಿರಲಿಲ್ಲ. ಬಹುಬೇಗನೆ ಎಚ್ಚೆತ್ತ ಜನರು ಎಚ್.ಕೆ. ಪಾಟೀಲರ ಕೈಹಿಡಿದು ತಮ್ಮ ಹಾದಿಯನ್ನು ಸ್ವಚ್ಛಗೊಳಿಸಿಕೊಂಡಿದ್ದಾರೆ. ಇಂತಹ ಎಚ್ಚೆತ್ತ ಜನರಿಗೆ ಮೋಸ ಮಾಡಲಾರೆ ಎನ್ನುವ ಹಾಗೆ ಎಚ್.ಕೆ. ಪಾಟೀಲರು ಜನಪರ ಯೋಜನೆಗಳನ್ನು ರೂಪಿಸಿದ್ದಾರೆ.

ನಾನು ಗೌರವಿಸುವ ರಾಜಕಾರಣಿಗಳಲ್ಲಿ ಎಚ್.ಕೆ.ಪಾಟೀಲರು ಒಬ್ಬರು. ಗಾಂಧಿ ಓದಿದ ನನಗೆ ಸರಳತೆ ಆದರ್ಶ. ಎಚ್.ಕೆ.ಪಾಟೀಲರ ಸರಳತೆ ಬಗ್ಗೆ ಇಲ್ಲಿ ಹೇಳಬೇಕಿದೆ. ಹಲವಾರು ರಾಜಕಾರಣಿಗಳು ತಮ್ಮ ಮಕ್ಕಳ ಮದುವೆ ಸಮಾರಂಭಗಳನ್ನೂ ನಾಚಿಕೆ ಬಿಟ್ಟು ಅದ್ದೂರಿಯಾಗಿ ಆಚರಿಸಿರುವುದನ್ನು, ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡಿರುವುದನ್ನು ನೋಡಿ ಕಂಗಾಲಾಗಿದ್ದೇವೆ. ಆದರೆ ಎಚ್.ಕೆ.ಪಾಟೀಲರು ಮತ್ತು ಬಿಸಿಯೂಟದ ಎಚ್.ವಿಶ್ವನಾಥ್ ಈ ವಿಷಯದಲ್ಲಿ ಭಿನ್ನವಾಗಿ ವರ್ತಿಸಿದ್ದರು. ವಿಶ್ವನಾಥರು ತಮ್ಮ ಮಗನ ಮದುವೆಯನ್ನು ಸಾಮೂಹಿಕ ಮದುವೆ ಕಾರ್ಯಕ್ರಮದಲ್ಲಿ ನಡೆಸಿಕೊಟ್ಟರೆ ಪಾಟೀಲರು ತಮ್ಮ ಮಗಳ ಮದುವೆಯನ್ನು ಸದ್ದುಗದ್ದಲವಿಲ್ಲದೆ ತಿರುಪತಿಯಲ್ಲಿ ಮಾಡಿ ಮುಗಿಸಿದ್ದರು. ಅವರ ಈ ಸರಳತೆ ಕಂಡು ನನ್ನಲ್ಲಿ ಪಾಟೀಲರ ಬಗ್ಗೆ ಗೌರವ ಹುಟ್ಟಿತು. ಈ ಗೌರವ ಇನ್ನಷ್ಟು ಗಾಢವಾಗುವಂತೆ ಮಾಡಿದ್ದು ಅವರ ಕುಟುಂಬ ಮತ್ತು ಮನೆಯನ್ನು ನೋಡಿ.

ಎಂ.ಪಿ. ಪ್ರಕಾಶರನ್ನು ಹೊರತುಪಡಿಸಿ ಯಾವ ರಾಜಕಾರಣಿಯೂ ಪುಸ್ತಕಗಳನ್ನು ಓದುವುದಿಲ್ಲವೆಂದು ಭಾವಿಸಿದ್ದ ನನಗೆ ಎಚ್.ಕೆ. ಪಾಟೀಲರ ಮನೆಯಲ್ಲಿ ಕಂಗೊಳಿಸುವ ಪುಸ್ತಕಗಳನ್ನು ನೋಡಿ ಸಂತೋಷವಾಯಿತು. ಅವರ ಸಜ್ಜನಿಕೆ ಎಂತಹದ್ದೆಂದರೆ ನನ್ನನ್ನು ಕಂಡ ತಕ್ಷಣ ತಮ್ಮ ಶ್ರೀಮತಿಗೆ ಪರಿಚಯಿಸಲು ನನಗೆ ಅಡುಗೆ ಮನೆಗೆ ಕರೆದುಕೊಂಡು ಹೋಗಿ ನನ್ನನ್ನು ತಮ್ಮ ಕುಟುಂಬದ ಸದಸ್ಯಳನ್ನಾಗಿಸಿದರು.

ರಾಜಕಾರಣಿಗಳಿಗೆ ಅಧಿಕಾರ ಸಿಕ್ಕ ತಕ್ಷಣ ಮಾಡುವ ಕೆಲಸವೆಂದರೆ ನೆಲಗುದ್ದಿ ಹಣ ತೆಗೆಯಲು ಬಂಧುಬಾಂಧವರನ್ನು ಅಣಿಗೊಳಿಸುವುದು. ಆದರೆ ಎಚ್.ಕೆ.ಪಾಟೀಲರ ಇದರಲ್ಲೂ ವಿಭಿನ್ನ ವ್ಯಕ್ತಿತ್ವದವರು.

1994ರಲ್ಲಿ ಲಕ್ಕುಂಡಿಯಲ್ಲಿ ಎಚ್.ಕೆ. ಪಾಟೀಲರ ನೇತೃತ್ವದಲ್ಲಿ ಲೇಖಕಿಯರ ಸಮ್ಮೇಳನವೊಂದು ನಡೆದಿತ್ತು. ಅಂತಹ ಶಿಸ್ತಿನ ಅಚ್ಚುಕಟ್ಟಾದ ಸಮ್ಮೇಳನವನ್ನು ಇಂದಿನವರೆಗೂ ನಾನು ಕಂಡಿಲ್ಲ, ಅಂದು ನಾನು ಡಿ.ಕೆ. ಪಾಟೀಲರನ್ನು (ಎಚ್.ಕೆ. ಪಾಟೀಲರ ಸಹೋದರ) ಭೇಟಿ ಆಗಿದ್ದೆ.

ಅಂದು ನಾನು ಮಾತನಾಡಿದ್ದನ್ನು, ನನ್ನನ್ನು ಕಂಡಾಗಲೆಲ್ಲ ಡಿ.ಕೆ.ಪಾಟೀಲರು ನೆನಪಿಸಿಕೊಳ್ಳುತ್ತಾರೆ. ಸಜ್ಜನರಾದ ಅವರ ಬಗ್ಗೆಯೂ ನನಗೆ ಗೌರವವಿದೆ.

ಅದಕ್ಕಿಂತ ಮುಖ್ಯವಾಗಿ ಡಿ.ಕೆ.ಪಾಟೀಲರು ನನ್ನಂತಹ ಕಿರಿಯರನ್ನೂ "ಮೇಡಂ" ಎಂದು ಕರೆಯುತ್ತಾ ಅವತ್ತು ಅವರು "ಎಲ್ಲಾದರೂ ಒಂದ ಅರ್ಧ ತಾಸು ಕೂತು ಜನರಿಗಾಗಿ ಮಾಡಬಹುದಾದ ಒಂದಿಷ್ಟು ಯೋಜನೆಗಳ ಬಗ್ಗೆ ಮಾತನಾಡೋಣ" ಎಂದಿದ್ದು ಅವರ ಆದರ್ಶಗಳನ್ನು ಸೂಚಿಸುವಂತಿದ್ದವು. ಇಂತಹ ಅಪರೂಪದ ವಿವೇಕದ ರಾಜಕೀಯದ ಅಗತ್ಯ ಇವತ್ತಿನ ಸಮಾಜಕ್ಕಿದೆ.

ಚುನಾವಣೆಯ ಮೊದಲೇ ಎಚ್.ಕೆ.ಪಾಟೀಲರು ಹಳ್ಳಿಹಳ್ಳಿಗೆ ಶುದ್ಧ ಕುಡಿಯುವ ನೀರಿನ ಯೋಜನೆಯನ್ನು ತಮ್ಮ ವ್ಯಾಪ್ತಿಯಲ್ಲಿ ಪ್ರಾರಂಭಿಸಿದ್ದರು. ಇದರ ಪ್ರಭಾವ ಹೇಗೆ ಆಗಿದೆ ಎಂಬುದಕ್ಕೆ ಒಂದು ಉದಾಹರಣೆ ನೀಡಬಹುದು.


ನನ್ನ ಜಿಲ್ಲೆ ಬಾಗಲಕೋಟೆ. ಅಲ್ಲಿರುವ ಮಿತ್ರ ಸಾಹಿತಿ ಮಲ್ಲಿಕಾರ್ಜುನ ಸಿದ್ದಣ್ಣವರ ಇತ್ತೀಚೆಗೆ ರಾಜಕೀಯ ಪ್ರವೇಶ ಮಾಡಬಯಸಿದ ಯುವಕನೊಬ್ಬನಿಗೆ ನೀಡಿದ ಸಲಹೆ ಎಂತಹದ್ದೆಂದರೆ "ಒಂದಿಷ್ಟು ಗದುಗಿಗೆ ಹೋಗಿ ಎಚ್.ಕೆ. ಪಾಟೀಲರು ಪ್ರಾರಂಭಿಸಿರುವ ಶುದ್ಧ ಕುಡಿಯುವ ನೀರಿನ ಯೋಜನೆಯನ್ನು ನೋಡಿಕೊಂಡು ಬಂದು ನಿನ್ನ ತಾಲ್ಲೂಕಿನಲ್ಲಿರುವ ಎಲ್ಲ ಹಳ್ಳಿಹಳ್ಳಿಗಳಲ್ಲೂ ನೀರಿನ ಘಟಕಗಳನ್ನು ಮಾಡಿ ಜನರ ಮನಸ್ಸುಗಳ ಗೆಲ್ಲು. ಆಮೇಲೆ ರಾಜಕೀಯಕ್ಕೆ ಬಾ. ಮಂದಿ ಕರಕೊಂಡ ಮುಖಂಡರ ಮನೆ ಮನೆ ಅಲೆದಾಡುವುದು ರಾಜಕೀಯ ಮಾಡಿದಂಗಲ್ಲ."

ಆ ಮಾತುಗಳ ಹಿಂದೆ ಎಚ್.ಕೆ.ಪಾಟೀಲರ ಭಗೀರಥ ... ಒಳಗೊಂಡರೆ ಮುಂದಿನ ದಿನಗಳಲ್ಲಿ ಶುದ್ಧ ಕುಡಿಯುವ ನೀರು ನೀಡಿದ ಭಗೀರಥ ಎಚ್.ಕೆ.ಪಾಟೀಲರು ಎಂದೇ ...ಯರಾಗುತ್ತಾರೆ. ಮಾತ್ರವಲ್ಲ, ಸಾಮಾನ್ಯ ಜನರು ಕೃತಜ್ಞತೆಯಿಂದ ಮತ್ತು ಪ್ರೀತಿಯಿಂದ ಅವರ ಹೆಸರನ್ನು ತಮ್ಮದೆಯ ಮೇಲೆ ಬರೆದುಕೊಳ್ಳುತ್ತಾರೆ

ಆ ದಿನಕ್ಕಾಗಿ ನನ್ನಂಥವರು ಕಾಯುತ್ತಿರುತ್ತೇವೆ

● ಡಾ. ಮಲ್ಲಿಕಾ ಘಂಟಿ

ಯಾತನೆಯ 'ಭಾರತ ಯಾತ್ರೆ'




ಕನ್ನಡದ ಬಹುಮುಖ್ಯ ರಂಗ ನಿರ್ದೇಶಕ ಕೆ.ವಿ.ಅಕ್ಷರ ಅವರು ನೀನಾಸಂ ವಿದ್ಯಾರ್ಥಿಗಳಿಗೆ ತಾವೇ ರಚಿಸಿದ ನಾಟಕ 'ಭಾರತ ಯಾತ್ರೆ'ಯನ್ನು ನಿರ್ದೇಶನ ಮಾಡಿದ್ದರು. ಆಪ್ತ ರಂಗಭೂಮಿ ವಿನ್ಯಾಸದಲ್ಲಿ ಅರಳಿದ ನಾಟಕ ನೋಡುತ್ತ-ನೋಡುತ್ತಾ ನಿಜಕ್ಕೂ ಬಹಳ ಆಪ್ತವಾಗುತ್ತ ಹೋಗುತ್ತದೆ. ರಂಗದ ಮೇಲೆ ನಾಟಕ ನೋಡುತ್ತಿದ್ದಂತೆ ನೋಡುಗರಲ್ಲೂ ತಮ್ಮ ಬದುಕಿನ ಯಾತ್ರೆಯ ನೆನಪುಗಳ ಬುತ್ತಿಯ ಗಂಟು ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಹಾಗೆ ನೋಡಿದರೆ ಈ ಭೂಮಿಯ ಹಲವು ಖಂಡಗಳು ಆವಿಷ್ಕಾರವಾಗಿದ್ದೆ ಮನುಷ್ಯ ಕೈಗೊಂಡ ವಿವಿಧ ರೀತಿಯ ಯಾತ್ರೆಗಳಿಂದ. ಈ ವಿವಿಧ ರೀತಿಯ ಯಾತ್ರೆಗಳ ಹಿಂದೆ ಬಹಳ ಭಿನ್ನವಾದ ಅನುಭವಗಳು ಅಡಗಿವೆ. ಇಲ್ಲಿ ಅಕ್ಷರ ಅವರ ಯಾತ್ರೆ ಬಹುತೇಕ ಕೇಳುವುದರ ಮೂಲಕ. ನಂತರ ಜೋಯಿಸ ಒಬ್ಬ ರಾಜಕಾರಣಿಯನ್ನು, ನಕ್ಸಲ್ ಮಹಿಳೆಯೊಬ್ಬಳನ್ನು, ಎಂಎನ್‌ಸಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಯುವಕನನ್ನು, ರೈಲು ತಪ್ಪಿಸಿಕೊಂಡಾಗ ಧರ್ಮದಲ್ಲಿ ಮುಸ್ಲಿಂನಾದ ಒಬ್ಬ ಡ್ರೈವರ್‌ನನ್ನು, ಕೊನೆಗೆ ಹರಿದ್ವಾರದಲ್ಲಿ ಸ್ವಾಮಿಯನ್ನು ಭೇಟಿ ಮಾಡುತ್ತಾನೆ.

ಇವರೆಲ್ಲರ ಭೇಟಿಯಲ್ಲೂ ಮನುಷ್ಯನ ಜೀವಿತಾವಧಿಯಲ್ಲಿ ನಡೆಯುವ ಹಲವು ಘಟನೆಗಳನ್ನು ಅಕ್ಷರ ಹುಸಿಹುಸಿಯಾಗಿ ರಂಗದ ಮೇಲೆ ಬಿಚ್ಚಿಡುತ್ತಾ ಹೋಗುತ್ತಾರೆ. ಜೋಯಿಸರ ಮಗನ ಮನೆಯ ಕೆಲಸದಾಕೆ ಶಾರದ ಎಂಬ ಪಾತ್ರದ ಮೂಲಕ ಪ್ರಭುತ್ವ ಅಭಿವೃದ್ಧಿಯ ನೆಪದಲ್ಲಿ ಊರಿಗೆ ಊರನ್ನೆ ಒಕ್ಕಲೆಬ್ಬಿಸಿ ಜನರನ್ನು ಹೇಗೆ ಅನಾಥರಾಗುವಂತೆ ಮಾಡುತ್ತದೆ ಎನ್ನುವುದನ್ನು ಕರಳು ಹಿಂಡುವಂತೆ ಪ್ರಸ್ತುತಪಡಿಸಿದ್ದಾರೆ. ಅದರಲ್ಲಿ ಶಾರದೆ ತನ್ನ ತಾಯಿ ತಮ್ಮನ್ನೆಲ್ಲ ಸಾಕಿದ ರೀತಿ, ಊಟ ತನಗಿಲ್ಲದಿದ್ದರೂ ಅಪ್ಪನಿಗೆ, ಮಕ್ಕಳಿಗೆ, ನಾಯಿಗೆ ಮತ್ತು ಮನೆಯ ಮುಂದಿರುವ ದೇವರಿಗೆ ಹಾಕುವ ಘಟನೆಯನ್ನು ವಿವರಿಸಿದ ಕ್ರಮವೇ ಮನ ಮುಟ್ಟುವಂತಹದ್ದು. ಇನ್ನು ರೈಲಿನಲ್ಲಿ ತೆರಳುವಾಗ ಸಿಗುವ ರಾಜಕಾರಣಿಯೊಂದಿಗಿನ ಮಾತಿರಬಹುದು, ವಿಮಾನದಲ್ಲಿ ಪ್ರಯಾಣಿಸುವಾಗಿನ ಅನುಭವವಿರಬಹುದು, ಅಹಮದಾಬಾದಿನಲ್ಲಿ ಸಿಗುವ ಆಟೋ ಡ್ರೈವರ್‌ನ ಜೊತೆಗಿನ ಸಂಭಾಷಣೆ ಇರಬಹುದು ಕಣ್ಣಿಗೆ ಕಟ್ಟುವಂತೆ ದೃಶ್ಯೀಕರಿಸಿದ್ದಾರೆ.

ಅದರಲ್ಲೂ ವಿಮಾನದಲ್ಲಿ ಪ್ರಯಾಣಿಸುವಾಗ ಎಮ್‌ಎನ್‌ಸಿ ಕಂಪನಿಯಲ್ಲಿ ಕೆಲಸ ಮಡುವ ಹುಡುಗನೊಂದಿಗಿನ ಮಾತುಕತೆಯಲ್ಲಿ ತರ್ಕ ಬಹಳ ಸೂಪರ್. ನಾವು ಕೊಳ್ಳುವ ವಸ್ತು, ಆ ವಸ್ತುವಿಗೆ ಬ್ರಾಂಡ್ ಕೊಡುವ ಹಿನ್ನಲೆ, ಅದನ್ನು ಜನರು ನಂಬುವುದು, ಆ ನಂಬಿಕೆಯಿಂದ ಬ್ರಾಂಡ್‌ನ ಹಿಂದೆ ಬೀಳುವುದು ಎಲ್ಲವೂ ಹಾಲಿ ನಡೆಯುತ್ತಿರುವ ಘಟನೆಗಳೆ. ಇನ್ನು ಅಹಮದಾಬಾದಿನಲ್ಲಿ ಸಿಗುವ ಆಟೋ ಡ್ರೈವರ್‌ನೊಂದಿಗೆ ಮಾತನಾಡುತ್ತಾ ಗುಜರಾತ್ ಕೋಮು ಹಿಂಸೆಯನ್ನು ವಿವರಿಸಿದ ಕ್ರಮ ಗಮನಿಸಿದರೆ ಗುಜರಾತ್‌ನ ಗಲಭೆ ಕಣ್ಣೆದುರಿಗೆ ನಡೆಯುತ್ತಿದೆ ಎನ್ನುವಷ್ಟರಮಟ್ಟಿಗೆ ಗಾಢವಾಗಿತ್ತು, ಹಾಗೆ ಪಾರ್ಟಿ ಯೊಂದರಲ್ಲಿ ತತ್ವಶಾಸ್ತ್ರದ ಪ್ರೊಫೆಸರ್ ಮತ್ತು ವಿಜ್ಞಾನಿ ಯೊಂದಿಗೆ ನಡೆಯುವ ವಾಗ್ವಾದ, ಅದೇ ಪಾರ್ಟಿಯಲ್ಲಿ ಬರುವ ಸಾಮಾಜಿಕ ಕಾರ್ಯಕರ್ತೆಯ ಮಾತುಗಳು, ಜೊತೆಗೆ ಅಲ್ಲಿ ಬರುವ ರಿಯಲ್ ಎಸ್ಟೇಟ್ ವ್ಯಾಪಾರಿ ಇವೆಲ್ಲವೂ ಇಂದಿನ ಭಾರತದ ಸ್ಥಿತಿಯನ್ನು ಬಿಂಬಿಸುತ್ತವೆ. ಅಕ್ಷರ ಇಡೀ ನಾಟಕದಲ್ಲಿ ಭಾರತವನ್ನು ಕಾಡುತ್ತಿರುವ ಕೆಟ್ಟ ರಾಜಕಾರಣ, ಕೋಮು ಹಿಂಸೆ, ಮಡೆಸ್ನಾನ, ಕಾರ್ಪೊರೇಟ್ ಲೋಕದ ತವಕ ತಲ್ಲಣಗಳು, ಆಧ್ಯಾತ್ಮ, ಪರ್ಯಾಯ ರಾಜಕಾರಣದ ಹುಡುಕಾಟದಲ್ಲಿ ಬಹಳ ಚೆನ್ನಾಗಿ ಒಬ್ಬ ಕುಸುರಿ ಕೆಲಸದವನ ಹಾಗೆ ಅಚ್ಚು ಕಟ್ಟಾಗಿ ಪೋಣಿಸಿದ್ದಾರೆ. ಹೀಗಾಗಿ ಸುಮಾರು ಎರಡು ಮುಕ್ಕಾಲು ಗಂಟೆ ನಡೆಯುವ ನಾಟಕ ಸಣ್ಣ ಮಕ್ಕಳಿಂದ ಹಿಡಿದು ಎಲ್ಲಾ ವಯೋಮಾನದವರಿಗೂ ಆಪ್ತವಾಗುತ್ತದೆ.





ಭಾರತೀಯರು ಕೈಗೊಳ್ಳುವ ತೀರ್ಥಯಾತ್ರೆ ಸ್ವರೂಪದ ಯಾತ್ರೆಯಾದರೂ ಅದರಲ್ಲೆ ಒಂದು ರೀತಿಯ ಒಳತಿರುವನ್ನು ಅಕ್ಷರ ಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಇದರ ಮೂಲಕ ಇಡೀ ಭಾರತ ಸಾಗುತ್ತಿರುವ ದಿಕ್ಕನ್ನು ಸೂಚಿಸುತ್ತಾ ಭಾರತವೆನ್ನುವುದು ಎಲ್ಲವೂ ಇದ್ದು ಯಾಕೆ ಯಾತನಾಮಯವಾಗಿದೆ ಎನ್ನುವ ಪ್ರಶ್ನೆಯನ್ನು ಎತ್ತುವಂತೆ ಮಾಡುತ್ತಾರೆ.

ಅಕ್ಷರ ಅವರ 'ಭಾರತ ಯಾತ್ರೆ' ನಾಟಕದ ಕಥೆ ಹೀಗಿದೆ. ಮಲೆನಾಡಿನ ಹವ್ಯಕ ಸಮುದಾಯದ ರಾಮಕೃಷ್ಣ ಜೋಯ್ಸ್ ಯಾತ್ರೆ ಹೊರಟಿರುವ ವ್ಯಕ್ತಿ, ಆದರೆ ಈತ ಹೆಚ್ಚಿನ ಭಾರತೀಯರಂತೆ ಸಂಪ್ರದಾಯಸ್ಥನಾದರೂ ಬಹಳ ವಿವೇಕವುಳ್ಳವನು. ತನ್ನ ಮಿತಿಯಲ್ಲಿ ಒಂದಿಷ್ಟು ಓದಿಕೊಂಡವನು. ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿ ಅವರೆಲ್ಲ ಬೆಂಗಳೂರಿನಂತ ದೊಡ್ಡ ಊರಿನಲ್ಲಿ ನೆಲೆ ನಿಂತವರು. ಈತ ಹರಿದ್ವಾರಕ್ಕೆ ಹೋಗಬೇಕು ಎಂದುಕೊಂಡವನು. ಆದರೆ ಅವನು ಹೊರಟಿರುವ ಸಮಯ ಹರಿದ್ವಾರಕ್ಕೆ ಹೋಗಲು ಸರಿಯಾದ ಸಮಯವಲ್ಲವಾದ್ದರಿಂದ ಈತ ಬೇರೆ ಬೇರೆ ಊರುಗಳನ್ನು ನೋಡುವ ಅವಕಾಶವನ್ನು ಕಲ್ಪಿಸಿಕೊಳ್ಳುತ್ತಾನೆ. ಅವನ ಯಾತ್ರೆಯು ಮೊದಲು ಆರಂಭವಾಗುವುದೆ ಇವನ ಮಗನ ಮನೆಯಲ್ಲಿ ಕೆಲಸ ಮಾಡುವ ಶಾರದ ಎಂಬ ಮಹಿಳೆಯ ಬದುಕಿನ ಕಥೆಯನ್ನು

ನಾಟಕ ಮುಗಿಸಿ ಹೊರಬರುತ್ತಿರುವಾಗ 10 ವರ್ಷದ ಮಗುವೊಂದು 'ಥೂ. ಈ ನಾಟಕ ಯಾಕಾದರು ಮುಗಿತೇನೋ... ಎಷ್ಟು ಚೆನ್ನಾಗಿ ಇತ್ತು' ಎಂದು ಹೇಳುತ್ತಿದ್ದುದ್ದು ನಾಟಕ ಪ್ರೇಕ್ಷಕರನ್ನು ಒಳಗೊಂಡಿರುವುದನ್ನು ಸಾಂಕೇತಿಸುತ್ತಿತ್ತು. ಇಡೀ ನಾಟಕದಲ್ಲಿ ಜೋಯಿಸರು ವ್ಯಕ್ತಿಯೊಬ್ಬನನ್ನು ಕಂಡು 'ನಾನು ನಿನಗೆ ಎಲ್ಲೋ ನೋಡಿದ್ದೇನೆ' ಎಂದು ಕನವರಿಸುವುದು ಮನುಷ್ಯನ ಮನೋಲೋಕದ ಹೊಯ್ದಾಟಗಳನ್ನು ಹೇಳುತ್ತಿತ್ತು.

ಆದರೆ ಅಕ್ಷರ ಹೆಣೆದಿರುವ ಈ ನಾಟಕದಲ್ಲಿ ಕೆಲವು ಲೋಪಗಳು ನನಗೆ ಕಂಡಿತು. ಅದು ಮೊದಲಿಗೆ ನಕ್ಸಲ್ ಹೋರಾಟಗಾರ್ತಿಯನ್ನು ಪರಿಚಯಿಸಿದ ಕ್ರಮ ಅವರ ದೃಷ್ಟಿಕೋನಕ್ಕೆ ಹಿಡಿದ ಕನ್ನಡಿಯಾಗಿತ್ತು, ಆಕೆಯ ಪ್ರವೇಶವನ್ನೆ ಸೀಗರೇಟು ಸೇದುವುದರ ಮೂಲಕ ಮಾಡಿಸುವ ಅಕ್ಷರ ನಂತರ ಆಕೆ ಮದ್ಯ ಸೇವಿಸುತ್ತಾ ಎಲ್ಲರೂ ಸಮಾನವಾಗಿರಲಿ, ಎಲ್ಲರಿಗೂ ಪ್ರೀತಿ ದಕ್ಕಲಿ ಎಂದು ಹೋರಾಡುವ ಕ್ರಾಂತಿಯಲ್ಲಿ ಪಾಲ್ಗೊಂಡವರಿಗೆ ಏಕೆ ಪ್ರೀತಿಯನ್ನು ನಿರಾಕರಿಸಲಾಗುತ್ತದೆ ಎನ್ನುವ ಡಿಬೇಟ್‌ನ್ನು ಮುಂದಿಡುತ್ತಾರೆ. ನಿಜವಾದ ಸಮಾನತೆಯ ಕನುಸು ಹೊತ್ತ ಹೋರಾಟದ ಗುಂಪುಗಳು ಅಕ್ಷರ ವೇದಿಕೆಯಲ್ಲಿ ಬಿಂಬಿಸಿದ ಹಾಗೆ ಸಿಗರೇಟು ಸೇದುವುದಾಗಲಿ, ಮದ್ಯ ಸೇವಿಸುವುದಾಗಲಿ ಮಾಡುವುದಿಲ್ಲ ಮತ್ತು ಇಲ್ಲಿ ಪ್ರೀತಿಗೆ ಬಹಳ ಮುಖ್ಯ ಸ್ಥಾನ ಇರುತ್ತದೆ. ಪ್ರೀತಿ ಎಂದರೆ ಕೇವಲ ಮದ[...] ಮಕ್ಕಳು, ಸಂಸಾರ ಎಂದು ಭಾವಿಸಿದಂತಿದೆ ಅಕ್ಷರ. ಇ[...] ಬಿಂಬಿಸಿದ ರೀತಿ ಆಗುವುದು ಬೂರ್ಜ್ವಾ ಕ್ರಾಂತಿಕಾರಿಗ[...] ಮತ್ತು ಅರೆಬೆಂದ ಸಮಾಜವಾದಿಗ[...] ಇವೆಲ್ಲ ಗೊತ್ತಿಲ್ಲದೆ ಅಕ್ಷರ ಹೀಗೆಲ್ಲ ಬಿಂಬಿಸಿ[...] ತಿದ್ದಿಕೊಳ್ಳಬಹುದು. ಅದಿ[...] ಪೂರ್ವಾಗ್ರಹದಿ[...] ಉದ್ದೇಶಪೂರ್ವಕ ವಾಗಿದ್ದರೆ ಇ[...] ಕಿಡಿಗೇಡಿತನವಾಗು[...]

ಇನ್ನು ಅಹಮದಾಬಾದಿನ[...] ಜೋಯ್ಸ್ ಭೇಟಿಯಾಗುವ ಆಟೋ[...] ಡ್ರೈವರ್‌ನೊಂದಿಗಿನ ಮಾತುಕತೆಯ[...] ಜೋಯಿಸರು ಕೋಮುಗಲಭೆ[...] ವಿವರವನ್ನು ಕೇಳಿದನಂತರ ಹೇಳ[...] ಮಾತು ಮತ್ತು ಅದಕ್ಕೆ ಡ್ರೈವ[...] ಪ್ರತಿಕ್ರಿಯಿಸುವ ರೀತಿ ಹೀಗಿ[...] ಜೋಯಿಸರು "ನನಗೆ ಅರ್ಧರಾತ್ರಿ ಎಬ್ಬಿಸಿ ನೀವು ಯ[...] ಧರ್ಮ ಎಂದರೆ ನಾನು ಹಿಂದೂ ಎನ್ನಲಾರೆ, ಹ[...] ಎನ್ನುತ್ತೇನೆ" ಎನ್ನುತ್ತಾರೆ. ಆಗ ಡ್ರೈವರ್ "ನಾನು ಕ[...] ಆಟೋ ಡ್ರೈವರ್ ಎನ್ನುತ್ತೇನೆ" ಎಂದು ಹೇಳುತ್ತಾನೆ. [...] ಮಾತು ಕೇಳಲು ಬಹಳ ಆಕರ್ಷಕವಾಗಿದೆ. ಆದರೆ ಮು[...] ಧರ್ಮದವನಿಂದ ಆಟೋ ಡ್ರೈವರ್ ಎಂದು ಹೇಳಿಸ[...] ಅಕ್ಷರ ಜೋಯ್ಸ್‌ನಿಂದ ಹವ್ಯಕ ಎಂದು ಹೇಳಿಸುವ ಬದ[...] ಕೃಷಿಕ ಅಥವಾ ಅಡಕೆ ಬೆಳೆಗಾರ ಎಂದು ಹೇಳಿಸಬಹುದಿ[...] ಇದು ನಾನು ಕಂಡಂತೆ ಈ ನಾಟಕದಲ್ಲಿನ ಒಂದು ದೋ[...] ಇನ್ನು ಈ ಯಾತ್ರೆಯ ಕಥೆಯಲ್ಲಿ ಶಂಕರಾಚಾರ್ಯರ[...] ಅತಿಯಾಗಿ ವೈಭವೀಕರಿಸಲಾಗಿದೆ. ಒಂದು ಕಡೆ ಜೋ[...] ಸರು ಬಹಳ ವಿವೇಕವಂತರಂತೆ ಕಾಣಿಸಿಕೊಳ್ಳುವಂತೆ ಮಾ[...] ಸಂದರ್ಭಕ್ಕೆ ಅನುಗುಣವಾಗಿ ಮದ್ಯ ಸೇವಿಸುವ, ಗಾಂ[...] ಎಳೆಯುವಂತ ಪ್ರಯೋಗಶೀಲನನ್ನಾಗಿಸುತ್ತಲೇ, ಇನ್ನೊಂದ[...] ಶಂಕರಾಚಾರ್ಯರಿಗೆ ಅವರನ್ನು ಕಟ್ಟಿ ಹಾಕುವು[...] ಕೃತಿಕಾರನಲ್ಲಿರುವ ದ್ವಂದ್ವ ಎಂದೇ ಹೇಳಬೇಕು. ಹವ್ಯಕ[...] ಶಂಕರಾಚಾರ್ಯರನ್ನು ಪೂಜಿಸುತ್ತಾರೆ ಎಂಬ ಮಾ[...] ಶಂಕರಾಚಾರ್ಯ ಈ ನಾಟಕದಲ್ಲಿ ಇಷ್ಟು ವೈಭವೀಕರ[...] ಆಗುವ ಅಗತ್ಯವಿಲ್ಲ.

ಇನ್ನು ನಾಟಕದಲ್ಲಿ ಬಹಳ ಸರಳವಾದ ರಂಗಸಜ್[...] ವೇದಿಕೆ ವಿನ್ಯಾಸ, ಯಾತ್ರೆಯನ್ನು ಸಂಕೇತಿಸುವ ರಂಗ[...] ಮೇಲೆ ಮೂಡಿಸಿರುವ ಹೆಜ್ಜೆಗಳು, ಹಿಂಭಾಗದಲ್ಲಿ ಭಾರತ[...] ನಕ್ಷೆ ಎಲ್ಲವೂ ಅರ್ಥಗರ್ಭಿತವಾಗಿತ್ತು. ಸಂಗೀತಕ್ಕೆ ಇನ್ನ[...] ಕೆಲಸದ ಅಗತ್ಯ ಇದೆ. ಅಕ್ಷರ ಮಾಡಿರುವ ನಾಟಕದ[...] ಸಂಗೀತ ಬಹಳ ಸಪ್ಪೆಯಾಗಿದ್ದು ಇದೇ ಮೊದ[...] ಅನ್ನಿಸುತ್ತದೆ. ಇದೆಲ್ಲದರ ನಡುವೆ ಅಕ್ಷರ ಬಹಳ ಒಳ್ಳೆ[...] ನಾಟಕವನ್ನು ಕೊಟ್ಟಿದ್ದಾರೆ. ಈ ನಾಟಕ ದೇಶದಾದ್ಯ[...] ಪ್ರದರ್ಶನಗೊಂಡರೆ ತುಂಬ ಉಪಯುಕ್ತವಾಗುತ್[...] ಅನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ, ಎಲ್ಲಾ ನಟ[...] ತಮ್ಮ ಸಾಮರ್ಥ್ಯಕ್ಕೆ ತಕ್ಕುದಾಗಿ ಅಭಿನಯಿಸಿದ್ದಾರೆ.

● ಎಚ್. ಬಿ. ರಾಘು, ಸಾಗ[...]



ಮರೆಯುವ ಮುನ್ನ

ನಡೆದು ಹೊರಟದ್ದೇನೆ ನಾನು
ಏಕಾಂಗಿ
ಮುಳ್ಳುಗಳಿಗೆ..
ಅಂಗಾಲ ಮಿದುವು ಚುಂಬಿಸುವ ಬಯಕೆ
ರಕ್ತ ಬೀದಿಗೆ..
ಕೆಂಪು ಗುಲಾಬಿಯ ನೆನಪು.

ತೆಕ್ಕೆಯೊಳಗೆ
ನಿನ್ನ ಸುಖದ ನರಳಿಕೆ
ಕಟ್ಟೆಯೊಡೆಯದ ಉಮ್ಮಳಿಕೆಯ ಮೌನಬಿಕ್ಕು
ನನ್ನೊಳೊಳಗೆ

ಆ ಬೀದಿ...
ಮುಳ್ಳು ಬೆಳೆದು ನಿಂತಿದೆ
ಹೂವು ಹರಿದು ಹೋದವಳ ನೆನಪು ಹಾಸಿ

ಬರಿಗಾಲ ಫಕೀರನಷ್ಟೆ ಸಾಗಬೇಕಿಲ್ಲಿ
ಜಗತ್ತು ಕಿವುಡಾಗಿದೆ.
ಯಾರ ನೆನಪುಗಳು.. ಎಷ್ಟು ಬಿಕ್ಕಳಿಕೆಗಳು
ಈ ಬೀದಿಗೆ
ಯಾವ ತೊರೆ ಹುಡುಕಿ ಬರುವದಿಲ್ಲಿಗೆ

ಮರೆಯಲನುವಾಗುವ ಆ ಘೋರ ಕ್ಷಣಕೆ
ಮುನ್ನ
ತೊಸರಕ್ತ ಮುನ್ನುಗ್ಗಿ
ತಳಕಚ್ಚಿ ಹೃದಯ ತೊಳೆವ ಮುನ್ನ
ನೆನಪುಗಳಲಿ ಅವಿತ ನನ್ನ ನೆರಳ
ದಿಟ್ಟಿಸುವ ದುರುಳ ಓಜಸ್ಸು
ಚಿಮ್ಮುವ ಮುನ್ನ
ಒಮ್ಮೆ..
ನನ್ನ ನೆನಪಿಸಿಕೊ...

● *ಲಿಂಗರಾಜ ಸೊಟ್ಟಪ್ಪನವ[...]*
ಹಾವೇ[...]

ಮೀನುಗಾರಿಕೆ ಮಂತ್ರಿ ಅಂದ್ರೆ ಮೀನು ತಿನ್ನೊದಲ್ಲ

ನಮ್ಮ ರಾಷ್ಟ್ರೋತ್ಸಾಹ ಪ್ರತಿಭೆಯೊಂದು ಬೆಲ್ಜಿಯಂನಿಂದ ...ದು ಭಾರತದಲ್ಲಿನ ಜಾತಿ ಪದ್ಧತಿಯ ಬೀಜ ಬಿಂದುವಾಗಿ ...ಾಹ್ಮಣನನ್ನು ದೂಷಿಸುವುದು ಅಕ್ಷಮ್ಯ, ಆತ ಅಮಾಯಕ. ...ದಿಗೂ ತನ್ನ ಸಂಪ್ರದಾಯದಡಿ ಬದುಕಿದಂತೆ ಬ್ರಾಹ್ಮಣ ...ಡ ತನ್ನ ಅಗ್ರಹಾರದ ದೇಮ್ಹಾನದ ಪಾಕಶಾಲೆಯಲ್ಲಿ ...ಯುಕಿದ್ದಾನೆ. ಇದರಲ್ಲಿ ಅವನ ತಪ್ಪೇನು" ಎಂದು ...ದಿಸಲಾರಂಭಿಸಿದನಂತಲ್ಲಾ, ಕೊನೆಗೆ ದೇವನೂರು ...ಾದೇವ ಮತ್ತು ರಾಜೇಂದ್ರ ಚೆನ್ನಿಯಿಂದ ಸರಿಯಾಗಿ ...ಸಿಕೊಂಡು ಮತ್ತೂ ವ್ಯಗ್ರಗೊಂಡಿದ್ದಾನಂತಲ್ಲಾ.

ಈ ಬಾಲಗಂಗಾಧರನೆಂಬ ಬ್ರಾಹ್ಮಣ ಬೆಲ್ಜಿಯಂನಿಂದ ...ದ ಥೈಲಿಯೊಂದಿಗೆ ಬಂದು ಕುವೆಂಪು ಯೂನಿವರ್ಸಿಟಿ ...ದಲ್ಲಿ ಕಾಣಿಸಿಕೊಂಡ ಕೂಡಲೇ ಕುವೆಂಪು ವಿ.ವಿ.ಯ ...ಿ ಮಾಣಿಗಳು ಸಾಷ್ಟಾಂಗ ಅಡ್ಡ ಬಿದ್ದು "ಮತ್ತೂರು ...ಹ್ಮಣರಿಗೆ ನಮೋ ನಮಃ. ನಾವು ಧನ್ಯರಾದೆವು" ...ದರಂತಲ್ಲಾ, ಆಗ ಬಾಲು "ನಾನು ಮತ್ತೂರು ಅಲ್ಲ, ...ೂರು ಅಲ್ಲ, ಬ್ರಾಹ್ಮಣನಂತೂ ಅಲ್ಲ, ನೋಡಿ ...ವಾರವೇ ಇಲ್ಲ, ಈಗ ಮುಖ್ಯ ವಿಷಯ ಅದಲ್ಲ, ...ವೆಂಪು ಸಮೇತ ಎಲ್ಲಾ ದಾರ್ಶನಿಕರು ...ರೋಹಿತಶಾಹಿಗಳನ್ನು ಹಿಗ್ಗಾಮುಗ್ಗಾ ತೆಗಳಿ ...ದಿಸುತ್ತಿದ್ದಾರೆ. ಅವರ ಅಭಿಪ್ರಾಯಗಳನ್ನು ಬದಲಿಸೋಣ. ...ತಿಗಳ ಬಗ್ಗೆ ಹೊಸ ಅಧ್ಯಯನವನ್ನೇ ಮಾಡೋಣ. ... ಬಂದವರನ್ನು ಅಟ್ಟಿ, ಅಡ್ಡ ಬಂದವರನ್ನು ಕೆಡವಿ, ...ವು ಬಂದರೆ ಜೊತೆಯಾಗಿ, ಬಾರದಿದ್ದರೆ ಬಿಟ್ಟು, ಅಡ್ಡಿ ...ಡಿದರೆ ಮೆಟ್ಟಿ, ಕುವೆಂಪು ವಿ.ವಿ.ಯಲ್ಲಿ ಹೊಸ ...ವಾರದ ಶಕೆಯನ್ನೇ ಆರಂಭಿಸೋಣ" ಎಂದು ...ರ್ಯಯನ್ನು ಆರಂಭಿಸಿದನಂತಲ್ಲ, ಇದನ್ನು ಕೇಳಿದ ಕನ್ನಡದ ...ದ್ವಾಂಸರು "ಇದೊಂದು ದುಷ್ಟ ಪ್ರವೃತ್ತಿ, ಇವರನ್ನ ...ಿಂದೀಗಲೇ ಓಡಿಸಬೇಕು" ಎಂದು ತೀರ್ಪು ...ಟ್ಟಿದ್ದಾರಂತಲ್ಲಾ. ಎಂ.ಎಂ. ಕಲಬುರ್ಗಿಯಂತಹ ...ದ್ವಾಂಸರೆ "ಕುವೆಂಪು ವಿ.ವಿ.ಯಲ್ಲಿ ಇಂತಹ ನಯವಂಚಕ ...ರ್ಯ ನಡೆಯಬಾರದು" ಎಂದು ಹೇಳಿದ ಕೂಡಲೇ ...ವೆಂಪು ವಿ.ವಿ.ಯಲ್ಲಿರುವ ಅರೆಬರೆ ದಲಿತ ವಿದ್ವಾಂಸರು ... ಹೋರಾಟ ನೆನೆಸಿಕೊಂಡು "ಬರುತಿಹೆವು ನಾವು ...ತಿಹೆವು" ಎಂದು ಕೂಗಿದ ಹೊಡೆತಕ್ಕೆ ಸದಾರಾಮ ...ಡೆ ಸದ್ದು ಅಡಗಿಹೋಯ್ತಂತಲ್ಲಾ ಥೂತ್ತೇರಿ!

* * * *

... ಮೀನುಗಾರಿಕೆ ಸಚಿವರಾದ ಅಭಯಚಂದ್ರ ಜೈನರನ್ನು ...ನಂದಿಸಬೇಕೆನಿಸಿತಲ್ಲಾ, ಪೂಜಾರಿ ಆಫೀಸಿನಿಂದ ಫೋನ್ ...ಬರ್ ಪಡೆದು ಮಾಡಿದಾಗ ರಿಂಗಾಯ್ತು.

ರಿಂಗ್ ಟೋನ್: "ನಮೋ ಅರಹಂತಾಣಂ... ನಮೋ ಸಿದ್ಧಾಣಂ... ನಮೋ ಆಯಾರಿಯಾಣಂ... ನಮೋ ಉವ..."

"ಹಲೋ ಯಾರು?"

"ನಾನು ಯಾಹು ಅಂತ ಸಾರ್, ಪತ್ರಿಕೆಯವನು."

"ವಾರ್ತಾಭಾರತಿ ಪತ್ರಿಕೆಯಾ?"

"ಅಲ್ಲ ಗೌರಿ ಲಂಕೇಶ್ ಪತ್ರಿಕೆ."

"ಅಲ ಗೌರೀ ಲಂಕೇಶ್ ಪತ್ರಿಕೆ ಅಂತ ಉಂಟಾ?"

"ಗೌರಿ ಲಂಕೇಶ್ ಪತ್ರಿಕೆ ಸಾರ್."


"ಗೊತ್ತು ಹೇಳಿ. ಅವರು ಇಲ್ಲಿ ಬಂದು ಸಭೆ ಮಾಡಿದ್ದುಂಟು."

"ತಾವು ಮೀನುಗಾರಿಕೆ ಮಂತ್ರಿಯಾಗಿದ್ದಕ್ಕೆ ಅಭಿನಂದನೆ ಸಾರ್."

"ಯಂತ ಅಭಿನಂದನೆ. ನಮಗೆ ಬ್ಯಾಡಿತ್ತು ಮಾರಾಯ್ರ."

"ಮಂತ್ರಿ ಪದವಿ ಬೇಡವಾಗಿತ್ತ ಸಾರ್?"

"ಬೇಕಿತ್ತು, ಆದರೆ ಮೀನಿನ ಖಾತೆ ಬೇಡಾಗಿತ್ತು."



"ನಿಜ ಸಾರ್. ಅಲ್ಲಿ ಯಾವ ಪಾಯ್ದೆನೂ ಇಲ್ಲ, ಸಣ್ಣ ಕಣ್ಣಿನ ಬಲೆ ಮಾಡಿ ಕೊಂಡು ಮೀನನ್ನು ಹಿಡದೂ ಹಿಡದೂ ಕಡಲನ್ನೇ ಬರಿದು ಮಾಡಿ ಹಾಕಿದ್ದಾರೆ. ಮೀನುಗಾರರಿಗೇ ಸರಿಯಾಗಿ ಮೀನು ಸಿಗ್ತಾಯಿಲ್ಲ ಅಂದ ಮೇಲೆ ಇನ್ನು ನಿಮಗೇನು ಸಿಗತ್ತೆ ಸಾರ್?"

"ನಾನು ಹೇಳಿದ್ದು ಹಾಗಲ್ಲ, ನಾನು ಜೈನ ಧರ್ಮದವ. ಹೋಗಿ ಹೋಗಿ ಮೀನುಗಾರಿಕೆ ಖಾತೆ ತಕ್ಕೊಂಡದಕ್ಕೆ ನಮ್ಮ ಜೈನ ಸನ್ಯಾಸಿಗಳು ಸಿಟ್ಟು ಮಾಡಿಕೊಂಡುಂಟು."

"ಸಾರ್, ನಿಮ್ಮ ಖಾತೆಗೂ ನಿಮ್ಮ ಸನ್ಯಾಸಿಗಳಿಗೂ ಏನು ಸಂಬಂಧ?"

"ನಮ್ಮದು ಅಹಿಂಸಾ ಧರ್ಮ. ಹಾಗಾಗಿ ಮೀನು ಹಿಡಿದು ಸಾಯಿಸಿ ತಿನ್ನುವ ಖಾತೆ ನಿನಗೆ ಬೇಡಿತ್ತು ಅಂತ ಅವರು ಹೇಳಿದ್ದು."

"ನೀವು ಮೀನಿಡಿದು ಸಾಯಿಸ್ತಿದ್ರಾ?"

"ನಿಮಗೆ ಯಂತ ಹೇಳುವುದು ಗೊತ್ತಾಗ್ತಾಯಿಲ್ಲ, ಅಹಿಂಸೆ ಬೋಧಿಸುವ ಧರ್ಮದವ ಹಿಂಸೆ ಖಾತೆ ತೆಕ್ಕೊಳ್ಳುವುದು ಬೇಡ ಅಂತ ಅವರು ಹೇಳುವುದು."

"ಗಿರೀಶ್ ಕಾರ್ನಾಡರ ಹಿಟ್ಟಿನ ಹುಂಜ ನಾಟಕ ಓದಿದ್ದಿರಾ?"

"ಓದಿಲ್ಲ."

"ಅದರಲ್ಲಿ ಹಿಂಸೆ ನಮ್ಮ ಮನಸ್ಸಿನಲ್ಲಿ ಮೂಡದೆಯಿದ್ರಾಯ್ತು ಅದು ಹಿಂಸೆ ಆಗಲ್ಲ, ತಲೆ ಒಳಗಡೆ ಹಿಂಸೆ ಇದ್ದು ಅಹಿಂಸೆ ಮಾತನಾಡಿದ್ರೆ ಅದು ಹಿಂಸೆ ಆಗತ್ತೆ, ಇದನ್ನು ನಿಮ್ಮ ಸನ್ಯಾಸಿಗಳಿಗೆ ಹೇಳಿ."

"ಯಂತ ಹೇಳುವುದು?"

"ನಾನು ಪ್ರಜಾಪ್ರಭುತ್ವದಲ್ಲಿ ಎಲ್ಲಾ ಜಾತಿ ಧರ್ಮದವರ ಓಟು ತಗೊಂಡು ಶಾಸಕ ಆಗಿದ್ದಿನಿ. ಆದ್ದರಿಂದ ಮಂತ್ರಿ ಆಗಿದ್ದೀನಿ. ಜೈನರಿಂದ, ಜೈನ ಸನ್ಯಾಸಿಗಳಿಂದ ನಾನು ಶಾಸಕನೂ ಆಗಿಲ್ಲ, ಮಂತ್ರಿನೂ ಆಗಿಲ್ಲ ಅಂತ ಹೇಳಿ."

"ಅದ್ ಅವರಿಗೆ ಗೊತ್ತುಂಟಲ್ಲಾ."

"ಗೊತ್ತಿದ್ದ ಮೇಲೆ ಬಾಯಿ ಮುಚ್ಚು ಗೊಂಡು ಇರಕ್ಕೇಳಿ. ಸರ್ವಸಂಗ ಪರಿತ್ಯಾಗಿ ಗಳೂ, ಸನ್ಯಾಸಿಗಳೂ ಆದ ಈ ಮುನಿವರ್ಯ ರನ್ನ ಸಾಕ್ತಾಯಿರೋರು ಸಾಮಾನ್ಯ ಜನರು. ಅವುರು ಭತ್ತ ಬೆಳೀಬೇಕಾದ್ರೆ ಲಕ್ಷೋಪಲಕ್ಷ ಕೀಟಗಳು ಸಾಯ್ತವೆ. ಭತ್ತ ಅಕ್ಕಿ ಅನ್ನ ಆಗಬೇಕಾದ್ರೆ ನಿಸರ್ಗದಲ್ಲಿ ಹಿಂಸೆ ಸದ್ದಿಲ್ಲದೆ ಜರಗತ್ತೆ, ಇದು ಮಂದಮತಿಗಳಿಗೂ ತಿಳಿಯೋ ಸಂಗತಿ."

ಥೂತ್ತೇರಿ

"ಮಂತ್ರಿಯ ಬಳಿ ಮಾತನಾಡ್ತವುಂಟು ಅಂತ ಗೊತ್ತ ನಿಮಗೆ?"

"ಗೊತ್ತು ಸಾರ್. ಅದೂ ಮೀನುಗಾರಿಕೆ ಮಂತ್ರಿ, ತಾವು ಕಾಂಗ್ರೆಸ್ ಪಾರ್ಟಿಲಿರದಕ್ಕಿಂತ ಬಿ.ಜೆ.ಪಿ.ಲಿರಬೇಕಾಗಿತ್ತು, ನಿಮ್ಮಂತವರು ಆ ಪಾರ್ಟಿಗೆ ಹೇಳಿಮಾಡಿಸಿದ ಜನ."

"ಹಾಗೆ ಯಂತಕ್ಕೆ ಹೇಳುವುದು ನೀವು?"

"ಯಾಕೆ ಅಂದ್ರೆ, ಅಲ್ಲಿ ನಿಮಗೆ ಹೇಳಿಮಾಡಿಸಿದ ಖಾತೆ ಕೊಡತಿದ್ರು. ತೀರ್ಥ, ಲಾಡು, ಬೂದಿ ಕೊಡೊ ಮಂತ್ರಿಗಳೆಲ್ಲಾ ಅಲ್ಲಿದ್ರು. ಈಗ್ಲೂ ನಿಮಗೆ ಮೀನುಗಾರಿಕೆ ಇಷ್ಟ ಇಲ್ಲ ಅಂದ್ರೇ ಒಂದು ಜೈನ ಖಾತೆ ಸೃಷ್ಟಿ ಮಾಡಕ್ಕೆ ಸಿದ್ದರಾಮಯ್ಯನೋರಿಗೆ ಹೇಳಬಹುದು."

"ಜೈನ ಖಾತೆ ಅಂದರೆ ಯಂತದು?"

"ನೋಡಿ, ಕನ್ನಡ ಸಾಹಿತ್ಯದಲ್ಲಿ ಜೈನ ಪರಂಪರೆ ಇದೆ. ಪಂಪನಿಂದ ಹಿಡಿದು ಹಂಪಾನಾ, ಕಮಲ ಹಂಪಾನಾವರೆಗೂ ಕನ್ನಡ ಸಾಹಿತ್ಯ ಹರಡಿಕೊಂಡಿದೆ. ಇನ್ನು ಹಲವು ರಾಜರು ಜೈನರಾಗಿದ್ದರು. ಇದೆಲ್ಲವನ್ನ ಹೇಳಿ ಜೊತೆಗೆ ಧರ್ಮಸ್ಥಳದ ಹೆಗಡೆ ಶಿಫಾರಸ್ಸಿನೊಂದಿಗೆ ಸಿದ್ದರಾಮಯ್ಯನಿಂದ ನೀವೊಂದು ಜೈನ ಖಾತೆ ಪಡೆಯಬಹುದು."

"ಹಾಗೆ ಮಾಡಲು ಸಾಧ್ಯವೆ?"

"ಸಾಧ್ಯ, ಸಕ್ಕರೆ ಸಚಿವ, ಜವಳಿ ಸಚಿವ, ರೇಷ್ಮೆ ಸಚಿವ ಅಂತ ಇರುವಾಗ, ಮುಜರಾಯಿ ಖಾತೆಗೆ ಒಂದು ಉಪಖಾತೆ ಸೃಷ್ಟಿ ಮಾಡಿ ಅದಕ್ಕೆ ಜೈನ ಖಾತೆ ಅಂತ ಹೆಸರು ಮಡಗಿ, ನೀವೇ ಆ ಖಾತೆ ವಹಿಸಿಕೊಂಡು ದಿಗಂಬರರೊ, ಶ್ವೇತಾಂಬರರೊ ಆಗಿ ತಿರುಗಬಹುದು."

"ಜೈನ ಧರ್ಮವನ್ನ ಆಡಿಕೊಂಡರೆ ನಾವು ಸಹಿಸುವುದಿಲ್ಲ."

"ನಾವೂ ಅಷ್ಟೆ, ಪ್ರಜಾಪ್ರಭುತ್ವದ ಸರಕಾರದಲ್ಲಿನ ಖಾತೆಗಳ ಬಗ್ಗೆ ಹಿಂಸೆ ಖಾತೆ, ಅಹಿಂಸೆ ಖಾತೆ ಅಂತ ವಿಂಗಡಿಸಿದರೆ ಸಹಿಸಲ್ಲ."

"ಏನು ಮಾಡ್ತಿಕುಂಟು?"

"ದಿಗಂಬರರಾಗಿ ಪ್ರತಿಭಟಿಸುವುದುಂಟು!"

"ಥೂತ್ತೇರಿ!!!" ●

...ಲ್ಲ ವಿವರಣೆಯ ಆಚೆಗೆ

...ರಪ್ಪಾದ ಪ್ರತಿಷ್ಠಿತ ವರ್ಗದಲ್ಲಿ ಡೈವೋರ್ಸ್ ...ಯುತ್ತಿರಲಿಲ್ಲ, ಈ ಮೇಲುವರ್ಗಕ್ಕೆ ಒಂದು ಪರಂಪರೆ, ...ಸಂಹಿತೆ ಇತ್ತು; ಎಲ್ಲ ಸಾಮಾನ್ಯರಂತೆ ಅವರು ಪ್ರೇಮ,



...ಮದ ಆಟ ಆಡಲಾಗುತ್ತಿರಲಿಲ್ಲ, ಇಂಥ ಕಟ್ಟುನಿಟ್ಟಾದ ...ಾಜದಲ್ಲಿ ಎಲ್ಲರ ಗೌರವಕ್ಕೆ ಪಾತ್ರಳಾಗಿದ್ದವಳು ಅನ್ನಾ; ...ಳ ಕುಟುಂಬದ ಪರಿಚಿತರಲ್ಲಿ ಗಂಡಹೆಂಡಿರ ನಡುವೆ ...ಷ ಮನಸ್ತಾಪವಾದರೂ ಅದನ್ನು ಬಗೆಹರಿಸುತ್ತಿದ್ದವಳು ... ಕರೇನಿನಾ ಎಂಬ ಗಣ್ಯ ಸರ್ಕಾರಿ ಅಧಿಕಾರಿಯ ... ಈಕೆ. ಈಕೆಗೆ ಒಬ್ಬ ಪುಟ್ಟ ಮಗನಿದ್ದ.

...ವ್ರಾನ್‌ಸ್ಕಿ ಎಂಬ ಸೈನ್ಯದ ಅಧಿಕಾರಿಯನ್ನು ಅನ್ನಾ ...ನ್ನಾತ್ತಾಗಿ ನೋಡುತ್ತಾಳೆ; ಆತ ಕೂಡ ಅವಳಿಂದ ...ಷವಾಗಿ ಗಮನಿಸುತ್ತಾನೆ. ಮಾಸ್ಕೋ ನಗರದ ಒಂದು ...ಾರ್ಟಿ ಪಾರ್ಟಿಯುಲ್ಲಿ ಇಬ್ಬರ ಭೇಟಿಯಾಗುತ್ತದೆ. ...ರಿಗೂ ಆತಂಕ. ಅನ್ನಾಗೆ ಅವ್ಯಕ್ತ ಭಯ. ಅವಳ ...ತ ಹೊಸದ ತೇಲುತ್ತಿರುವಂತೆ ಅವಳಿಗೆ ಭಾಸವಾಗುತ್ತದೆ. ...ಯಲ್ಲಿ ವ್ರಾನ್‌ಸ್ಕಿಯ ಜೊತೆ ನರ್ತಿಸುವಾಗ ಅವರಿಬ್ಬರ ...ನಿಸಿ ಬೆಂಕಿ ಹತ್ತಿಕೊಂಡು ಉರಿಯತೊಡಗುತ್ತದೆ. ... ಎಂದೂ ಕಾಣದ ಜ್ವಾಲೆ ಅದು. ಆಕೆ ಎಂದೂ ...ಮದ ಜೀವನ ಕೂಡ. ತನ್ನ ಪ್ರತಿಷ್ಠಿತ ವರ್ಗದ ಗಾಢ ಕಾಳಜಿಗಳು ಎಷ್ಟೇ ತಡೆದರೂ ಅನ್ನಾ ವ್ರಾನ್‌ಸ್ಕಿಯ ತೋಳಿನ ಮೇಲಿನ ಅರಗಿಣಿಯಾಗುತ್ತಾಳೆ. ವ್ರಾನ್‌ಸ್ಕಿಗೆ ಕೂಡ ಇದು ವಿಚಿತ್ರ ಅನುಭವ. ಆತನ ಮಿಲಿಟರಿ ಉದ್ಯೋಗದ ಆಕಾಂಕ್ಷೆಗಳು, ಆತನ ಬದುಕಿನ ಎಲ್ಲ ವಿಶ್ವಾಸಗಳು ಅನ್ನಾ ಎಂಬ ಜ್ವಾಲಾಮುಖಿಯ ಎದುರು ಕರಗತೊಡಗುತ್ತವೆ. ಅನ್ನಾ ಇದ್ದಲ್ಲಿ ಇರಬೇಕು, ಅವಳ ಪ್ರಭೆಯಲ್ಲಿ ನಿಲ್ಲಬೇಕು, ಅವಳ ಬೆಂಕಿಯಿಂದ ಬೆಚ್ಚಗಾಗಬೇಕು. ವ್ರಾನ್‌ಸ್ಕಿ ತನ್ನ ಸೈನ್ಯದ ಹುಚ್ಚು ಬಿಟ್ಟು 'ನೀನಿದ್ದಲ್ಲಿ ಮಾತ್ರ ನನಗೆ ಜೀವ' ಎಂದು ಹೇಳಿ ಅವಳನ್ನು ನೆರಳಿನಂತೆ, ಸೌಖ್ಯದಂತೆ, ಸಾವಿನಂತೆ, ಮರೀಚಿಕೆಯಂತೆ ಹಿಂಬಾಲಿಸುತ್ತಾನೆ.

ಸಂಭೋಗವೆನ್ನುವುದು ಅನಿವಾರ್ಯವಾದಾಗ ಅದೂ ಆಗುತ್ತದೆ. ಯಾವ ಅಗ್ನಿಯೂ ತನ್ನ ಬಿಸಿ, ಬೆಳಕನ್ನು ನಿರಂತರವಾಗಿ ಇಟ್ಟುಕೊಳ್ಳಲಾರದು. ಇದು ವ್ರಾನ್‌ಸ್ಕಿಯ ಹೊಸ ಅರಿವು. ಆದರೆ ಅನ್ನಾ ಇದಕ್ಕಾಗಿ, ವ್ರಾನ್‌ಸ್ಕಿಗಾಗಿ, ಪ್ರೇಮವೆಂಬ ಏಕಮಾತ್ರ ಧನ್ಯತೆಗಾಗಿ ತನ್ನ ಗಂಡ, ಮಗ, ನೆಂಟರು, ಸ್ನೇಹಿತರು ಎಲ್ಲವನ್ನೂ ಬಿಟ್ಟಿದ್ದಾಳೆ. ನಿರಂತರ ಪ್ರೇಮ ಮಾತ್ರ ಅವಳ ತ್ಯಾಗಕ್ಕೆ ಸಮಾನವಾಗಬಲ್ಲದು. ಆದರೆ ಅನ್ನಾಳ ಆತ್ಮಾರ್ಪಣೆ ಯಾವ ಚಿಂತನೆಗೂ ನಿಲುಕದ ಸ್ಥಿತಿ ತಲುಪಿದೆ. ಮನುಕುಲದ ಅನುಪಮ ಅಭೀಪ್ಸೆಯ ಸ್ತರದಲ್ಲಿದೆ.

ಅನ್ನಾಳ ಮನಸ್ಸು ವ್ರಾನ್‌ಸ್ಕಿಯ ಸುತ್ತ ತಿರುಗುತ್ತಿದೆ. ಆತನ ಬಗ್ಗೆ ಎಲ್ಲ ಸಾಧ್ಯತೆಗಳನ್ನು ಚಿಂತಿಸಿದ ಅನ್ನಾ ಅತ್ಯಂತ ಕೆಟ್ಟದನ್ನು ಆರಿಸಿಕೊಂಡು ಓಡುವ ರೈಲಿನ ಕೆಳಗೆ ಬಿದ್ದು ಸತ್ತುಹೋಗುತ್ತಾಳೆ. ವ್ರಾನ್‌ಸ್ಕಿಯ ಹತಾಶೆ ಮತ್ತು ನೋವು ತೀವ್ರವಾಗುತ್ತವೆ.


'ರಷ್ಯಾದ ಕ್ರಾಂತಿಗೆ ಮುಂಚಿನ ಆ ದಿನಗಳಲ್ಲಿ ಡೈವೋರ್ಸ್ ಸುಲಭವಾಗಿದ್ದರೆ ಹೀಗೆಲ್ಲ ಆಗುತ್ತಿರಲಿಲ್ಲ' ಎನ್ನುವ ವಿವೇಕಿಗಳಿದ್ದಾರೆ; ಅನ್ನಾಳ ವ್ಯಭಿಚಾರಕ್ಕೆ ತಕ್ಕ ಶಿಕ್ಷೆಯಾಯಿತು ಅನ್ನುವವರಿದ್ದಾರೆ. ಸಮಾಜದ ಕಟ್ಟುಪಾಡನ್ನು ಲೆಕ್ಕಿಸದವಳಿಗೆ ಸಾವೇ ಗತಿ ಅನ್ನುವವರಿದ್ದಾರೆ. ಆದರೆ ಈ ಯಾವ ನಿಲುವುಗಳೂ ವಾಸ್ತವವನ್ನು ಹೇಳುವುದಿಲ್ಲ.

ಹುಟ್ಟನಿಂದಲೇ ದ್ವಂದ್ವವನ್ನು ಕಟ್ಟಿಕೊಂಡು ಬಂದ ಅನ್ನಾ ಮನುಕುಲದ ಪ್ರತಿನಿಧಿ. ವ್ಯಭಿಚಾರ, ಸಾಮಾಜಿಕ ನೀತಿಸಂಹಿತೆ ಮುಂತಾದವೆಲ್ಲ ಚಿಲ್ಲರೆ ಎನ್ನಿಸುವಂತೆ ಮನುಷ್ಯನ ಅಂತರಾಳದಲ್ಲಿ ಜೀವದ ಬಿರುಗಾಳಿ, ರೊಚ್ಚು ಇವೆ.

ಎಲ್ಲ ನಾಗರಿಕತೆಯನ್ನು ಉಲ್ಲಂಘಿಸುವ ಈ ಚಂಡಮಾರುತ ವಿವೇಕಜನ್ಯವಲ್ಲ; ಮದುವೆ ಅಥವಾ ವಿಚ್ಛೇದನದಿಂದ ಬಗೆಹರಿಯುವುದಿಲ್ಲ, ಇದು ಪ್ರೇಮದ ಅತಿರೇಕವಲ್ಲ, ಕಾಮದ ಅಭಿವ್ಯಕ್ತಿ ಕೂಡ ಅಲ್ಲ.

ಇದು ಅನ್ನಾಳನ್ನು ಬಲಿ ತೆಗೆದುಕೊಂಡ ಸಾವು, ಬದುಕಿನ ದ್ವಂದ್ವ.

ಭೀಕರ ಸತ್ಯವನ್ನು ಗ್ರಹಿಸಿದವರು...



'ರೂಪಕ ಲೇಖಕರು' ಅಂಕಣವನ್ನು ಮೆಚ್ಚುವ ಗೆಳೆಯನೊಬ್ಬ ಹೇಳಿದ: 'ನನಗೆ ಅಲ್ಲಿಯ ಜೀವನಚರಿತ್ರೆಯಲ್ಲಿ ಅಷ್ಟು ಆಸಕ್ತಿ ಇಲ್ಲ, ಲೇಖಕರ ಮನಸ್ಸು ಹೇಗೆ ಹೇಗೆ ಹರಿಯುತ್ತದೆ ಎನ್ನುವುದರಲ್ಲಿ ನನಗೆ ಕುತೂಹಲ.'

'ಅದು ಕೂಡ ಲೇಖಕನ ಜೀವನದ ಭಾಗವಾಗಬಲ್ಲದು, ಅಲ್ಲವೆ.'

'ಹೌದು. ಆದರೆ ಲೇಖಕನ ಮನಸ್ಸನ್ನು ಜೀವನಚರಿತ್ರಕಾರ ವರ್ಣಿಸಲಾಗುವುದಿಲ್ಲ.'

'ಹಾಗಲ್ಲ, ನೀನು ಸ್ವಲ್ಪ ಅಸ್ಪಷ್ಟವಾಗಿದ್ದೀ. ವಾತ್ಸಾಯನ ನನಗೆ ತನ್ನ ಕಾಲಂ ಶುರುಮಾಡುವ ಮುನ್ನ ಹೇಳಿದ್ದೇ ಬೇರೆ. ಆತನಿಗೆ ಲೇಖಕನ ಮನಸ್ಸನ್ನು ದಾಖಲಿಸುವುದು ಅಷ್ಟು ಮುಖ್ಯವಾಗಿರಲಿಲ್ಲ, ಅದು ಆತನ ಲೇಖನದ ದೃಷ್ಟಿಯಿಂದ ಮುಖ್ಯವಾಗಿರಬಹುದು. ಯಾಕೆಂದರೆ, ಸಾಹಿತಿ ಮನಸ್ಸಿನಲ್ಲಿ ಬದುಕುತ್ತಾನೆ; ಹಾಗೆಯೇ ಇದೀ ದೇಹದಲ್ಲಿ ಕೂಡ. ನಾವೆಲ್ಲ ಆಗಾಗ ಗುರುಗಳ ಗುಲಾಮರಾದ ಲೇಖಕರು, ಸಮಾಜ ಆಗಲೇ ಒಪ್ಪಿರುವ ಮೌಲ್ಯಗಳನ್ನು ಕುರಿತು ಬರೆಯುವವರು ಎಂದು ಕೆಲವರನ್ನು ವರ್ಣಿಸುತ್ತೇವೆ. ಇದು ಕ್ಲಾಸಿಕಲ್ ಮನಸ್ಸು; ರೊಮ್ಯಾಂಟಿಕ್ಕಾಗಿ ಹೊಸದನ್ನು ಶೋಧಿಸುತ್ತಾ ಹೋಗುವ ಬದಲು ಎಲ್ಲರೂ ಒಪ್ಪಿರುವ ಸಂಹಿತೆಗೆ ಬದ್ಧರಾಗಿ ಅಚ್ಚುಕಟ್ಟಾಗಿ ಬರೆಯುವುದು, ಸಾಹಿತಿ ತನ್ನ ವೈಶಿಷ್ಟ್ಯವನ್ನು ತನ್ನ ಶೈಲಿ ಮತ್ತು ಪ್ರಕಾರದ ಸೌಷ್ಠವದಲ್ಲಿ ತೋರುವುದು. ಆದರೆ ದೊಡ್ಡ ಲೇಖಕ ರೊಮ್ಯಾಂಟಿಕ್ ಅಥವಾ ಕ್ಲಾಸಿಕಲ್ ಎರಡೂ ಆಗಿರುವುದಿಲ್ಲ; ಅಥವಾ ಎರಡೂ ಆಗಿರುತ್ತಾನೆ. ಟಾಲ್‌ಸ್ಟಾಯ್, ದೊಸ್ತೋವ್‌ಸ್ಕಿ, ಶೇಕ್ಸ್‌ಪಿಯರ್ ಮುಂತಾದವರನ್ನು ಯಾವ ಗುಂಪಿನಲ್ಲೂ ಗುರುತಿಸಲಾಗುವುದಿಲ್ಲ. ಯಾಕೆಂದರೆ ಅವರು ಮನುಷ್ಯನ ಬದುಕನ್ನು ಎದುರಿಸಿದವರು; ಮನುಷ್ಯನ **predicament** ಅನ್ನು ಕಂಡು ಬರೆದವರು. ತಮ್ಮ ಅಂತರಂಗವನ್ನು ಪರಿಶೀಲಿಸಿ ಮನುಕುಲದ ವಿಪರ್ಯಾಸಗಳನ್ನು ತೋರುವ ಇವರು ದೊಡ್ಡ ಸಾಹಿತಿಗಳು. ನಮ್ಮ ಬಿ.ಎಂ. ಶ್ರೀಕಂಠಯ್ಯನವರು (ಇವರನ್ನು ಉದಾಹರಣೆಗಾಗಿ ಮಾತ್ರ ತೆಗೆದುಕೊಂಡಿದ್ದೇನೆ) ಇದ್ದಾರೆ; ಇವರ ಶೈಲಿ ಕನ್ನಡ ನುಡಿಕಟ್ಟುಗಳಿಂದ, ಚಿತ್ರವತ್ತಾದ ವರ್ಣನೆಗಳಿಂದ ಆಕರ್ಷಕವಾಗಿತ್ತು, ಆದರೆ ಇವರು ತಮ್ಮ ಸಹೋದ್ಯೋಗಿಗಳು ಮತ್ತು ಶಿಷ್ಯರಿಗಾಗಿ ತಮ್ಮ ಗ್ರಹಿಕೆಯನ್ನೇ ಹೊಂದಿಸಿಕೊಂಡರು. ಇವರು ಮ್ಯಾಥ್ಯೂ ಆರ್ನಾಲ್ಡ್‌ನ ಮಟ್ಟಕ್ಕಿಂತ ಮೇಲೇರಲಿಲ್ಲ. ಆದರೆ ನಿಜವಾದ ಸಾಹಿತಿ ಈ ಅಧ್ಯಾಪಕರು, ಶಿಷ್ಯರ ಮರ್ಜಿಯಿಂದ ಭಿನ್ನವಾಗಿರಬೇಕು. ಸಾಹಿತ್ಯ ಜನರ ಬದುಕಿಗೆ ಮುಖ್ಯವಾಗುವುದು ಹಾಗೆ...'

'ಇದನ್ನು ನಮ್ಮ ಜನಕ್ಕೆ ಹೇಳುವುದು ಸ್ವಲ್ಪ ಕಷ್ಟವಾಗಬಹುದು, ಅಲ್ಲವೆ?'

'ಅದಕ್ಕೇ ವಾತ್ಸಾಯನ ಸಾಹಿತಿಯ ಬದುಕು, ಅವನ ಪರಿಸರ ಸೇರಿಸಿಕೊಂಡು ಹೇಳುತ್ತಾನೆ...'

ಆತ ಹೇಳಿದ:

'**The awful reality**ಯ ಸಂಪರ್ಕವಿಲ್ಲದಿದ್ದರೆ ಸಾಹಿತ್ಯ **superficial** ಆಗಿ ಉಳಿಯುತ್ತದೆ.'

'ಅದಕ್ಕೇ ನಾವು ಈ ಅಂಕಣ ಶುರುಮಾಡಿದ್ದು...'

● ಅಕ್ಟೋಬರ್ 28, 1998

ಅಣಕ



• ಎಚ್.ಎಲ್.ಕೇಶವಮೂರ್ತಿ

ಇದ್ರಲ್ಲಿ ಏನೋ ಐತೆ!

ಅನಕೃ ಅವರ ಒಂದು ಕಾದಂಬರಿ ಓದಿದ್ದೆ. ಹೆಸರು ಮರೆತುಹೋಗಿದೆ. ಅದರಲ್ಲಿ ಒಬ್ಬ ಹರೆಯದ ಹೆಣ್ಣು ಮಗಳು ಬರುತ್ತಾಳೆ. ಮದುವೆ ಆಗಿರುತ್ತೆ. ವಯಸ್ಸು ಕೇಳ್ತಾ ಇಲ್ಲ. ಬೇರೆ ಒಬ್ಬ ಯುವಕನ ಮೇಲೆ ಮನಸು ಆಗುತ್ತೆ. ಅದು ಆ ಯುವಕನಿಗೂ ಮನವರಿಕೆಯಾಗುತ್ತೆ. ಸಿಕ್ಕಿದ ಅವಕಾಶ ವ್ಯರ್ಥ ಮಾಡಿಕೊಳ್ಳಬಾರದು ಅಂತ ಅವನಿಗೂ ಅನ್ನಿಸುತ್ತೆ. ಬಿಟ್ಟಿ ಹೆಣ್ಣು ಸಿಗುತ್ತೆ ಅಂದರೆ ಎಂತಹ ಗಂಡಸಿಗಾದರೂ ಹೀಗೆ ಅನ್ನಿಸೋದು ಸಹಜಾನೆ. ಸಂದರ್ಭವೇನೋ ಪ್ರಶಸ್ತವಾಗಿತ್ತು. ಇಬ್ಬರಿಗೂ ಕೂಡುವ ಬಯಕೆ ಇತ್ತು. ಆಕೆಯ ಮನೆ ಇತ್ತು. ಆದರೆ ಅಲ್ಲಿ ಆಕೆಯ ಗಂಡನಿದ್ದ! ಈ ಮನೆ ಸಹವಾಸವೇ ಬೇಡ, ಎಲ್ಲಿಯಾದರೂ ಹೊರಗೆ ಸೇರೋಣ ಅಂದ್ರೆ ಪಾಪ ಇಬ್ಬರೂ ಕಸುಬಿಗೆ ಹೊಸಬರು. ಹೋಟೇಲ್ ರೂಂ ಮಾಡಲು ಯಾರ ಕೈಗೆ ಸಿಕ್ಕಿ ಬೀಳ್ತೀವೋ ಅನ್ನೋ ಭಯ. ಅವನ ರೂಮೇನೋ ಇತ್ತು. ಅಕ್ಕಪಕ್ಕದ ರೂಮಿನಲ್ಲಿದ್ದವರೆಲ್ಲ ಇವನ ತರಹಾನೆ ಗಂಡುಗೋವಿಗಳು. ಆ ಯುವತಿ ಅಲ್ಲಿಗೇನಾದರೂ ಹೋದರೆ ಹಸಿದ ಇರುವೆಗಳ ಮುಂದೆ ಬೆಲ್ಲ ಇಟ್ಟಂಗೇನೆ. ಅನೈತಿಕ ಲೈಂಗಿಕ ಸಂಬಂಧಗಳನ್ನು ಗೆಳೆಯರೊಡನೆ ಹೇಳಿಕೊಂಡು ಮಜ ತೆಗೆದುಕೊಳ್ಳಬಹುದೇ ಹೊರತು ಅವರನ್ನೇ ಪಾತ್ರಧಾರಿಗಳನ್ನಾಗಿ ಮಾಡಲು ಮನಸ್ಸು ಒಪ್ಪುವುದಿಲ್ಲ. ಹಿಂಗಾಗಿ ಕೂಡುವುದಕ್ಕೆ ಸೇಫ್ ಪ್ಲೇಸೇ ಇಲ್ಲದ ತೊಳಲಾಟಕ್ಕೆ ಬಿದ್ದಿದ್ದರು. ಅಲ್ಲಾ ಈ ಗಂಡ ಅನ್ನೋ ಪ್ರಾಣಿ ಯಾವಾಗಲೂ ಮನೇಲೇ ಬಿದ್ದಿರುತ್ತಾ, ಹೊರಗಡೆ ಹೋಗೋದೇ ಇಲ್ಲವಾ ಅಂದ್ರೆ, ಆಗಾಗ ಹೋಗುತ್ತಿತ್ತು. ಆ ಸಮಯದಲ್ಲಿ ಸಲೀಸಾಗಿ ಹೋಗಬಹುದಿತ್ತು. ತೊಂದರೆ ಏನು ಅಂದರೆ ಅವನು ಮನೆಯಲ್ಲಿ ಇದಾನೆಯೋ ಇಲ್ಲವೋ ಎಂದು ತಿಳಿಯುವ ಬಗೆ ಹೇಗೆ? ಇಲ್ಲ ಅಂದುಕೊಂಡು ಒಳಕ್ಕೆ ನುಗ್ಗಿದರೆ ಆಕಸ್ಮಾತ್ ಅವನು ಇದ್ದರೆ ಮೂಳೆ ಮುರಿಸಿಕೊಳ್ಳಬೇಕಾಗುತ್ತೆ. ಈ ಸಂಕಟ ಅವರಿಗೆ. ಅಳೆದೂ ಸುರಿದೂ ಕೊನೆಗೆ ಒಂದು ನಿರ್ಧಾರಕ್ಕೆ ಬಂದರು. ಮನೆ ಮುಂದಿನ ಜಗುಲಿಯಲ್ಲಿ ಬಟ್ಟೆ ಒಣಗಿ ಹಾಕಲು ದಾರ ಕಟ್ಟಿದ್ದರು. ಅಲ್ಲಿ ಕೆಂಪು ಟವೆಲ್ ಒಣ ಹಾಕಿದ್ದರೆ ಅದು ಡೇಂಜರ್ ಸಿಗ್ನಲ್ಲು, ಗಂಡ ಅನ್ನುವ ಪ್ರಾಣಿ ಮನೆಯಲ್ಲೇ ಕೊಳೀತಾ ಬಿದ್ದಿದೆ ಅಂತ. ಅದೇ ಹಸಿರು ಟವೆಲ್ ಹಾಕಿದ್ದರೆ ಮಾರ್ಗ ಸಲೀಸಾಗಿದೆ ಅಂತ. ಒಂದು ವೇಳೆ ಹಳದಿ ಟವೆಲ್ ಹಾಕಿದ್ರೆ ಇನ್ನೇನು ಸ್ವಲ್ಪ ಸಮಯದಲ್ಲೇ ಅಪಾಯ ಹೊರಗೆ ಹೋಗುತ್ತೆ ಅನ್ನೊ ಸೂಚನೆ ಅಂತ. ಹೀಗೆ ಮಾತನಾಡಿಕೊಂಡರು. ಕಾದಂಬರಿ ಹೀಗೇ ಮುಂದುವರೆಯುತ್ತೆ. ಇದನ್ನು ಓದುವಾಗ ನಮಗೂ ಹದಿಹರೆಯದ ವಯಸ್ಸು. ಯಾರು ಯಾವ ಬಣ್ಣದ ಬಟ್ಟೆ ತೊಟ್ಟಿದ್ದರೂ ಅದಕ್ಕೇ ಇರಬೇಕು, ಇದಕ್ಕೇ ಇರಬೇಕು ಅಂತೆಲ್ಲ ಮನಸ್ಸಿನಲ್ಲೇ ಮಂಡಿಗೆ ತಿನ್ನುತ್ತಿದ್ದೊ. ಹೀಗೆ ಯೋಚಿಸುತ್ತಿದ್ದ ನಮ್ಮಂತಹವರಿಗೆ ಮದುವೆ ಆದಮೇಲೂ ಇವಳು ಯಾಕೆ ಈ ಬಣ್ಣದ ಸೀರೆ ಇಷ್ಟ ಪಡ್ತಿದಾಳೆ ಅಂತ ಏನೇನೋ ಕೆಟ್ಟ ಕೆಟ್ಟ ಆಲೋಚನೆಗಳೆಲ್ಲ ತಲೆ ತುಂಬ್ತಿದ್ದೊ.

ಇದನ್ನೆಲ್ಲ ಯಾಕೆ ಹೇಳ್ತಿದೀನಿ ಅಂದ್ರೆ ಐಪಿಎಲ್ ಪಂದ್ಯಾವಳೀಲಿ ಸ್ಪಾಟ್ ಫಿಕ್ಸಿಂಗೋ, ಮ್ಯಾಚ್ ಫಿಕ್ಸಿಂಗೋ ಎಂತಹದ್ದೋ ಒಂದು ಫಿಕ್ಸಿಂಗ್ ಆಗಿ ದೇಶಾ ದೇಶಾನೆ ಮುಳುಗಿಹೋಗಿದೆ ಅಂತ ಮಾಧ್ಯಮದೋರು ಕೂಗ್ತಾ ಬಿದ್ದವಲ್ಲಾ, ಇದಕ್ಕೆಲ್ಲ ಆಹಾರ ಒದಗಿಸಿದ್ದು 'ಟವೆಲ್' ಅಂತೆ. ಅದೆಲ್ಲ ನಡೆದದ್ದು ಹಿಂಗಂತೆ. ಮಿಕಗಳಿಗೆ ಬಲೆ ಒಡ್ಡೋದೇ ಬುಕ್ಕಿಗಳ ಚಾಲಾಕಿತನ ಅಲ್ವಾ. ಶ್ರೀಶಾಂತ್‌ಗೂ ಬಲೆ ಬೀಸಿದರಂತೆ. ನಿನಗೆ ಇರೋದು ನಾಲ್ಕು ಓವರ್ ಅಲ್ವಾ, ಅದ್ರಲ್ಲಿ ಒಂದು ಓವರ್‌ನಲ್ಲಿ ಲೂಸ್ ಬಾಲ್ ಹಾಕು. ಹಂಗೆ ಮಾಡಿದ್ರೆ ನಲವತ್ತು ಲಕ್ಷ ಕೊಡ್ತೀವಿ ಅಂದ್ರಂತೆ. ಶ್ರೀಶಾಂತ್‌ಗೇನೂ ಹಣದ ಬರ ಇರಲಿಲ್ಲ. ಆದರೂ ನ್ಯಾಯವಾದ ಸಂಪಾದನೆಗಿಂತ ಅನ್ಯಾಯದ ಸಂಪಾದನೆಗೆ ರುಚಿ ಹೆಚ್ಚು ಅಲ್ವಾ. ಅದ್ಕೆ ಅವನೂ ಆಗಲಿ ಅಂದನಂತೆ. ಆಮೇಲೆ ನಾನೇನೋ ಎಳೆ ಮಕ್ಕಳೂ ಬಲವಾಗಿ ಬಾರಿಸುವ ರೀತೀನೇ ಬಾಲ್ ಎಸೆಯಬಹುದು. ಹಿಂಗೆ ಮಾಡಿದ ಮೇಲೂ ನಾವೇ ಗೆದ್ದು ಬಿಟ್ಟರೆ? ಬರೋ ಹಣಾ ತಪ್ಪೋಯ್ತದಲ್ಲಾ ಅನ್ನೊ ಅನುಮಾನ ಬಂತಂತೆ. ಅದ್ನೇ ಅವರಿಗೆ ಹೇಳಿದ್ನಂತೆ. ಅವರೂ ನ್ಯಾಯಸ್ಥರೇಯ. ಒಂದು ಓವರ್ ಅಷ್ಟೇ ನಿನ್ನ ಜವಾಬ್ದಾರಿ ಪಂದ್ಯದ ಫಲಿತಾಂಶಕ್ಕೂ ನಿನಗೂ ಸಂಬಂಧ ಇಲ್ಲ, ಅದರ ಯೋಚನೆ ಬಿಡು ಅಂದರಂತೆ. ಅದು ಅವನಿಗೂ ಹಿಡಿಸಿತಂತೆ. ಮೂರು ಓವರ್‌ಗಳಲ್ಲಿ ಬಿಗಿಯಾಗಿದ್ದು ಒಂದು ಓವರ್ ಲೂಸ್ ಆಗಿದ್ದರೆ ಪ್ರಪಂಚ ಏನು ಸೂರೆ ಹೋಗಲ್ಲವಲ್ಲ ಅಂತ ಖುಷಿಯಾಗೇ ಒಪ್ಕಂಡನಂತೆ. ಕ್ರಿಕೆಟ್ ಅಂದರೆ ಮಹಾನ್ ಜೂಜಾಟ ಅಲ್ವಾ. ಒಂದೊಂದು ಬಾಲಿಗೆ, ಓವರ್‌ಗೆ ಇಷ್ಟು ಅಂತಾನೂ ಬಾಜಿ ಕಟ್ಟಿರ್ತಾರಂತೆ. ಕೋಟ್ಯಾಂತರ ರೂಪಾಯಿ ವ್ಯವಹಾರ ಅದು, ಒಂದು ತೊಂದರೆ ಇತ್ತು ಇದರಲ್ಲಿ, ಬುಕ್ಕಿಗಳು ಲೂಸ್ ಬಾಲ್ ಓವರ್ ಇದು ಅಂತ ಹಣಕಟ್ಟಿ ಇವನು ಬಿಗಿಯಾಗಿ ಬೌಲ್ ಮಾಡಿದರೆ ಭಾರೀ ನಷ್ಟ ಅನುಭವಿಸಬೇಕಾಗುತ್ತೆ. ಹಿಂಗೆ ಯಡವಟ್ಟು ಆಗಬಾರದು ಅಂತಾವ ಆ ಓವರ್‌ಗೆ ಟವೆಲ್ ಸಿಕ್ಸಿಸ್ಕೊ ಅನ್ನೊ ಕ್ಲೂ ಕೊಟ್ಟರಂತೆ. ಪಾಪ ಆ ಹಾಳು ಟವಲ್ಲೇ ಆ ಹುಡುಗನಿಗೆ ಮುಳುವಾಯಿತು.

ಈಗ ಏನಾಗಿದೆ ನೋಡಿ. ಯಾವ ಬಣ್ಣದ ಸೀರೆ ಉಟ್ಟರೆ ಯಾರಿಗೆ ಏನು ಸೂಚನೆ ರವಾನಿಸುತ್ತಿದ್ದಾರೋ ಅಂತ ನಮ್ಮ ತಲೆ ತಿನ್ನುತ್ತಿದ್ದಂಗೆ ಆಟಗಾರರ ಪ್ರತಿಯೊಂದು ನಡೆಯೂ 'ಇದರಲ್ಲಿ ಏನೋ ಐತೆ' ಅನ್ನೊ ಅನುಮಾನಾನ ಯಾಕೋ ತರಿಸುತ್ತಿದೆಯಲ್ಲಾ!

ಟವೆಲ್ ನಿಷೇಧ!

ಸಭ್ಯರ ಆಟ ಕ್ರಿಕೆಟ್!

ಇದು ಹಿಂದಿನಿಂದ ಬಂದಿರುವ ನಂಬಿಕೆ.


ಈಗ?

ಈಗಲೂ ಅಷ್ಟೆ. ಅದು ಜೆಂಟಲ್‌ಮೆನ್ಸ್ ಗೇಮ್!

ಅನುಮಾನ ಇದ್ದರೆ ಶ್ರೀನಿವಾಸನ್ ಕೇಳಿ.

ಯಾರು ಈ ಶ್ರೀನಿವಾಸನ್ ಎಂದಿರಾ? ಅವರು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಅಧ್ಯಕ್ಷರು ಕಣ್ರೀ.

ಐಪಿಎಲ್‌ನ ಆರನೇ ಆವೃತ್ತಿ, ಅವ್ಯವಹಾರ ನಡೀತಿತ್ತು. ಮೂವರು ಕಳಂಕಿತ ಆಟಗಾರರು ಪೊಲೀಸರ ಬಲೆಗೆ ಬಿದ್ದರು.



ಸುದ್ದಿ ಹೊರಬೀಳುತ್ತಿದ್ದಂತೆ ಜಾಗೃತರಾದರು ಶ್ರೀನಿವಾಸನ್. ಮಾಧ್ಯಮಗೋಷ್ಠಿ ಕರೆದರು. ಅಲ್ಲಿ ಇಪ್ಪತ್ತು ಸಲ ಜೆಂಟಲ್‌ಮನ್ಸ್ ಗೇಮ್ ಪದ ಬಳಸಿದರಂತೆ. ಯಾರೋ ಎಣಿಸಿಕೊಂಡಿದ್ದರು. ಕಳಂಕಿತರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಗುಡುಗಿದರು. ಜೆಂಟಲ್‌ಮನ್ಸ್ ಗೇಮ್ಸ್‌ನ ನಿಯಂತ್ರಣ ಮಂಡಳಿಯ ಅಧ್ಯಕ್ಷರಿಗೆ ತಕ್ಕನಾದ ಮಾತು.

ಅಂದರೆ ಜೆಂಟಲ್‌ಮನ್ಸ್ ಗೇಮ್‌ನಲ್ಲಿ ಅವ್ಯವಹಾರಕ್ಕೆ ಅವಕಾಶವೇ ಇಲ್ಲ ಎಂದ ಹಾಗಾಯಿತು!

ಏನು ಮಾಡುತ್ತೆ ಮಂಡಳಿ?

ಕಠಿಣ ಕ್ರಮ ತೆಗೆದುಕೊಳ್ಳುತ್ತೆ!

ಏನು ಕ್ರಮ ಅದು?

ಕ್ರಿಕೆಟ್ ಕ್ರೀಡಾಂಗಣದಲ್ಲಿ ಟವೆಲ್ ನಿಷೇಧ!

ಹೀಗೆ ವ್ಯಂಗ್ಯ ಆಡುವವರೂ ಉಂಟು. ... ಬದಿಗಿರಿಸೋಣ.

ಈ ಗೋಷ್ಠಿಯಾದ ನಂತರ ಗಂಗೆಯಲ್ಲಿ ಬ... ನೀರು ಹರಿದಿದೆ.

ಈಗ ಏನು ಮಾಡುತ್ತಿದ್ದಾರೆ ಅಧ್ಯಕ್ಷರು?

ಮಾಧ್ಯಮದವರಿಂದ ತಲೆ ತಪ್ಪಿಸಿಕೊ... ಓಡಾಡುತ್ತಿದ್ದಾರೆ!

ಯಾಕೆ ಈ ಅನಿರೀಕ್ಷಿತ ಬೆಳವಣಿಗೆ?

ಗುರುನಾಥ್ ಅಯ್ಯಪ್ಪನ್ ಈ ಹಗರಣ... ಸಿಲುಕಿದ್ದಾನೆ!

ಯಾರು ಈತ?

ಚೆನ್ನೈ ಸೂಪರ್ ಕಿಂಗ್ಸ್ ತಂಡದ ಅಧ್ಯಕ್ಷ ಅಂ... ಅಲ್ಲ ಅಂತಾರೆ. ಮೊದಲು ಆಗಿದ್ದ ಆ ತಂಡದ ಮೇ... ಆರೋಪ ಬಂದನಂತರ ಆಗಿಲ್ಲ! ಇದಕ್ಕಿಂತಲೂ ಪ್ರ... ಆದದ್ದು- ಅವನು ಶ್ರೀನಿವಾಸನ್ ಸ್ವಂತ ಮಗಳ ಗಂಡ!

ಇವರು ಹಾಳಾಗಲಿ, ಜೆಂಟಲ್‌ಮನ್ಸ್ ಗೇಮ್ ಕು... ಬಹಳಷ್ಟು ಮಾತನಾಡುವ ಮಾಜಿ, ಹಾಲಿ ಕ್ರಿಕೆ... ಏನು ಮಾಡುತ್ತಿದ್ದಾರೆ?

ಬಾಯಿ ಬೀಗ ಹಾಕಿಕೊಂಡಿದ್ದಾರೆ?

ದೇವರುಗಳ ತರಹವೇ ಕ್ರಿಕೆಟ್ ದೇವರ ನಡೆ!

ಮಾಜಿ ಆಟಗಾರರಿಗೆ ಶ್ರೀನಿವಾಸನ್ ದೊರಕಿಸುತ್ತಿ... ವಿಶೇಷ ಸವಲತ್ತುಗಳ ನಿರಾಕರಣೆ ಭಯ ಪಾಪ!

ಹಾಲಿ ಕ್ರಿಕೆಟ್ ದೇವತೆಗಳಿಗೆ ದೊರಕಲಿ... ಸೌಲತ್ತುಗಳು ಕೈ ತಪ್ಪೀತು ಎಂಬ ಭಯ!

ಏನೋ ಬದುಕುವ ದಾರಿ ತಲಾಷ್‌ನಲ್ಲಿದ... ಅವರನ್ನೂ ಕ್ಷಮಿಸೋಣ. ಈ ರಾಜಕಾರಣಿಗಳಿಗೆ... ಬಂದಿದೆ ಕೇಡು? ಮಂಡಳಿ ಇರುವುದು ಅ... ಕಪಿಮುಷ್ಠಿಯಲ್ಲಿ, ಕೇಂದ್ರ ಸಚಿವರು ಭ್ರಷ್ಟಾಚಾರ... ಮುಳುಗಿದ್ದಾರೆ ಅವರನ್ನು ಕೈಬಿಡಿ ಎಂದು ಸಂಸ... ಕೋಲಾಹಲ ಎಬ್ಬಿಸಿದವರಲ್ಲವೆ ಅವರು? ಸಂ... ಕಲಾಪವನ್ನೇ ಸ್ಥಗಿತಗೊಳಿಸಿದ ಈ ಮಹಾನ್ 'ಸಭ್ಯ'ರಾದ... ಇದರ ವಿರುದ್ಧ ದನಿ ಎತ್ತಬಾರದೆ? ಹೇಗೆ ಎತ್ತು... ಪಾಪ ಅವರಿಗೂ ಎಂಜಲಿನಲ್ಲಿ ಪಾಲಿರುವಾಗ!

ಹೀಗೆಲ್ಲ ಯೋಚಿಸಬಾರದಂತೆ. ಒಂದೆರಡು ... ಕುರಿಗಳಿದ್ದರೂ ಆಟ ಮಾತ್ರ ಈಗಲೂ ಜೆಂಟಲ್‌ಮ... ಗೇಮೇ ಅಂತೆ!

ಯಾರು ನೀಡಿದ ತೀರ್ಪು ಇದು?

ಮಹಾಜನತೆ!

ಏನು ಇದಕ್ಕೆ ಸಾಕ್ಷಿ?

ಕ್ರೀಡಾಂಗಣ ನೋಡಿ. ಮೂವರು ಕಳಂಕಿತರ ಬಂಧ... ನಂತರವೂ ಪ್ರೇಕ್ಷಕರ ಉತ್ಸಾಹ ಕಡಿಮೆಯಾಗಿಲ್ಲ!

ಹೀಗೆ ಹೇಳಿದವರು ಅದೇ ಶ್ರೀನಿವಾಸನ್!

ಭ್ರಷ್ಟ ರಾಜಕಾರಣಿ 'ಚುನಾವಣೆಯಲ್ಲಿ ಗೆದ್ದದ್ದೇ ಪ್ರಾಮಾಣಿಕತೆಗೆ ಸಾಕ್ಷಿ' ಅಂದಂತೆ!

'ರಾಮ ಸೇತು'ವನ್ನು ವಾನರ ಸೇನೆ ಕಟ್ಟಲಿಲ್ಲ

ಅಮೃತ ಸೋಮೇಶ್ವರರು ಜೂನ್ 5ರ ಸಂಚಿಕೆಯಲ್ಲಿ ಬರೆದ ವೈಚಾರಿಕ ಲೇಖನದಲ್ಲಿ ಶ್ರೀ ರಾಮನಿಗೆ "ಮರ್ಯಾದಾ ಪುರುಷೋತ್ತಮ" ಎಂಬ ಬಿರುದು ಒಪ್ಪುತ್ತದೋ ಎಂದು ಕೇಳಿದ್ದು ಸರಿ. ಯಾಕೆಂದರೆ ತನ್ನ ಧರ್ಮಪತ್ನಿ ಸೀತೆಗೆ ಮಾಡಿದ ಅನ್ಯಾಯದ ಜೊತೆಗೆ ಜಾತಿ ಸಂಕುಚಿತತೆಯನ್ನು ರಾಮನು ತೋರಿಸಿದ್ದ. ಉದಾಹರಣೆ: ಆಸ್ಥಾನದ ಪುರೋಹಿತರ ಚಿತಾವಣೆಯಂತೆ ರಾಮನು ಮುಗ್ಧ ನಿರಾಯುಧ ಶೂದ್ರ ತಪಸ್ವಿ ಶಂಭೂಕನನ್ನು ಕಾರಣವಿಲ್ಲದೆ ಕೊಂದದ್ದು.



ಒಬ್ಬ ತಪಸ್ವಿಯನ್ನು ಕೊಂದರೂ ರಾಮನಿಗೆ ಬ್ರಹ್ಮಹತ್ಯೆ ದೋಷ ತಗುಲಲಿಲ್ಲವಂತೆ. ಆದರೆ ದುಷ್ಟ ರಾಕ್ಷಸನಾದ ರಾವಣನನ್ನು ಕೊಂದದ್ದಕ್ಕೆ ಬ್ರಹ್ಮ ಹತ್ಯೆ ದೋಷವಂತೆ. ಹತ್ಯೆಯ ದೋಷದಲ್ಲೂ ಜಾತೀಯತೆ, ಇದೆಂತಹ ವಿಚಿತ್ರ!

ಆದಿವಾಸಿ ಜನಾಂಗದ ಹನುಮಂತನನ್ನು ಕೊನೆಯವರೆಗೂ ರಾಮನು ಸೇವಕನನ್ನಾಗಿ ಇರಿಸಿಕೊಂಡನೇ ವಿನಃ ತನ್ನ ಅಧೀನದ ಯಾವುದೇ ಪ್ರದೇಶಕ್ಕೆ ರಾಜನನ್ನಾಗಿ ಮಾಡಲಿಲ್ಲ, ಬ್ರಾಹ್ಮಣ ವಿಭೀಷಣನನ್ನು ಮಾತ್ರ ಲಂಕೆಯ ರಾಜನಾಗಿ ಮಾಡಿದನು.


ವಾಲ್ಮೀಕಿ ಋಷಿಯು ಬರೆದ ಕಥೆಯಲ್ಲಿ ಕಾಲ್ಪನಿಕ ರಾಮನ ಪಾತ್ರದಲ್ಲಿ ಲೋಪದೋಷಗಳಿವೆ. ಹಾಗೆಯೇ ಲಂಕೆಗೆ ಸೇತುವೆ ಕಟ್ಟಿದ ಕಥೆಯನ್ನು ಈಗಿನ ಭೂವಿಜ್ಞಾನಿಗಳ ಸಂಶೋಧನೆಯ ಹಿನ್ನೆಲೆಯಲ್ಲಿ ಒರೆಗೆ ಹಚ್ಚಿ ನೋಡಿದಾಗ ಭೌಗೋಳಿಕ ವಿಷಯದಲ್ಲೂ ರಾಮಾಯಣ ಒಂದು ಅವೈಜ್ಞಾನಿಕ ಕಾಲ್ಪನಿಕ ಕಥೆಯೆಂದು ಸಾಬೀತಾಗುತ್ತದೆ.

ರಾಮಾಯಣ ಕೇವಲ ನಾಲ್ಕು ಸಾವಿರ ವರ್ಷಗಳ ಹಿಂದಿನ ಕತೆಯಾದರೆ ಲಂಕಾ-ಸೇತುವೆ ಸುಮಾರು ನಾಲ್ಕು ಕೋಟಿ ವರ್ಷಗಳ ಹಿಂದೆಯೇ ಭೌಗೋಳಿಕವಾಗಿ ಉಂಟಾಗಿತ್ತು ಎಂಬುದನ್ನು ಭೂವಿಜ್ಞಾನಿಗಳು ಪುರಾವೆ ಸಹಿತ ವಿವರಿಸಿದ್ದಾರೆ. ನಾಲ್ಕು ಕೋಟಿ ವರ್ಷಗಳ ಹಿಂದೆ ಮನುಷ್ಯ ಜಾತಿ ಬಿಡಿ, ಯಾವುದೇ ಸಸ್ತನಿಗಳೂ ಭೂಮಿಯ ಮೇಲೆ ಇರಲೇ ಇಲ್ಲ. ಬಹುಶಃ ಆಗ ಇದ್ದಿದ್ದು ಕೇವಲ ಡೈನೋಸಾರ್‌ಗಳು ಮತ್ತು ಮೊಟ್ಟೆ ಇಡುವ ಶೀತ-ರಕ್ತದ ಜೀವಿಗಳು ಮಾತ್ರ. ಈ ನಿಸರ್ಗದತ್ತವಾದ ರಾಮ-ಸೇತುವೆಯ ಮೇಲೆ ಮೊಟ್ಟಮೊದಲಿಗೆ ದೈತ್ಯ ಡೈನೋಸಾರ್‌ಗಳು ನಡೆದಿರುವ ಸಾಧ್ಯತೆಯೇ ಹೆಚ್ಚು.

ನಾಲ್ಕು ಕೋಟಿ ವರ್ಷಗಳ ಹಿಂದೆ ಖಂಡಗಳ ಟೆಕ್ಟೊನಿಕ್ ಚಲನೆಯ ಪರಿಣಾಮವಾಗಿ ಬೃಹತ್ ಆಫ್ರಿಕಾ ಖಂಡದ ಭಾಗವೊಂದು ತುಂಡಾಗಿ ಬೇರ್ಪಟ್ಟು ಸರಿಯುತ್ತಾ ಬಂದು ಯುರೇಶಿಯಾಕ್ಕೆ ಢಿಕ್ಕಿ ಹೊಡೆದದ್ದೇ ಹಿಮಾಲಯ ಪರ್ವತದ ಸೃಷ್ಟಿಗೆ ಕಾರಣ ಎನ್ನುವುದು ಭೂವಿಜ್ಞಾನಿಗಳ ಸಿದ್ಧಾಂತ. ಈ ಟೆಕ್ಟೊನಿಕ್ ಚಲನೆಯ ಮುಂದುವರಿದ ಭಾಗವಾಗಿ ಆರಾವಳಿ ಪರ್ವತ ಸಾಲು, ವಿಂಧ್ಯಾಗಿರಿ ಸಾಲು, ಸಹ್ಯಾದ್ರಿ ಪರ್ವತ ಶ್ರೇಣಿ ಹಾಗು ಸಿಂಹಳ-ಭಾರತದ ನಡುವಿನ 'ರಾಮ ಸೇತುವೆ' ಉಂಟಾಗಿದ್ದು.

ಭೂಭಾಗಗಳು ಘರ್ಷಿಸಿದಾಗ ಹೊಸ ಟೆಕ್ಟೊನಿಕ್ ಪ್ಲೇಟು ಹಳೆಯ ಪ್ಲೇಟನಡಿ ತೂರಿಕೊಂಡು ಮೇಲೆಬ್ಬಿಸಿದ ಭೂಭಾಗವೇ ಹಿಮಾಲಯ ಪರ್ವತವಾಯಿತು. ಹಾಗೂ ಅದರ ಹಿಂಭಾಗವು ಉತ್ತರ ಭಾರತದ ಬಯಲು ಪ್ರದೇಶವಾಯಿತು. ಹಾಗೆಯೇ ಎರಡನೇ ತುಂಡು ಸರಿಯುತ್ತಾ ಬಂದು ಮೊದಲನೆಯ ತುಂಡಿಗೆ ಪಶ್ಚಿಮ ದಿಕ್ಕಿನಿಂದ ಘರ್ಷಿಸಿದಾಗ ಉಂಟಾಗಿದ್ದು ರಾಜಸ್ಥಾನದ ಅರಾವಳಿ ಬೆಟ್ಟಗಳು ಹಾಗು ಕಾರಾಕೋರಂ ಪರ್ವತ. ಜೊತೆಗೆ ರಾಜಸ್ಥಾನ, ಪಂಜಾಬ್, ಪಾಕಿಸ್ತಾನ, ಬಲೂಚಿಸ್ತಾನದ ಬಯಲು ಪ್ರದೇಶಗಳೂ ಉಂಟಾದವು.

ಮೂರನೆಯ ತುಂಡು ಸರಿದು ಬಂದು ಮೊದಲನೆಯ ತುಂಡಿಗೆ ದಕ್ಷಿಣ ದಿಕ್ಕಿನಿಂದ ಢಿಕ್ಕಿ ಹೊಡೆದಾಗ ಉಂಟಾಗಿದ್ದು ಮಧ್ಯ ಪ್ರದೇಶ- ಛತ್ತೀಸ್‌ಗಢ- ವಿದರ್ಭದಲ್ಲಿಯ ವಿಂಧ್ಯಾ ಪರ್ವತ ಮತ್ತು ದಕ್ಷಿಣ ಭಾರತದ (ಡೆಕ್ಕನ್ ಪ್ಲಾಟೊ) ಬಯಲು ಪ್ರದೇಶ.




ಕೊನೆಗೆ ನಾಲ್ಕನೆಯ ತುಂಡು ಬಂದು ಮೂರನೆಯ ತುಂಡಿಗೆ ಪಶ್ಚಿಮ ದಿಕ್ಕಿನಿಂದ ಘರ್ಷಿಸಿದಾಗ ಉಂಟಾಗಿದ್ದು ಸಹ್ಯಾದ್ರಿ ಪರ್ವತ ಸಾಲು ಮತ್ತು ನಮ್ಮ ಪಶ್ಚಿಮ ಕರಾವಳಿ. ಆಗ ಐದನೆಯ ತುಂಡು ಬಂದು ಭಾರತದ ದಕ್ಷಿಣ ತುದಿಗೆ ತಾಗಿ ನಿಂತಾಗ ಉಂಟಾಗಿದ್ದು ರಾಮ-ಸೇತುವೆ ಮತ್ತು ಇಡೀ ಸಿಂಹಳ ದ್ವೀಪ ಎನ್ನುತ್ತಾರೆ ಭೂ-ವಿಜ್ಞಾನಿಗಳು. ಇದನ್ನು ದಾಟಿ ತೇಲಿ ಹೋದ ತುಂಡುಗಳು ಅಂಡಮಾನ್-ನಿಕೊಬಾರ್ ಜಾವಾ-ಸುಮಾತ್ರ- ಇಂಡೋನೇಷಿಯಾ ದ್ವೀಪಗಳಾದವು.

ನಮ್ಮ ಕರಾವಳಿಯೂ ನಾಲ್ಕು ಸಾವಿರ ವರ್ಷ... ಹಿಂದೆ ಪರಶುರಾಮನಿಂದ ಸೃಷ್ಟಿಯಾಗಿದ್ದಲ್ಲ, ಬದಲ... ನಾಲ್ಕು ಕೋಟಿ ವರ್ಷಗಳ ಹಿಂದೆಯೇ ಈ ಕರಾ... ಉಂಟಾಗಿತ್ತು. ಕರಾವಳಿಯ ಅಂಚಿಗಿರುವ ಸಹ್ಯಾದ್ರಿ ಪರ್ವ... ತುತ್ತತುದಿಯಲ್ಲಿ ಸಿಕ್ಕ ಸಮುದ್ರ ಜೀವಿಗಳ ಕಲ್... ಪಳೆಯುಳಿಕೆಗಳು ನಾಲ್ಕು ಕೋಟಿ ವರ್ಷ ಹಳೆಯದಾಗಿ... ಈ ಸಹ್ಯಾದ್ರಿ ಪರ್ವತದ ತುದಿಭಾಗವು ಮೊದಲು ಸಮುದ... ಅಡಿಯಲ್ಲಿತ್ತು ಎಂಬುದನ್ನು ಸಾಬೀತು ಮಾಡುತ್... ಭೂವಿಜ್ಞಾನಿಗಳ ಸಂಶೋಧನೆಯ ಅನುಸಾರ ನಾಲ್ಕು ಸಾ... ವರ್ಷಗಳ ಹಿಂದೆ ರಾಮಾಯಣ ಕಾಲದಲ್ಲಿ ಲಂಕೆಗೆ ಸೇತು... ಕಟ್ಟಿದ್ದಲ್ಲ, ಬದಲಾಗಿ ನಾಲ್ಕು ಕೋಟಿ ವರ್ಷಗಳ ಹಿಂದೆ... ಈ ಸೇತುವೆ ನೈಸರ್ಗಿಕವಾಗಿ ಉಂಟಾಗಿತ್ತು. ಅಂದ... ರಾಮ-ಸೇತುವೆ ನಾಲ್ಕು ಕೋಟಿ ವರ್ಷಗಳ ಹಿಂದೆ... ನೈಸರ್ಗಿಕವಾಗಿ ಉಂಟಾದಾಗ ಲಂಕಾದೊಂದಿಗೆ ಭಾ... ನೇರ ಭೂಮಾರ್ಗ ಹೊಂದಿತ್ತು. ನಂ... ಸಮುದ್ರ ಕೊರೆತದಿಂದ ಮ... ಸುನಾಮಿಯಿಂದ ಈ ನೈಸರ್ಗಿ... ಭೂಮಾರ್ಗ ಶಿಥಿಲವಾದಾಗಲೆ... ಭಾರತೀಯ ರಾಜರು ... ಭೂ-ಮಾರ್ಗವನ್ನು ರಿಪೇ... ಮಾಡುತ್ತಿದ್ದರು ಹಾಗು ರಾಮಾಯ... ಕಾಲದಲ್ಲೂ ಇದೇ ಪ್ರಕಾರ ರಿಪೇರಿಯನ್ನು ರಾಮನ ಕಪಿಸೈನ್ಯ ಮಾಡಿರಬಹುದು ಅಷ್... ಇಡೀ ಸೇತುವೆಯನ್ನು ರಾಮನ ವಾನರ ಸೇನೆ ಹೊಸದಾ... ಕಟ್ಟಿದ್ದಲ್ಲ ಎಂಬುದು ಸಂಶೋಧಕರ ವಾದವಾಗಿದೆ. ನಂತರ... ಕಾಲದಲ್ಲಿ ಸಮುದ್ರದ ದೈತ್ಯಶಕ್ತಿಯ ಎದುರು ಮಾನವ... ಸೋತು ಈ ನೈಸರ್ಗಿಕ ಸೇತುವೆಯ ರಿಪೇರಿ ಕೈಬಿ... ಮೇಲೆ ಈ ಸೇತುವೆಯನ್ನು ಸಮುದ್ರ ಪೂರ್ಣವ... ಕಬಳಿಸಿರಬಹುದು.

ರವಿ ಹುಟ್ಟುಹಬ್ಬಕ್ಕೆ ರೆಸಲ್ಯೂಷನ್ ಏನೂ ಇಲ್ಲ

"ಹುಟ್ಟುಹಬ್ಬದ ರೆಸಲ್ಯೂಷನ್ ಏನೂ ಇಲ್ಲ, ಈಗ ಏನಿದ್ದರೂ ರೆವಲ್ಯೂಷನ್ ಮಾಡಬೇಕಾಗಿದೆ" ಹೀಗೆಂದು ಮೊನ್ನೆ ಹೇಳಿದವರು ಕ್ರೇಜಿಸ್ಟಾರ್ ರವಿಚಂದ್ರನ್.

ರವಿಚಂದ್ರನ್ ಅವರ ಹುಟ್ಟುಹಬ್ಬ ಮೇ 30 ರಂದು. ಆದರೆ ಅಂದು ಅವರು ತಮ್ಮ ಕುಟುಂಬದ ಸದಸ್ಯರೊಂದಿಗೆ ಶಿರಡಿಗೆ ಹೋಗಲಿರುವುದರಿಂದ ಅದಕ್ಕೆ ಮೂರ್‍ನಾಲ್ಕು ದಿನ ಮುನ್ನವೇ ಹಲವು ಮಾಧ್ಯಮದವರು ಜೊತೆಗೂಡಿ ರವಿ ಮನೆಗೆ ಭೇಟಿಕೊಟ್ಟು ಅಡ್ವಾನ್ಸ್ ಆಗಿ ಹುಟ್ಟುಹಬ್ಬದ ಶುಭಾಶಯಗಳನ್ನು ತಿಳಿಸಿದರು. ಇದನ್ನು ನಿರೀಕ್ಷಿಸದಿದ್ದ ರವಿಚಂದ್ರನ್ ಸಹಜವಾಗಿಯೇ ಖುಷಿಪಟ್ಟರು. ಆ ಸಂದರ್ಭದಲ್ಲಿ ಅವರು ರೆಸಲ್ಯೂಷನ್ ಮತ್ತು ರೆವಲ್ಯೂಷನ್ ಬಗ್ಗೆ ಮಾತನಾಡಿದ್ದನ್ನು ಕೇಳಿ ಅವರು ಹೊಸ ಪ್ರಯೋಗಗಳಿಗೆ ಸಜ್ಜಾಗುತ್ತಿದ್ದಾರೆ ಎನಿಸಿತು.



ಕಳೆದ ಏಳು ವರ್ಷಗಳಿಂದ ರವಿಚಂದ್ರನ್ ಅವರು ತನು-ಮನ-ಧನವನ್ನು 'ಮಂಜಿನ ಹನಿ' ಎಂಬ ಚಿತ್ರಕ್ಕಾಗಿ ಧಾರೆಯೆರೆದಿರುವುದು ನಿಮಗೆ ಗೊತ್ತೇ ಇದೆ. "ನಿಮ್ಮ ಬಹುಕನಸಿನ 'ಮಂಜಿನ ಹನಿ' ಯಾವ ಹಂತದಲ್ಲಿದೆ?" ಎಂದು ಕೇಳಿದಾಗ ರವಿಚಂದ್ರನ್ ತಮ್ಮದೇ ಶೈಲಿಯಲ್ಲಿ ಉತ್ತರಿಸಿದರು: "ಈ ಚಿತ್ರ ಯಾವಾಗ ಸಂಪೂರ್ಣವಾಗುತ್ತದೆ ಎಂದು ನನಗೇ ಗೊತ್ತಿಲ್ಲ. ಹಾಗೆಯೇ ಈ ಚಿತ್ರಕ್ಕಾಗಿ ನಾನು ಈಗಾಗಲೇ ಅದೆಷ್ಟು ಕೋಟಿ ಸುರಿದಿದ್ದೇನೆ ಎಂದು ನನಗೇ ಲೆಕ್ಕ ಸಿಗುತ್ತಿಲ್ಲ. ಚಿತ್ರದ ಉಳಿದ ಭಾಗಗಳನ್ನು ಚಿತ್ರೀಕರಿಸಲು 45 ದಿನ ಬೇಕು. ಗ್ರಾಫಿಕ್ ಕೆಲಸದಿಂದಾಗಿ ಪ್ರಾಜೆಕ್ಟ್ ತುಂಬಾ ತಡವಾಗುತ್ತಿದೆ. ಒಂದು ವೇಳೆ ಗ್ರಾಫಿಕ್ಸ್ ಕೆಲಸ ನಾನು ನಿರೀಕ್ಷಿಸಿದ ರೀತಿಯಲ್ಲಿ ಬರದಿದ್ದರೆ ನನಗೆ ಇಷ್ಟವಿಲ್ಲದಿದ್ದರೂ ಅದನ್ನು ಮಾಮೂಲಿ ಶೈಲಿಯಲ್ಲಿ ಮುಗಿಸಿ ಬಿಡುಗಡೆಮಾಡುತ್ತೇನೆ." ಇದರರ್ಥ 'ಮಂಜಿನ ಹನಿ' ಚಿತ್ರದ ಭವಿಷ್ಯ ಇನ್ನೂ ತೂಗುಯ್ಯಾಲೆಯಲ್ಲಿದೆ ಎಂದಾಯಿತು.

"ಒಂದು 'ಮಂಜಿನ ಹನಿ' ಮಾಡಲು ಹೊರಟಾಗ ನನಗೆ ನೂರಾರು ಹೊಸ ಐಡಿಯಾಗಳು, ಕಥೆಗಳು ಮನಸ್ಸಿಗೆ ಬರುತ್ತಿವೆ. ಅವೂ ಇಂಟ್ರೆಸ್ಟಿಂಗ್ ಆಗಿರುವುದರಿಂದ ಮನಸ್ಸು ಅದರ ಕಡೆ ವಾಲುತ್ತದೆ. ಇದು ನನಗೆ 'ಮಂಜಿನ ಹನಿ' ಚಿತ್ರದಿಂದ ದೊರೆತ ಲಾಭ" ಎಂದರು ರವಿಚಂದ್ರನ್.

" 'ಕ್ರೇಜಿಸ್ಟಾರ್' ಸಿನಿಮಾ ಎಲ್ಲಿಯತನಕ ತಲುಪಿದೆ?" ಎಂಬ ಪ್ರಶ್ನೆಗೂ ಅವರು ತಮ್ಮದೇ ಧಾಟಿಯಲ್ಲಿ ಉತ್ತರಿಸಿದರು: "ಎಲ್ಲರೂ ನನ್ನ ಬರ್ತಡೇಗೆ 'ಕ್ರೇಜಿಸ್ಟಾರ್' ಬಿಡುಗಡೆ ಆಗುತ್ತದೆ ಎಂದು ಭಾವಿಸಿದ್ದರು. ಆದರೆ ನಾನು ಈತನಕ ನನ್ನ ಬರ್ತಡೇ ದಿನದಂದು ಒಂದೇ ಒಂದು ಚಿತ್ರ ಬಿಡುಗಡೆ ಮಾಡಿದ್ದೇ ಇಲ್ಲ. ನನ್ನ ಚಿತ್ರ ಬಿಡುಗಡೆಯಾಗಿ ಅದು ಚೆನ್ನಾಗಿ ಓಡಿದರೆ ಅದನ್ನೇ ಬರ್ತಡೇ ದಿನ ಎಂದು ಭಾವಿಸುತ್ತೇನೆ." ಅಂದಹಾಗೆ ಜೂನ್ ಕೊನೆಯಲ್ಲಿ ಅಥವಾ ಜುಲೈ ಮೊದಲ ವಾರದಲ್ಲಿ 'ಕ್ರೇಜಿಸ್ಟಾರ್' ಬಿಡುಗಡೆಯಾಗುವ ಸಾಧ್ಯತೆಗಳಿವೆ.

ಇದೆಲ್ಲದರ ಮಧ್ಯೆ ರವಿಚಂದ್ರನ್ ಒಂದು ಹೊಸ ಸಿನಿಮಾವನ್ನು ಪ್ರಾರಂಭಿಸಿದ್ದಾರೆ. ಅದು ಅವರ ಮಗ ಮನೋರಂಜನ್ ನಾಯಕನಾಗಿ ನಟಿಸುತ್ತಿರುವ 'ಅಂದು' ಚಿತ್ರ. "ಈ ಚಿತ್ರವನ್ನು ಇತ್ತೀಚೆಗೆ ದಿಢೀರನೆ ಆರಂಭಿಸಿದೆ. ಮಗನಿಗೂ ಬೆಳಗ್ಗೆ 9 ಗಂಟೆಗೆ ರೆಡಿಯಾಗು ಎಂದು ಹೇಳಿದ್ದೆ. ಛಾಯಾಗ್ರಾಹಕ ಸೀತಾರಾಮ್‌ಗೂ ಹೇಳಿಕಳುಹಿಸಿದೆ. ಸರಿಯಾದ ಮುಹೂರ್ತ ಕೂಡ ಮಾಡಲಿಲ್ಲ. ನಾನೇ ನನ್ನ ಕೈಯನ್ನೇ ಕ್ಲ್ಯಾಪ್‌ಬೋರ್ಡ್ ತರಹ ತೋರಿಸಿ ಸಿನಿಮಾ ಆರಂಭಿಸಿದೆ. ಅವತ್ತು ಸೆಟ್ಟಿನಲ್ಲಿ ಇದ್ದದ್ದು ಏಳೇ ಜನ. ಹೀಗೆ ಇದ್ದಕ್ಕಿದ್ದಂತೆ ನನ್ನ ಮಗನಿಗಾಗಿ ಒಂದು ಚಿತ್ರ ಆರಂಭಿಸಿದ್ದರಿಂದ ನಾನೇ ಚಕಿತಗೊಂಡೆ, ಜೊತೆಗೆ ಸಂತೋಷವೂ ಪಟ್ಟೆ. ಇದರ ಜೊತೆಗೆ ನನ್ನ ಮಗನಿಗಾಗಿ ಇನ್ನೊಂದು ಚಿತ್ರಕತೆಯನ್ನು ಬರೆದಿದ್ದೇನೆ. ಅದಕ್ಕೆ 'ಆವರಿಸಿದಳು ಅವಳು' ಎಂದು ಹೆಸರಿಟ್ಟಿದ್ದೇನೆ. ಚಿತ್ರದ ನಾಯಕಿಗಾಗಿ ಶೋಧ ನಡೆಸುತ್ತಿದ್ದೆ. ನಮ್ಮ ಜಯಮಾಲಾ ಅವರ ಮಗಳು ಸೌಂದರ್ಯ ಜಯಮಾಲಾ ಪರವಾಗಿಲ್ಲ ಅಂತ ಅನಿಸುತ್ತಿದೆ. ಯಾವುದನ್ನೂ ಫೈನಲೈಸ್ ಮಾಡಿಲ್ಲ. ಇದು ಒಂದು ದೊಡ್ಡ ಪ್ರೇಮಕಥೆ ಚಿತ್ರವಾಗಲಿದೆ. ಈ ಚಿತ್ರ 'ಪ್ರೇಮಲೋಕ'ದಂತೆ ಅತ್ಯಂತ ಅದ್ದೂರಿಯಾಗಿ ಮತ್ತು ಸಂಗೀತಮಯವಾಗಿ ಮೂಡಿಬರಲಿದೆ. ಆದರೆ 'ಪ್ರೇಮಲೋಕ'ಕ್ಕೂ ಈ ಚಿತ್ರಕ್ಕೂ ಸಂಬಂಧವೇ ಇರುವುದಿಲ್ಲ" ಎಂದರು.

ಸಂದರ್ಶನ


ಅಷ್ಟೇ ಅಲ್ಲ, ರವಿ ಅವರು ಮತ್ತೊಂದು ಸಿನಿಮಾಕ್ಕೆ ತಯಾರಿಗಳನ್ನು ಮಾಡಿಕೊಳ್ಳುತ್ತಿದ್ದಾರೆ. 'ಅಪೂರ್ವ' ಎಂಬ ಚಿತ್ರದಲ್ಲಿ ಅವರೇ ನಾಯಕ ನಟ. "ನಮ್ಮ ಮನೆಯಲ್ಲಿ ಈಗ ಲಿಫ್ಟ್ ಇರುವ ಒಂದು ಸೆಟ್ಟನ್ನು ಹಾಕುತ್ತಿದ್ದೇನೆ. ಯಾಕೆಂದರೆ ಚಿತ್ರದ ಬಹುತೇಕ ಬಾಗ ಲಿಫ್ಟ್‌ನಲ್ಲೇ ನಡೆಯುತ್ತಿದೆ. ಇನ್ನು ಕೆಲವೇ ವಾರಗಳಲ್ಲಿ ಈ ಚಿತ್ರವನ್ನು ಆರಂಭಿಸಲಿದ್ದೇನೆ" ಎಂದು ಹೇಳಿದರು.

ಅವತ್ತು ಅವರ ಅಭಿಮಾನಿಗಳಿಗೆ ಬೇಸರ ಮೂಡಿಸುವಂತಹ ಮಾತುಗಳನ್ನೂ ರವಿ ಆಡಿದರು. "ನನಗಿನ್ನು ನಟನೆ ಸಾಕು ಎನಿಸುತ್ತಿದೆ. 'ಮಂಜಿನ ಹನಿ' ಬಿಡುಗಡೆಯಾದ ನಂತರ ನಾನು ನಿರ್ದೇಶನದಲ್ಲಿ ಹೆಚ್ಚು ತೊಡಗಲಿದ್ದೇನೆ. ನನ್ನ ಇಬ್ಬರು ಮಕ್ಕಳ ಚಿತ್ರಗಳನ್ನಲ್ಲದೆ ಉದ್ಯಮದಲ್ಲಿರುವ ಬೇರೆ ನಟರ ಚಿತ್ರಗಳನ್ನೂ ನಿರ್ದೇಶಿಸುವ ಐಡಿಯಾ ಇದೆ" ಎಂದು ಹೇಳುವ ಮೂಲಕ ನಟನೆಯಿಂದ ನಿವೃತ್ತಿ ಹೊಂದುವ ಸೂಚನೆಗಳನ್ನು ನೀಡಿದರು.

ಹೀಗೆ ಐವತ್ತೆರಡರ ಹುಟ್ಟುಹಬ್ಬದ ಸಂದರ್ಭದಲ್ಲಿ ಕ್ರೇಜಿಸ್ಟಾರ್ ರವಿಚಂದ್ರನ್ ತಮ್ಮ ಬತ್ತಳಿಕೆಯಲ್ಲಿರುವ ಹಲವಾರು ಹೊಸ ಐಡಿಯಾಗಳನ್ನು ಪತ್ರಕರ್ತರ ಮುಂದೆ ಬಿಚ್ಚಿಟ್ಟರು.

● ಶೆಣೈ

ಶರಣ್ ಇನ್ಮುಂದೆ ಶ್ರೀಮತಿ ಜಯಲಲಿತಾ




ಕನ್ನಡ ಚಿತ್ರಂಗಕ್ಕೂ ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾ ಅವರಿಗೂ ಹತ್ತಿರದ ಸಂಬಂಧವಿದೆ ಎಂದೆನಿಸುತ್ತಿದೆ. ಏಕೆಂದರೆ ಇತ್ತೀಚೆಗೆ ಶರಣ್ ನಾಯಕನಾಗಿ ನಟಿಸಲಿರುವ ಹೊಸ ಚಿತ್ರಕ್ಕೆ 'ಜಯಲಲಿತಾ' ಎಂಬ ಹೆಸರನ್ನು ಚಿತ್ರದ ನಿರ್ದೇಶಕ ಕುಮಾರ್ ಇಟ್ಟಿದ್ದರು. ಆದರೆ ಚಲನಚಿತ್ರ ವಾಣಿಜ್ಯ ಮಂಡಳಿಯ ಪದಾಧಿಕಾರಿಗಳು "ಈ ಹೆಸರನ್ನು ಕೊಡಲು ಆಗುವುದಿಲ್ಲ, ನೀವು ಇದಕ್ಕೆ ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾ ಅವರಿಂದ ಒಪ್ಪಿಗೆ ಪತ್ರವನ್ನು ತರಬೇಕು" ಎಂದು ಹೇಳಿದರಂತೆ. ಒಪ್ಪಿಗೆ ಪತ್ರವನ್ನು ತರಲು ಸಾಧ್ಯವಿಲ್ಲದ ಕಾರಣ ಆ ಚಿತ್ರದ ನಿರ್ಮಾಪಕ ಮತ್ತು ನಿರ್ದೇಶಕರು ತಮ್ಮ ಚಿತ್ರಕ್ಕೆ 'ಜೈ ಲಲಿತಾ' ಎಂಬ ಹೊಸ ಹೆಸರನ್ನು ಇಟ್ಟು ಅದನ್ನು ಅಂಗೀಕರಿಸುವಂತೆ ಛೇಂಬರ್‌ಗೆ ಅರ್ಜಿ ಗುಜರಾಯಿಸಿದರು. ಈ ಹೆಸರಿಗೂ ಛೇಂಬರ್‌ನವರು ನೋ ಎಂದರು.

ಕೊನೆಗೆ ನಿರ್ದೇಶಕ ಕುಮಾರ್ 'ಶ್ರೀಮತಿ ಜಯಲಲಿತಾ' ಎಂಬ ಇನ್ನೊಂದು ಹೊಸ ಹೆಸರನ್ನು ಸೂಚಿಸಿದರು. ಈ ಹೆಸರಿನ ಬಗ್ಗೆಯೂ ಛೇಂಬರ್ ಪದಾಧಿಕಾರಿಗಳು ಸಾಕಷ್ಟು ಚರ್ಚೆ ನಡೆಸಿದ ನಂತರ ತಮಿಳುನಾಡಿನ ಮುಖ್ಯಮಂತ್ರಿ ಕುಮಾರಿ ಜಯಲಲಿತಾ ಆಗಿರುವುದರಿಂದ 'ಶ್ರೀಮತಿ ಜಯಲಲಿತಾ' ಎಂಬ ಟೈಟಲ್ ಕೊಟ್ಟರೆ ಯಾವುದೇ ಸಮಸ್ಯೆ ಇಲ್ಲ ಎಂಬ ತೀರ್ಮಾನಕ್ಕೆ ಬಂದರಂತೆ.

'ಶ್ರೀಮತಿ ಜಯಲಲಿತಾ' ಸದ್ಯದಲ್ಲೇ ಸೆಟ್ಟೇರಲಿದೆ. ಈ ಚಿತ್ರದಲ್ಲಿ ಶರಣ್ ಶ್ರೀಮತಿ ಜಯಲಲಿತರಾಗಿ ಕಾಣಿಸಲಿದ್ದಾರೆ. ಶರಣ್ ಜೊತೆಗೆ ಈ ಚಿತ್ರದಲ್ಲಿ ರವಿಶಂಕರ್ ಗೌಡ ಮತ್ತು ಹರೀಶ್‌ರಾಜ್ ಕೂಡ ಮುಖ್ಯ ಪಾತ್ರದಲ್ಲಿ ಕಾಣಿಸಲಿದ್ದಾರೆ. ಈ ಚಿತ್ರದ ನಿರ್ದೇಶಕ ಕುಮಾರ್ ಈಗಾಗಲೇ 'ವಿಷ್ಣುವರ್ಧನ್' ಮತ್ತು 'ಚಾರುಲತಾ' ಎಂಬ ಚಿತ್ರಗಳನ್ನು ನಿರ್ದೇಶಿಸಿದ ಅನುಭವವನ್ನು ಹೊಂದಿದ್ದಾರೆ.

ಕೆಲವು ಸಮಯದ ಹಿಂದೆ ನಾಯಕ ನಟ ಕೋಮಲ್ ನಟಿಸಿದ 'ರಾಧಿಕಾಳ ಗಂಡ' ಚಿತ್ರದ ಟೈಟಲ್ಲಿಗೂ ಛೇಂಬರ್ ವಿರೋಧ ವ್ಯಕ್ತಪಡಿಸಿತ್ತು. ಈಗ ಶರಣ್ ನಟಿಸಲಿರುವ ಚಿತ್ರದ ಟೈಟಲ್ಲಿಗೂ ಇದೇ ತರಹದ ವಿರೋಧ ವ್ಯಕ್ತವಾಗಿದೆ. ಈ ಉದಾಹರಣೆಗಳನ್ನು ನೋಡಿದರೆ ಹಾಸ್ಯನಟನ ಸ್ಥಾನದಿಂದ ನಾಯಕ ನಟನ ಸ್ಥಾನಕ್ಕೆ ಬಡ್ತಿ ಪಡೆದವರಿಗೆ ಇಲ್ಲಿ ಹೆಜ್ಜೆಹೆಜ್ಜೆಗೂ ತೊಂದರೆ ಕಟ್ಟಿಟ್ಟ ಬುತ್ತಿ ಎಂದೆನಿಸುತ್ತದೆ. ●



ಇಂಟರ್‌ನೆಟ್ಟಲ್ಲಿ ಲಭ್ಯವಿರುವ ವಿಕಿಪೀಡಿಯಾ ಮಾಹಿತಿಯಂತೆ ಗೊಂಡ್ವಾನಾ (Gondwana) ಅಥವಾ ಪಾಂಜಿಯಾ (Pangaea) ಎಂಬ ಮಹಾಖಂಡವು ಏಳು ಕೋಟಿ ವರ್ಷಗಳ ಹಿಂದೆ ಒಡೆದು ದೂರ ಸರಿಯುತ್ತಾ ಹಲವು ಕೋಟಿ ವರ್ಷಗಳ ಹಿಂದೆ ಒಂದೆಡೆ ಸ್ಥಿರವಾಗಿ ನಿಂತು ಈಗಿನ ಆಸ್ಟ್ರೇಲಿಯಾ, ಇಂಡೋನೇಷ್ಯಾ ಮತ್ತು ನಮ್ಮ ಮಧ್ಯ ಹಾಗು ದಕ್ಷಿಣ ಭಾರತ ಉಂಟಾದವು. ಇದನ್ನು ಪ್ರತಿಷ್ಠಿತ ನಾಸಾದ ವಿಜ್ಞಾನಿಗಳೂ ಒಪ್ಪುತ್ತಾರೆ. ಹೀಗಿದ್ದರೂ ಸಮುದ್ರ ಗೋಡೆಯಿದ್ದುದನ್ನು ಮಾತ್ರ ವಾಲ್ಮೀಕಿ ಮನುಷ್ಯರು ಮತ್ತು ಕಪಿಗಳು ಸಮುದ್ರಕ್ಕೆ ಸೇತುವೆ ಕಟ್ಟಲು ಸಾಧ್ಯ ಎಂದು ಒಪ್ಪುತ್ತಾರೆ. ಯಾರಾದರೂ ಒಮ್ಮೆ ಸಮುದ್ರದ ತೀರದಲ್ಲಿ ನಿಂತು ಅದರ ಆಳ-ವಿಸ್ತಾರ-ರಭಸ-ತೆರೆಗಳ ಭೀಕರತೆಯನ್ನು ಕಣ್ಣಾರೆ ಕಂಡ ಮೇಲೆ ರಾಮ-ಸೇತುವೆಯನ್ನು ಮನುಷ್ಯರು ಬಿಡಿ ದೇವತೆಗಳೂ ಕಟ್ಟಲು ಸಾಧ್ಯವಿಲ್ಲ ಎಂಬುದನ್ನು ಸುಲಭದಲ್ಲಿ ಒಪ್ಪುತ್ತಾರೆ.

ಭಾರತ ಶ್ರೀಲಂಕಾ ನಡುವಿನ 40 ಕಿ.ಮಿ. ಅಂತರದ ಸಮುದ್ರ ತುಂಬಿಸಲು ಕಡೇ ಪಕ್ಷ ಒಂದು ಸಾವಿರ ಎವರೆಸ್ಟ್ ಪರ್ವತಗಳಾದರೂ ಬೇಕು. ಸಮುದ್ರ ಅಷ್ಟೊಂದು ಆಳವಾಗಿದೆ. ಹಾಗಾದರೆ ವಾಲ್ಮೀಕಿ ಋಷಿ ನಿಜವಾಗಿ ಸಮುದ್ರ ನೋಡಿದ್ದನೇ?

ಇನ್ನೊಂದು ವಿಷಯ: 'ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ' ಈ ಲೇಖನದಲ್ಲಿ ಫಣಿರಾಜರು ಬರೆದಂತೆ 'ಕೋಬ್ರಾ ಪೋಸ್ಟ್' ಅಂತರ್ಜಾಲ ತಾಣ ನಡೆಸಿದ 'ಆಪರೇಶನ್ ರೆಡ್ ಸ್ಪೈಡರ್' ಎಂಬ ಗುಪ್ತ ಕಾರ್ಯಾಚರಣೆಯಲ್ಲಿ ದೊರೆತ ಮಾಹಿತಿ ನಿಜಕ್ಕೂ ಸ್ಫೋಟಕವಾದುದು.

ನಮ್ಮ ದೇಶದ ಇಡೀ ಆರ್ಥಿಕತೆಗೆ ಬ್ಯಾಂಕುಗಳ ಶತ ಭ್ರಷ್ಟ ಮೇಲಧಿಕಾರಿಗಳು ಎಷ್ಟೊಂದು ಭಯಂಕರ ಹಾನಿ ಮಾಡುತ್ತಿದ್ದಾರೆ ಎಂಬುದನ್ನು ತಿಳಿದಾಗ ನಡುಕ ಹುಟ್ಟುತ್ತದೆ. ವಿಚಿತ್ರವೆಂದರೆ ಮಾಧ್ಯಮಗಳವರು ಇಷ್ಟೊಂದು ಸ್ಫೋಟಕ ಸುದ್ದಿಯನ್ನು ಬದಿಗೆ ಸರಿಸಿ ಕೇವಲ ಐಪಿಎಲ್ ಸ್ಪಾಟ್ ಫಿಕ್ಸಿಂಗಿಗೆ ವಿನಾಕಾರಣ ಪ್ರಾಮುಖ್ಯತೆ ಕೊಟ್ಟು ತಮ್ಮ ಕರ್ತವ್ಯವನ್ನು ಮರೆತಿದ್ದಾರೆ. ಐಪಿಎಲ್ ಮನೋರಂಜನೆ ಹಾಗೂ ಗ್ಲಾಮರ್‌ಗೆ ಸಂಬಂಧಪಟ್ಟಿರುವುದರಿಂದ ಮಾಧ್ಯಮದವರು ಈ ಗ್ಲಾಮರ್‌ನ ಬೆನ್ನು ಬಿದ್ದು ಐಪಿಎಲ್ ಅನ್ನು ಪ್ರಚಾರದೀಕರಿಸಿ, ದೇಶದ ಆರ್ಥಿಕತೆಗೆ ನಿಜವಾಗಿ ಅಪಾಯವುಂಟುಮಾಡುವ ಬ್ಯಾಂಕುಗಳ ಅವ್ಯವಹಾರವನ್ನು ಬಯಲಿಗೆಳೆದ ಕೋಬ್ರಾಪೋಸ್ಟನ್ನು ಕಡೆಗಣಿಸಿ ದೊಡ್ಡ ತಪ್ಪು ಮಾಡುತ್ತಿದ್ದಾರೆ.

ಐಪಿಎಲ್ ಸ್ಪಾಟ್ ಫಿಕ್ಸಿಂಗಿನಿಂದ ಕೇವಲ ಧನಿಕರಿಗೆ ಹಾಗೂ ಕ್ರಿಕೆಟಿನ ಹುಚ್ಚಿರುವ ಜೂಜುಕೋರರಿಗೆ ಸ್ವಲ್ಪ ನಷ್ಟವಾಗಿರಬಹುದು ಅಷ್ಟೇ. ಆದುದರಿಂದ ಸಮಸ್ತ ದೇಶದ ಆರ್ಥಿಕತೆಯ ಅಡಿಪಾಯಕ್ಕೆ ಸ್ವಲ್ಪವೂ ಅಪಾಯವಿಲ್ಲ. ಆದರೂ ಈ ಐಪಿಎಲ್ ಸ್ಪಾಟ್ ಫಿಕ್ಸಿಂಗಿನಿಂದ ಇಡೀ ದೇಶವೇ ಮುಳುಗಿಹೋಯಿತು ಹಾಗೂ ದೇಶದ ಬಡವರೆಲ್ಲ ಹೊಟ್ಟೆಗಿಲ್ಲದೆ ಸತ್ತೇ ಹೋಗುತ್ತಿದ್ದಾರೆ ಎನ್ನುವ ರೀತಿಯಲ್ಲಿ ಸ್ಪಾಟ್ ಫಿಕ್ಸಿಂಗ್ ಬಗ್ಗೆ ಇಡೀ ದೇಶದ ಮಾಧ್ಯಮಗಳು ಎರಡು ವಾರ ಪೂರ್ತಿ ಬೊಬ್ಬೆ ಹಾಕಿದ್ದು ಹಾಗೂ ಜನರು ಸನ್ನಿ ಹಿಡಿದವರಂತೆ ವರ್ತಿಸಿದ್ದು ತುಂಬಾ ಜುಗುಪ್ಸೆ ಹುಟ್ಟಿಸುತ್ತಿದೆ.

ಕ್ರಿಕೆಟಿನ ಮನೋರಂಜನೆಗಾಗಿ ಇಡೀ ದೇಶವನ್ನೇ ಬೇಕಾದರೂ ನಮ್ಮ ವಿದ್ಯಾವಂತ ಜನರು ವೈರಿಗಳಿಗೆ ಒತ್ತೆ ಇಡಬಲ್ಲರು ಎಂಬುದಕ್ಕೆ ಬೇರೆ ಪುರಾವೆ ಬೇಕಿಲ್ಲ. ಕ್ಷಣಿಕ ಮನೋರಂಜನೆಗಿಂತ ದೇಶದ ಬ್ಯಾಂಕಿಂಗ್ ಮತ್ತು ಆರ್ಥಿಕ ಸ್ಥಿತಿ ಸುರಕ್ಷಿತವಾಗಿರುವುದು ಮುಖ್ಯ. ಆದರೆ ತಮ್ಮ ಜವಾಬ್ದಾರಿಯನ್ನು ನಮ್ಮ ಮಾಧ್ಯಮಗಳು ಹಾಗೂ ವಿದ್ಯಾವಂತ ನಗರವಾಸಿಗಳು ಅರಿಯುವುದೆಂದು?

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ರಾಮಾಯಣ ಎಂಬ ಒಂದು ಮಹಾಕಾವ್ಯಕ್ಕೆ ಹಾನಿ

ರಾಮಾಯಣದ ವಾಲಿ ಸುಗ್ರೀವರು ಥೇಟ್ ಕಪಿಗಳಂತಿದ್ದು ಅವರಿಗೆ ಬಾಲಗಳಿವೆ. ಆದರೆ ಅವರ ಹೆಂಡಂದಿರಿಗೇಕೆ ಬಾಲವಿಲ್ಲ ಮತ್ತು ಅವರೇಕೆ ದುಬಾರಿ ರೇಷ್ಮೆ ಸೀರೆ ಉಟ್ಟುಕೊಂಡು ಅಪ್ಪಟ ಮನುಷ್ಯರಂತೆ, ವಿಶ್ವಸುಂದರಿಯರಂತೆ ಕಾಣಿಸುತ್ತಿರುತ್ತಾರೆ (ಟಿವಿ ಧಾರಾವಾಹಿ, ಚಲನಚಿತ್ರ ಇತ್ಯಾದಿಗಳಲ್ಲಿ ತೋರಿಸಿರುವಂತೆ)?

ಶ್ರೀ ರಾಮ ದೇವರು ಎನ್ನುತ್ತಾರೆ. ದೇವರು ಎಂದಮೇಲೆ ಮುಂದೇನಾಗುತ್ತದೆ ಎನ್ನುವುದೂ ಅವನಿಗೆ ಗೊತ್ತಿರಬೇಕು ಮತ್ತು ಮುಂದಾಗಲಿರುವ ಘಟನೆಗಳ ಮೇಲೆ ನಿಯಂತ್ರಣವೂ ಇರಬೇಕು. ಆದರೆ ರಾಮನಿಗೆ ತನ್ನ ಪತ್ನಿ ಸೀತೆಯನ್ನು ರಾವಣ ಕದ್ದೊಯ್ಯಲಿರುವ ಬಗ್ಗೆ ಮೊದಲೇ ಏಕೆ ತಿಳಿಯಲಿಲ್ಲ?

ರಾವಣನೊಂದಿಗೆ ಅಷ್ಟೆಲ್ಲ ಶ್ರಮಪಟ್ಟು ಯುದ್ಧ ಮಾಡುವ ಬದಲು ತನ್ನ ದೈವೀಶಕ್ತಿಯಿಂದಲೇ ಆತನನ್ನು ಸಂಹರಿಸಬಹುದಿತ್ತಲ್ಲ? ಹೀಗೆ ನೂರಾರು ಪ್ರಶ್ನೆಗಳು ರಾಮಾಯಣದ ಬಗ್ಗೆ ಸಹಜವಾಗಿಯೇ ಮೂಡುತ್ತವೆ. ಮಾತ್ರವಲ್ಲ, ಈ ಎಲ್ಲ ಕಾರಣದಿಂದ ಅಲ್ಲಿನ ಕಥಾ ಬೆಳವಣಿಗೆಯಲ್ಲಿ ಒಂದು ಸುಸಂಗತತೆಯೇ ಇಲ್ಲದಿರುವುದನ್ನು ಗಮನಿಸಬಹುದು. 'ಮರ್ಯಾದಾ ಪುರುಷೋತ್ತಮ' ಲೇಖನದಲ್ಲಿ ಮಾನ್ಯ ಅಮೃತ ಸೋಮೇಶ್ವರರು ಪ್ರತಿಪಾದಿಸಿರುವ ಹಾಗೆ ರಾಮಾಯಣವನ್ನು ನಂಬಿಕೆಯ ನೆಲೆಗೆ ಏರಿಸದೆ ರೋಚಕ ಕಾವ್ಯವಾಗಿ ಆಸ್ವಾದಿಸಿದರೆ ಈ ಯಾವುವೂ ದೊಡ್ಡ ಲೋಪವಾಗಿ ಕಾಣವು.

ಆದರೆ ಹಾಗೆ ಆಸ್ವಾದಿಸುವುದಕ್ಕೆ ರಾಮನನ್ನು ಕಾಯಮ್ಮಾಗಿ ಚುನಾವಣಾ ರಾಜಕೀಯಕ್ಕೆ ಬಳಸಿಕೊಂಡಿರುವ ನಮ್ಮ 'ರಾಮ ಭಕ್ತರು' ಬಿಡಬೇಕಲ್ಲ. ಭಾರತ ಮತ್ತು ಲಂಕೆಯ ನಡುವಿನ ರಾಮಸೇತುವನ್ನು ರಾಮನೇ ಕಟ್ಟಿಸಿದ್ದು, ಅದನ್ನು ಮುಟ್ಟಿದರೆ ಜೋಕೆ ಎಂದೆಲ್ಲ ಬೆದರಿಕೆ ಹಾಕುತ್ತಾ ರಾಮ ಅಲ್ಲಿ ಹುಟ್ಟಿದ್ದು, ಇಲ್ಲಿ ಹುಟ್ಟಿದ್ದು ಎಂಬೆಲ್ಲ ಚಿಲ್ಲರೆ ಸಂಗತಿಗಳ ಮೂಲಕ ಕೋಲಾಹಲ ಎಬ್ಬಿಸುತ್ತಾ ಒಟ್ಟಾರೆಯಾಗಿ ಅವರು ರಾಮಾಯಣ ಎಂಬ ಒಂದು ರೋಚಕ ಮಹಾಕಾವ್ಯಕ್ಕೆ ಇನ್ನಿಲ್ಲದಂತೆ ಮಾಡಿರುವ ಹಾನಿಯ ಬಗ್ಗೆ ಏನನ್ನೋಣ?

- ಶ್ರೀನಿವಾಸ ಕಾರ್ಕಳ, ಮಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಇಮೇಲ್ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪತ್ರಿಕೆಗಳನ್ನು 9980331427 ನಂಬರಿಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 12-06-2013 RNI No. KARKAN2003/14540

ರಘು ಚೇತರಿಸುತ್ತಾರಾ?



ಗೋಲ್ಡನ್ ಸ್ಟಾರ್ ಗಣೇಶ್ ನಾಯಕನಾಗಿ ನಟಿಸಲಿರುವ 'ಬಾಯಿಬಡುಕ' ಚಿತ್ರ ಸದ್ಯದಲ್ಲೇ ಸೆಟ್ಟೇರಲಿದೆ. ಇದನ್ನು ನಿರ್ದೇಶಿಸಲಿರುವವರು 'ಝಿ ಟಿ.ವಿ' ಚಾನೆಲ್‌ನ ರಘುರಾಮ್. ಈ ಹಿಂದೆ ಅವರು ಶಿವರಾಜ್‌ಕುಮಾರ್ ನಾಯಕನಾಗಿ ನಟಿಸಿದ್ದ 'ಚೆಲುವೆಯೇ ನಿನ್ನ ನೋಡಲು' ಎಂಬ ಚಿತ್ರವನ್ನು ನಿರ್ದೇಶಿಸಿದ್ದರು. ತನ್ನ ಪ್ರಥಮ ಚಿತ್ರದಲ್ಲೇ ಪ್ರಪಂಚದ ಏಳು ಅದ್ಭುತ ಸ್ಥಳಗಳಲ್ಲಿ ಚಿತ್ರಿಸಿದ ರಘುರಾಮ್ ಒಂದು ಹೊಸ ದಾಖಲೆಯನ್ನು ಸ್ಥಾಪಿಸಿದ್ದರು. ಆದರೆ ಈ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಸಂಪೂರ್ಣವಾಗಿ ಮುಗ್ಗರಿಸಿತ್ತು. ಎಷ್ಟರಮಟ್ಟಿಗೆಂದರೆ ಚಿತ್ರದ ನಿರ್ಮಾಪಕ ಸುರೇಶ್ ನಷ್ಟದ ಹೊರೆಯಿಂದ ಇವತ್ತಿನ ತನಕ ಚೇತರಿಸಿಕೊಂಡಿಲ್ಲ.

ಅಷ್ಟಾದರೂ ರಘುರಾಮ್ ಹೆಸರು ಗಾಂಧಿನಗರದಲ್ಲಿ ಚಾಲನೆಯಲ್ಲಿತ್ತು, ಶಿವರಾಜ್‌ಕುಮಾರ್, ದರ್ಶನ್ ಸೇರಿದಂತೆ ದೊಡ್ಡ ನಟರ ಜೊತೆ ನಿಕಟ ಸಂಪರ್ಕವನ್ನು ಹೊಂದಿದ್ದರು. ಈ ಕಾರಣಕ್ಕೆ ಅವರು ಮತ್ತೊಮ್ಮೆ ದೊಡ್ಡ ಚಿತ್ರ ಮಾಡಲಿದ್ದಾರೆಂಬ ಸುದ್ದಿ ಆಗೀಗ ಹರಡುತ್ತಿತ್ತು, ಉದಾಹರಣೆಗೆ ಶಂಕ್ರೇಗೌಡರ ನಿರ್ಮಾಣದಲ್ಲಿ ಶಿವಣ್ಣ ನಾಯಕನಾಗಿ ನಟಿಸಲಿರುವ ಚಿತ್ರವನ್ನು ರಘು ನಿರ್ದೇಶಿಸುತ್ತಿದ್ದಾರೆ ಎಂಬ ಸುದ್ದಿ ಭಾರೀ ಪ್ರಚಾರ ಪಡೆದಿತ್ತು. ಆದರೆ ರಘು ಪಾಲಿಗೆ ದ್ವಿತೀಯ ಚುಂಬನ ಭಗ್ನವಾಯಿತು. ಈ ಚಿತ್ರ ಸೆಟ್ಟೇರಲೇ ಇಲ್ಲ.

ಕಳೆದ ಒಂದು ವರ್ಷದಿಂದ 'ಬಾಯಿಬಡುಕ' ಚಿತ್ರದ ಕಥೆ ಮತ್ತು ಸಂಭಾಷಣೆಯನ್ನು ಬರೆಯುವುದರಲ್ಲಿ ರಘು ಮಗ್ನರಾಗಿದ್ದರು. ಇದರಲ್ಲಿ ಸಂಭಾಷಣೆಗೆ ಒತ್ತು ಕೊಟ್ಟಿರುವುದರಿಂದ ಅದು ಗಣೇಶ್ ಅಭಿಮಾನಿಗಳಿಗೆ ಇಷ್ಟವಾಗುವ ನಿರೀಕ್ಷೆಗಳಿವೆ.

ನೃತ್ಯದಿಂದ ಸಿನಿಮಾಕ್ಕೆ...



ನೃತ್ಯ ನಿರ್ದೇಶಕ ಇಮ್ರಾನ್ ಸರ್ದಾರಿಯಾ ನಿರ್ದೇಶಿಸಬೇಕಾಗಿದ್ದ ಚಿತ್ರವೊಂದು ಆರಂಭದಲ್ಲೇ ಮೊಟಕುಗೊಂಡಿತ್ತು. ಅದರಿಂದ ಧೃತಿಗೆಡದ ಇಮ್ರಾನ್ ತನ್ನ ಬಳಿಯಿರುವ ಹಲವಾರು ಕಥೆಗಳಿಗೆ ಜೀವಕೊಡಲು ಪ್ರಯತ್ನಿಸುತ್ತಲೇ ಇದ್ದರು. ಈಗ ಸಿಕ್ಕಿರುವ ಮಾಹಿತಿಯ ಪ್ರಕಾರ ಎಸ್.ವಿ. ಬಾಬು ಅವರು ನಿರ್ಮಿಸಲಿರುವ ಹೊಸ ಚಿತ್ರವನ್ನು ಇಮ್ರಾನ್ ನಿರ್ದೇಶಿಸುವುದು ಬಹುತೇಕ ಖಚಿತವಾಗಿದೆ. ಈ ಚಿತ್ರಕ್ಕೆ ರಮ್ಯಾ ನಾಯಕಿಯಂತೆ.

ಆಗಸ್ಟ್ ತಿಂಗಳಲ್ಲಿ ಈ ಚಿತ್ರ ಸೆಟ್ಟೇರಲಿದ್ದು, ಇದರ ಶೇಕಡ 90 ಭಾಗವನ್ನು ಏಳೆಂಟು ವಿದೇಶಗಳಲ್ಲಿ ಚಿತ್ರೀಕರಿಸಲಾಗುತ್ತದೆ. ಉಳಿದ ಶೇ. 10 ಭಾಗ ಮಾತ್ರ ಬೆಂಗಳೂರಿನಲ್ಲಿ ನಡೆಯಲಿದೆಯಂತೆ. ಈ ಚಿತ್ರದ ಕಥಾವಸ್ತುವೇ ವಿಭಿನ್ನವಾಗಿರುವುದರಿಂದ ಇದನ್ನು ವಿದೇಶದಲ್ಲೇ ಚಿತ್ರೀಕರಿಸಬೇಕಾಗಿದೆ ಎಂಬುದು ಇಮ್ರಾನ್ ಸಮರ್ಥನೆ.



ನೃತ್ಯ ನಿರ್ದೇಶಕ ಹರ್ಷ ನಂತರ ಮತ್ತೊಬ್ಬ ಯುವ ನೃತ್ಯ ನಿರ್ದೇಶಕ ನಿರ್ದೇಶನದ ಕಡೆಗೆ ವಾಲುತ್ತಿರುವುದು ಒಂದು ಒಳ್ಳೆಯ ಬೆಳವಣಿಗೆ ಎಂದು ಹೇಳಬಹುದು.

ಸಿಂಪಲ್ಲಾಗಿ ಗೆಲುವು...



ಗಾಂಧಿನಗರದಲ್ಲಿ ಎರಡು ಚಿತ್ರಗಳು ಎರಡು ಮೈಲಿಗಲ್ಲುಗಳನ್ನು ತಲುಪಿವೆ. ಒಂದೆಡೆ ಕೇವಲ ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾದ 'ಸಿಂಪಲ್ಲಾಗಿ ಒಂದ್ ಲವ್ ಸ್ಟೋರಿ' ಚಿತ್ರ 75 ದಿನಗಳ ಪ್ರದರ್ಶನವನ್ನು ತಲುಪಿದೆ. ಮತ್ತೊಂದೆಡೆ ಸುಮಾರು ಏಳೆಂಟು ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾದ 'ಮೈನಾ' ಚಿತ್ರ ಶತದಿನೋತ್ಸವದ ಗಡಿಯನ್ನು ತಲುಪಿದೆ.

ಆದರೆ 'ಸಿಂಪಲ್ಲಾಗಿ ಒಂದ್ ಲವ್ ಸ್ಟೋರಿ' ಸುಮಾರು ಎಂಟು ಕೋಟಿ ರೂಪಾಯಿಗಳ ಲಾಭವನ್ನು ಮಾಡಿ ಅದರ ತಂಡಕ್ಕೆ ಸಂತೋಷವನ್ನು ತಂದಿದ್ದರೆ, 'ಮೈನಾ' ಚಿತ್ರ ನೂರು ದಿನ ಓಡಿದರೂ ಅದರ ನಿರ್ಮಾಪಕರಿಗೆ ಸುಮಾರು ಎರಡು ಕೋಟಿ ನಷ್ಟವಾಗಿದ್ದು ಆ ತಂಡದಲ್ಲಿ ಶೋಕ ಕಂಡುಬರುತ್ತಿದೆ.

ನಾಗಶೇಖರ್ ನಿರ್ದೇಶನದ 'ಮೈನಾ' ಹಣ ಗಳಿಕೆಯಲ್ಲಿ ಸೋತಿದ್ದರೂ ಜನರ ಮತ್ತು ವಿಮರ್ಶಕರ ಮೆಚ್ಚುಗೆ ಗಳಿಸಿದೆ. ಸುನಿ ನಿರ್ದೇಶನದ 'ಸಿಂಪಲ್ಲಾಗ್..." ಹಣ ಗಳಿಸಿದ್ದರೂ ವಿಮರ್ಶಕರಿಂದ ಪ್ರಶಂಸೆಯನ್ನೇನು ಪಡೆದಿಲ್ಲ. ಇತ್ತೀಚಿನ ದಿನಗಳಲ್ಲಿ 75ನೇ ದಿನ ಅಥವಾ 100ನೇ ದಿನದ ಸಮಾರಂಭಗಳು ಅಪರೂಪವಾಗುತ್ತಿರುವ ಸಂದರ್ಭದಲ್ಲಿ ಹೊಸಬರೇ ತುಂಬಿ ತುಳುಕುತ್ತಿರುವ 'ಸಿಂಪಲ್ಲಾಗ್' ಚಿತ್ರತಂಡ ಸದ್ಯದಲ್ಲೇ ಚೌಡಯ್ಯ ಕಲಾಮಂದಿರ ದಲ್ಲಿ ಒಂದು ಸಮಾರಂಭವನ್ನು ನಡೆಸುತ್ತಿರುವುದು ಸಂತೋಷದ ವಿಷಯ.

ಸಾಯಿಯ ಸಾಯಿಸುವ ಚಿತ್ರಗಳು



[illegible]

ತರಲೆ ಬಿಟ್ಟ ಗುರು



[illegible]



ಡೈರೆಕ್ಟರ್ ಸ್ಪೆಷಲ್
ಪೂಜಾ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail : lankesh70@rediff...